ಶನಿವಾರ, ಸೆಪ್ಟೆಂಬರ್ 20, 2025 | ₹ 7.00

prajavani.net prajavani

www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಲೈಲ್ಸ್ ಮಿಂಚು

ಅಮೆರಿಕದ ನೋವಾ ಲೈಲ್ಸ್ ಸತತ ನಾಲ್ಕನೇ ಬಾರಿ ವಿಶ್ವ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ನ 200 ಮೀ. ಓಟದಲ್ಲಿ ಚಿನ್ನದ ಪದಕ ಗೆಲ್ಲುವ ಮೂಲಕ ದಿಗ್ಗಜ ಅಥ್ಲೀಟ್ ಉಸೇನ್ ಬೋಲ್ಟ್ ದಾಖಲೆ ಸರಿಗಟ್ಟಿದರು

ಆಹಾರ ಮೇಳ

ದಾವಣಗೆರೆಯ ಎವಿಕೆ ಕಾಲೇಜಿನಲ್ಲಿ ಆಯೋಜಿಸಿದ್ದ ಆಹಾರ ಮೇಳದಲ್ಲಿ ವಿದ್ಯಾರ್ಥಿಗಳು ವಿವಿಧ ಬಗೆಯ ತಿಂಡಿ ತಿನಿಸುಗಳನ್ನು ತಯಾರಿಸಿ ಗಮನ ಸೆಳೆದರು

RERA NO: PRM/KA/RERA/1251/309/PR/070525/007719
FOR MORE DETAILS VISIT WWW.RERA.KARNATAKA.GOV.IN

Luxuriously Crafted. Perfectly Located.

PRESENTING CASAGRAND PROMENADE VIDYARANYAPURA

@ just ₹7699/SFT.

65+ PREMIUM AMENITIES
13000 SFT. GRAND CLUBHOUSE
2.6 ACRES LUSH GREENERY
32000 SFT. CENTRAL COURTYARD

THE BEST OF LUXURY & CONNECTIVITY

MALL OF ASIA (10 MINS)
MANYATA TECH PARK (15 MINS)
HEBBAL FLYOVER (15 MINS)
INTERNATIONAL AIRPORT (20 MINS)

SPACIOUS 3 & 4 BHK RESIDENCES FROM ₹1.48CR - ₹2.12CR*

PRICE BENEFITS

MARKET PRICE ~~₹10000/SFT.~~

CASAGRAND PRICE ₹7699/SFT.

TYPE	SIZE	CASAGRAND PRICE
3 BHK	1852 – 2152 SFT.	₹1.48CR – ₹1.71CR
4 BHK	2609 – 2670 SFT.	₹2.07CR – ₹2.12CR

CREDAI
93840 54982
EXCLUSIVE SITE VISIT AVAILABLE
VISIT MODEL HOUSE AT SITE

CASAGRAND
building aspirations

3400 SFT. SWIMMING POOL

CASAGRAND PROMENADE

VIDYARANYAPURA

SPACIOUS 3 & 4 BHK RESIDENCES

₹1.48CR - ₹2.12CR*

THOUGHTFULLY CURATED MODERN AMENITIES FOR EVERYDAY LIVING

65+ WORLD-CLASS AMENITIES

CLUBHOUSE VIEW

PODIUM VIEW

Outdoor Amenities

- Walking / Jogging Track
- Cycling Track
- Pergola Seating Gallery
- Senior Citizen Plaza & More

Convenience

- Dormitory
- Car Charging Bay
- Car Washing Bay
- Air Filling Station

Kid's Play Area

- Skating Rink
- Vertical Playground
- Rock Climbing Wall
- Crèche & More

Terrace Amenities

- Sky Cinema
- Terrace Hangout Plaza
- Grilling Pavilion
- Rooftop Café & More

Sports, Fitness & Well-being

- Indoor Gym
- Yoga Deck
- Cricket Practice Net
- Basketball Court & More

Swimming Pool Amenities

- Adult Pool
- Kid's Pool
- Outdoor Jacuzzi
- Poolside Cabana & More

Indoor Games Room

- TT & Pool Room
- Board Games Room
- Video Game Room

Features & Entertainment

- Multi-purpose Hall With Pantry
- Mini Theatre
- Indoor Co-working Space
- Learning Centre & More


MEDITATION DECK


AMPHITHEATRE

AERIAL VIEW


INDOOR GAMES ROOM

Location Route Map



WHY CASAGRAND?

20 years of real estate excellence	**160+** landmark projects	**55,000+** happy families	**2023** rigorous quality checks	**87%** on-time delivery	**7 cities** Chennai, Bengaluru, Hyderabad, Coimbatore, Pune, Delhi & Dubai
2 months of rental support to find tenants	**6 months** of resale support	**8 Year** warranty & 10-year community maintenance	**75%** open area for 2x more light & ventilation	**0%** space wastage for carpet area efficiency	**23** global brands used in fittings and finishing materials

CREDAI

93840 54982

EXCLUSIVE SITE VISIT AVAILABLE

VISIT MODEL HOUSE AT SITE

SCAN TO EXPERIENCE THE VIRTUAL WALK-THROUGH

CASAGRAND building aspirations

ಶನಿವಾರ, ಸೆಪ್ಟೆಂಬರ್ 20, 2025| ₹ 7.00

prajavani.net prajavani

www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಬೈಕ್ ಸವಾರಿ

ರಾಣಿ ಅಬ್ಬಕ್ಕ ಜಯಂತ್ಯುತ್ಸವ ಹಾಗೂ ಕಿತ್ತೂರು ರಾಣಿ ಚನ್ನಮ್ಮ ವಿಜಯೋತ್ಸವದ ಪ್ರಯುಕ್ತ ಎಬಿವಿಪಿ ಸಂಘಟನೆ ಧಾರವಾಡದಲ್ಲಿ ಹಮ್ಮಿಕೊಂಡಿದ್ದ ಮೆರವಣಿಗೆಯಲ್ಲಿ ಯುವತಿಯೊಬ್ಬರು ಕಾಣಿಸಿಕೊಂಡಿದ್ದು ಹೀಗೆ

ಶಕ್ತಿ ಪ್ರದರ್ಶನ

ರಾಂಚಿಯಲ್ಲಿ ನಡೆದ ರಕ್ಷಣಾ ಸಲಕರಣೆಗಳ ಪ್ರದರ್ಶನದಲ್ಲಿ ಶಸ್ತ್ರಾಸ್ತ್ರ ಮತ್ತು ಸೇನಾ ಸಮವಸ್ತ್ರ ಧರಿಸಿದ್ದ ಮನುಷ್ಯಾಕಾರದ ಗೊಂಬೆಯು ಗಮನಸೆಳೆಯಿತು

5% INSTANT DISCOUNT# SBI card

#Min. Trxn.: ₹3,000; Max. Discount: ₹500 per card; Valid only on one trxn. per card; Validity: 13 Sep - 20 Oct 2025. T&C Apply.

₹3499 ಕ್ಕೆ ಶಾಪಿಂಗ್ ಮಾಡಿ ಮತ್ತು ಆಕರ್ಷಕ ಉಡುಗೊರೆಯನ್ನು ಪಡೆಯಿರಿ*

*ನಿಯಮಗಳು ಮತ್ತು ಷರತ್ತುಗಳು ಅನ್ವಯಿಸುತ್ತವೆ. ಉಡುಗೊರೆ ಕೊಡುಗೆಗಳ ಪ್ರಯೋಜನವನ್ನು ಪಡೆಯಲು, ಗ್ರಾಹಕರು ₹249 ಮಾತ್ರ ಪಾವತಿಸಬೇಕಾಗುತ್ತದೆ.
ಸ್ಟೋರ್‌ನಲ್ಲಿ ಇನ್ನೂ ಹೆಚ್ಚಿನ ಉಡುಗೊರೆ ಕೊಡುಗೆಗಳು ಸಹ ಲಭ್ಯವಿವೆ. ಆಫರ್ ಸ್ಟಾಕ್ ಇರುವವರೆಗೂ ಮಾತ್ರ ಅನ್ವಯಿಸುತ್ತದೆ. ಆಫರ್ ಇಲ್ಲದೆಯೂ ಸಹ ವಸ್ತುಗಳನ್ನು ಖರೀದಿಸಬಹುದು.

॥ ಓಂ ಶ್ರೀ ಗುರು ಬಸವಲಿಂಗಾಯ ನಮಃ ॥ ॥ ಶ್ರೀ ಶ್ರೀಶೈಲ ಮಲ್ಲಿಕಾರ್ಜುನ ಪ್ರಸನ್ನ ॥ ॥ ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥

ವೀರಶೈವ ಲಿಂಗಾಯತ ರಡ್ಡಿ/ಲಿಂಗಾಯತ ರಡ್ಡಿ ಬಂಧುಗಳಲ್ಲಿ ಮನವಿ.

ಆತ್ಮೀಯ ಬಂಧುಗಳೇ,

ಕರ್ನಾಟಕ ಸರ್ಕಾರ ಸೆಪ್ಟೆಂಬರ್ 2025 ತಿಂಗಳಿನಿಂದ ಕರ್ನಾಟಕ ರಾಜ್ಯದಲ್ಲಿ ವಾಸ ಮಾಡುವ ಎಲ್ಲಾ ಜನಾಂಗದ ಸಾಮಾಜಿಕ-ಶೈಕ್ಷಣಿಕ-ಆರ್ಥಿಕ ಧಾರ್ಮಿಕ-ಜಾತಿ ಮತ್ತು ಇನ್ನಿತರ ಸುಮಾರು 60 ಮಾಹಿತಿಯ ಜನಗಣತಿಯನ್ನು ರಾಜ್ಯ ಸರ್ಕಾರದ ಅಧಿಕಾರಿಗಳು ಪ್ರತಿ ಮನೆಗು ಬಂದು ನಿಗದಿಪಡಿಸಿದ ನಮೂನೆಯಲ್ಲಿ ನಿಮ್ಮಿಂದ ಮಾಹಿತಿಯನ್ನು ಪಡೆದುಕೊಳ್ಳುತ್ತಾರೆ.

ಈ ಸಮೀಕ್ಷೆಯಲ್ಲಿ ನಿಮ್ಮ ಕುಟುಂಬದ ವೈಯುಕ್ತಿಕ ಸ್ಥಿತಿಗತಿಗಳ ವಿವರಗಳನ್ನು ಸಂಪೂರ್ಣವಾಗಿ ಪಡೆಯಲಿದ್ದಾರೆ, ಈ ಸಂದರ್ಭದಲ್ಲಿ ಧರ್ಮ ಮತ್ತು ಜಾತಿ ಕಾಲಂನಲ್ಲಿ ಕಾಲಂ ಕೋಡ್ : "A-1192 ರಡ್ಡಿ ಲಿಂಗಾಯತ (Raddy Lingayat)" ಎಂದು ಕಡ್ಡಾಯವಾಗಿ ನಮೂದಿಸುವುದು, ಈ ಸಂಕಿರಣ ಕಾಲದಲ್ಲಿ ಲಿಂಗಪೂಜೆ/ಇಷ್ಟಲಿಂಗ ಪೂಜೆ ಮಾಡುವ ವೀರಶೈವ ಲಿಂಗಾಯತ ರಡ್ಡಿ/ಲಿಂಗಾಯತ ರಡ್ಡಿ ಸಮಾಜದ ನಾವೆಲ್ಲರೂ ಒಗ್ಗಟ್ಟಾಗಿ ಮುನ್ನಡೆಯಬೇಕಾಗಿದೆ.

ವೀರಶೈವ ಲಿಂಗಾಯತ ರಡ್ಡಿ/ಲಿಂಗಾಯತ ರಡ್ಡಿ ಸಮಾಜದಲ್ಲಿ ಅನೇಕ ದಾರ್ಶನಿಕರು, ಮಹನೀಯರು ಅನನ್ಯ ಕೊಡುಗೆಗಳನ್ನು ಸಮಾಜಕ್ಕೆ ನೀಡಿರುತ್ತಾರೆ, ಅಂತಹವರಲ್ಲಿ ಪ್ರಮುಖರಾದ ಮಹಾದಾನಿಗಳಾದ ಶ್ರೀ ಭೂಮರಡ್ಡಿ ಬಸಪ್ಪ, ಬಳ್ಳಾರಿಯ ಶ್ರೀ ವೈ. ಮಹಾಬಲೇಶ್ವರಪ್ಪ, ಪದ್ಮಶ್ರೀ ಡಾ॥ ಆರ್.ಬಿ. ಪಾಟೀಲ, ಮಾಜಿ ಸಚಿವರುಗಳಾದ ಶ್ರೀ ದೊಡ್ಡ ಮೇಟಿ ಅಂದಾನಪ್ಪ, ಶ್ರೀಮತಿ ಬಸವರಾಜೇಶ್ವರಿ ಜಹಾಗೀರದಾರ್, ಶ್ರೀ ವಿಶ್ವನಾಥ ರಡ್ಡಿ ಮುದ್ನಾಳ, ಶ್ರೀ ಆರ್.ಎಮ್. ದೇಸಾಯಿ ಯಡಹಳ್ಳಿ, ಶ್ರೀ ಎಸ್.ಎಸ್. ಪಾಟೀಲ್ ಬೀಳಗಿ, ಶ್ರೀ ಬಿ.ಆರ್. ಪಾಟೀಲ್ ಲಿಂಗದಹಳ್ಳಿ, ಶ್ರೀ ಬಾಪುಗೌಡ ದರ್ಶನಾಪುರ, ಶ್ರೀ ಸಿ.ಎನ್. ಪಾಟೀಲ, ಶ್ರೀ ಸದಾಶಿವರಡ್ಡಿ ಕಂದಕೂರ ಹಾಗೂ ಶ್ರೀ ಎನ್. ತಿಪ್ಪಣ್ಣ, ಶ್ರೀ ಎಸ್.ಬಿ. ನಾಗರಾಳ್ ಮಾಜಿ ಅಧ್ಯಕ್ಷರು ಕೆಪಿಸಿಸಿ, ಶ್ರೀ ಎಸ್.ಬಿ ಪಾಟೀಲ್, ಶ್ರೀ ಬಿ.ಎಸ್. ಪಾಟೀಲ್ ಸಾಸನೂರ್, ಪ್ರೊಫೆಸರ್ ಎಮ್.ವಿ. ಪಾಟೀಲ್ ಮನ್ನಾಪುರ, ಶ್ರೀ ಎಸ್.ಎಮ್. ಗುರಡ್ಡಿ ಮಾಜಿ ಸಂಸದರು, ಶ್ರೀ ವಿ.ಟಿ. ರಾಯರಡ್ಡಿ, ರಾಜ್ಯ ಹೈಕೋರ್ಟ ವಕೀಲ ಪರಿಷತ್‌ನ ಮಾಜಿ ಅಧ್ಯಕ್ಷರು, ಶ್ರೀ ವೈ.ಬಿ. ಆಲೂರ, ಡಾ॥ ಬಿ.ಎಲ್. ಪಾಟೀಲ್ ಮತ್ತು ಶ್ರೀ ಮಲ್ಹಾರ್ ಲಿಂಗನಗೌಡ ಇನ್ನೂ ಮುಂತಾದ ಅನೇಕ ಅಗಲಿದ ಮಹನೀಯರು ನಮಗೆ ಮಾರ್ಗದರ್ಶನ ನೀಡಿ ಸಮಾಜಕ್ಕೆ ದಾರಿ ದೀಪವಾಗಿರುತ್ತಾರೆ.

ಇದಲ್ಲದೆ ನಮ್ಮ ವೀರಶೈವ ಲಿಂಗಾಯತ ರಡ್ಡಿ/ಲಿಂಗಾಯತ ರಡ್ಡಿ ಸಮಾಜದಲ್ಲಿ ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿಗಳಾದ ಶ್ರೀ ಶಿವರಾಜ್ ಪಾಟೀಲ, ರಾಜ್ಯದ ಲೋಕಾಯುಕ್ತರಾದ ಶ್ರೀ ಬಿ.ಎಸ್. ಪಾಟೀಲ, ನಿವೃತ್ತ ಮುಖ್ಯ ಕಾರ್ಯದರ್ಶಿ ಕರ್ನಾಟಕ ಸರ್ಕಾರ ಶ್ರೀ ಬಿ.ಎಸ್. ಪಾಟೀಲ, ಶರಣ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಶ್ರೀ ಗೋ.ರು. ಚನ್ನಬಸಪ್ಪ, ಸಾಹಿತಿ ಪ್ರೊಫೆಸರ್ ಶ್ರೀ ಬಿ.ವಿ. ಶಿರೂರ್, ಮಾಜಿ ಸಚಿವರುಗಳಾದ ಶ್ರೀ ಏಕಾಂತಯ್ಯ, ಶ್ರೀ ಬಸವರಾಜ ಪಾಟೀಲ್ ಅನ್ವರಿ, ಶ್ರೀ ಎಮ್.ಎಸ್. ಪಾಟೀಲ್ ರಾಯಚೂರ, ಡಾ॥ ಮಲಕ ರಡ್ಡಿ, ಶ್ರೀ ಎಸ್.ಆರ್. ಪಾಟೀಲ್ ಬಾಡಗಂಡಿ, ಶ್ರೀ ಆರ್.ಎಸ್. ಪಾಟೀಲ್ ಮಾಜಿ ಸಂಸದರು ಇನ್ನೂ ಅನೇಕ ಮಹನೀಯರು ನಮ್ಮ ಜೊತೆ ಇದ್ದು ಸಮಾಜಕ್ಕೆ ಮಾರ್ಗದರ್ಶನ ನೀಡುತ್ತಿದ್ದಾರೆ.

ಈ ವಿಚಾರದಲ್ಲಿ ದಿನಾಂಕ : 03/09/2025 ರಂದು ಹುಬ್ಬಳ್ಳಿಯಲ್ಲಿ ನಡೆದ ಸಮಾಜದ ಸಭೆಯಲ್ಲಿ ರಾಜ್ಯ ಸರಕಾರದ ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆಯಲ್ಲಿ ರಾಜ್ಯ ಸರಕಾರ ಪ್ರಕಟಿಸಿದಂತೆ ಜಾತಿ ಕಾಲಂನಲ್ಲಿ ಕಾಲಂ ಕೋಡ್ : "A-1192 ರಡ್ಡಿ ಲಿಂಗಾಯತ (Raddy Lingayat)" ಎಂದು ಕಡ್ಡಾಯವಾಗಿ ನಮೂದಿಸಬೇಕು ಎಂದು ಒಮ್ಮತದ ನಿರ್ಣಯವನ್ನು ತೆಗೆದುಕೊಳ್ಳಲಾಯಿತು.

* ನಮ್ಮ ಸಮಾಜದ ಧಾರ್ಮಿಕ ಸಂಪ್ರದಾಯ, ಸಂಸ್ಕೃತಿ ರಕ್ಷಣೆ.
* ಸಾಮಾಜಿಕ ಮತ್ತು ರಾಜಕೀಯವಾಗಿ ಹೆಚ್ಚು ಶಕ್ತಿಶಾಲಿ.
* ಕೆಲವರು ತಮ್ಮ ಸ್ವಾರ್ಥ ಸಾಧನೆಗೋಸ್ಕರ ಬೆಂಗಳೂರಿನಿಂದ ನಮ್ಮ ಪ್ರದೇಶಕ್ಕೆ ಬಂದು ಹಿಂದೂ ರಡ್ಡಿ ಪ್ರವರ್ಗ-III(A) ಎಂದು ಪ್ರಮಾಣಪತ್ರ ತೆಗೆದುಕೊಳ್ಳಲು ನಮ್ಮ ಯುವಕರಿಗೆ ಒತ್ತಾಯಿಸುತ್ತಾರೆ ಆದರೆ ವಾಸ್ತವದಲ್ಲಿ ಪ್ರವರ್ಗ-III(A) ಎಂದು ಪ್ರಮಾಣಪತ್ರ ತೆಗೆದುಕೊಂಡರೆ ನಮಗೆ ಬೆಂಗಳೂರು ಮತ್ತು ಮೈಸೂರು ಭಾಗದ ಅಲ್ಲಿನ ಪ್ರವರ್ಗ III(A) ಸಮಾಜಕ್ಕೆ ಸೇರಿದ ಪ್ರತಿಭಾನ್ವಿತ ವಿದ್ಯಾರ್ಥಿಗಳೊಂದಿಗೆ ಸ್ಪರ್ಧೆ ಮಾಡಬೇಕಾಗುತ್ತದೆ ಮತ್ತು ಇದರಿಂದ ಶಿಕ್ಷಣ ಹಾಗೂ ಉದ್ಯೋಗದಲ್ಲಿ ಹೆಚ್ಚಿನ ನಷ್ಟ ಅನುಭವಿಸಬೇಕಾಗುತ್ತದೆ.
* ಹಿಂದೂ ರಡ್ಡಿ ಪ್ರವರ್ಗ-III(A) ಎಂದು ನಮೂದಿಸಿ ಪ್ರಮಾಣಪತ್ರ ಪಡೆದರೆ ಅಂಥವರಿಗೆ ರಾಜ್ಯ ಸರಕಾರ ಕೇವಲ 4% ಮೀಸಲಾತಿಯನ್ನು ಕಾಯ್ದಿರಿಸಿದೆ ಆದರೆ ಪ್ರವರ್ಗ-III(B) "A-1192 ರಡ್ಡಿ ಲಿಂಗಾಯತ (Raddy Lingayat)" ಎಂದು ನಮೂದಿಸಿದವರಿಗೆ 5% ಮೀಸಲಾತಿಯನ್ನು ಕಾಯ್ದಿರಿಸಿದೆ ಇದರಿಂದ ನಮಗೆ ಉದ್ಯೋಗ ಹಾಗೂ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ದೊರೆಯಲಿದೆ. ಆದ್ದರಿಂದ ರಡ್ಡಿ ಲಿಂಗಾಯತ ಸಮಾಜದ ನಾವೆಲ್ಲರೂ ಅನ್ಯರ ಮಾತಿಗೆ ಕಿವಿಗೊಡದೆ ಪ್ರವರ್ಗ-III(B) ಯೆಂದು ಕಡ್ಡಾಯವಾಗಿ ಪ್ರಮಾಣ ಪತ್ರ ಪಡೆದು ನಮ್ಮ ಮಕ್ಕಳ ಉಜ್ವಲ ಭವಿಷ್ಯಕ್ಕಾಗಿ ಹಾಗೂ ಶಿಕ್ಷಣ ಮತ್ತು ಉದ್ಯೋಗದಲ್ಲಿ ಹೆಚ್ಚಿನ ಅವಕಾಶಕ್ಕಾಗಿ ಕಡ್ಡಾಯವಾಗಿ "A-1192 ರಡ್ಡಿ ಲಿಂಗಾಯತ (Raddy Lingayat)" ಎಂದು ನಮೂದಿಸಬೇಕು.

ತಮ್ಮ ವಿಶ್ವಾಸಿಗಳು,

ಶ್ರೀ ಜಿ. ಎಸ್ ಪಾಟೀಲ್, ಶಾಸಕರು ರೋಣ
ಹಾಗೂ ಗೌರವ ಅಧ್ಯಕ್ಷರು ವೀರಶೈವ ಲಿಂಗಾಯತ ರಡ್ಡಿ ಸಮಾಜ.
ಶ್ರೀ ಶೇಖರಗೌಡ ಮಾಲಿ ಪಾಟೀಲ್ ಗುಮಗೇರಿ,
ರಾಜ್ಯಾಧ್ಯಕ್ಷರು ವೀರಶೈವ ಲಿಂಗಾಯತ ರಡ್ಡಿ ಸಮಾಜ.
ಶ್ರೀ ಶರಣಬಸಪ್ಪ ದರ್ಶನಾಪುರ, ಮಾನ್ಯ ಮಂತ್ರಿಗಳು ಹಾಗೂ
ರಾಷ್ಟ್ರೀಯ ಉಪಾಧ್ಯಕ್ಷರು ವೀರಶೈವ ಲಿಂಗಾಯತ ಮಹಾಸಭಾ ಬೆಂಗಳೂರು.
ಶ್ರೀ ಬಸವರಾಜ ರಾಯರಡ್ಡಿ, ಮಾನ್ಯ ಮುಖ್ಯಮಂತ್ರಿಗಳ
ಆರ್ಥಿಕ ಸಲಹೆಗಾರರು ಕರ್ನಾಟಕ ಸರ್ಕಾರ.
ಶ್ರೀ ಹಂಪನಗೌಡ ಬಾದರ್ಲಿ, ಶಾಸಕರು ಸಿಂಧನೂರು.
ಶ್ರೀ ಅಪ್ಪಾಜಿ ನಾಡಗೌಡ, ಶಾಸಕರು ಮುದ್ದೇಬಿಹಾಳ.

ಶ್ರೀ ಅಮರೇಗೌಡ ಪಾಟೀಲ್ ಬಯ್ಯಾಪುರ, ಮಾಜಿ ಸಚಿವರು
ಹಾಗೂ ರಾಜ್ಯ ಉಪಾಧ್ಯಕ್ಷರು ವೀರಶೈವ ಲಿಂಗಾಯತ ಮಹಾಸಭಾ.
ಶ್ರೀ ವೆಂಕಟರಾವ್ ನಾಡಗೌಡ, ಮಾಜಿ ಸಚಿವರು ಸಿಂಧನೂರು.
ಶ್ರೀ ಚನ್ನಾರಡ್ಡಿ ತನ್ನೂರು, ಶಾಸಕರು ಯಾದಗಿರಿ.
ಶ್ರೀ ಶರಣಗೌಡ ಕಂದುಕೂರ್, ಶಾಸಕರು ಗುರುಮಿಠಕಲ್.
ಶ್ರೀ ಬಸವನಗೌಡ ಬ್ಯಾಗವಾಟ್, ಮಾಜಿ ಶಾಸಕರು.
ಶ್ರೀ ಶರಣಗೌಡಪಾಟೀಲ್ ಬಯ್ಯಾಪುರ, ವಿಧಾನ ಪರಿಷತ್ ಸದಸ್ಯರು.
ಶ್ರೀ ವಾಯ್ ಸತೀಶ್, ವಿಧಾನ ಪರಿಷತ್ ಸದಸ್ಯರು.
ಶ್ರೀ ನಾರಾ ಭರತ್ ರೆಡ್ಡಿ, ಶಾಸಕರು ಬಳ್ಳಾರಿ.

ಶ್ರೀ ಹಾಲಪ್ಪ ಬಸಪ್ಪ ಆಚಾರ್, ಮಾಜಿ ಸಚಿವರು.
ಶ್ರೀ ಅಜಯ್ ಕುಮಾರ್ ಸರನಾಯಕ, ಮಾಜಿ ಸಂಸದರು.
ಶ್ರೀ ದೊಡ್ಡನಗೌಡ ಪಾಟೀಲ್, ಮಾಜಿ ಶಾಸಕರು.
ಶ್ರೀ ಸೋಮನಗೌಡ ಪಾಟೀಲ್, ಮಾಜಿ ಶಾಸಕರು.
ಶ್ರೀ ಎ.ಎಸ್ ಪಾಟೀಲ್ ನಡಹಳ್ಳಿ, ಮಾಜಿ ಶಾಸಕರು.
ಶ್ರೀ ಬಸನಗೌಡ ಬಾದರ್ಲಿ, ವಿಧಾನ ಪರಿಷತ್ ಸದಸ್ಯರು.
ಡಾ. ಮಹಿಪಾಲ್ ಜಾಹಗಿರದಾರ್.
ಶ್ರೀ ಕೆಸರಟ್ಟಿ ವೀರಪ್ಪ, ಮಾಜಿ ಶಾಸಕರು.
ಶ್ರೀ ಶಾಂತೇಶ ಗುರಡ್ಡಿ, ವಕೀಲರು ಹಾಗೂ ಉದ್ದಿಮೆದಾರರು.

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಗೆಲುವಿನ ನಿರೀಕ್ಷೆ
ಹರ್ಮನ್‌ಪ್ರೀತ್ ಕೌರ್ ನಾಯಕತ್ವದ ಭಾರತ ಮಹಿಳಾ ಕ್ರಿಕೆಟ್ ತಂಡವು ಶನಿವಾರ ಆಸ್ಟ್ರೇಲಿಯಾ ವಿರುದ್ಧ ಮೂರನೇ ಏಕದಿನ ಪಂದ್ಯ ಗೆದ್ದು, ಚಾರಿತ್ರಿಕ ಸರಣಿ ಜಯಿಸುವತ್ತ ಕಣ್ಣಿಟ್ಟಿದೆ

ಜಾಗೃತಿ ಜಾಥಾ
ಆಯುರ್ವೇದ ದಿನಾಚರಣೆ ಅಂಗವಾಗಿ ಶುಕ್ರವಾರ ಮೈಸೂರಿನಲ್ಲಿ ನಡೆದ 'ಆಯುರ್‌ಪಥ' ಜಾಥಾದಲ್ಲಿ ವಿದ್ಯಾರ್ಥಿನಿಯೊಬ್ಬರು ಕಾಣಿಸಿಕೊಂಡಿದ್ದು ಹೀಗೆ

ಸೆನ್ಸೆಕ್ಸ್ 82,626 | ನಿಫ್ಟಿ 25,327 | $/₹ 88.16 | ಚಿನ್ನ (Std. 10g) ₹1,15,700 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹1,36,700 (ಬೆಂಗಳೂರು)

ಜಾತಿವಾರು ಸಮೀಕ್ಷೆ ನಿಶ್ಚಿತ: ಸಿ.ಎಂ

'22ರಿಂದಲೇ ಮನೆ ಮನೆ ಸಮೀಕ್ಷೆ'
• 'ಮುಂದೂಡುವ ಪ್ರಶ್ನೆಯೇ ಇಲ್ಲ'

ಪ್ರಜಾವಾಣಿ ವಾರ್ತೆ

ಸಿದ್ದರಾಮಯ್ಯ

ಬೆಂಗಳೂರು: 'ಇದೇ 22ರಿಂದಲೇ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ಆರಂಭವಾಗಲಿದ್ದು, ಮುಂದೂಡುವ ಪ್ರಶ್ನೆಯೇ ಇಲ್ಲ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ಪಷ್ಟಪಡಿಸಿದ್ದಾರೆ.

ಗುರುವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ಸಮೀಕ್ಷೆಯ ಕುರಿತು ಚರ್ಚೆ ನಡೆದಿತ್ತು. ಹಿಂದುಳಿದ ವರ್ಗಗಳ ಆಯೋಗವು ಸಮೀಕ್ಷೆಗಾಗಿ ಸಿದ್ಧಪಡಿಸಿರುವ ಕೈಪಿಡಿಯ ಜಾತಿ ಪಟ್ಟಿಯಲ್ಲಿ ಹೊಸ ಜಾತಿಗಳ ಸೇರ್ಪಡೆ ಹಾಗೂ ಹಿಂದೂ ಜಾತಿಗಳ ಹೆಸರಿನ ಜೊತೆಗೆ ಕ್ರಿಶ್ಚಿಯನ್ ಪದದ ಉಲ್ಲೇಖದ ಕುರಿತು ಕೆಲವು ಸಚಿವರು ಆಕ್ಷೇಪ ವ್ಯಕ್ತಪಡಿಸಿದ್ದರು. ಆಯೋಗದ ಈ ನಡೆಯನ್ನು ಬಿಜೆಪಿ ಅಸ್ತ್ರ ಮಾಡಿಕೊಂಡಿದ್ದು ಸರ್ಕಾರ, ಪಕ್ಷದ ವರ್ಚಸ್ಸಿಗೆ ಹಿನ್ನಡೆಯಾಗಬಹುದು ಎಂಬ ಆತಂಕವನ್ನೂ ವ್ಯಕ್ತಪಡಿಸಿದ್ದರು. ಇದರಿಂದಾಗಿ, ಸಮೀಕ್ಷೆ ಮುಂದೂಡಿಕೆಯಾಗಬಹುದೆಂಬ ಚರ್ಚೆಗಳು ನಡೆದಿದ್ದವು.

ಸುದ್ದಿಗಾರರ ಜತೆ ಶುಕ್ರವಾರ ಮಾತನಾಡಿದ ಸಿದ್ದರಾಮಯ್ಯ ಅವರು, 'ಸಮೀಕ್ಷೆಯ ಬಗ್ಗೆ ಸರ್ಕಾರದ ಅಭಿಪ್ರಾಯಗಳನ್ನು ಈಗಾಗಲೇ ಹಿಂದುಳಿದ ವರ್ಗಗಳ ಆಯೋಗಕ್ಕೆ ತಿಳಿಸಲಾಗಿದೆ. ಆಯೋಗವು ಸಂವಿಧಾನ ಬದ್ಧವಾದ ಸಂಸ್ಥೆ. ಇಂತಹ ವಿಚಾರಗಳಲ್ಲಿ ಸೂಕ್ತ ನಿರ್ಧಾರಗಳನ್ನು ಕೈಗೊಳ್ಳುವ ಅಧಿಕಾರ ಆಯೋಗಕ್ಕೇ ಇದೆ. ನಾವು ನಿರ್ದೇಶನ ನೀಡಲು ಬರುವುದಿಲ್ಲ. ಆಯೋಗ ನಿರ್ಧಾರ ಕೈಗೊಳ್ಳಲಿದೆ' ಎಂದು ಹೇಳಿದರು.

'ಸಚಿವ ಸಂಪುಟ ಸಭೆಯಲ್ಲಿ ಯಾವ ಗೊಂದಲವೂ ಆಗಿಲ್ಲ. ಸಮೀಕ್ಷೆ ವಿಚಾರದಲ್ಲಿ ಬಿಜೆಪಿಯವರು ರಾಜಕೀಯ ಮಾಡುತ್ತಿದ್ದಾರೆ' ಎಂದೂ ಸಿದ್ದರಾಮಯ್ಯ ಹೇಳಿದರು.

▶11

ಪಿಐಎಲ್: 22ಕ್ಕೆ ವಿಚಾರಣೆ

ಜಾತಿವಾರು ಸಮೀಕ್ಷೆಯನ್ನು ಪ್ರಶ್ನಿಸಿ ಸಲ್ಲಿಸಲಾದ ಹಲವು ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳ ತುರ್ತು ವಿಚಾರಣೆ ನಡೆಸಿದ ಹೈಕೋರ್ಟ್, ರಾಜ್ಯ ಹಿಂದುಳಿದ ವರ್ಗಗಳ ಶಾಶ್ವತ ಆಯೋಗ, ಭಾರತ ಜನಗಣತಿ ಆಯುಕ್ತ ಸೇರಿದಂತೆ ಎಲ್ಲ ಪ್ರತಿವಾದಿಗಳಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿದೆ.

ಅಖಿಲ ಭಾರತ ವೀರಶೈವ ಮಹಾಸಭಾ, ಅಖಿಲ ಭಾರತ ಬ್ರಾಹ್ಮಣ ಮಹಾಸಭಾ ಹಾಗೂ ಹಿರಿಯ ವಕೀಲ ಕೆ.ಎನ್.ಸುಬ್ಬಾರೆಡ್ಡಿ ಸಲ್ಲಿಸಿದ್ದ ಅರ್ಜಿಗಳನ್ನು ಹಿರಿಯ ನ್ಯಾಯಮೂರ್ತಿ ಅನು ಶಿವರಾಮನ್ ನೇತೃತ್ವದ ವಿಭಾಗೀಯ ನ್ಯಾಯಪೀಠ ಶುಕ್ರವಾರ ವಿಚಾರಣೆ ನಡೆಸಿತು.

ಪ್ರತಿವಾದಿಗಳಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿದ ನ್ಯಾಯಪೀಠ ವಿಚಾರಣೆಯನ್ನು ಇದೇ 22ಕ್ಕೆ ಮುಂದೂಡಿತು. ಇದೇ ವೇಳೆ ಅರ್ಜಿದಾರರ ಪರ ಹಿರಿಯ ವಕೀಲ ಪ್ರಭುಲಿಂಗ ಕೆ.ನಾವದಗಿ, 'ಮುಂದಿನ ವಿಚಾರಣೆ ತನಕ ಸರ್ಕಾರ ಸಮೀಕ್ಷೆ ಕಾರ್ಯಕ್ಕೆ ಮುಂದಾಗದಂತೆ ನಿರ್ದೇಶಿಸಬೇಕು' ಎಂದು ಕೋರಿದರು.

ಆಯೋಗದ ಪರ ಹಾಜರಿದ್ದ ಹಿರಿಯ ವಕೀಲ ರವಿವರ್ಮ ಕುಮಾರ್ ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿ, 'ಈಗಾಗಲೇ ಸಮೀಕ್ಷೆ ಕಾರ್ಯ ಆರಂಭವಾಗಿದೆ. ಸುಮಾರು 1.5 ಕೋಟಿ ಮನೆಗಳ ವಿದ್ಯುತ್ ಮೀಟರ್‌ಗಳಿಗೆ ಸಮೀಕ್ಷೆಯ ಸ್ಟಿಕ್ಕರ್‌ಗಳನ್ನು ಅಂಟಿಸಲಾಗಿದೆ' ಎಂದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, 'ಅರ್ಜಿದಾರರ ಮಧ್ಯಂತರ ಮನವಿಯನ್ನು ಯಥಾಕ್ರಮದಲ್ಲಿ ನಿಯಮಿತ ನ್ಯಾಯಪೀಠವೇ ವಿಚಾರಣೆ ವೇಳೆ ಪರಿಗಣಿಸಲಿದೆ' ಎಂದು ಮೌಖಿಕ ಅಭಿಪ್ರಾಯ ವ್ಯಕ್ತಪಡಿಸಿತು.

'ಹಿಂದೂ ಕ್ರೈಸ್ತ' ಉಲ್ಲೇಖ ಕೈಬಿಟ್ಟ ಆಯೋಗ

ಸರ್ಕಾರದ ಸಲಹೆಯನ್ನು ಪರಿಗಣಿಸಿರುವ ಹಿಂದುಳಿದ ವರ್ಗಗಳ ಆಯೋಗ, ಜಾತಿ ಪಟ್ಟಿಯಲ್ಲಿರುವ 'ಹಿಂದೂ ಕ್ರೈಸ್ತ' ಎಂಬ ಉಲ್ಲೇಖವನ್ನು ಕೈಬಿಟ್ಟು ಸಮೀಕ್ಷೆ ನಡೆಸಲು ನಿರ್ಧರಿಸಿದೆ.

ಹೊಸದಾಗಿ ಜಾತಿಪಟ್ಟಿ ನೀಡಬೇಕೇ ಅಥವಾ ಮುದ್ರಣಗೊಂಡಿರುವ ಕೈಪಿಡಿಯಲ್ಲಿನ ಪುಟದಲ್ಲಿ ಈ ವಿವರವನ್ನು ಮರೆಮಾಚಬೇಕೇ ಎಂಬ ತೀರ್ಮಾನವನ್ನು ಆಯೋಗ ಮಾಡಲಿದೆ ಎಂದು ಗೊತ್ತಾಗಿದೆ.

ಈ ಬೆನ್ನಲ್ಲೇ, ಹಿಂದುಳಿದ ವರ್ಗಗಳ ಆಯೋಗವು ಸಮೀಕ್ಷಾ ಕಾರ್ಯಕ್ಕೆ ದಿನಾಂಕ ನಿಗದಿಪಡಿಸಿ ಅನುಮತಿ ನೀಡುವಂತೆ ಕೋರಿದ್ದ ಪ್ರಸ್ತಾವನೆಗೆ ರಾಜ್ಯ ಸರ್ಕಾರವು ಒಪ್ಪಿಗೆ ಸೂಚಿಸಿದೆ.

'ಆಯೋಗದ ವತಿಯಿಂದ ಎಲ್ಲಾ ನಾಗರಿಕರ ಸಮೀಕ್ಷೆಯನ್ನು ಸೆ.22 ರಿಂದ ಅ.7ರವರೆಗೆ ನಡೆಸುವುದಕ್ಕೆ ಅನುಮೋದನೆ ನೀಡಲಾಗಿದೆ' ಎಂದು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಶುಕ್ರವಾರ ಹೊರಡಿಸಿದ ಆದೇಶದಲ್ಲಿ ತಿಳಿಸಲಾಗಿದೆ.

ಏಕತಾ ಸಮಾವೇಶ

ಪ್ರಜಾವಾಣಿ ಚಿತ್ರ: ಗೋವಿಂದರಾಜ ಜವಳಿ

ಹುಬ್ಬಳ್ಳಿಯಲ್ಲಿ ಶುಕ್ರವಾರ ವೀರಶೈವ ಲಿಂಗಾಯತ ಏಕತಾ ಸಮಾವೇಶಕ್ಕೂ ಮುನ್ನ ಮಠಾಧೀಶರು ಮತ್ತು ಮುಖಂಡರ ನೇತೃತ್ವದಲ್ಲಿ ಮೆರವಣಿಗೆ ನಡೆಯಿತು

ಸುದ್ದಿ ▶6

ದಸರಾ: ಅರ್ಜಿದಾರರಿಗೆ ತರಾಟೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಮೈಸೂರು ದಸರಾ ಉದ್ಘಾಟನೆಗೆ ಸಾಹಿತಿ ಬಾನು ಮುಷ್ತಾಕ್ ಅವರನ್ನು ಆಹ್ವಾನಿಸಿರುವುದನ್ನು ಪ್ರಶ್ನಿಸಿ ಸಲ್ಲಿಕೆಯಾಗಿದ್ದ ವಿಶೇಷ ಮೇಲ್ಮನವಿ ಅರ್ಜಿಯನ್ನು ಸುಪ್ರೀಂ ಕೋರ್ಟ್ ಶುಕ್ರವಾರ ವಜಾಗೊಳಿಸಿತು.

ಬಾನು ಮುಷ್ತಾಕ್

ಹೈಕೋರ್ಟ್ ಆದೇಶ ಪ್ರಶ್ನಿಸಿ ಬೆಂಗಳೂರಿನ ಎಚ್.ಎಸ್.ಗೌರವ್ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ವಿಕ್ರಮ್‌ನಾಥ್ ಹಾಗೂ ಸಂದೀಪ್ ಮೆಹ್ತಾ ಪೀಠವು, 'ಸಂವಿಧಾನದ ಪ್ರಸ್ತಾವನೆ ಏನು' ಎಂದು ಪ್ರಶ್ನಿಸಿತು.

ಅರ್ಜಿ ವಜಾಗೊಳಿಸಲಾಗಿದೆ ಎಂದು ನ್ಯಾಯಪೀಠ ಪ್ರಕಟಿಸಿದ ಬಳಿಕವೂ ವಕೀಲರು ವಾದ ಮುಂದುವರಿಸಿದರು. ಆಗ ನ್ಯಾಯಪೀಠವು, 'ಅರ್ಜಿ ವಜಾಗೊಳಿಸಲಾಗಿದೆ ಎಂದು ನಾವು ಮೂರು ಬಾರಿ ಹೇಳಿದ್ದೇವೆ. ಇನ್ನೂ ಎಷ್ಟು ಸಲ ಹೇಳಬೇಕು? ಮುಂದಿನ ಪ್ರಕರಣ' ಎಂದು ಹೇಳಿತು.

ಅರ್ಜಿದಾರರ ಪರ ವಕೀಲ ಪಿ.ಬಿ. ಸುರೇಶ್ ವಾದ ಆರಂಭಿಸುತ್ತಿದ್ದಂತೆಯೇ ನ್ಯಾಯಮೂರ್ತಿ ವಿಕ್ರಮ್‌ನಾಥ್ ಅವರು ಹೈಕೋರ್ಟ್‌ನ ಆದೇಶವನ್ನು ಉಲ್ಲೇಖಿಸಿದರು. '2017ರ ದಸರಾ ಉದ್ಘಾಟನೆಗೆ ಸಾಹಿತಿ ನಿಸಾರ್ ಅಹಮದ್ ಅವರನ್ನು ಆಹ್ವಾನಿಸಲಾಗಿತ್ತು. ಬಾನು ಮುಷ್ತಾಕ್ ಅವರಿಗೆ ಆಹ್ವಾನ ನೀಡಿದ್ದನ್ನು ವಿರೋಧಿಸಿ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ ಅರ್ಜಿದಾರರ ಪೈಕಿ ಒಬ್ಬರು ಆಗ ನಿಸಾರ್ ಅವರೊಂದಿಗೆ ವೇದಿಕೆ ಹಂಚಿಕೊಂಡಿದ್ದರು. ಇದು ಸರಿಯೇ ಅಥವಾ ಅಲ್ಲವೇ' ಎಂದು ಪ್ರಶ್ನಿಸಿದರು.

'ಬಾನು ಅವರು ದಸರಾ ಉದ್ಘಾಟಿಸುವುದಕ್ಕೆ ನಮ್ಮ ತಕರಾರು ಇಲ್ಲ. ಅದು ಜಾತ್ಯತೀತ ಚಟುವಟಿಕೆ. ಆದರೆ, ಚಾಮುಂಡೇಶ್ವರಿ ದೇವಸ್ಥಾನದ ಆವರಣದಲ್ಲಿ ಪೂಜೆ ಮಾಡುವುದಕ್ಕೆ ನಮ್ಮ ಆಕ್ಷೇಪ ಇದೆ' ಎಂದು ವಕೀಲರು ಗಮನ ಸೆಳೆದರು. 'ಅದು ಸಂಪೂರ್ಣವಾಗಿ ಜಾತ್ಯತೀತ ಚಟುವಟಿಕೆ ಅಲ್ಲ. ಇದು ಧಾರ್ಮಿಕ ಅಥವಾ ಆಧ್ಯಾತ್ಮಿಕ ಕಾರ್ಯಕ್ರಮ' ಎಂದು ಅವರು ವಾದಿಸಿದರು. ಆದಾಗ್ಯೂ, ಪೀಠವು, 'ಇದು ರಾಜ್ಯದ ಕಾರ್ಯಕ್ರಮ' ಎಂದು ವ್ಯಾಖ್ಯಾನಿಸಿತು.

> ಬಾನು ಮುಷ್ತಾಕ್ ಅವರನ್ನು ಆಹ್ವಾನಿಸಿರುವ ರಾಜ್ಯ ಸರ್ಕಾರದ ಕ್ರಮ ಸಂಪೂರ್ಣ ರಾಜಕೀಯಪ್ರೇರಿತ. ಅವರು ಹಿಂದೂ ಧರ್ಮದ ವಿರುದ್ಧ ಹೇಳಿಕೆ ನೀಡಿದ್ದಾರೆ. ಅಂತಹ ವ್ಯಕ್ತಿಯನ್ನು ಆಹ್ವಾನಿಸಿರುವುದು ಸರಿಯಲ್ಲ. ದಸರಾ ಸಮಾರಂಭ ಉದ್ಘಾಟಿಸಲು ಬಾನು ಅವರಿಗೆ ಅವಕಾಶ ನೀಡಬಹುದು. ಆದರೆ, ದೇವಸ್ಥಾನದ ಆವರಣದೊಳಗಿನ ಆಚರಣೆಗಳ ಭಾಗವಾಗಬಾರದು
> **ಪಿ.ಬಿ. ಸುರೇಶ್,** ಅರ್ಜಿದಾರರ ಪರ ವಕೀಲ

> ಮೈಸೂರು ದಸರಾ ಖಾಸಗಿ ಕಾರ್ಯಕ್ರಮವಲ್ಲ. ಇದನ್ನು ಆಯೋಜಿಸುತ್ತಿರುವುದು ರಾಜ್ಯ ಸರ್ಕಾರ. ರಾಜ್ಯ ಸರ್ಕಾರವು ಎ, ಬಿ ಮತ್ತು ಸಿ ನಡುವೆ ತಾರತಮ್ಯ ಮಾಡಲು ಹೇಗೆ ಸಾಧ್ಯ?
> **ವಿಕ್ರಮ್‌ನಾಥ್,** ನ್ಯಾಯಮೂರ್ತಿ

▶12

ಚಿನಕುರುಳಿ ಪ್ರಕಾಶ್ ಶೆಟ್ಟಿ

ಹೆಣ್ಣುಮಕ್ಕಳ ಶಿಕ್ಷಣಕ್ಕೆ ಬೆಳಕಾಗುವ 'ದೀಪಿಕಾ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉನ್ನತ ಶಿಕ್ಷಣಕ್ಕೆ ಪ್ರವೇಶ ಪಡೆಯುವ ರಾಜ್ಯದ ಹೆಣ್ಣುಮಕ್ಕಳಿಗೆ ಇನ್ನು ಮುಂದೆ ಅಜೀಂ ಪ್ರೇಮ್‌ಜಿ ಫೌಂಡೇಷನ್ ಆರ್ಥಿಕ ನೆರವು ನೀಡಲಿದ್ದು, ಅದಕ್ಕಾಗಿ ₹2,000 ಕೋಟಿ ಹಾಗೂ ರಾಜ್ಯ ಸರ್ಕಾರ ₹200 ಕೋಟಿ ಒದಗಿಸಿವೆ.

ಹೆಣ್ಣು ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಪ್ರತಿ ವರ್ಷ ವಿದ್ಯಾರ್ಥಿ ವೇತನ ನೀಡಲು ಅಜೀಂ ಪ್ರೇಮ್‌ಜಿ ಫೌಂಡೇಷನ್ ಹಾಗೂ ಉನ್ನತ ಶಿಕ್ಷಣ ಇಲಾಖೆ 'ದೀಪಿಕಾ ವಿದ್ಯಾರ್ಥಿ ವೇತನ' ಕಾರ್ಯಕ್ರಮ ರೂಪಿಸಿದ್ದು, ಈ ಕಾರ್ಯಕ್ರಮಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಶುಕ್ರವಾರ ಚಾಲನೆ ನೀಡಿದರು.

ಯೋಜನೆಯಲ್ಲಿ ಪ್ರತಿ ವಿದ್ಯಾರ್ಥಿನಿಗೆ ಪದವಿ ಶಿಕ್ಷಣ ಮುಗಿಯುವವರೆಗೆ ವಾರ್ಷಿಕ ₹30,000 ಸಿಗಲಿದ್ದು, ಶೈಕ್ಷಣಿಕ ಉದ್ದೇಶ ಹಾಗೂ ಪೂರಕ ಕಾರಣಗಳಿಗೆ ಬಳಸಿಕೊಳ್ಳಬಹುದು. ಸರ್ಕಾರಿ ಶಾಲೆಗಳಲ್ಲಿ 10ನೇ ತರಗತಿ ಹಾಗೂ ದ್ವಿತೀಯ ಪಿಯು ಉತ್ತೀರ್ಣರಾಗಿ 2025–26ನೇ ಸಾಲಿನಲ್ಲಿ ಸಾಮಾನ್ಯ ಪದವಿ ಅಥವಾ ವೃತ್ತಿ ಶಿಕ್ಷಣ ಪದವಿಗೆ ಸೇರುವ 37,000 ವಿದ್ಯಾರ್ಥಿನಿಯರಿಗೆ ವಿದ್ಯಾರ್ಥಿ ವೇತನದ ನೆರವು ಸಿಗಲಿದೆ. ಅರ್ಹ ವಿದ್ಯಾರ್ಥಿನಿಯರ ಸಂಖ್ಯೆ ಹೆಚ್ಚಾದರೆ ಆ ಮೊತ್ತವನ್ನು ರಾಜ್ಯ ಭರಿಸಲಿದೆ.

ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಸಿದ್ದರಾಮಯ್ಯ, 'ಸರ್ಕಾರ ಹೆಣ್ಣುಮಕ್ಕಳ ಶಿಕ್ಷಣಕ್ಕೆ ಆದ್ಯತೆ ನೀಡಿದೆ. ಅವರು ಸುಶಿಕ್ಷಿತರಾದರೆ ಅವರ ಕುಟುಂಬ, ಸಮಾಜ, ರಾಜ್ಯವೇ ಸುಶಿಕ್ಷಿತವಾಗುತ್ತದೆ. ಸರ್ಕಾರಿ ಕಾಲೇಜುಗಳ ವಿದ್ಯಾರ್ಥಿನಿಯರಿಗೆ ಬೋಧನೆ ಹಾಗೂ ಪ್ರಯೋಗಾಲಯ ಶುಲ್ಕಗಳನ್ನು ಮರುಪಾವತಿ ಮಾಡಲಾಗುತ್ತಿದೆ. ಬಾಲ್ಯ ವಿವಾಹ, ಬಾಲ ಗರ್ಭಿಣಿಯರ ಸಮಸ್ಯೆ ನಿರ್ಮೂಲನೆಯ ಹೋರಾಟಕ್ಕೆ ಶಕ್ತಿ ತುಂಬಲಿದೆ' ಎಂದರು.

> **ಪ್ರತಿಯೊಂದು ಮಗುವೂ ಉತ್ತಮ ಶಿಕ್ಷಣ ಪಡೆಯಬೇಕು. ಉನ್ನತ ಶಿಕ್ಷಣ ಪಡೆಯುವ ಹೆಣ್ಣು ಮಕ್ಕಳ ಸಂಖ್ಯೆ ಹೆಚ್ಚಾಗಬೇಕು. ಅದಕ್ಕಾಗಿ ನಮ್ಮ ಫೌಂಡೇಷನ್ ಶ್ರಮಿಸುತ್ತಿದೆ**
> **ಅಜೀಂ ಪ್ರೇಮ್‌ಜಿ,** ಉದ್ಯಮಿ

> **ಪ್ರತಿ ವರ್ಷ ಐವರು ಹೆಣ್ಣುಮಕ್ಕಳಿಗೆ ಬ್ರಿಟನ್ ವಿ.ವಿಗಳಲ್ಲಿ ಉನ್ನತ ಶಿಕ್ಷಣ ಪಡೆಯಲು ಚಿವೆನಿಂಗ್-ಕರ್ನಾಟಕ ವಿದ್ಯಾರ್ಥಿವೇತನ ಸ್ಥಾಪಿಸಲಾಗಿದೆ**
> **ಡಾ.ಎಂ.ಸಿ.ಸುಧಾಕರ್,** ಉನ್ನತ ಶಿಕ್ಷಣ ಸಚಿವ

ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು, ತುಂತುರು ಮಳೆಯಾಗಲಿದೆ.

ವ್ಯಾಪಾರಿಗಳ ತಾಣವಾಯ್ತು ಪಾದಚಾರಿ ಮಾರ್ಗ

ಪ್ರಯಾಣಿಕರಿಗೆ ಕಿರಿಕಿರಿ, ಪ್ರಶ್ನಿಸಿದವರಿಗೆ ಥಳಿತ, ಮುಜುಗರದ ಸನ್ನಿವೇಶ ಸೃಷ್ಟಿ

• ಆದಿತ್ಯ ಕೆ.ಎ.

ಮುಖ್ಯಾಂಶಗಳು

- ಸುರಂಗ ಮಾರ್ಗ, ಮೇಲ್ಸೇತುವೆ ಮೇಲೆ ಅತಿಕ್ರಮಿಸಿ ವ್ಯಾಪಾರ
- ಜನರ ಓಡಾಟಕ್ಕೆ ತೊಂದರೆ

ಬೆಂಗಳೂರು: ಮೆಜೆಸ್ಟಿಕ್‌ಗೆ ಹೊಂದಿಕೊಂಡಂತೆ ಇರುವ 'ಸುರಂಗ ಮಾರ್ಗ' ಹಾಗೂ 'ಮೇಲ್ಸೇತುವೆ'ಯ ಪಾದಚಾರಿ ಮಾರ್ಗವನ್ನು ಅತಿಕ್ರಮಿಸಿಕೊಂಡು ವ್ಯಾಪಾರ ನಡೆಸುತ್ತಿರುವವರಿಗೆ ಇನ್ನೂ ಕಡಿವಾಣ ಬಿದ್ದಿಲ್ಲ. ಮತ್ತೆ ತಲೆಯೆತ್ತಿರುವ ಅಕ್ರಮ ವ್ಯಾಪಾರ ಮಳಿಗೆಗಳಿಂದಾಗಿ ಪಾದಚಾರಿ ಮಾರ್ಗದಲ್ಲಿ ಓಡಾಟ ನಡೆಸುವವರಿಗೆ ನಿತ್ಯ ಕಿರಿಕಿರಿ ಉಂಟಾಗುತ್ತಿದೆ. ಕೆಲವು ಸ್ಥಳಗಳಲ್ಲಿ ಜನರಿಗೆ ಓಡಾಡುವುದೇ ಕಷ್ಟವಾಗಿದೆ.

'ನಮ್ಮ ಮೆಟ್ರೊ' ನಾಡಪ್ರಭು ಕೆಂಪೇಗೌಡ ನಿಲ್ದಾಣ ಹಾಗೂ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದಿಂದ ಬರಲು ಸುರಂಗ ಮಾರ್ಗ ನಿರ್ಮಿಸಲಾಗಿದೆ. ಆ ಸುರಂಗ ಮಾರ್ಗದ ಮೂಲಕ ಬಿಎಂಟಿಸಿ ಬಸ್ ನಿಲ್ದಾಣ ಹಾಗೂ ಸಂಗೊಳ್ಳಿ ರಾಯಣ್ಣ ರೈಲು ನಿಲ್ದಾಣಕ್ಕೆ ತೆರಳಲು ವ್ಯವಸ್ಥೆಯಿದ್ದು, ಎರಡೂ ಬದಿಯಲ್ಲಿ ಅಕ್ರಮವಾಗಿ ವ್ಯಾಪಾರ ನಡೆಯುತ್ತಿದೆ. ಮೆಜೆಸ್ಟಿಕ್‌ನಿಂದ ಗಾಂಧಿ ನಗರಕ್ಕೆ ತೆರಳುವ ಸುರಂಗ ಮಾರ್ಗದಲ್ಲೂ ಸಮಸ್ಯೆ ವಿಪರೀತವಾಗಿದೆ. ಗಣೇಶ ದೇವಸ್ಥಾನದ ಕಡೆಗೆ ತೆರಳುವ ಪ್ಲಾಟ್‌ಫಾರ್ಮ್ ರಸ್ತೆಯನ್ನೂ ಬಟ್ಟೆ ವ್ಯಾಪಾರಿಗಳು ಅತಿಕ್ರಮಿಸಿಕೊಂಡಿದ್ದಾರೆ.

ಗೃಹ ರಕ್ಷಕ ದಳದ ಸಿಬ್ಬಂದಿ ಕಾವಲು: ಮೆಜೆಸ್ಟಿಕ್‌ನ ಮೇಲ್ಸೇತುವೆಯ ಪಾದಚಾರಿ ಮಾರ್ಗದಲ್ಲಿ ಗೃಹ ರಕ್ಷಕ ದಳದ ಸಿಬ್ಬಂದಿಯನ್ನು ಕಾವಲಿಗೆ ನಿಯೋಜಿಸಲಾಗಿದೆ. ಅವರ ಮಾತಿಗೆ ವ್ಯಾಪಾರಿಗಳು ಕ್ಯಾರೆ ಎನ್ನುತ್ತಿಲ್ಲ ಎಂಬ ಆರೋಪವಿದೆ.

ರಾಜಾರೋಷವಾಗಿ ತಮ್ಮ ವ್ಯಾಪಾರ ಚಟುವಟಿಕೆಯನ್ನು ಮುಂದುವರಿಸಿದ್ದಾರೆ. ವಾಚ್, ಸ್ಪೀಕರ್, ಇಯರ್ ಫೋನ್, ಮೊಬೈಲ್ ಕವರ್, ಹೂವು, ಆಟಿಕೆ ವಸ್ತುಗಳು, ಹ್ಯಾಟ್, ಬಟ್ಟೆ, ಹಣ್ಣುಗಳ ವ್ಯಾಪಾರ ಪಾದಚಾರಿ ಮಾರ್ಗದಲ್ಲೇ ನಿರಾತಂಕವಾಗಿ ಮುಂದುವರಿದಿದೆ.

'ಅಕ್ರಮ' ವ್ಯಾಪಾರ ಜೋರಾಗಿದ್ದು, ಇದನ್ನು ಪ್ರಶ್ನಿಸುವ ಜನರ ಮೇಲೆ ವ್ಯಾಪಾರಿಗಳು ಹಲ್ಲೆ ಮಾಡುತ್ತಿದ್ದಾರೆ. ತಮ್ಮದೇ ಗುಂಪು ಕಟ್ಟಿಕೊಂಡು ಹಲ್ಲೆ ನಡೆಸಿ ಬೆದರಿಕೆ ಒಡ್ಡುತ್ತಿರುವ ಬಗ್ಗೆ ದೂರುಗಳು ಹೆಚ್ಚಾಗಿವೆ ಎಂದು ಮೂಲಗಳು ಹೇಳಿವೆ.

ನಿಲ್ದಾಣಕ್ಕೆ ಬಂದು ಹೋಗುವ ಜನರ ಸಂಚಾರಕ್ಕೆ ಅನುಕೂಲವಾಗಲೆಂದು ಸುರಂಗ ಮಾರ್ಗ ನಿರ್ಮಿಸಲಾಗಿದ್ದು, 'ಕಡ್ಡಾಯವಾಗಿ ಸುರಂಗ ಮಾರ್ಗ ಬಳಸಿ' ಎಂಬ ನಾಮಫಲಕವನ್ನು ಅಲ್ಲಲ್ಲಿ ಹಾಕಲಾಗಿದೆ. ಆದರೆ, ಜನರು ಓಡಾಡುವ ಸ್ಥಳವನ್ನೇ ಅತಿಕ್ರಮಿಸಿಕೊಂಡು ವ್ಯಾಪಾರಿಗಳು ವಹಿವಾಟು ನಡೆಸುತ್ತಿರುವ ಕಾರಣ ಓಡಾಟಕ್ಕೆ ತೊಂದರೆ ಆಗುತ್ತಲೇ ಇದೆ.

'ಯಾರಾದರೂ ಹಣ ನೀಡುವಂತೆ ಒತ್ತಾಯಿಸಿ ಕಿರುಕುಳ ನೀಡಿದರೆ ದೂರು ನೀಡಬಹುದು ಎಂಬುದಾಗಿ ಅಲ್ಲಲ್ಲಿ ತಡೆಗೋಡೆಯ ಮೇಲೆ ಪ್ರಕಟಿಸಲಾಗಿದೆ. ಆದರೆ, ನಡೆದು ಹೋಗುವ ಸಾರ್ವಜನಿಕರಿಗೆ ಕಿರಿಕಿರಿ ಹಾಗೂ ಮುಜುಗರದ ಸನ್ನಿವೇಶಗಳು ಪ್ರತಿನಿತ್ಯ ಎದುರಾಗುತ್ತಲೇ ಇವೆ' ಎಂದು ಪ್ರಯಾಣಿಕ ರಮೇಶ್ ಹೇಳಿದರು.

ಆದೇಶಕ್ಕೂ ಕಿಮ್ಮತ್ತಿಲ್ಲ: 'ಮೆಜೆಸ್ಟಿಕ್‌ನ ಸಾರ್ವಜನಿಕ ಸ್ಥಳಗಳಲ್ಲಿ ಅಕ್ರಮ ವ್ಯಾಪಾರಕ್ಕೆ ಅವಕಾಶ ನೀಡಬಾರದು' ಎಂದು ಬಿಬಿಎಂಪಿಗೆ ಸೂಚಿಸಿ 2019ರ ಆಗಸ್ಟ್ 27ರಂದು ಹೈಕೋರ್ಟ್ ಆದೇಶ ಹೊರಡಿಸಿತ್ತು. ಆಗ ಎಚ್ಚೆತ್ತ ಬಿಬಿಬಿಎಂಪಿ ಅಧಿಕಾರಿಗಳು, ಅನಧಿಕೃತ ಅಂಗಡಿಗಳನ್ನು ತೆರವು ಮಾಡಿದ್ದರು. ಅದಾದ ಮೇಲೆ ಅದೇ ಸ್ಥಳದಲ್ಲಿ ಅಂಗಡಿಗಳು ಪ್ರತ್ಯಕ್ಷವಾಗಿದ್ದವು.

'ಮಾಧ್ಯಮದಲ್ಲಿ ವರದಿಯಾದ ಬಳಿಕ ಬಿಬಿಎಂಪಿ ಸಿಬ್ಬಂದಿ ಹಾಗೂ ಪೊಲೀಸರು ಸ್ಥಳಕ್ಕೆ ಬಂದು ಅಂಗಡಿಗಳನ್ನು ತೆರವು ಮಾಡುತ್ತಾರೆ. ಕೆಲವು ದಿನಗಳ ಬಳಿಕ ಅದೇ ಸ್ಥಳದಲ್ಲಿ ವ್ಯಾಪಾರಿಗಳು ನಿರಾತಂಕವಾಗಿ ವ್ಯಾಪಾರ ನಡೆಸುತ್ತಾರೆ' ಎಂದು ಪ್ರಯಾಣಿಕರು ದೂರಿದ್ದಾರೆ.

ಮೆಜೆಸ್ಟಿಕ್‌ಗೆ ಹೊಂದಿಕೊಂಡಂತೆ ಇರುವ ಸುರಂಗ ಮಾರ್ಗದ ಪ್ರವೇಶ ದ್ವಾರವನ್ನು ಅತಿಕ್ರಮಿಸಿಕೊಂಡಿರುವ ಬೀದಿಬದಿಯ ವ್ಯಾಪಾರಿಗಳು

ಸುರಂಗ ಮಾರ್ಗವನ್ನು ಅತಿಕ್ರಮಿಸಿಕೊಂಡು ವ್ಯಾಪಾರ ಮಾಡುತ್ತಿರುವ ದೃಶ್ಯ
ಚಿತ್ರ/ ಎಂ.ಎಸ್. ಮಂಜುನಾಥ್

> **ವ್ಯಾಪಾರಿಗಳಿಗೆ ಪ್ರತ್ಯೇಕ ಸ್ಥಳ ನಿಗದಿಪಡಿಸಿ ಅಲ್ಲಿಗೆ ಸ್ಥಳಾಂತರ ಮಾಡಬೇಕು. ಮೆಜೆಸ್ಟಿಕ್‌ನ ಪಾದಚಾರಿ ಮಾರ್ಗದಲ್ಲಿ ದಿನದ 24 ಗಂಟೆಯೂ ಭದ್ರತೆಗೆ ಪೊಲೀಸರನ್ನು ನಿಯೋಜಿಸಬೇಕು**
> **ಸವಿತಾ** ದಾಸರಹಳ್ಳಿ

> **ಬಿಎಂಟಿಸಿ ಹಾಗೂ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣಗಳು ಉಪ್ಪಾರಪೇಟೆ ಪೊಲೀಸ್ ಠಾಣಾ ವ್ಯಾಪ್ತಿಗೆ ಬರುತ್ತದೆ. ನಿತ್ಯ ಸಾವಿರಾರು ಪ್ರಯಾಣಿಕರು ಬಂದು ಹೋಗುತ್ತಾರೆ. ಆದರೆ, ಸುರಕ್ಷತೆ ಇಲ್ಲ. ಎಲ್ಲೂ ತಪಾಸಣೆಯಿಲ್ಲ**
> **ಸುಧೀರ್ ರೆಡ್ಡಿ,** ಬಳ್ಳಾರಿ

ಸ್ವಚ್ಛತೆ ಮರೀಚಿಕೆ

ಮೆಜೆಸ್ಟಿಕ್‌ನಲ್ಲಿ ಸ್ವಚ್ಛತೆ ಮರೀಚಿಕೆಯಾಗಿದೆ. ಅಲ್ಲಲ್ಲಿ ಪ್ಲಾಸ್ಟಿಕ್ ಬಿದ್ದಿದೆ. ಗುಟ್ಕಾ ಉಗಿದು ಹೋಗುತ್ತಾರೆ. ಮೇಲ್ಸೇತುವೆ ಹಾಗೂ ಸುರಂಗ ಮಾರ್ಗದಲ್ಲಿ ಸ್ವಚ್ಛತೆ ಮರೀಚಿಕೆಯಾಗಿದೆ ಎಂದು ಪ್ರಯಾಣಿಕರು ದೂರಿದ್ದಾರೆ.

ಸುದ್ದಿ 2 ನಿಮಿಷ

ಯುವತಿಗೆ ಇರಿದ ಸಾಫ್ಟ್‌ವೇರ್ ಉದ್ಯೋಗಿ ಸೆರೆ

ಬೆಂಗಳೂರು: ಲೈಂಗಿಕವಾಗಿ ಸಹಕರಿಸುವಂತೆ ಒತ್ತಾಯಿಸಿ ಯುವತಿಗೆ ಚಾಕುವಿನಿಂದ ಇರಿದಿದ್ದ ಆರೋಪಿಯನ್ನು ವೈಟ್‌ಫೀಲ್ಡ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಆಂಧ್ರಪ್ರದೇಶದ ಸಾಯಿಬಾಬು ಚೆನ್ನೂರು ಬಂಧಿತ ಆರೋಪಿ.

ಪಶ್ಚಿಮ ಬಂಗಾಳದ 24 ವರ್ಷದ ಯುವತಿ ನೀಡಿದ ದೂರು ಆಧರಿಸಿ ಆರೋಪಿಯನ್ನು ಬಂಧಿಸಲಾಯಿತು ಎಂದು ಪೊಲೀಸ್ ಮೂಲಗಳು ಹೇಳಿವೆ.ದೂರುದಾರೆ ಯುವತಿ ನಗರದ ಆಸ್ಪತ್ರೆಯೊಂದರಲ್ಲಿ ಚಿಕಿತ್ಸೆಗೆ ದಾಖಲಾಗಿದ್ದಾರೆ ಎಂದು ಗೊತ್ತಾಗಿದೆ.

ಪೊಲೀಸರು ಯುವತಿಯ ಹೇಳಿಕೆ ದಾಖಲಿಸಿಕೊಂಡು ಆರೋಪಿ ವಿರುದ್ಧ ಭಾರತೀಯ ನ್ಯಾಯ ಸಂಹಿತೆ ಸೆಕ್ಷನ್ 109(1), 308(2), 75, 74, 329(4)ರ ಅಡಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ ಎಂದು ಪೊಲೀಸ್ ಮೂಲಗಳು ಹೇಳಿವೆ.

ಸೆ.16ರ (ಮಂಗಳವಾರ) ಮುಂಜಾನೆ ಆರೋಪಿ ವೈಟ್‌ಫೀಲ್ಡ್ ಠಾಣೆ ವ್ಯಾಪ್ತಿಯ ಪೇಯಿಂಗ್ ಗೆಸ್ಟ್‌ವೊಂದಕ್ಕೆ ನುಗ್ಗಿ ಯುವತಿಗೆ ಕಿರುಕುಳ ನೀಡಿದ್ದ ಎಂಬುದಾಗಿ ದೂರು ನೀಡಲಾಗಿದೆ.

ಸಂತ್ರಸ್ತೆ ನಗರದ ಬ್ಯಾಂಕ್‌ವೊಂದರಲ್ಲಿ ಕೆಲಸ ಮಾಡುತ್ತಿದ್ದಾರೆ. ಕಳೆದ ಮೂರು ತಿಂಗಳಿಂದ ಪಿ.ಜಿಯಲ್ಲಿ ನೆಲಸಿದ್ದಾರೆ. ಕೆಲವು ದಿನಗಳ ಹಿಂದೆ ಯುವತಿಗೆ ಆರೋಪಿ ಪರಿಚಯವಾಗಿದ್ದ. ಮಂಗಳವಾರ ಯುವತಿಯ ರೂಮ್‌ಗೆ ಹೋಗಿದ್ದ ಆರೋಪಿ, ಲೈಂಗಿಕವಾಗಿ ಸಹಕರಿಸುವಂತೆ ಒತ್ತಾಯಿಸಿದ್ದ. ಆಕೆ ವಿರೋಧಿಸಿದಾಗ ಚಾಕುವಿನಿಂದ ಆಕೆಯ ಬೆನ್ನಿಗೆ ಇರಿದಿದ್ದ. ಬಳಿಕ ಯುವತಿಯ ಖಾಸಗಿ ಫೋಟೊ ಕ್ಲಿಕ್ಕಿಸಿಕೊಂಡಿದ್ದ ಆರೋಪಿ, ₹70 ಸಾವಿರ ನೀಡುವಂತೆ ಬೇಡಿಕೆಯಿಟ್ಟಿದ್ದ. ಅಷ್ಟು ಹಣ ಇಲ್ಲ ಎಂದಾಗ ಆಕೆಯ ಮೊಬೈಲ್ ಫೋನ್ ಪಡೆದುಕೊಂಡು ₹14 ಸಾವಿರ ಆನ್‌ಲೈನ್ ಮೂಲಕ ವರ್ಗಾಯಿಸಿಕೊಂಡಿದ್ದ ಎಂದು ಪೊಲೀಸರು ಹೇಳಿದರು.

ಸ್ನೇಹಿತನಿಗೆ ಕರೆ ಮಾಡಿದ್ದ ಯುವತಿ: 'ಆರೋಪಿ ಸ್ಥಳದಿಂದ ಹೋದ ಬಳಿಕ ಸ್ನೇಹಿತನಿಗೆ ಕರೆ ಮಾಡಿದ್ದ ಯುವತಿ ಘಟನೆಯ ಮಾಹಿತಿ ನೀಡಿದ್ದಳು. ಸ್ನೇಹಿತನ ನೆರವಿನಿಂದ ಯುವತಿ ಆಸ್ಪತ್ರೆಗೆ ದಾಖಲಾಗಿದ್ದಾರೆ' ಎಂದು ಮೂಲಗಳು ಹೇಳಿವೆ. ವೈಟ್‌ಫೀಲ್ಡ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ಜೊಮ್ಯಾಟೊ ಡೆಲಿವರಿ ಯುವಕನ ಮೇಲೆ ಹಲ್ಲೆ: ಇಬ್ಬರ ಬಂಧನ

ಬೆಂಗಳೂರು: ಜೊಮ್ಯಾಟೊ ಡೆಲಿವರಿ ಯುವಕನ ಮೇಲೆ ಹಲ್ಲೆ ಮಾಡಿದ್ದ ಇಬ್ಬರನ್ನು ಬ್ಯಾಟರಾಯನಪುರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಮುಬಾರಕ್ ಹಾಗೂ ಶಾರೂಕ್ ಬಂಧಿತರು.

ಹಲ್ಲೆಗೆ ಒಳಗಾದ ಚಾಂದ್ ಅವರು ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ಆರೋಪಿಗಳನ್ನು ಬಂಧಿಸಲಾಯಿತು ಎಂದು ಪೊಲೀಸರು ಹೇಳಿದರು.

ಆನ್‌ಲೈನ್‌ನಲ್ಲಿ ಆರ್ಡರ್ ಮಾಡಿದ್ದ ಆಹಾರ ತಡವಾಗಿ ಬಂದಿದ್ದಕ್ಕೆ ಆರೋಪಿಗಳು ಹಲ್ಲೆ ನಡೆಸಿದ್ದಾರೆ ಎಂಬುದು ತನಿಖೆಯಿಂದ ಗೊತ್ತಾಗಿದೆ ಎಂದು ಪೊಲೀಸರು ಹೇಳಿದರು.

ಸೆ.12ರಂದು ರಾತ್ರಿ ಬಾಪೂಜಿ ನಗರದ ಬಳಿ ಆರೋಪಿಗಳು, ಜೊಮ್ಯಾಟೊ ಬಿರಿಯಾನಿ ಆರ್ಡರ್ ಮಾಡಿದ್ದರು. ಮಳೆಯಿಂದಾಗಿ ಡೆಲಿವರಿ ಹುಡುಗ ಚಾಂದ್ ಅವರು ತಡವಾಗಿ ಸ್ಥಳಕ್ಕೆ ಹೋಗಿದ್ದರು. ಇದರಿಂದ ಕೆರಳಿದ ಆರೋಪಿಗಳು, ಅವಾಚ್ಯ ಶಬ್ದಗಳಿಂದ ನಿಂದಿಸಿದ್ದರು. ನೀರಿನ ಕ್ಯಾನ್‌ನಿಂದ ಹೊಡೆದಿದ್ದರು. ಘಟನೆಯ ವಿಡಿಯೊವನ್ನು ಸ್ಥಳೀಯರು ಮೊಬೈಲ್‌ನಲ್ಲಿ ಸೆರೆ ಹಿಡಿದು ಸಾಮಾಜಿಕ ಜಾಲತಾಣದಲ್ಲಿ ಅಪ್‌ಲೋಡ್ ಮಾಡಿದ್ದರು. ಆ ವಿಡಿಯೊ ವೀಕ್ಷಿಸಿದ್ದ ಬ್ಯಾಟರಾಯನಪುರ ಠಾಣೆ ಸಾಮಾಜಿಕ ಜಾಲತಾಣ ವಿಭಾಗದ ಪೊಲೀಸರು ಸ್ವಯಂ ಪ್ರೇರಿತವಾಗಿ ಪ್ರಕರಣ ದಾಖಲಿಸಿಕೊಂಡು ಕಾರ್ಯಾಚರಣೆ ನಡೆಸಿ ಆರೋಪಿಗಳನ್ನು ಬಂಧಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಶ್ರೀನಿವಾಸಪುರ ತಹಶೀಲ್ದಾರ್‌ಗೆ ₹25 ಸಾವಿರ ದಂಡ

ಕೋಲಾರ: ಶ್ರೀನಿವಾಸಪುರ ತಾಲ್ಲೂಕು ಕಚೇರಿ ಸಾರ್ವಜನಿಕ ಮಾಹಿತಿ ಅಧಿಕಾರಿಯೂ ಆಗಿರುವ ತಹಶೀಲ್ದಾರ್ ಸುಧೀಂದ್ರ ಒಂದು ಆರ್‌ಟಿಐ ಅರ್ಜಿಗೆ ಎರಡೂ ರೀತಿ ಮಾಹಿತಿ ಒದಗಿಸಿರುವುದು ಕಂಡುಬಂದಿದೆ.

ಸುಧೀಂದ್ರ

ಈ ಸಂಬಂಧ ಮೇಲ್ಮನವಿ ವಿಚಾರಣೆ ನಡೆಸಿರುವ ರಾಜ್ಯ ಮಾಹಿತಿ ಆಯೋಗದ ಆಯುಕ್ತ ರುದ್ರಣ್ಣ ಹರ್ತಿಕೋಟೆ, ತಹಶೀಲ್ದಾರ್‌ಗೆ ₹25 ಸಾವಿರ ದಂಡ ವಿಧಿಸಿ ಆದೇಶಿಸಿದ್ದಾರೆ. ಜೊತೆಗೆ ಶಿಸ್ತು ಕ್ರಮಕ್ಕೆ ಸೂಚನೆ ನೀಡಿದ್ದಾರೆ. ಅಲ್ಲದೆ, ಪರಿಹಾರವಾಗಿ ಮೇಲ್ಮನವಿದಾರರಿಗೆ ₹10 ಸಾವಿರ ನೀಡಲು ನಿರ್ದೇಶನ ಹೊರಡಿಸಿದ್ದಾರೆ.

ವ್ಯಾಪಾರದ ವಿಚಾರಕ್ಕೆ ಪಕ್ಕದ ಬಟ್ಟೆ ಅಂಗಡಿ ಮಾಲೀಕನ ಹತ್ಯೆಗೆ ಸಂಚು

ಕೊಲೆಗೆ ಸುಪಾರಿ: ಆರೋಪಿ ಸೆರೆ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ವ್ಯಾಪಾರದ ವಿಚಾರಕ್ಕೆ ಪಕ್ಕದ ಬಟ್ಟೆ ಅಂಗಡಿ ಮಾಲೀಕನ ಕೊಲೆಗೆ ಸುಪಾರಿ ನೀಡಿದ್ದ ಟೆಕ್ಸ್‌ಟೈಲ್ಸ್ ಮಳಿಗೆ ಮಾಲೀಕನನ್ನು ಬಾಗಲಗುಂಟೆ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಮುದ್ದಣ್ಣ ಲೇಔಟ್ ನಿವಾಸಿ ವೇನರಾಮ್(43) ಬಂಧಿತ.

ಆರೋಪಿ ತನ್ನ ಟೆಕ್ಸ್‌ಟೈಲ್ಸ್ ಪಕ್ಕದ ಬಟ್ಟೆ ಅಂಗಡಿ ಮಾಲೀಕ ನೇಮರಾಮ್(42) ಅವರ ಕೊಲೆಗೆ ₹5 ಲಕ್ಷಕ್ಕೆ ಸುಪಾರಿ ನೀಡಿದ್ದ. ಸುಪಾರಿ ಪಡೆದ ರಾಜಸ್ಥಾನ ಮೂಲದ ವಿನೋದ್ ಜಾಟ್ ಎಂಬಾತನಿಗಾಗಿ ಶೋಧ ಕಾರ್ಯ ನಡೆಯುತ್ತಿದೆ ಎಂದು ಪೊಲೀಸರು ಹೇಳಿದರು.

ಬಾಗಲಗುಂಟೆಯ ಮುದ್ದಣ್ಣ ಲೇಔಟ್‌ನ ಸಿಡೇದಹಳ್ಳಿಯಲ್ಲಿ ನೇಮರಾಮ್ ಹ್ಯಾಪಿ ಟೆಕ್ಸ್‌ಟೈಲ್ಸ್ ಬಟ್ಟೆ ಅಂಗಡಿ ನಡೆಸುತ್ತಿದ್ದಾರೆ. ಅಂಗಡಿ ಪಕ್ಕದಲ್ಲೇ ಆರೋಪಿ ವೇನರಾಮ್ ಕೂಡ ಹೈ ಫ್ಯಾಷನ್ಸ್ ಟೆಕ್ಸ್‌ಟೈಲ್ಸ್ ಬಟ್ಟೆ ಅಂಗಡಿ ಇಟ್ಟುಕೊಂಡಿದ್ದಾರೆ. ನೇಮರಾಮ್ ಅಂಗಡಿಯಲ್ಲಿ ಉತ್ತಮವಾಗಿ ವ್ಯಾಪಾರ ನಡೆಯುತ್ತಿತ್ತು. ಹೀಗಾಗಿ, ಆರೋಪಿ ವೇನರಾಮ್, 'ದೂರುದಾರ ನೇಮರಾಮ್ ಅಂಗಡಿಯಲ್ಲಿ ಕಳಪೆ ಗುಣಮಟ್ಟದ ಬಟ್ಟೆಗಳಿವೆ' ಎಂಬುದಾಗಿ ಅಪಪ್ರಚಾರ ಮಾಡುತ್ತಿದ್ದ' ಎಂದು ಪೊಲೀಸರು ಹೇಳಿದರು.

₹5 ಲಕ್ಷಕ್ಕೆ ಸುಪಾರಿ: ಈ ಮಧ್ಯೆ ನೇಮರಾಮ್, ವೇನರಾಮ್‌ನ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದ ಕೆಲಸಗಾರನಿಗೆ ಹೆಚ್ಚಿನ ಸಂಬಳ ಕೊಟ್ಟು ತನ್ನ ಅಂಗಡಿಗೆ ಸೇರಿಸಿಕೊಂಡಿದ್ದರು. ಅದರಿಂದ ಕೋಪಗೊಂಡಿದ್ದ ಆರೋಪಿ, ರಾಜಸ್ಥಾನದ ವಿನೋದ್ ಜಾಟ್ ಎಂಬಾತನಿಗೆ ನೇಮರಾಮ್‌ನ ಹತ್ಯೆಗೆ ₹5 ಲಕ್ಷಕ್ಕೆ ಸುಪಾರಿ ನೀಡಿದ್ದ. ಅದರಂತೆ ಆರೋಪಿಗಳು ಅಂಗಡಿ ವ್ಯಾಪಾರ ಮುಗಿಸಿಕೊಂಡು ಮನೆಗೆ ಹೋಗುತ್ತಿದ್ದ ನೇಮರಾಮ್ ಮೇಲೆ ಎರಡು ಬೈಕ್‌ಗಳಲ್ಲಿ ಬಂದು ಮಾರಕಾಸ್ತ್ರಗಳಿಂದ ಹಲ್ಲೆ ನಡೆಸಿದ್ದರು ಎಂದು ಪೊಲೀಸರು ಮಾಹಿತಿ ನೀಡಿದರು.

ಅಪಘಾತ: ಸವಾರ ಸ್ಥಳದಲ್ಲೇ ಸಾವು

ಬೆಂಗಳೂರು: ಇಲ್ಲಿನ ಕಂಠೀರವ ಒಳಾಂಗಣ ಕ್ರೀಡಾಂಗಣ ಬಳಿಯ ರಸ್ತೆಯಲ್ಲಿ ಶುಕ್ರವಾರ ಬೆಳಿಗ್ಗೆ ಸಂಭವಿಸಿದ ಅಪಘಾತದಲ್ಲಿ ಬೈಕ್ ಸವಾರರೊಬ್ಬರು ಮೃತಪಟ್ಟಿದ್ದಾರೆ.

ಡಿ.ಜೆ.ಹಳ್ಳಿ ನಿವಾಸಿ ರಫತ್ ಉಲ್ಲಾ (56) ಮೃತಪಟ್ಟವರು.

ರಫತ್ ಉಲ್ಲಾ ಅವರು ಸ್ಕೂಟರ್‌ನಲ್ಲಿ ಬರುತ್ತಿದ್ದಾಗ ಸಿದ್ದಲಿಂಗಯ್ಯ ಜಂಕ್ಷನ್ ಬಳಿ ನಿಯಂತ್ರಣ ತಪ್ಪಿ ರಸ್ತೆಗೆ ಬಿದ್ದಿದ್ದರು. ಅದೇ ಮಾರ್ಗದಲ್ಲಿ ವೇಗವಾಗಿ ಬರುತ್ತಿದ್ದ ಖಾಸಗಿ ಬಸ್‌ನ ಚಕ್ರಗಳು ರಫತ್ ಉಲ್ಲಾ ಅವರ ಮೇಲೆಯೇ ಹರಿದ ಪರಿಣಾಮ ಅವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ ಎಂದು ಸಂಚಾರ ಪೊಲೀಸರು ಹೇಳಿದರು.

ಸ್ಥಳಕ್ಕೆ ಬಂದ ಹಲಸೂರು ಗೇಟ್ ಸಂಚಾರ ಠಾಣೆಯ ಪೊಲೀಸರು, ಖಾಸಗಿ ಬಸ್ ಜಪ್ತಿ ಮಾಡಿಕೊಂಡು ಚಾಲಕನನ್ನು ವಶಕ್ಕೆ ಪಡೆದುಕೊಂಡರು. ಚಾಲಕ ವಿರುದ್ಧ ಭಾರತೀಯ ನ್ಯಾಯ ಸಂಹಿತೆ (ಬಿಎನ್‌ಎಸ್) ಸೆಕ್ಷನ್ 281 ಅಡಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ ಎಂದು ಸಂಚಾರ ಪೊಲೀಸರು ಹೇಳಿದರು.

ಏಕಬಳಕೆ ಪ್ಲಾಸ್ಟಿಕ್ ವಶ: ₹2.76 ಲಕ್ಷ ದಂಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉತ್ತರ ನಗರ ಪಾಲಿಕೆಯ ವಿವಿಧ ವಾಣಿಜ್ಯ ಮಳಿಗೆಗಳಿಗೆ ಹಾಗೂ ದಾಸ್ತಾನು ಕೇಂದ್ರಗಳಿಗೆ ಭೇಟಿ ನೀಡಿದ ಅಧಿಕಾರಿಗಳು 350 ಕೆ.ಜಿ. ಏಕಬಳಕೆ ಪ್ಲಾಸ್ಟಿಕ್ ವಶಪಡಿಸಿಕೊಂಡು, ₹2.76 ಲಕ್ಷ ದಂಡ ವಿಧಿಸಿದರು.

ಘನತ್ಯಾಜ್ಯ ವಿಭಾಗದ ಎಂಜಿನಿಯರ್, ಆರೋಗ್ಯ ನಿರೀಕ್ಷಕರು ಮತ್ತು ಮಾರ್ಷಲ್ ತಂಡದ ಸಹಯೋಗದಲ್ಲಿ ಪ್ಲಾಸ್ಟಿಕ್ ವಿರುದ್ಧ ತಪಾಸಣೆ ಹಾಗೂ ಜಾಗೃತಿ ಅಭಿಯಾನ ನಡೆಸಿದರು.

ಎಚ್‌ಬಿಆರ್ ಲೇಔಟ್‌ನಲ್ಲಿ ರಸ್ತೆಯ ಇಕ್ಕೆಲಗಳಲ್ಲಿ ಕಸ ಎಸೆಯುವವರಿಗೆ ದಂಡ ವಿಧಿಸಲಾಯಿತು. ರಸ್ತೆ ಪಕ್ಕದಲ್ಲಿ ಕಸ ಎಸೆಯದಂತೆ ಎಚ್ಚರಿಕೆ ನೀಡಲಾಯಿತು.

ವಿದ್ಯಾರಣ್ಯಪುರದ ಮಸ್ಟರಿಂಗ್ ಪಾಯಿಂಟ್‌ನಲ್ಲಿ ಪೌರಕಾರ್ಮಿಕರಿಗಾಗಿ ಆರೋಗ್ಯ ಶಿಬಿರ ಆಯೋಜಿಸಲಾಯಿತು. ರಕ್ತದೊತ್ತಡ, ಮಧುಮೇಹ ಮತ್ತು ಹಿಮೋಗ್ಲೋಬಿನ್ ಪರೀಕ್ಷೆ ನಡೆಸಿ, ಸೂಕ್ತ ಆರೋಗ್ಯ ಸಲಹೆ ನೀಡಲಾಯಿತು.

tifr ಟಿಐಎಫ್‌ಆರ್–ಅನ್ವಯಿಕ ಗಣಿತ ಕೇಂದ್ರ
ಬೆಂಗಳೂರು – 560065, ಭಾರತ
ಟಾಟಾ ಮೂಲಭೂತ ಸಂಶೋಧನಾ ಸಂಸ್ಥೆ
(ಭಾರತ ಸರ್ಕಾರದ ಅಣುಶಕ್ತಿ ಇಲಾಖೆ ಅಡಿಯಲ್ಲಿನ ಒಂದು ಸ್ವಾಯತ್ತ ಸಂಸ್ಥೆ ಮತ್ತು ವಿಶ್ವವಿದ್ಯಾಲಯ ಎಂದು ಪರಿಗಣಿತ ಸಂಸ್ಥೆ)

ರದ್ದತಿ ಸೂಚನೆ

ಈ ಮೂಲಕ ತಿಳಿಸುವ ಅಧಿಸೂಚನೆ ಏನೆಂದರೆ, ದಿನಾಂಕ 23ನೇ ಆಗಸ್ಟ್ 2025ರ ಆವೃತ್ತಿಯ ಎಂಪ್ಲಾಯ್‌ಮೆಂಟ್ ನ್ಯೂಸ್ ಪತ್ರಿಕೆಯಲ್ಲಿ, ಅಡ್ಮಿನಿಸ್ಟ್ರೇಟಿವ್ ಅಸಿಸ್ಟಂಟ್ ಬಿ ಮತ್ತು ವರ್ಕ್ ಅಸಿಸ್ಟಂಟ್ ಹುದ್ದೆಗಳ ನೇಮಕಾತಿಗೆ ಸಂಬಂಧಿಸಿದಂತೆ ಹೊರಡಿಸಲಾಗಿದ್ದ ಜಾಹೀರಾತು. ನಂ. 3/2025ರ ಜಾಹೀರಾತು ಅಧಿಸೂಚನೆಯನ್ನು ಆಡಳಿತಾತ್ಮಕ ಅನಿವಾರ್ಯ ಕಾರಣಗಳಿಂದಾಗಿ ರದ್ದುಪಡಿಸಲಾಗಿದೆ.

ಸಹಿ/–
CBC 48153/12/0004/2526 ಆಡಳಿತಾಧಿಕಾರಿ ಐ

ಭಾರತ ಸರಕಾರ
ವಸೂಲಾತಿ ಅಧಿಕಾರಿಯವರ ಕಚೇರಿ- 1/2
ಸಾಲ ವಸೂಲಾತಿ ನ್ಯಾಯಾಧಿಕರಣ, ಬೆಂಗಳೂರು (ಡಿಆರ್‌ಟಿ-2)
ವಿತ್ತ ಸಚಿವಾಲಯ, ಹಣಕಾಸು ಸೇವೆಗಳ ವಿಭಾಗ
4ನೇ ಮಹಡಿ, ಟೆಲಿಫೋನ್ ಹೌಸ್ ಬಿಲ್ಡಿಂಗ್, ರಾಜಭವನ ರಸ್ತೆ, ಬೆಂಗಳೂರು – 560 001.

ಫಾರಂ ನಂ. 14 (ರೆಗ್ಯುಲೇಷನ್ 33(2))
ಡಿಮ್ಯಾಂಡ್ ನೋಟೀಸು
ಡೆಟ್ಸ್ ಡ್ಯೂ ಟು ಬ್ಯಾಂಕ್ಸ್ ಅಂಡ್ ಅದರ್ ಫೈನಾನ್ಷಿಯಲ್ ಇನ್ಸಿಟಿಟ್ಯೂಷನ್ಸ್ ಆಕ್ಟ್ 1993ರ ಸೆಕ್ಷನ್ 25 ರಿಂದ 28ನ್ನು ಮತ್ತು ಇನ್‌ಕಂ ಟ್ಯಾಕ್ಸ್ ಆಕ್ಟ್ 1961ರ 2ನೇ ಷೆಡ್ಯೂಲಿನ ನಿಯಮ 2ರ ಅನ್ವಯ ನೋಟೀಸು.
ಆರ್ ಸಿ ನಂ. 598/2024 ಒ.ಎ 1437/2021
ಕೆನರಾ ಬ್ಯಾಂಕ್ Vs ಶ್ರೀ ಎಸ್. ರಾಮಕೃಷ್ಣಪ್ಪ ಮತ್ತು ಇತರರು
ಇವರಿಗೆ (ಸಿಹೆಚ್) ಕೆನರಾ ಬ್ಯಾಂಕ್, ಆವತಿ ಶಾಖೆ, ದೇವನಹಳ್ಳಿ ತಾಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ – 562 164, ಕರ್ನಾಟಕ ....ಸರ್ಟಿಫಿಕೇಟ್ ಹೋಲ್ಡರ್
Vs
(ಸಿಡಿ 1) ಶ್ರೀ ಎಸ್. ರಾಮಕೃಷ್ಣಪ್ಪ S/o ಲೇಟ್ ಸುಬ್ಬಯ್ಯ, ನಂ. 67/2, ಅಲ್ಲಾಳಸಂದ್ರ, ಜಿ.ಕೆ. ವಿ. ಕೆ. ಅಂಚೆ, ಬೆಂಗಳೂರು – 560 065, ಕರ್ನಾಟಕ.
(ಸಿಡಿ 2) ಶ್ರೀ ಎಸ್. ನಾರಾಯಣ ಗೌಡ S/o ಲೇಟ್ ಸುಬ್ಬಯ್ಯ, ನಂ. 67/2, ಅಲ್ಲಾಳಸಂದ್ರ, ನಾರಾಯಣಪ್ಪ ಲೇಔಟ್, ಯಲಹಂಕ, ಬೆಂಗಳೂರು ಉತ್ತರ – 560 065, ಕರ್ನಾಟಕ.
(ಸಿಡಿ 3) ಶ್ರೀ ಸಂತೋಷ್ ಕುಮಾರ್ ಎ. ಎನ್. S/o ಎಸ್. ನಾರಾಯಣ ಗೌಡ, ನಂ. 67/2, ಅಲ್ಲಾಳಸಂದ್ರ, ನಾರಾಯಣಪ್ಪ ಲೇಔಟ್, ಯಲಹಂಕ, ಬೆಂಗಳೂರು ಉತ್ತರ – 560 065, ಕರ್ನಾಟಕ ....ಸರ್ಟಿಫಿಕೇಟ್ ಡೆಟರ್ಸ್
ಗೌರವಾನ್ವಿತ ಪ್ರಿಸೈಡಿಂಗ್ ಆಫೀಸರ್, ಸಾಲ ವಸೂಲಾತಿ ನ್ಯಾಯಾಧಿಕಣ, ಬೆಂಗಳೂರು (ಡಿಆರ್‌ಟಿ-2) ಇವರು ಒ.ಎ. ನಂ.1437/2021ರಲ್ಲಿ ಜಾರಿ ಮಾಡಿದ ರಿಕವರಿ ಸರ್ಟಿಫಿಕೇಟ್‌ನಂತೆ ರೂ. **73,82,734/–** (ರೂಪಾಯಿ ಎಪ್ಪತ್ತ ಮೂರು ಲಕ್ಷದ ಎಂಬತ್ತೆರಡು ಸಾವಿರದ ಏಳು ನೂರ ಮೂವತ್ತ ನಾಲ್ಕು ಮಾತ್ರ) ಜೊತೆಗೆ ದಿನಾಂಕ 23.12.2021ರಿಂದ ಮುಂದಿನ ಬಡ್ಡಿ ಶೇ13.80% ನಂತೆ ಅರ್ಧವಾರ್ಷಿಕ ಚಕ್ರಬಡ್ಡಿ ಸೇರಿ ಪೂರ್ತಿಪಾವತಿಯ ದಿನಾಂಕದವರೆಗೆ ಮೊತ್ತ ಮತ್ತು **ವೆಚ್ಚ ರೂ.140505/- (ರೂಪಾಯಿ ಒಂದು ಲಕ್ಷ ನಲವತ್ತು ಸಾವಿರದ ಐದು ನೂರ ಐದು ಮಾತ್ರ)** ಮತ್ತು ಇತರ ಖರ್ಚು ನಿಮ್ಮಿಂದ ಜಂಟಿಯಾಗಿ ಮತ್ತು ಪ್ರತ್ಯೇಕವಾಗಿ ಬಾಕಿ ಇರುತ್ತದೆ. ಮತ್ತು ವಾರ್ಷಿಕ 2% ದಂಡ ಬಡ್ಡಿ ಸಹ ಬಾಕಿ ಇರುತ್ತದೆ. 2) ನೀವು ಸದರಿ ಮೊತ್ತವನ್ನು ಈ ನೋಟೀಸನ್ನು ನೀಡಿದ 15 ದಿನಗಳ ಒಳಗೆ ಪಾವತಿಸಬೇಕಾಗುತ್ತದೆ. ಇದಕ್ಕೆ ತಪ್ಪಿದಲ್ಲಿ, ರಿಕವರಿ ಆಫ್ ಡೆಟ್ಸ್ ಡ್ಯೂ ಬ್ಯಾಂಕ್ಸ್ ಆಂಡ್ ಫೈನಾನ್ಷಿಯಲ್ ಇನ್ಸಿಟ್ಯೂಷನ್ಸ್ ಆಕ್ಟ್, 1993ರ ನಿಯಮಗಳ ಅನ್ವಯ ಮೊತ್ತವನ್ನು ವಸೂಲಿ ಮಾಡಲು ಕ್ರಮಗಳನ್ನು ಕೈಗೊಳ್ಳಲಾಗುವುದು. 3) ನಿಮಗೆ ಈ ಮೂಲಕ ಸೂಚಿಸುವುದೇನೆಂದರೆ ಮುಂದಿನ ವಿಚಾರಣೆಯ ದಿನಾಂಕದಂದು ನಿಮ್ಮ ಸ್ವತ್ತುಗಳ ವಿವರಗಳನ್ನು ಅಫಿಡವಿಟ್ ಮೂಲಕ ಘೋಷಿಸಬೇಕೆಂದು ಆದೇಶ ನೀಡಲಾಗಿದೆ. 4) ಮೇಲೆ ಹೇಳಲ್ಪಟ್ಟ ಮೊತ್ತವಲ್ಲದೆ ನೀವು ಹೆಚ್ಚುವರಿಯಾಗಿ ಮುಂದಿನದಕ್ಕೂ ಬಾಧ್ಯರಾಗುತ್ತೀರಿ: (ಎ) ಈ ನೋಟೀಸು ನೀಡಿದ ನಂತರದ ಪ್ರಕ್ರಿಯೆಯನ್ನುಪ್ರಾರಂಭಿಸುವ ಅವಧಿಗೆ ಆದೇಶದ ಪ್ರಕಾರ ಕೊಡಬೇಕಾಗಿ ರುವಂತಹ ಬಡ್ಡಿ ಮೊತ್ತ. (ಬಿ) ಈ ನೋಟೀಸನ್ನು ಜಾರಿ ಮಾಡಲು ಮತ್ತು ವಾರಂಟ್‌ಗಳಿಗೆ ಮತ್ತು ಇತರ ಪ್ರಕ್ರಿಯೆಗಳಿಗೆ ಮತ್ತು ಇತರ ಎಲ್ಲಾ ನಡಾವಳಿಗಳಿಗೆ ಸಾಲವನ್ನು ವಸೂಲಿ ಮಾಡುವಲ್ಲಿ ತಗಲುವ ಎಲ್ಲ ಖರ್ಚು ಮತ್ತು ವೆಚ್ಚಗಳು.
ನನ್ನ ಕೈಯಿಂದ ಮತ್ತು ಈ ನ್ಯಾಯಾಧಿಕರಣದ ಮುದ್ರೆಯ ಅಡಿಯಲ್ಲಿ **23.08.2024ರಂದು** ಕೊಡಲ್ಪಟ್ಟಿದೆ.
ಸಹಿ/ ವಸೂಲಾತಿ ಅಧಿಕಾರಿ
ಸಾಲ ವಸೂಲಾತಿ ನ್ಯಾಯಾಧಿಕರಣ, (ಡಿಆರ್‌ಟಿ-2) ಬೆಂಗಳೂರು

ಗಮನಿಸಿ : ಆರ್ಥಿಕ ಸಂಸ್ಥೆಗಳಿಗೆ ಮತ್ತು ಬ್ಯಾಂಕ್‌ಗಳಿಗೆ ಬಾಕಿ ಇರುವ ಸಾಲಗಳ ವಸೂಲಾತಿ ಕಾಯ್ದೆ 1993ರ ಜೊತೆಯಲ್ಲಿ ಓದಿಕೊಂಡಂತೆ ಆದಾಯ ತೆರಿಗೆ ಕಾಯ್ದೆ 1961ರ ಎರಡನೇ ಷೆಡ್ಯೂಲಿನ ನಿಯಮ 16ರತ್ತ ಗಮನ ಸೆಳೆಯಲಾಗಿದ್ದು, ಅದು ಈ ಕೆಳಗಿನಂತಿದೆ : 16 (1) ನಿಯಮ 2 ರ ಅಡಿಯಲ್ಲಿ ಸುಸ್ತಿದಾರರೊಬ್ಬರಿಗೆ ನೋಟೀಸನ್ನು ನೀಡಿರುವಾಗ, ಸುಸ್ತಿದಾರರೇ ಆಗಲಿ ಅವರ ಆಸಕ್ತ ಪ್ರತಿನಿಧಿಯೇ ಆಗಲಿ, ಸಾಲ ವಸೂಲಾತಿ ಅಧಿಕಾರಿಯ ಅನುಮತಿ ಪಡೆದುಕೊಂಡ ಹೊರತು, ತಮಗೆ ಸೇರಿದ ಯಾವುದೇ ಆಸ್ತಿಯನ್ನು ಒತ್ತೆ ಇಡುವುದು/ಮಾರುವುದು/ಬಾಡಿಗೆಗೆ ಕೊಡುವುದು ಅಥವಾ ಇನ್ನು ಯಾವುದೇ ರೀತಿಯಲ್ಲಿ ಪರಭಾರೆ ಮಾಡುವುದಕ್ಕೆ ಅರ್ಹರಾಗಿರುವುದಿಲ್ಲ; ಹಾಗೆಯೇ, ಅಂಥ ಆಸ್ತಿಯ ಸಂಬಂಧವಾಗಿ ಹಣವನ್ನು ಸಂದಾಯ ಮಾಡುವುದಕ್ಕೆ ವಿರುದ್ಧವಾಗಿ ಯಾವುದೇ ಸಿವಿಲ್ ಕೋರ್ಟು ಯಾವುದೇ ಕ್ರಮವನ್ನು ಆದೇಶಿಸುವಂತಿಲ್ಲ. 2) ಈ ಷೆಡ್ಯೂಲಿನ ಅಡಿಯಲ್ಲಿ ಮುಟ್ಟುಗೋಲು ಹಾಕಿಕೊಂಡಿರುವಾಗ, ಮುಟ್ಟುಗೋಲು ಹಾಕಲ್ಪಟ್ಟ ಆಸ್ತಿಯ ಅಥವಾ ಅದಕ್ಕೆ ಸಂಬಂಧಿಸಿದ ಯಾವುದೇ ಭಾಗದ ಖಾಸಗಿ ವರ್ಗಾವಣೆ ಅಥವಾ ನೀಡಿಕೆಯಾಗಲಿ, ಸದರಿ ಮುಟ್ಟುಗೋಲು ಹಾಕುವಿಕೆಗೆ ವಿರುದ್ಧವಾಗಿ ಸುಸ್ತಿದಾರರಿಗೆ ಯಾವುದೇ ಸಾಲದ ಲಾಭಾಂಶ ಅಥವಾ ಇತರ ಹಣಗಳ ಪಾವತಿಯಾಗಲಿ, ಮುಟ್ಟುಗೋಲಿನ ಅಡಿಯಲ್ಲಿ ಒತ್ತಾಯಿಸಬಹುದಾದ ಎಲ್ಲ ಕ್ಲೇಮುಗಳ ವಿರುದ್ಧವಾಗಿ ಅಸಿಂಧೂವಾಗುತ್ತವೆ. 3) ನೀವು ಕಳೆದ 5 ವರ್ಷಗಳ ಆದಾಯ ತೆರಿಗೆ ಪಾವತಿಯ ದಾಖಲೆಗಳೊಂದಿಗೆ ನಿಮ್ಮ ಸ್ಥಿರ ಮತ್ತು ಚರಾಸ್ತಿಗಳ ವಿವರಗಳನ್ನು ಈ ನ್ಯಾಯಾಧಿಕರಣಕ್ಕೆ ಸಲ್ಲಿಸಬೇಕಾಗಿದೆ.

ನಿಧನ ವಾರ್ತೆ

ಡಾ.ಬೈರಪ್ಪ

ಬೆಂಗಳೂರು: ಯಲಹಂಕ ಉಪನಗರ ನಿವಾಸಿ ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಆಸ್ಪತ್ರೆಯ ನಿವೃತ್ತ ಮುಖ್ಯ ವೈದ್ಯಾಧಿಕಾರಿ ಡಾ. ಬೈರಪ್ಪ (90) ಅವರು ವಯೋಸಹಜ ಅನಾರೋಗ್ಯದಿಂದ ಶುಕ್ರವಾರ ನಿಧನರಾದರು.

ಡಾ. ಬೈರಪ್ಪ

ಮೃತರಿಗೆ ಒಬ್ಬ ಪುತ್ರ, ಒಬ್ಬ ಪುತ್ರಿ ಇದ್ದಾರೆ. ಅಂತ್ಯಕ್ರಿಯೆಯು ಶನಿವಾರ ಮಧ್ಯಾಹ್ನ 3 ಗಂಟೆಗೆ ಅವರ ಹುಟ್ಟೂರಾದ ಬೆಂಗಳೂರು ಗ್ರಾಮಾಂತರ ಜಿಲ್ಲೆ ಹೊಸಕೋಟೆ ತಾಲ್ಲೂಕಿನ ಖಾಜಿಹೊಸಹಳ್ಳಿ ಗ್ರಾಮದಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಪಾರ್ಥಿವ ಶರೀರವನ್ನು ಶನಿವಾರ ಬೆಳಿಗ್ಗೆ 7ರಿಂದ 10.30ರವರೆಗೆ ಯಲಹಂಕ ಉಪನಗರದ ಮೃತರ ಸ್ವಗೃಹದಲ್ಲಿ (ನಂ.189, 6ನೇ 'ಎ' ಮುಖ್ಯರಸ್ತೆ) ಅಂತಿಮ ದರ್ಶನಕ್ಕೆ ಇಡಲಾಗುವುದು ಎಂದು ಕುಟುಂಬದವರು ತಿಳಿಸಿದ್ದಾರೆ.

ಶ್ರೀನಿವಾಸಯ್ಯ

ಬೆಂಗಳೂರು: ರಂಗಭೂಮಿ ಕಲಾವಿದ, ಸೋಮನಹಳ್ಳಿ ನಿವಾಸಿ ಎಸ್.ಜಿ. ಶ್ರೀನಿವಾಸಯ್ಯ (73) ಅವರು ಶುಕ್ರವಾರ ನಿಧನರಾದರು.



ಶ್ರೀನಿವಾಸಯ್ಯ

ಮೃತರ ಅಂತ್ಯಕ್ರಿಯೆಯನ್ನು ಶನಿವಾರ ಮಧ್ಯಾಹ್ನ 12ಕ್ಕೆ ಕನಕಪುರ ರಸ್ತೆಯ ಸೋಮನಹಳ್ಳಿಯಲ್ಲಿ ನೆರವೇರಿಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ನೈಋತ್ಯ ರೈಲ್ವೆ
ಟೆಂಡರು ಸೂಚನೆ ಸಂ. CAO/CN/BNC/130/2025,
ದಿನಾಂಕ: 22.07.2025 ಗೆ ತಿದ್ದುಪಡಿ
ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ವಿವರ	ಅಂದಾಜು ಮೌಲ್ಯ
ಮಲುಗೂರು (ಚೈನೇಜ್ (–) 1906.6 (ಯಲಹಂಕ–ಪೇನುಕೊಂಡದಲ್ಲಿ ಚೈ. 108125)) ನಿಂದ ಪಾಲಸಮುದ್ರಂ (ಚೈನೇಜ್ 17/150) ರಲ್ಲಿ ಹೊಸ ಬ್ರಾಡ್‌ಗೇಜ್ ರೈಲ್ವೆ ಲೈನಿನ ಹಾಗೂ 02 ಹೊಸ ಯಾರ್ಡ್‌ಗಳ (ಚಾಲಿವೆಂದಲ & ಪಾಲಸಮುದ್ರಂ) ನಿರ್ಮಾಣ ಕಾಮಗಾರಿಗಳು, ಜೊತೆಗೆ 19.057 ಕಿಮೀ. ರೂಟ್ ಲೆಂಗ್ತ್‌ಗೆ ಈಗಿರುವ ಮಲುಗೂರು ಯಾರ್ಡ್‌ನ ಬದಲಾವಣೆ ಕಾರ್ಯಗಳು ಹಾಗೂ ಇದರೊಂದಿಗೆ ಸಿಗ್ನಲ್ & ದೂರಸಂಪರ್ಕ, ವಿದ್ಯುತೀಕರಣ & ಎಲೆಕ್ಟ್ರಿಕಲ್ ಸಾಮಾನ್ಯ ಸೇವಾ ಕಾರ್ಯಗಳು. (ಟೆಂಡರು ಉಲ್ಲೇಖ ಸಂ.: MLUPALASAMUDRAM-EPC01-R1)	ರೂ. 296,21,09,528/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ	
ಪ್ರಸ್ತುತ	ಪರಿಷ್ಕೃತ
24.09.2025, 15:00 ಗಂಟೆಯವರೆಗೆ	ಟೆಂಡರ್‌ಅನ್ನು ರದ್ದುಗೊಳಿಸಲಾಗಿದೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ
ಉಪ ಮುಖ ಇಂಜಿನಿಯರ್/ನಿರ್ಮಾಣ/ಕಾಮಗಾರಿ/ಬೆಂಗಳೂರು ದಂಡು
PUB/486/AAMO/PRB/SWR/2025-26
ಕಾಯ್ದಿರಿಸದ ಟಿಕೇಟುಗಳನ್ನು ಸುಲಭವಾಗಿ ಬುಕಿಂಗ್ ಮಾಡಲು ಗೂಗಲ್ ಪ್ಲೇ ಸ್ಟೋರ್‌ನಿಂದ ಯುಟಿಎಸ್ ಮೊಬೈಲ್ ಆ್ಯಪ್‌ಅನ್ನು ಡೌನ್‌ಲೋಡ್ ಮಾಡಿರಿ
South Western Railway - SWR | SWRRLY | SWRAILWAYHQ | sw_railways

ಕರ್ನಾಟಕ ಸರ್ಕಾರ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ
ಕಾರ್ಯಪಾಲಕ ಇಂಜಿನೀಯರ್‌ರವರ ಕಛೇರಿ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ,
ಚಿಕ್ಕಬಳ್ಳಾಪುರ–562 101
ದೂರವಾಣಿ ಸಂಖ್ಯೆ: ಕಛೇರಿ: 08156-295427 ಫ್ಯಾಕ್ಸ್: 08156 – 295427
ಇಮೇಲ್: eemidcbpura@gmail.com
ಸಂಖ್ಯೆ:ಕಾಸಬ/ತಾಂಶಾ/ತಾಂಸ/ಮರು ಟೆಂಡರ್/2025–26/1474 ದಿ:19/09/2025

ಮರು ಟೆಂಡರ್ ಅಧಿಸೂಚನೆ

ಈ ಕಚೇರಿ ಟೆಂಡರ್ ಪ್ರಕಟಣೆ ಸಂಖ್ಯೆ : 08/2025–26, ದಿನಾಂಕ: 22/08/2025. ಮತ್ತು 09/2025–26, ದಿನಾಂಕ: 28/08/2025 ರಲ್ಲಿ ಆಹ್ವಾನಿಸಲಾಗಿದ್ದ ಹಲವು ಟೆಂಡರ್‌ಗಳಲ್ಲಿ ಯಾವುದೇ ಗುತ್ತಿಗೆದಾರರು ಭಾಗವಹಿಸದೇ ಇರುವುದರಿಂದ ಮರು ಟೆಂಡರ್ ಕರೆಯಲಾಗಿರುತ್ತದೆ ಉಳಿದ ಷರತ್ತುಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ 03/10/2025 ಸಾಯಂಕಾಲ 4.30 ಗಂಟೆಯವರೆಗೆ ಟೆಂಡರ್ ತೆರೆಯುವ ದಿನಾಂಕ: 04/10/2025 (ಸಾಧ್ಯವಾದ್ದಲ್ಲಿ). ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯ ದೂರವಾಣಿ ಸಂಖ್ಯೆ – 08156–295427 ಮತ್ತು ಕೆ.ಪಿ.ಪಿ ಪೋರ್ಟಲ್ ಸಹಾಯವಾಣಿ ದೂರವಾಣಿ ಸಂಖ್ಯೆ: 91–8068948777 ಮತ್ತು 91–8046010000 ರಿಂದ ಪಡೆಯಬಹುದು.

ಸಹಿ/–ಕಾರ್ಯಪಾಲಕ ಇಂಜಿನಿಯರ್
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಚಿಕ್ಕಬಳ್ಳಾಪುರ

Hero
VIDA
ಹಲವಾರು ಬಣ್ಣಗಳು.
ಒಂದೇ ಶಕ್ತಿ
VIDA EVOOTER
VX2
ಬದಲಾಗುತ್ತಿರುವ ಇಂಡಿಯಾದ ಸ್ಕೂಟರ್
REMOVABLE BATTERIES
CONVENIENCE OF INDOOR CHARGING
VIDA | BaaS
BATTERY AS A SERVICE
5-YEAR COMPREHENSIVE WARRANTY**
500+ OUTLETS
FOR SALES AND SERVICE
STARTING @JUST ₹84,990*
WITH BaaS @JUST ₹44,990*
& PER km COST ₹1.24
Complimentary benefits worth Rs. 20000 viz. battery warranty (**upto 5years/60k kms for VX2 Plus & 5 years/50k kms for VX2 Go); warranty on critical components upto 5 years/75k kms; access to fast charging network & My Vida App during BaaS period; option to avail assured buyback upto 67.5% of the effective showroom price of VX2 series; *Limited period offer. T&C apply. BaaS offer is subject to T&Cs of respective financiers. Visit us at: www.vidaworld.com
Hero MotoCorp Limited (CIN: L35911DL1984PLC017354)
Visit us in BANGALORE: Vittal Mallya Road - VIDA EXPERIENCE CENTRE, 7428411021 | Bommanahalli - VIDA HUB RT KRISHNA AUTO, 7428411021 | Nagarabhavi - SAI BIKES PREMIA, 7428412128 | Singsandra - RT KRISHNA AUTOS PREMIA, 7428411368 | BTM Layout - V3S MOTORS, 080-48247240 | Magadi Road - RT KRISHNA AUTOS, 7428411021 | Banashankari - SAI MOTORS, 7428412219 | Peenya - SAI BIKES, 7428411869 | | Banaswadi Ring Road - BHAGATH MOTORS, 7428408355 | Bellary Road-BIMAL MOTORS-7428408801 | Electronic City - RT KRISHNA AUTOS, 7428411368 | Rajajinagar - MAX MOTORS, 7428409766 | Magadi Main Road - POORNA MOTORS, 7428409953 | Lalbhag Main Road - PRAKASH MOTORS, 7428410886 | J P Nagar - SAI MOTORS, 7428412219 | Kanakapura Main Road - SAI MOTORS, 7428412219 | Yeshwantpur - SAI BIKES, 7428411869 | K R Puram - BHAGATH MOTORS, 7428408355 | R T Nagar - BIMAL MOTORS, 7428408801 | HOSKOTE: Old Madras Road - BHAGATH MOTORS, 7428408355 | KOLAR : Near RTO office - SAI BALAJI MOTORS, 8296398645 | TUMKUR: Sira Gate - SAI WHEELZ, 7428481172 | BH Road - SAI WHEELZ, 7428481172 | Kunigal - SAI WHEELZ, 7428481172 | Tiptur - SAI WHEELZ, 7428481172 | CHIKKABALLAPAURA: BB ROAD - MANJUNATHA BIKES, 9448237043.

ADVT
ಯುನಿಲೆಟ್®
ಎಲೆಕ್ಟ್ರಾನಿಕ್ಸ್ ಅಂಡ್ ಮೋರ್...
ಈ ಹಬ್ಬಗಳ ಸಂಭ್ರಮದಲ್ಲಿ ನಿಮ್ಮಲ್ಲಿ ಮತ್ತಷ್ಟು ಮಂದಹಾಸ
ಕೇಂದ್ರ ಸರ್ಕಾರ, ಈ ತಿಂಗಳ 22ರಿಂದ ಜಾರಿಗೆ ಬರುವಂತೆ LED TVಗಳು, ACs ಮತ್ತು Dishwasherಗಳಂತಹ ಅಗತ್ಯ ವಿದ್ಯುತ್ ಉಪಕರಣಗಳ ಮೇಲಿನ ಜಿಎಸ್‌ಟಿ ದರವನ್ನು ಕಡಿಮೆ ಮಾಡಿದೆ. ಈ ಉಪಕರಣಗಳ ಮೇಲಿನ ಜಿಎಸ್‌ಟಿಯನ್ನು 28% ರಿಂದ 18% ಕ್ಕೆ ಇಳಿಸಿದ್ದು, ಜಿಎಸ್‌ಟಿಯಲ್ಲಿ 10% ರವರೆಗೆ ಸ್ಪಷ್ಟ ಉಳಿತಾಯವಾಗಲಿದೆ. ಕೇಂದ್ರ ಸರ್ಕಾರದ ಈ ನಿರ್ಧಾರವು ದೇಶದಲ್ಲಿ ಅತ್ಯಾಧುನಿಕ, ಉತ್ತಮ ಗುಣಮಟ್ಟದ ಗೃಹೋಪಯೋಗಿ ಉಪಕರಣಗಳನ್ನು ಎಲ್ಲರಿಗೂ ಕೈಗೆಟುಕುವ ದರದಲ್ಲಿ ಒದಗಿಸಲು ಸಹಕಾರಿಯಾಗಲಿದೆ.
Uniletನಲ್ಲಿ ನಮ್ಮದೇ ಆದ ಜಿಎಸ್‌ಟಿ 2.0 ದರ ಕಡಿತಗೊಳಿಸಿ ನಿಮಗೆ ಭಾರೀ ರಿಯಾಯಿತಿ ಮಾರಾಟವನ್ನು ನೀಡುತ್ತೇವೆ. ನೀವು LED TVಗಳು ಮತ್ತು ACಗಳ ಮೇಲೆ 50% ರವರೆಗೆ ಮತ್ತು 2-ಟನ್ ACಗಳ ಮೇಲೆ 60% ರವರೆಗೆ ರಿಯಾಯಿತಿ ಪಡೆಯಬಹುದು.
ಈ ಅದ್ಭುತ ಕೊಡುಗೆಯನ್ನು ತಮ್ಮದಾಗಿಸಿಕೊಳ್ಳಿ! ಈ ವಿಶೇಷ ಮಾರಾಟವು ನಿಮ್ಮ ಹತ್ತಿರದ ಎಲ್ಲಾ Unilet ಸ್ಟೋರ್‌ಗಳಲ್ಲಿ ಲಭ್ಯವಿದೆ.
Apple ನ ಇತ್ತೀಚಿನ ಉತ್ಪನ್ನಗಳು
ಹೊಸ ಆ್ಯಪಲ್ ಉತ್ಪನ್ನಗಳಿಗಾಗಿ ಜಗತ್ತೇ ಕುತೂಹಲದಿಂದ ಕಾಯುತ್ತಿದ್ದು, ಅವೀಗ ಯುನಿಲೆಟ್‌ನಲ್ಲಿ ಲಭ್ಯವಿವೆ.
iPhone 17 Proಆಕರ್ಷಕ ವೈಶಿಷ್ಟ್ಯತೆಯ ಎ19 ಬಯೋನಿಕ್ ಚಿಪ್ ಹೊಂದಿದೆ. ಪ್ರೊಮೋಷನ್ ಸೂಪರ್ ರೆಟಿನಾ ಎಕ್ಸ್‌ಡಿಆರ್ ಡಿಸ್ಪ್ಲೇ, ಪ್ರಬಲ ಕ್ವಾಡ್ ಪಿಕ್ಸೆಲ್ ಪ್ರೋ ಕ್ಯಾಮೆರಾ ಮತ್ತು ರಾತ್ರಿ ವೇಳೆ ಅತ್ಯುತ್ತಮ ಫೋಟೋಗ್ರಫಿ ಅನುಭವದ ಜೊತೆಗೆ ಶಕ್ತಿಯುತ ಎಐ ವೈಶಿಷ್ಟ್ಯತೆಗಳನ್ನು ಹೊಂದಿದೆ. ಇದು ಹಗುರ ವಿನ್ಯಾಸ ಒಳಗೊಂಡಿದೆ.
iPhone 17 Air ಹಗುರವಾದ ವೈಶಿಷ್ಟ್ಯತೆ & ಪ್ರೀಮಿಯಂ ವಿನ್ಯಾಸ ಹೊಂದಿದೆ.
Apple Watch Series 11 ಹೃದಯ ಬಡಿತದ ನಿಖರ ಎಣಿಕೆ, ರಕ್ತದ ಆಮ್ಲಜನಕ ಮತ್ತು ನಿದ್ರೆಯ ಮೇಲ್ವಿಚಾರಣೆ ಸೇರಿದಂತೆ ಮುಂದಿನ ಪೀಳಿಗೆಯ ಆರೋಗ್ಯ ಕಾಳಜಿಯ ಜೊತೆಗೆ ಇದು ಸುಧಾರಿತ ಎಐ ವೈಶಿಷ್ಟ್ಯತೆಗಳನ್ನೂ ಹೊಂದಿದೆ.
Airpods Pro 3 ಅಡಾಪ್ಟಿವ್ ಆಡಿಯೊ ಮತ್ತು ಸುಧಾರಿತ ಶಬ್ದ ರದ್ದತಿಯನ್ನು ಒಳಗೊಂಡಿದೆ. ಇದರಲ್ಲಿನ ಶಕ್ತಿಯುತ ಎಐ, ದೈನಂದಿನ ಆಲಿಕೆ ಅನುಭವವನ್ನೂ ಮತ್ತಷ್ಟು ಹೆಚ್ಚಿಸುತ್ತದೆ.
50%
2 ಟನ್ ACಗಳ ಮೇಲೆ
60%
iPhone 17 PRO
ಹೆಚ್ಚುವರಿ ಪ್ರಯೋಜನಗಳಿಗೆ ಇಂದೇ ಬುಕ್ ಮಾಡಿ!
• 43' LED TV ಪಾವತಿಸಿ ಕೇವಲ ರೂ.1000
• 55' LED TV ಪಾವತಿಸಿ ಕೇವಲ ರೂ.2000
• 3-ಸ್ಟಾರ್ AC ಪಾವತಿಸಿ ಕೇವಲ ರೂ.1000
• 5-ಸ್ಟಾರ್ AC ಪಾವತಿಸಿ ಕೇವಲ ರೂ.2000
• Dishwasher ಪಾವತಿಸಿ ಕೇವಲ ರೂ.2000
ನಿಮ್ಮ ಆಯ್ಕೆಯ ಉತ್ಪನ್ನ ಮತ್ತು ಬ್ಯಾಂಕ್ ಆಧಾರದ ಮೇಲೆ, ನೀವು ರೂ. 2,000ವರೆಗೆ ತ್ವರಿತ ರಿಯಾಯಿತಿ ಮತ್ತು ರೂ. 30,000ವರೆಗೆ ಕ್ಯಾಶ್‌ಬ್ಯಾಕ್ ಅವಕಾಶ ಪಡೆಯಬಹುದು.
EMI CARD
EASY FINANCE
CREDIT / DEBIT CARD EMI
BAJAJ FINSERV
IDFC FIRST Bank
HDFC BANK
CASH BACK UPTO
₹30,000
Uniletನಿಂದ ಖರೀದಿಸುವ ಗ್ರಾಹಕರು, ಬುಕಿಂಗ್ ಪೂರ್ವ ಕೊಡುಗೆಗಳು & ವಿನಿಮಯ ಕೊಡುಗೆಗಳು, EMI ಸೌಲಭ್ಯಗಳು ಮತ್ತು ತ್ವರಿತ ಕ್ಯಾಶ್‌ಬ್ಯಾಕ್ ಸೇರಿದಂತೆ ವಿವಿಧ ಪ್ರಯೋಜನಗಳನ್ನು ತಮ್ಮದಾಗಿಸಿಕೊಳ್ಳಬಹುದು.
ಯುನಿಲೆಟ್‌ನಲ್ಲಿ ನಿಮಗೆ ಎಲ್ಲವೂ ಲಭ್ಯವಿರುತ್ತವೆ. ಎಲೆಕ್ಟ್ರಾನಿಕ್ಸ್, ಎಲ್ಲಾ ಗೃಹೋಪಯೋಗಿ ವಸ್ತುಗಳು, ಮೊಬೈಲ್ ಫೋನ್‌ಗಳು ಮತ್ತು ಪ್ರಮುಖ ಅಂತಾರಾಷ್ಟ್ರೀಯ & ದೇಶೀಯ ಬ್ರ್ಯಾಂಡ್‌ನ ಗ್ಯಾಜೆಟ್‌ಗಳು.
50+ STORES
20 Years+
1Crore+ Happy CUSTOMERS
SAME DAY DELIVERY
9243 58 58 58
UNILETSTORES.COM
*Conditions apply
BENGALURU | MYSURU | TUMUKURU | HOSAKOTE | RAMANAGARA | KOLAR | NELAMANGALA | MANDYA | CHITRADURGA | DODDABALLAPURA | SHIVAMOGGA | HASSAN

HONDA
The Great Honda Fest
This Festive Season
Get.Fest.Go.
Buy a Honda Elevate & win Honda Activa e: everyday.^
SCRATCH & WIN^
ELEVATE | ACTIVA e:
ADDITIONAL BENEFITS UP TO
₹ 1 22 000*
+GST BENEFITS
NEW BOLDER LOOK
NEW OPPULENT INTERIOR
SMART FEATURES (ELITE PACK)
Honda SENSING
Alpha-Bold Plus Grille^
(Available as Optional Genuine Accessory)
Ivory & Black Two-Tone Interior
360° Surround Vision Camera^^
Rhythmic Ambient Light -7 Colours^
Intelligent ADAS Technology
SPECIAL LOYALTY BONUS
For Honda 2-Wheelers & Power Product Owners
Visit Nearest Honda Dealership
Call +91 73034 61122 | www.hondacarindia.com
UP TO 10 YEAR ANYTIME WARRANTY
GOVT. APPROVED CNG RETROFITMENT KIT AVAILABLE#
E20
AVAIL SCRAPPAGE BENEFITS
SEAT BELTS FOR ALL SAFETY FOR ALL
SCAN TO TALK TO OUR EXPERT
*TOTAL BENEFITS:T&C Apply. Amount includes applicable cash, exchange, corporate, extended warranty or any other applicable offer/ benefits. Available for limited period on select model and in select cities. Stock without benefits is also available. ^^Optional Accessory available at an extra cost from third party, to be fitted at Dealership. Warranty on such accessories is supported by Supplier & is limited to 2 years from date purchase. ^Optional Honda Genuine Accessory available at an extra cost, to be fitted at Dealership. Honda Accessory Warranty is applicable & is limited to 1 year from the date of purchase. ^SCRATCH & WIN: T&C Apply. Scheme valid for limited period until stock available and in Bengaluru only. Stock without offer is also available. Eligible customer shall be entitled to avail the 'Activa e: / Gift / Prize' upon fulfilment of the T&C mentioned on scheme coupon available at authorized dealership. Activa e: / Gift / Prize cannot be substituted, exchanged, encashed or transferred. For more details, visit Honda Dealership. 10 YEAR ANYTIME WARRANTY: Extendable up to the maximum age of 10 years or 120000 kilometers by renewing every year and is applicable from the date of purchase of car. Please refer owner's manual and Warranty Document for more details. #CNG: Govt. approved CNG retrofitment kit is provided by third party. CNG Kit warranty and any other related terms and conditions are applicable as specified by third party. Applicable on select models only. Black glass appearance on vehicle is due to lighting effect. Actual vehicle color, features, and specifications may vary from those shown and might not be part of standard fitment. Please check the availability of grades, colors, features, and offers at authorized dealerships. Honda Cars India Limited reserves the right to change or withdraw any colour, grade, feature, offers/ scheme or benefits without any prior notice. Scrappage benefits applicable on select models subject to receipt of valid certificate of deposit issued by RVSF. Honda SENSING (ADAS) cannot substitute human acumen and vigilance while driving. Honda Cars India Limited urges drivers to follow traffic rules which are meant to keep them safe on roads. For more information, please visit our authorized dealership or www.hondacarindia.com. For corporate sales enquiry please write to corporatesales@hondacarindia.com.
AUTHORISED DEALERSHIPS BENGALURU: Brigade Honda – Yelahanka- 86575 88450, Magnum Honda - Kanakapura Road - 98455 24394, Mekhri Circle - 99000 29164, Tumkur – 99160 04127, Whitefield Honda - Whitefield Road - 86575 89175, Dakshin Honda - Hosur Road – 98804 21212, Lavelle Road – 98804 21212, BELAGAVI: Alpha Honda - 86575 88418, HASSAN: Inspire Honda – 84484 48770, HUBLI: Lakeview Honda – 86575 88923, MANGALORE: Artha Honda – 96069 65270, MYSORE: Inspire Honda – 84484 48660, UDUPI: Shama Honda – 98802 72211.

ಒಳಗೆ ಸೇರಿದರೂ ಗುಂಡು...

ಮೋಜು, ಪ್ರತಿಷ್ಠೆ, ಫ್ಯಾಷನ್... ಹೀಗೆ ನಾನಾ ಕಾರಣಗಳಿಂದ ಸುರೆಯ ಸೆರೆಗೆ ಸಿಲುಕುವ ಮಹಿಳೆಯರ ಸಂಖ್ಯೆ ಹೆಚ್ಚುತ್ತಿದೆ. ಮದ್ಯವ್ಯಸನ ಮುಕ್ತ ಶಿಬಿರಗಳ ನೆರವಿನಿಂದ, ಈ ಕೂಪದಿಂದ ಹೊರಬಂದು ಹೊಸ ಬದುಕು ಕಟ್ಟಿಕೊಂಡವರ ಅನುಭವ ಕಥನ ಇದು.

• ಉಮಾ ಅನಂತ್

ನಗರಗಳ ಕೆಲವು ಹೆಣ್ಣುಮಕ್ಕಳಿಗೆ ಮಿತಿಮೀರಿ ಮದ್ಯಪಾನ ಮಾಡುವುದು ಒಂದು ಫ್ಯಾಷನ್ ಆಗಿದೆ. ಕಂಠಪೂರ್ತಿ ಬಿಯರ್ ಕುಡಿಯುವುದಂತೂ ಬದುಕಿನ ಭಾಗ ಎಂಬಷ್ಟರ ಮಟ್ಟಿಗೆ ಚಟವಾಗಿದೆ. ಪಬ್ ಸಂಸ್ಕೃತಿ ಹೆಚ್ಚುತ್ತಿದ್ದು, ಉಳ್ಳವರ ಮನೆಗಳಲ್ಲಿ 'ಮಿನಿ ಬಾರ್'ಗಳು ಸೃಷ್ಟಿಯಾಗುತ್ತಿವೆ. ಅತಿಯಾದರೆ ಅಮೃತವೇ ವಿಷವಾಗುವಾಗ, ಇನ್ನು ಕುಡಿತದ ಚಟಕ್ಕೆ ಬಿದ್ದವರನ್ನು ದೈಹಿಕ–ಮಾನಸಿಕ ಸಮಸ್ಯೆಗಳು ಕಾಡದೆ ಬಿಟ್ಟಾವೆಯೇ?

ವೃತ್ತಿಜೀವನದಲ್ಲಿ ಅಪೇಕ್ಷಿತ ಯಶಸ್ಸು ಸಿಗದೇ ಇದ್ದಾಗ, ಕೆಲಸದ ಒತ್ತಡ ಅತಿಯಾದಾಗ, ಸ್ನೇಹಿತರ ಒತ್ತಾಯದಿಂದ ಸಿಗರೇಟು, ಡ್ರಗ್ಸ್‌ನ ಚಟಕ್ಕೆ ಬಲಿಯಾಗುವಂತೆ ಮದ್ಯವ್ಯಸನಕ್ಕೆ ಒಳಗಾಗುವವರ ಸಂಖ್ಯೆಯೂ ಹೆಚ್ಚುತ್ತಿದೆ. ಒತ್ತಡ ನಿವಾರಣೆಯ ಸಾಧನ ಎಂದುಕೊಂಡ ಮದ್ಯವು ಕ್ರಮೇಣ ಒಂದು ಚಟವೇ ಆಗಿ ಮಹಿಳೆಯರನ್ನು ಕಾಡತೊಡಗುವುದು ಒಂದು ಚೋದ್ಯವೇ ಹೌದು. ಆದರೆ ಸ್ವಯಂಸೇವಾ ಸಂಸ್ಥೆಗಳು, ಪುನರ್ಮನನ ಕೇಂದ್ರಗಳ ನೆರವಿನೊಂದಿಗೆ, ದೃಢಚಿತ್ತದಿಂದ ಮದ್ಯವ್ಯಸನ ಮುಕ್ತರಾಗಿ ಹೊಸ ಬದುಕು ಕಟ್ಟಿಕೊಂಡವರೂ ಇದ್ದಾರೆ. ಅಂತಹ ಯಶಸ್ಸಿನ ಕತೆಗಳನ್ನು ಕೆಲವರು ಇಲ್ಲಿ ಮುಕ್ತವಾಗಿ ಹಂಚಿಕೊಂಡಿದ್ದಾರೆ:

ಹೆಸರು ನವ್ಯಾ. ಊರು ಕುಣಿಗಲ್. ಸದ್ಯ ಗೃಹಿಣಿ. ಸುಮಾರು ಎಂಟು ವರ್ಷಗಳ ಹಿಂದೆ ಬೆಂಗಳೂರಿನ ಕಾಲೇಜಿನಲ್ಲಿ ಓದುವಾಗ ವಾರಾಂತ್ಯದಲ್ಲಿ ಗೆಳತಿಯರ ಜೊತೆ ಪಬ್‌ಗೆ ಹೋಗುವುದು ಅಭ್ಯಾಸವಾಯಿತು. ಕೆಲವೇ ಸಿಪ್‌ನಿಂದ ಆರಂಭವಾದದ್ದು ದಿನಗಳೆದಂತೆ ಬಾಟಲಿಗಟ್ಟಲೆ ಕುಡಿಯುವುದು ರೂಢಿಯಾಯಿತು. ಕುಡಿದಾಗ ಏನೋ ಉಲ್ಲಾಸ, ಸಂತೋಷ ಆಗುತ್ತಿತ್ತು. ಕಾಲೇಜಿನಲ್ಲಿ ಪಾಠ ಕೇಳುವಾಗಲೂ ಸಂಜೆಯ ಗುಂಡಿನ ಪಾರ್ಟಿಯದ್ದೇ ಗುಂಗು. ಇದೊಂದು ವ್ಯಸನ ಎಂಬುದು ಅರಿವಾಗುವಷ್ಟರಲ್ಲಿ ಆರೋಗ್ಯ ಕೈಕೊಡಲಾರಂಭಿಸಿತು. ಬಿ.ಕಾಂ ಕೊನೆಯ ವರ್ಷದ ಪರೀಕ್ಷೆ ಬರೆಯಲೂ ಆಗಲಿಲ್ಲ. ಕೈಗಳು ಕಂಪಿಸುತ್ತಿದ್ದವು. ಅಪ್ಪ ಕೊಡುತ್ತಿದ್ದ ಹಣ ನೀರಿನಂತೆ ಖರ್ಚಾಗುತ್ತಿದ್ದುದನ್ನು ಕಂಡು ಪಶ್ಚಾತ್ತಾಪ ಆಗುತ್ತಿತ್ತು.

ಕಾಲೇಜು ಮುಗಿಯುತ್ತಿದ್ದಂತೆ ಮನೆಯಲ್ಲಿ ಮದುವೆ ಮಾತುಕತೆ ನಡೆಯತೊಡಗಿತು. ಅಸಾಧ್ಯ ಹೊಟ್ಟೆನೋವು ಕಾಡಲಾರಂಭಿಸಿತು. ಆಗ ನನ್ನ ಕುಡಿತದ ಅಭ್ಯಾಸದ ಬಗ್ಗೆ ಮನೆಯವರಿಗೆ ಹೇಳಲೇಬೇಕಾಯಿತು. ಅಮ್ಮ ಬಹಳ ಬೇಸರ ಮಾಡಿಕೊಂಡರು. ಇದನ್ನು ನೋಡಿ ನನಗೂ ಮನಸ್ಸು ಕರಗಿತು. ಇನ್ನು ಉಸಿರು ಇರುವವರೆಗೂ ಕುಡಿಯಬಾರದು ಎಂದು ತೀರ್ಮಾನಿಸಿದೆ. ಆರೋಗ್ಯ ಹಾಗೂ ಮನಃಶಾಂತಿಗಾಗಿ ಯೋಗ–ಪ್ರಾಣಾಯಾಮ ಥೆರಪಿ ತೆಗೆದುಕೊಂಡೆ. ಸದ್ಯ ಯಾವುದೇ ಸಮಸ್ಯೆ ಇಲ್ಲದೆ ಆರಾಮವಾಗಿದ್ದೇನೆ.

* * *

ಕುಂದಾಪುರ ತಾಲ್ಲೂಕು ಕೆದೂರಿನ ಸುಬ್ಬಮ್ಮನಿಗೆ 68 ವರ್ಷ. ಕುಡಿತದ ಅಭ್ಯಾಸ ಮಾಡಿಕೊಂಡದ್ದು ಗಂಡನ ಜೊತೆ ಮೋಜಿಗಾಗಿ. '18 ವರ್ಷದ ವಳಿದ್ದಾಗಲೇ ಸಾರಾಯಿ ಕುಡಿಯಲು ಆರಂಭಿಸಿದೆ. ಸ್ವಲ್ಪಸ್ವಲ್ಪ ಕುಡಿಯಲು ಶುರು ಮಾಡಿದ್ದು ಬರಬರುತ್ತಾ ಕ್ವಾರ್ಟರ್‌ಗಟ್ಟಲೆಗೆ ಏರಿತು. ಹೊಟ್ಟೆಪಾಡಿಗಾಗಿ ಸೂಲಗಿತ್ತಿ ಕೆಲಸ ಮಾಡುತ್ತಿದ್ದೆ. ಸುಮಾರು 40 ವರ್ಷದ ಹಿಂದೆ ಕುಂದಾಪುರದಲ್ಲಿ ಹೆರಿಗೆ ಆಸ್ಪತ್ರೆ ಇರಲಿಲ್ಲ. ಆಗ ಹಳ್ಳಿಹಳ್ಳಿಗೆ ಹೋಗಿ ಹೆರಿಗೆ ಮಾಡಿಸುತ್ತಿದ್ದೆ. ಲೆಕ್ಕವಿಲ್ಲದಷ್ಟು ಮನೆಗಳಲ್ಲಿ ಬಾಣಂತನವನ್ನೂ ಮಾಡಿದ್ದೇನೆ. ಆಗ ಕೈಗೆ ಬರುತ್ತಿದ್ದ ಹಣದಿಂದ ಸುಮಾರು 35 ವರ್ಷ ತಪ್ಪದೇ ಕುಡಿದೆ'.

'2013ರಲ್ಲಿ ಕುಂದಾಪುರದಲ್ಲಿ ನಡೆದ ಮದ್ಯವ್ಯಸನ ವರ್ಜನ ಶಿಬಿರದಲ್ಲಿ ಭಾಗವಹಿಸಿದೆ. ಬಳಿಕ ಬೆಳ್ತಂಗಡಿ ತಾಲ್ಲೂಕಿನ ಲಾಯಿಲದಲ್ಲಿರುವ ಕೇಂದ್ರದಲ್ಲಿ ಇಪ್ಪತ್ತು ದಿನ ಇದ್ದೆ. ಕುಡಿತ ಮರೆಯಲು ಭಜನೆ, ಧ್ಯಾನ ಮಾಡಿಸುತ್ತಿದ್ದರು. ಕುಡಿಯುವುದನ್ನು ಸಂಪೂರ್ಣವಾಗಿ ತ್ಯಜಿಸುವ ಪಣ ತೊಟ್ಟೆ. ಕುಡಿತ ಬಿಟ್ಟು 12 ವರ್ಷವಾಯಿತು. ಆರಾಮವಾಗಿದ್ದೇನೆ. 'ಕಾಂತಾರ' ಸಿನಿಮಾದಲ್ಲಿ ಸಣ್ಣ ಪಾತ್ರವನ್ನೂ ಮಾಡಿದ್ದೇನೆ. ಈಗ ಕಾಂತಾರ–2ನಲ್ಲೂ ನನ್ನ ಪಾತ್ರ ಇದೆ. ಬದುಕಿಗಾಗಿ ಸರ್ಕಾರದಿಂದ ಪಿಂಚಣಿ ಹಣ ಬರುತ್ತದೆ'.

* * *

ಜಾರ್ಖಂಡ್ ಮೂಲದ ಸ್ವಪ್ನಾ ಕಂಪ್ಯೂಟರ್ ಎಂಜಿನಿಯರ್. ಬೆಂಗಳೂರಿನಲ್ಲಿ ಓದಿ ಅಲ್ಲಿಯೇ ಬಹುರಾಷ್ಟ್ರೀಯ ಕಂಪನಿಯೊಂದರಲ್ಲಿ ಉದ್ಯೋಗಿ. 'ಆಫೀಸಿನಲ್ಲಿ ಕೆಲಸದ ಒತ್ತಡ ಅತಿಯಾದಾಗ ಫ್ರೆಂಡ್ಸೆಲ್ಲ ಆಗಾಗ ಪಾರ್ಟಿ ಶುರುವಿಟ್ಟುಕೊಂಡರು. ಮನಸ್ಸಿನ ರಿಲ್ಯಾಕ್ಸೇಷನ್‌ಗಾಗಿ ಸ್ವಲ್ಪ ಕುಡಿಯಲು ಆರಂಭಿಸಿದೆ. ಸಹೋದ್ಯೋಗಿಗಳಲ್ಲಿ ಬಹುತೇಕ ಹೆಣ್ಣುಮಕ್ಕಳು ಸಂಜೆ ಪಬ್‌ಗೆ ಹೋಗುವುದು ಮಾಮೂಲಿಯಾಯಿತು. ಮದ್ಯಸೇವನೆ ಮಿತಿಮೀರಿತು. ಹೀಗಿರುವಾಗ, ಒಮ್ಮೆ ನನ್ನ ಕ್ಲೋಸ್ ಫ್ರೆಂಡ್ಸೆಲ್ಲ ಸೇರಿ ಗೆಟ್ ಟುಗೆದರ್ ಮಾಡಿದೆವು. ಎಷ್ಟೋ ವರ್ಷಗಳ ನಂತರ ಸಿಕ್ಕಿದ ಖುಷಿಗೆ ಭರ್ಜರಿ ಎಣ್ಣೆ ಪಾರ್ಟಿಯೇ ನಡೆಯಿತು'.

'ರಾತ್ರಿ ಬಹಳ ಹೊತ್ತಾದ್ದರಿಂದ ಮನೆಗೆ ಹೋಗಲು ಕ್ಯಾಬ್ ಬುಕ್ ಮಾಡಿದೆ. ಕ್ಯಾಬ್ ಡ್ರೈವರ್ ಮನೆ ಲೊಕೇಶನ್‌ಗೆ ಕರೆದೊಯ್ದಾಗ ನಾನು ಪ್ರಜ್ಞಾಹೀನ ಸ್ಥಿತಿಯಲ್ಲಿದ್ದೆ. ಆಗ ಡ್ರೈವರ್ ನನ್ನನ್ನು ಅಕ್ಷರಶಃ ಹೊತ್ತುಕೊಂಡೇ ನನ್ನ ಫ್ಲ್ಯಾಟ್‌ಗೆ ಕರೆದೊಯ್ದರು. ನನ್ನ ಆಗಿನ ಸ್ಥಿತಿಯನ್ನು ಕಂಡು ಅಪ್ಪ–ಅಮ್ಮ ಗಾಬರಿಯಾದರು. ಸುರಕ್ಷಿತವಾಗಿ ನನ್ನನ್ನು ಮನೆಗೆ ತಲುಪಿಸಿದ್ದಕ್ಕಾಗಿ ಡ್ರೈವರ್‌ಗೆ ಒಂದು ಸಾವಿರ ರೂಪಾಯಿ ಹೆಚ್ಚಿಗೇ ಕೊಟ್ಟು ಕಳಿಸಿದರು. ಮರುದಿನ ಅಪ್ಪ ಇದೆಲ್ಲವನ್ನೂ ಬಹಳ ನೋವಿನಿಂದ ವಿವರಿಸಿದಾಗ ನನಗೆ ತುಂಬಾ ದುಃಖವಾಯಿತು. ಈ ಕೆಲಸವೂ ಬೇಡ, ಕುಡಿತದ ಅಭ್ಯಾಸವೂ ಬೇಡ ಎಂದು ನಿರ್ಧರಿಸಿದೆ. ಕೆಲಸ ಬಿಟ್ಟೆ. ಬದಲಾವಣೆ ಬಯಸಿ ಶಿಮ್ಲಾಕ್ಕೆ ಹೋದೆ. ಅಲ್ಲಿ ಕೆಲ ತಿಂಗಳಿದ್ದು ವಾಪಸ್ ಬಂದೆ. ಈಗ ಆನ್‌ಲೈನ್ ಮೂಲಕ ಸಣ್ಣ ಉದ್ಯೋಗ ಮಾಡುತ್ತಿದ್ದೇನೆ. ಮುಂದೆ ಎಂದೂ ಮದ್ಯ ಸೇವಿಸಬಾರದೆಂಬ ನಿರ್ಧಾರಕ್ಕೆ ಬಂದಿದ್ದೇನೆ'.

ಇದೆ ಬಗೆಬಗೆ ಥೆರಪಿ

ಮದ್ಯವ್ಯಸನದಿಂದ ಹೊರಬರಲಾಗದವರು ಮಾನಸಿಕ ಅನಾರೋಗ್ಯಕ್ಕೆ ಒಳಗಾಗಿ ನಮ್ಮಲ್ಲಿ ಚಿಕಿತ್ಸೆಗೆ ಬರುತ್ತಾರೆ. ಇಲ್ಲಿ 'ಸೆಂಟರ್ ಫಾರ್ ಅಡಿಕ್ಷನ್ ಮೆಡಿಸಿನ್' ಘಟಕದ ಹೊರರೋಗಿಗಳ ವಿಭಾಗದಲ್ಲಿ ವಾರದಲ್ಲಿ ಮೂರು ದಿನ ಚಿಕಿತ್ಸೆ ನೀಡಲಾಗುತ್ತದೆ. ಗಂಭೀರವಾದವರಿಗೆ ಒಳರೋಗಿಗಳಾಗಿ ಚಿಕಿತ್ಸೆ ನೀಡುತ್ತೇವೆ. ಡಿ–ಅಡಿಕ್ಷನ್ ಘಟಕದಲ್ಲಿ ಮಹಿಳೆಯರಿಗಾಗಿಯೇ 10 ಹಾಸಿಗೆಗಳ ವ್ಯವಸ್ಥೆ ಇದೆ. ಇಲ್ಲಿ ಥೆರಪಿ, ಕೌನ್ಸೆಲಿಂಗ್, ಮೋಟಿವೇಷನಲ್ ಥೆರಪಿ, ಬ್ರೀಫ್ ಇಂಟರ್‌ವೆನ್ಶನ್ ಥೆರಪಿ, ಸಪೋರ್ಟ್ ಗ್ರೂಪ್ ಥೆರಪಿ, ಆಕ್ಯುಪೇಷನಲ್ ಥೆರಪಿಯಂತಹ ಚಿಕಿತ್ಸೆಗಳಿವೆ. ಮಹಿಳೆಯರು ಮದ್ಯಮುಕ್ತರಾದ ಬಗ್ಗೆ ನಿಮ್ಹಾನ್ಸ್ ಒಂದು ಅಧ್ಯಯನ ನಡೆಸಿತ್ತು. ಡಿ–ಅಡಿಕ್ಟ್ ಆದ ನಂತರ ಎರಡು ವರ್ಷದವರೆಗೆ ಅವರನ್ನು ಅಬ್ಸರ್ವೇಷನ್‌ನಲ್ಲಿ ಇಟ್ಟು ನೋಡಿದಾಗ, ಸಮೀಕ್ಷೆ ನಡೆಸಿದ ಮಹಿಳೆಯರಲ್ಲಿ ಶೇ 60–80ರಷ್ಟು ಮಂದಿ ಮುಕ್ತರಾಗಿರುವುದು ಗೊತ್ತಾಗಿದೆ. 2019ರಿಂದ 2023ರವರೆಗೆ ನಿಮ್ಹಾನ್ಸ್‌ನಲ್ಲಿ 938 ಮಹಿಳೆಯರು ನೋಂದಣಿ ಮಾಡಿಕೊಂಡಿದ್ದರು. ಚಿಕಿತ್ಸೆ ಬಳಿಕ ಎಷ್ಟೋ ಮಹಿಳೆಯರನ್ನು ಸಂಪರ್ಕಿಸುವುದೇ ಕಷ್ಟವಾಯಿತು. ಸಂಪರ್ಕಕ್ಕೆ ಬಂದ ಸುಮಾರು ಮಂದಿ ತಮಗೆ ನಿದ್ರಾಹೀನತೆಯ ಸಮಸ್ಯೆ ಇದೆ ಎಂದರು. ಇನ್ನು ಕೆಲವರು ಸಂಪೂರ್ಣವಾಗಿ ಮದ್ಯಮುಕ್ತ ಆಗಿರುವುದಾಗಿ ತಿಳಿಸಿದರು. ಮತ್ತೆ ಕೆಲವರು, ಮದ್ಯ ಕುಡಿಯುವುದು ತಮಗಿಷ್ಟವಾದ್ದರಿಂದ ಪುನಃ ಆರಂಭಿಸಿರುವುದಾಗಿ ಹೇಳಿದ್ದು ಕೂಡ ಇದೆ.

ಡಾ. ಶ್ರೀದೇವಿ, ಸಹಾಯಕ ಪ್ರಾಧ್ಯಾಪಕಿ, ನಿಮ್ಹಾನ್ಸ್, ಬೆಂಗಳೂರು

ಚಿಕಿತ್ಸೆ ಎಲ್ಲೆಲ್ಲಿ?

ಮದ್ಯವ್ಯಸನದಿಂದ ಹೊರಬರಲು ವಿಶೇಷವಾದ ಆಪ್ತ ಸಮಾಲೋಚನಾ ಕೇಂದ್ರಗಳಿವೆ. ಇಲ್ಲಿ ನೀಡುವ ಚಿಕಿತ್ಸೆಯನ್ನು 'ಮೋಟಿವೇಷನ್ ಎನ್‌ಹ್ಯಾನ್ಸ್‌ಮೆಂಟ್ ಥೆರಪಿ' ಎಂದು ಕರೆಯಲಾಗುತ್ತದೆ. ಬೆಂಗಳೂರಿನ ನಿಮ್ಹಾನ್ಸ್ ಆಸ್ಪತ್ರೆಯಲ್ಲಿ ಮದ್ಯಪಾನ ವಿಮೋಚನಾ ಘಟಕವಿದೆ. ವಿದ್ಯಾರಣ್ಯಪುರದಲ್ಲಿರುವ ದಿವ್ಯಜ್ಯೋತಿ ಡಿ–ಅಡಿಕ್ಷನ್ ಸೆಂಟರ್, ಕನಕಪುರ ರಸ್ತೆಯಲ್ಲಿರುವ ಕಡಬಮ್ಸ್ ಮದ್ಯವ್ಯಸನ ಪುನರ್ವಸತಿ ಕೇಂದ್ರ, ಬೆಳ್ತಂಗಡಿ ತಾಲ್ಲೂಕಿನ ಲಾಯಿಲದಲ್ಲಿರುವ ಶ್ರೀ ಧರ್ಮಸ್ಥಳ ಡಿ–ಅಡಿಕ್ಷನ್ ಆ್ಯಂಡ್ ರಿಸರ್ಚ್ ಸೆಂಟರ್, ಚಿಕ್ಕಮಗಳೂರಿನ ಶ್ರೀಶಕ್ತಿ ಮದ್ಯವ್ಯಸನ ಮುಕ್ತಿ ಕೇಂದ್ರ, ಹೊಸಕೋಟೆಯ ಸತ್ವ ಡಿ–ಅಡಿಕ್ಷನ್ ಸೆಂಟರ್, ದೊಡ್ಡಬಳ್ಳಾಪುರದ ಪುನರ್ಜೀವನ ಟ್ರಸ್ಟ್ ಮುಂತಾದೆಡೆ ಮದ್ಯವ್ಯಸನ ಬಿಡಿಸಲು ಚಿಕಿತ್ಸೆ ನೀಡಲಾಗುತ್ತದೆ.

> ರಾತ್ರಿ ಬಹಳ ಹೊತ್ತಿನವರೆಗೆ ಪಾರ್ಟಿ ಮಾಡಿ ಪಾನಮತ್ತರಾಗುವ ಕೆಲವು ಮಹಿಳೆಯರು ಆರೋಗ್ಯದ ಕಡೆಗೂ ಲಕ್ಷ್ಯ ಕೊಡದೆ ಭವಿಷ್ಯಕ್ಕೆ ಕುತ್ತು ತಂದುಕೊಳ್ಳುತ್ತಿದ್ದಾರೆ. ನಮ್ಮ ಕೇಂದ್ರಕ್ಕೆ ಬರುವ ಮಹಿಳೆಯರ ಆರೋಗ್ಯ ಮಾಹಿತಿ, ಕುಡಿತದ ಹಿಸ್ಟರಿ, ಮದ್ಯಸೇವನೆಗೆ ಪ್ರೇರಣೆಯಾದ ಎಲ್ಲ ವಿವರವನ್ನೂ ಕಲೆಹಾಕುತ್ತೇವೆ. ಇಲ್ಲಿ ಚಿಕಿತ್ಸೆ ಪಡೆದುಹೋದ ಬಳಿಕ ಅವರಿಂದ ಫೀಡ್‌ಬ್ಯಾಕ್ ಪಡೆಯುವುದು ಮಾತ್ರ ತುಂಬ ಕಷ್ಟ. ಹೀಗಾಗಿ, ಅವರೆಲ್ಲರೂ ಮದ್ಯವ್ಯಸನದಿಂದ ಸಂಪೂರ್ಣವಾಗಿ ದೂರ ಇದ್ದಾರೋ ಅಥವಾ ಮತ್ತೆ ಆರಂಭಿಸಿದ್ದಾರೋ ಎಂಬ ಮಾಹಿತಿಯನ್ನು ಖಚಿತವಾಗಿ ತಿಳಿಯಲಾಗದು.
>
> **ದಿವ್ಯಾ ಅಂಚನ್,** ದಿವ್ಯಜ್ಯೋತಿ ಡಿ–ಅಡಿಕ್ಷನ್ ಸೆಂಟರ್, ವಿದ್ಯಾರಣ್ಯಪುರ, ಬೆಂಗಳೂರು

> ರಾಜ್ಯದ ಮದ್ಯವ್ಯಸನಿಗಳ ಪೈಕಿ ಶೇ 85ರಷ್ಟು ಪುರುಷರು ಹಾಗೂ ಶೇ 15ರಷ್ಟು ಮಹಿಳೆಯರಿದ್ದಾರೆ. ಇದುವರೆಗೆ 1980 ಶಿಬಿರಗಳನ್ನು ನಡೆಸಿದ್ದೇವೆ. ಮನೋವೈದ್ಯರು, ಆಪ್ತ ಸಮಾಲೋಚಕರನ್ನು ಶಿಬಿರಗಳಿಗೆ ಕರೆಸುತ್ತೇವೆ. ಯೋಗ, ಧ್ಯಾನ, ಪ್ರಾಣಾಯಾಮ, ವ್ಯಾಯಾಮ, ಭಜನೆ ಮಾಡಿಸುತ್ತೇವೆ. ನೀತಿಕಥೆ ಹೇಳಿ ಮನದಟ್ಟು ಮಾಡುತ್ತೇವೆ. ಕುಟುಂಬದ ಇತರ ಸದಸ್ಯರಿಗೂ ಕೌನ್ಸೆಲಿಂಗ್ ಮಾಡಿಸುತ್ತೇವೆ. ಗುಂಪು ಚಟುವಟಿಕೆ, ಥೆರಪಿ ಮೂಲಕ ಮದ್ಯವ್ಯಸನ ಮುಕ್ತಿಗಾಗಿ ಶ್ರಮಿಸುತ್ತೇವೆ.
>
> **ವಿವೇಕ್ ವಿ. ಪಾಯ್ಸ್,** ಪ್ರಾದೇಶಿಕ ನಿರ್ದೇಶಕ, ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ

> ಮದ್ಯಸೇವನೆ ಕೆಲವರಲ್ಲಿ ಒಂದು ರೀತಿಯ ವ್ಯಾಧಿಯಂತೆ ಆಗಿದೆ. ಚಿಕ್ಕ ವಯಸ್ಸಿನ ಹುಡುಗಿಯರು ಕೂಡ ಫ್ಯಾಷನ್‌ಗಾಗಿ ಆರಂಭಿಸಿ ಅಡಿಕ್ಟ್ ಆಗುವ ಮಟ್ಟಕ್ಕೆ ಹೋಗುತ್ತಾರೆ. ಇದರಿಂದ ಹಿಂದೆ ಸರಿಯಲು ಆಗದೆ ಒದ್ದಾಡುವುದನ್ನು ನೋಡಲಾಗದು. ಹೆತ್ತವರಿಗೆ ಮನದಟ್ಟು ಮಾಡಿಸಿ, ಮಕ್ಕಳಲ್ಲಿ ಅರಿವು ಮೂಡಿಸಿ, ಈ ವ್ಯಸನದಿಂದ ದೂರವಿರುವಂತೆ ಪ್ರೋತ್ಸಾಹಿಸುವುದೇ ನಮ್ಮ ಗುರಿ.
>
> **ಮಂಜುನಾಥ್ ಎಚ್.,** ವ್ಯವಸ್ಥಾಪಕ, ಶ್ರೀಶಕ್ತಿ ಮದ್ಯವ್ಯಸನ ಮುಕ್ತಿ ಕೇಂದ್ರ, ಚಿಕ್ಕಮಗಳೂರು

ಎದೆಹಾಲು ದಾನ ಹೇಗೆ?

ಜ್ವಾಲಾ ಗುಟ್ಟಾ

ಎದೆಹಾಲು ಅಮೃತಕ್ಕೆ ಸಮಾನ ಎನ್ನುವ ಮಾತಿದೆ. ಮಗುವಿಗೆ ಆರು ತಿಂಗಳು ಕಡ್ಡಾಯವಾಗಿ ಎದೆ ಹಾಲನ್ನಷ್ಟೇ ಉಣಿಸಬೇಕು ಎನ್ನುತ್ತದೆ ವೈದ್ಯಲೋಕ. ತಮಿಳುನಾಡಿನ 33 ವರ್ಷದ ಮಹಿಳೆ ಎಂ. ಸೆಲ್ವ ಬೃಂದಾ 22 ತಿಂಗಳುಗಳಲ್ಲಿ 300 ಲೀಟರ್ ಎದೆಹಾಲು ದಾನ ಮಾಡುವ ಮೂಲಕ ಇದೇ ವರ್ಷದ ಜೂನ್ ತಿಂಗಳಿನಲ್ಲಿ ದಾಖಲೆ ಬರೆದಿದ್ದರು. ಅವಧಿಪೂರ್ವ ಜನನ ಮತ್ತು ತೀವ್ರ ಅನಾರೋಗ್ಯಕ್ಕೆ ಒಳಗಾದ ನೂರಾರು ಮಕ್ಕಳ ಜೀವ ಉಳಿಸಲು ಈ ಹಾಲು ಅಮೃತದಂತೆ ಒದಗಿಬಂದಿತ್ತು. ಇದೀಗ ಬ್ಯಾಡ್ಮಿಂಟನ್ ಆಟಗಾರ್ತಿ ಜ್ವಾಲಾ ಗುಟ್ಟಾ ಅವರು ಏಪ್ರಿಲ್‌ನಲ್ಲಿ ಮಗುವಿಗೆ ಜನ್ಮನೀಡಿದ್ದು, ಈವರೆಗೆ ಸುಮಾರು 30 ಲೀಟರ್‌ನಷ್ಟು ಎದೆಹಾಲನ್ನು ದಾನ ಮಾಡುವ ಮೂಲಕ ಸುದ್ದಿಯಲ್ಲಿದ್ದಾರೆ. ಎದೆಹಾಲು ದಾನದ ಮಹತ್ವದ ಬಗ್ಗೆ ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಯ ಮಕ್ಕಳತಜ್ಞ ಡಾ. ವಸಂತ್ ಡಿ.ಎಲ್. ಅವರೊಂದಿಗೆ 'ಭೂಮಿಕಾ' ನಡೆಸಿದ ಮಾತುಕತೆ ಇಲ್ಲಿದೆ:

- **ಯಾರೆಲ್ಲ ಎದೆಹಾಲು ದಾನ ಮಾಡಬಹುದು?**

ಸಹಜ ಅಥವಾ ಶಸ್ತ್ರಚಿಕಿತ್ಸೆಯ ಮೂಲಕ ಹೆರಿಗೆಯಾದ ಎಲ್ಲ ತಾಯಂದಿರೂ ತಮ್ಮ ಮಗುವಿಗೆ ಅಗತ್ಯವಿರುವಷ್ಟು ಹಾಲನ್ನು ಉಣಿಸಿ, ನಂತರ ಉಳಿದದ್ದನ್ನು ದಾನ ಮಾಡಬಹುದು. ಕೆಲವೊಮ್ಮೆ ಹುಟ್ಟಿದ ಮಗು ಐಸಿಯುನಲ್ಲಿ ಇದ್ದಾಗ ಅದಕ್ಕೆ ಹಾಲುಣಿಸಲು ತಾಯಿಗೆ ಅವಕಾಶ ಇರುವುದಿಲ್ಲ, ಇನ್ನು ಕೆಲವರು ಹುಟ್ಟಿದ ಕೆಲವೇ ಗಂಟೆಗಳಲ್ಲಿ ಅಥವಾ ದಿನಗಳಲ್ಲಿ ಮಗುವನ್ನು ಕಳೆದುಕೊಂಡಿರುತ್ತಾರೆ. ಅಂತಹ ತಾಯಂದಿರು ಸಹ ಎದೆಹಾಲನ್ನು ದಾನ ಮಾಡಬಹುದು.

- **ಸಾಮಾನ್ಯ ಮಹಿಳೆಯು ಎದೆಹಾಲನ್ನು ದಾನ ಮಾಡಬೇಕೆಂದರೆ ಯಾವ ಪ್ರಕ್ರಿಯೆಯನ್ನು ಅನುಸರಿಸಬೇಕು?**

ದಾನ ಮಾಡಲು ಇಚ್ಛಿಸುವವರಿಗೆ ಮೊದಲು ವೈದ್ಯಕೀಯ ತಪಾಸಣೆ ನಡೆಸಲಾಗುತ್ತದೆ. ಎಚ್‌ಐವಿ, ಏಡ್ಸ್, ಟಿ.ಬಿ.ಯಂಥ ಗಂಭೀರ ಕಾಯಿಲೆಗಳು ಇರಬಾರದು. ಬಿ.ಪಿ., ಮಧುಮೇಹ ಇರುವ ತಾಯಂದಿರು ಎದೆಹಾಲನ್ನು ದಾನ ಮಾಡಬಹುದು. ಆದರೆ, ಕೆಲವು ಔಷಧಿಗಳನ್ನು ತೆಗೆದುಕೊಳ್ಳುತ್ತಿರುವವರು ಮಾಡುವಂತಿಲ್ಲ. ಉದಾಹರಣೆಗೆ, ಕ್ಯಾನ್ಸರ್ ಚಿಕಿತ್ಸಾ ಔಷಧಿ.

- **ಯಾವ ಹಂತದಲ್ಲಿ ದಾನ ಮಾಡಬಹುದು?**

ನಿರ್ದಿಷ್ಟ ಸಮಯ ಅಂತಿಲ್ಲ. ಹೆರಿಗೆಯಾಗಿ ಮೂರು ದಿನಗಳವರೆಗೆ, ಆರಂಭದಲ್ಲಿ ಬರುವ ಕೊಬ್ಬಿನಾಂಶ ಹೇರಳವಾಗಿರುವ ಹಾಲನ್ನು ತಮ್ಮ ಮಗುವಿಗೆ ನೀಡಬೇಕು. ಕೆಲವೊಮ್ಮೆ ತಮ್ಮ ಮಗು ಐಸಿಯುನಲ್ಲಿ ಇದ್ದು, ಅದಕ್ಕೆ ಹಾಲುಣಿಸಲು ಅವಕಾಶ ಇಲ್ಲದಿದ್ದರೆ, ಕೊಬ್ಬಿನಾಂಶವಿರುವ ಈ ಹಾಲನ್ನೂ ದಾನ ಮಾಡಲು ಅವಕಾಶವಿದೆ.

- **ದಾನದ ಪ್ರಕ್ರಿಯೆ ಹೇಗಿರುತ್ತದೆ?**

ಬಳ್ಳಾರಿ, ವಿಜಯಪುರ, ಬೆಂಗಳೂರು, ಹಾಸನ, ಮಂಗಳೂರು, ಶಿವಮೊಗ್ಗ, ಕಲಬುರಗಿ, ಹುಬ್ಬಳ್ಳಿ ಸೇರಿದಂತೆ ಕೆಲವೆಡೆ ಸರ್ಕಾರಿ ಒಡೆತನದಲ್ಲಿರುವ ಎದೆಹಾಲಿನ ಬ್ಯಾಂಕ್‌ಗಳಿವೆ. ಇದಲ್ಲದೆ ಖಾಸಗಿ ಆಸ್ಪತ್ರೆಗಳಲ್ಲಿಯೂ ಎದೆಹಾಲಿನ ಬ್ಯಾಂಕ್‌ಗಳಿವೆ. ಸಮೀಪದ ಎದೆಹಾಲಿನ ಬ್ಯಾಂಕ್‌ಗೆ ಹೋಗಿ, ತಪಾಸಣೆಗೆ ಒಳಗಾಗಿ, ನಂತರ ನಿಗದಿತ ಅರ್ಜಿ ತುಂಬಬೇಕು. ಬ್ಯಾಂಕಿಗೆ ಬಂದು ಅಲ್ಲಿಯೇ ದಾನ ಮಾಡಬೇಕು. ಬ್ರೆಸ್ಟ್‌ಪಂಪಿಂಗ್, ಸ್ಟರಿಲೈಸ್ ಮಷೀನ್ ಬಳಸಿ ಹಾಲು ಪಡೆಯಲಾಗುತ್ತದೆ. ಇದು ಸ್ವಯಂಪ್ರೇರಿತ ದಾನವಾಗಿರುತ್ತದೆ. ಹಾಗಾಗಿ, ಯಾವುದೇ ರೀತಿಯ ಪ್ರೋತ್ಸಾಹಧನ ನೀಡುವುದಿಲ್ಲ. ಸುರಕ್ಷತೆಯ ದೃಷ್ಟಿಯಿಂದ, ಒಮ್ಮೆ ಪಂಪ್ ಆದ ಹಾಲನ್ನು ಸೂಕ್ಷ್ಮವಾಗಿ ಪರಿಶೀಲಿಸುವ ಅಗತ್ಯವಿರುವುದರಿಂದ, ಮನೆಯಲ್ಲಿಯೇ ಪಂಪ್ ಮಾಡಿದ ಹಾಲನ್ನು ತೆಗೆದುಕೊಳ್ಳಲು ಸರ್ಕಾರಿ ಒಡೆತನದ ಎದೆಹಾಲಿನ ಬ್ಯಾಂಕುಗಳಲ್ಲಿ ಅವಕಾಶವಿಲ್ಲ. ಸಾಮಾನ್ಯವಾಗಿ ದಿನಕ್ಕೆ ತಾಯಿಯಲ್ಲಿ 500ರಿಂದ 700 ಎಂಎಲ್ ಹಾಲು ಉತ್ಪತ್ತಿಯಾಗುತ್ತದೆ. ಪ್ರತಿ ಎರಡು ಗಂಟೆಗಳಿಗೊಮ್ಮೆ ಎದೆಹಾಲನ್ನು ದಾನ ಮಾಡಬಹುದು.

ಡಾ. ವಸಂತ್ ಡಿ.ಎಲ್.

- **ಯಾವ ಮಕ್ಕಳಿಗೆ ಈ ಹಾಲು ಉತ್ತಮ ಆಯ್ಕೆ?**

ನವಜಾತ ಶಿಶುವಿಗೆ ಬಹಳ ಸುಲಭವಾಗಿ ಜೀರ್ಣವಾಗುವ ರೀತಿಯಲ್ಲಿಯೇ ಎದೆಹಾಲು ಉತ್ಪತ್ತಿ ಆಗಿರುತ್ತದೆ. ಅನಾರೋಗ್ಯದಿಂದ ಬಳಲುತ್ತಿರುವ ಮಗುವಿಗೆ ಅದರದೇ ತಾಯಿಯ ಹಾಲನ್ನು ಪೂರೈಸಲು ಆದ್ಯತೆ ನೀಡಲಾಗುತ್ತದೆ. ಆದರೆ, ತಾಯಿಗೂ ಅನಾರೋಗ್ಯವಿದ್ದರೆ ದಾನಿಯ ಹಾಲನ್ನು ನೀಡಲಾಗುತ್ತದೆ. ಉಸಿರಾಟದ ತೊಂದರೆ, ಮೂರ್ಛೆ ರೋಗ, ಇತರೆ ಸೋಂಕಿನ ಕಾರಣಕ್ಕೆ ಐಸಿಯುಗೆ ದಾಖಲಾಗಿರುವ ಮಕ್ಕಳಿಗೆ ಆದ್ಯತೆ ಮೇರೆಗೆ ದಾನಿಯ ಹಾಲನ್ನು ಪೂರೈಸಲಾಗುತ್ತದೆ. ತಾಯಿಗೆ ಹಾಲು ಉತ್ಪತ್ತಿಯಾಗದಿರುವಾಗ, ನವಜಾತ ಶಿಶು 1 ಕೆ.ಜಿಗಿಂತ ಕಡಿಮೆ ತೂಕವಿದ್ದಾಗ, 28 ವಾರಕ್ಕಿಂತ ಮುಂಚೆ ಹುಟ್ಟಿದ್ದಾಗ, ಅತಿಯಾದ ಕಡಿಮೆ ತೂಕದಿಂದ ಶಿಶುವಿನ ಕರುಳು ಬೆಳವಣಿಗೆ ಕಂಡಿರದಿದ್ದಾಗ... ಇಂಥ ಪ್ರಕರಣಗಳಲ್ಲಿ ನವಜಾತ ಶಿಶುವಿಗೆ ಹಸುವಿನ ಅಥವಾ ಇತರ ಬಗೆಯ ಹಾಲನ್ನು ಜೀರ್ಣಿಸಿಕೊಳ್ಳಲು ಆಗುವುದಿಲ್ಲ. ಆಗ ಮಗುವಿಗೆ ದಾನಿಯ ಹಾಲು ಬೇಕಾಗುತ್ತದೆ. ತಾಯಿ ಇಲ್ಲದ ಮಗುವಿಗೂ ಬ್ಯಾಂಕ್‌ನಲ್ಲಿರುವ ಎದೆಹಾಲನ್ನು ಒದಗಿಸುವ ವ್ಯವಸ್ಥೆ ಮಾಡಲಾಗುತ್ತದೆ.

- **ಈವರೆಗೆ ನಿಮ್ಮಲ್ಲಿ ಎಷ್ಟು ಪ್ರಮಾಣದ ಹಾಲು ಪಡೆಯಲಾಗಿದೆ?**

ಶಿವಮೊಗ್ಗದಲ್ಲಿ 2024ರ ಮೇ ತಿಂಗಳಲ್ಲಿ ಎದೆಹಾಲಿನ ಕೇಂದ್ರ ಆರಂಭವಾಯಿತು. ಈವರೆಗೆ 250 ಲೀಟರ್ ಹಾಲನ್ನು ದಾನಿಗಳಿಂದ ಪಡೆಯಲಾಗಿದೆ. ಸುಮಾರು ಒಂದೂವರೆ ಸಾವಿರ ಮಕ್ಕಳಿಗೆ ಇದರಿಂದ ಅನುಕೂಲವಾಗಿದೆ.

ಅಮ್ಮ ಹೇಳ್ತಾಳೆ

ಹಿಂದೆ ನನಗೆ ಗ್ಯಾಸ್ಟ್ರಿಕ್ ಸಮಸ್ಯೆ ಇದ್ದಾಗಲೆಲ್ಲ ಅಮ್ಮ ಓಂಕಾಳು ಹಾಗೂ ಜೀರಿಗೆಯನ್ನು ಹದವಾಗಿ ಪುಡಿ ಮಾಡಿ, ನಂತರ ಅದನ್ನು ಬಿಸಿನೀರಿನಲ್ಲಿ ಹಾಕಿ ಕೊಡುತ್ತಿದ್ದಳು. ಕುಡಿದ ಸ್ವಲ್ಪ ಸಮಯದಲ್ಲಿ ದೇಹ ನಿರಾಳವಾಗುತ್ತಿತ್ತು. ಇದನ್ನು ಮುಂಜಾನೆ ಖಾಲಿ ಹೊಟ್ಟೆಯಲ್ಲಿ ಕುಡಿಯುವುದರಿಂದ ನಮ್ಮ ಜೀರ್ಣಶಕ್ತಿ ವೃದ್ಧಿಸುತ್ತದೆ. ಹೀಗಾಗಿ, ಈಗಲೂ ಇದನ್ನು ಕುಡಿಯುವ ಅಭ್ಯಾಸ ಇಟ್ಟುಕೊಂಡಿದ್ದೇನೆ.

–**ವಿನಯ್,** ಹೊನ್ನಾವರ

ಮುದ್ದೂ ಇರಲಿ ಗುದ್ದೂ ಇರಲಿ

ಮನೆಯಲ್ಲಿ ಮಕ್ಕಳು ಏನಾದರೂ ತಪ್ಪು ಮಾಡಿದಾಗ ಸಾಮಾನ್ಯವಾಗಿ ಪೋಷಕರು 'ನಿಮ್ಮ ಸ್ಕೂಲ್‌ನಲ್ಲಿ ಟೀಚರ್ ಇದನ್ನೇ ಏನು ಹೇಳಿ ಕೊಟ್ಟಿರೋದು' ಎಂದು ಕೇಳುತ್ತಾರೆ. ಇದು ಸ್ವಲ್ಪ ಸಹಜವೂ ಹೌದು! ಮಕ್ಕಳು ಶಾಲೆಯಲ್ಲಿ ಇರುವಾಗ ಅವರ ತಪ್ಪು ನಡವಳಿಕೆಗಳನ್ನು ತಿದ್ದಿ ಹೇಳುವ ಪ್ರಯತ್ನವನ್ನು ಶಿಕ್ಷಕರು ಮಾಡುತ್ತಲೇ ಇರುತ್ತಾರೆ. ನಂತರದ ಅವಧಿಯಲ್ಲಿ ಅವರನ್ನು ತಿದ್ದುವ ಕೆಲಸ ಮನೆಯಲ್ಲಿ ಪೋಷಕರಿಗೆ ಸಂಬಂಧಿಸಿರುತ್ತದೆ.

ನಾನಾಗ ಆರನೇ ತರಗತಿಯಲ್ಲಿದ್ದೆ. ನನ್ನ ಶಿಕ್ಷಕರು ನೀಡಿದ್ದ ಹೋಂವರ್ಕ್ ಬರೆಯಲು ಹೊಸ ನೋಟ್‌ಪುಸ್ತಕ ತರಬೇಕಾಗಿತ್ತು. ನನ್ನ ಹತ್ತಿರ ಇದ್ದ ಸ್ವಲ್ಪ ಹಣವನ್ನೇ ತೆಗೆದುಕೊಂಡು, ನಾವಿದ್ದ ಕ್ವಾರ್ಟರ್ಸ್ ಹತ್ತಿರದ ಅಂಗಡಿಗೆ ಹೋಗಿ, ಅಂಗಡಿಯ ಅಜ್ಜಿಯ ಮುಂದೆ ಹಣ ಇಟ್ಟು ಪುಸ್ತಕ ಕೇಳಿದೆ. ಆದರೆ ಸಾಲದೇ ಬಂದ ಇನ್ನೂ ಐದು ಪೈಸೆಗೆ ಏನು ಮಾಡುವುದು ಎಂದು ನಾನು ಮುಖ ಸಪ್ಪಗೆ ಮಾಡಿಕೊಂಡದ್ದನ್ನು ನೋಡಿ ಆ ಅಜ್ಜಿ 'ಪರವಾಗಿಲ್ಲ, ನಾಳೆ ತಂದುಕೊಡು' ಎಂದರು. ಅದಾಗಿ ಒಂದು ವಾರವೇ ಕಳೆಯಿತು. ಆದರೂ ನನಗೆ ಬೇಕಾಗಿದ್ದ ಐದು ಪೈಸೆಯನ್ನು ಅಮ್ಮನಿಂದ ಪಡೆದುಕೊಳ್ಳುವುದು ಅಷ್ಟೇನೂ ಸುಲಭದ ಕೆಲಸವಾಗಿರಲಿಲ್ಲ. ಕೊನೆಗೂ ಕಾಡಿ ಬೇಡಿ ಅಮ್ಮನಿಂದ ಹಣ ಪಡೆದೆ. ಕೂಡಲೇ ಅಜ್ಜಿಯ ಅಂಗಡಿಗೆ ಹೋಗಿ, ನಾನೇ ನೆನಪು ಮಾಡಿ ದುಡ್ಡು ಕೊಟ್ಟೆ. ಆ ನನ್ನ ಪ್ರಾಮಾಣಿಕ ನಡೆಯನ್ನು ನೋಡಿ ಅಜ್ಜಿ ನನ್ನನ್ನು ಕೊಂಡಾಡಿತು!

'ಬೆಳೆಯುವ ಸಿರಿ ಮೊಳಕೆಯಲ್ಲಿ' ಎಂಬಂತೆ ಈ ರೀತಿಯ ಸಣ್ಣಪುಟ್ಟ ಉತ್ತಮ ನಡವಳಿಕೆಗಳನ್ನು ನಾವು ನಮ್ಮ ಮಕ್ಕಳಿಗೆ ಚಿಕ್ಕಂದಿನಲ್ಲೇ ರೂಢಿಸಬೇಕಾಗುತ್ತದೆ. ಕೂಡುಕುಟುಂಬ ಇದ್ದ ಕಾಲದಲ್ಲಿ ತಾತ, ಅಜ್ಜಿ, ಅಪ್ಪ, ಅಮ್ಮ ಸೇರಿದಂತೆ ಮನೆಯ ಹಿರಿಯ ಸದಸ್ಯರು ಮಕ್ಕಳಿಗೆ ತಪ್ಪು–ಸರಿಗಳ ಬಗ್ಗೆ ಹೇಳಿಕೊಡುತ್ತಿದ್ದರು. ಆದರೆ ಈಗ ಕಾಲ ಬದಲಾಗಿದೆ. ಇರುವ ಒಬ್ಬನೇ ಮಗ ಅಥವಾ ಮಗಳನ್ನು ಮುದ್ದು ಮಾಡಿ ಬೆಳೆಸುವುದೇ ಹೆಚ್ಚು. ಆದರೆ ಅದರ ನಡುವೆಯೂ ಮಕ್ಕಳು ತಪ್ಪು ಮಾಡಿದಾಗ ಮುಲಾಜಿಲ್ಲದೇ ಅವರನ್ನು ತಿದ್ದುವ ಕೆಲಸವೂ ಅವಶ್ಯವಾಗಿ ಆಗಬೇಕು. ಹಿರಿಯರಿಗೆ, ಮನೆಗೆ ಬಂದ ಅತಿಥಿಗಳಿಗೆ ಹೇಗೆ ಗೌರವ ಕೊಡಬೇಕು ಎಂಬುದನ್ನು ತಿಳಿಸಬೇಕು. ಸಂಸ್ಕಾರ, ಸನ್ನಡತೆಯನ್ನು ಕಲಿಸಬೇಕು. ಇದು ಹೆತ್ತವರ ಕರ್ತವ್ಯವೂ ಹೌದು.

–**ಟಿ.ಎಸ್.ಪ್ರತಿಭಾ**



ಹೊಟ್ಟೆಗೆ ಬಟ್ಟೆ ಕಟ್ಟಿದರೆ ಕರಗುವುದೇ ಬೊಜ್ಜು?

- **ನನಗೆ ಸಿಸೇರಿಯನ್ ಹೆರಿಗೆಯಾಗಿ ಎರಡು ತಿಂಗಳಾಗಿದೆ. ಹೊಟ್ಟೆ ತುಂಬಾ ಮುಂದೆ ಇದ್ದು, ಹೆರಿಗೆ ಮಾಡಿಸಿದ ವೈದ್ಯರು ಹೊಟ್ಟೆಗೆ ಬಟ್ಟೆ ಸುತ್ತುವುದರಿಂದ ಅಥವಾ ಬೆಲ್ಟ್ ಹಾಕುವುದರಿಂದ ಪ್ರಯೋಜನವಿಲ್ಲ ಎಂದಿದ್ದಾರೆ. ಹಾಗಾಗಿ, ಬೆಲ್ಟ್ ಹಾಕುತ್ತಿಲ್ಲ. ನಮ್ಮ ಅಕ್ಕನಿಗೆ 5 ವರ್ಷದ ಮಗನಿದ್ದಾನೆ. ಅವಳಿಗೆ ಹೊಟ್ಟೆ ಮುಂದೆ ಇಲ್ಲ. ಹೆರಿಗೆಯಾಗಿ ಮೂರು ತಿಂಗಳವರೆಗೆ ಅವಳು ಹೊಟ್ಟೆಗೆ ಬಟ್ಟೆ ಸುತ್ತಿಕೊಳ್ಳುತ್ತಿದ್ದಳಂತೆ. ನನ್ನ ಹೊಟ್ಟೆ ಹೀಗೇ ಉಳಿದುಬಿಡುತ್ತದೇನೋ ಅನ್ನುವ ಚಿಂತೆ ಕಾಡುತ್ತಿದೆ. ಏನು ಮಾಡಲಿ?**

–**ವನಜಾ, ಬೆಂಗಳೂರು**

ಮೊದಲನೆಯದಾಗಿ, ಹೆರಿಗೆಯ ನಂತರ ಹೊಟ್ಟೆಗೆ ಸೀರೆ ಸುತ್ತುವುದು ಅಥವಾ ಬೆಲ್ಟ್ ಹಾಕುವುದರಿಂದ, ಎದ್ದು ಓಡಾಡುವಾಗ, ಎದೆ ಹಾಲುಣಿಸುವಾಗ, ಮಗುವನ್ನು ಆಟವಾಡಿಸುವಂತಹ ಸಂದರ್ಭಗಳಲ್ಲಿ ಬೆನ್ನಿಗೆ ಮತ್ತು ಹೊಟ್ಟೆಗೆ ಒಂದು ರೀತಿ ಬೆಂಬಲ (ಸಪೋರ್ಟ್) ಸಿಕ್ಕಂತೆ ಆಗುತ್ತದೆ ಅಷ್ಟೇ. ಅದರ ಹೊರತಾಗಿ ತೂಕ ಕಡಿಮೆ ಮಾಡುವ ಅಥವಾ ಹೊಟ್ಟೆ ಕರಗಿಸುವ ವಿಧಾನ ಅದಲ್ಲ. ಸಿಸೇರಿಯನ್ ಹೆರಿಗೆ ಆದಾಗ, ಎರಡು ದಿನಕ್ಕೆಲ್ಲಾ ಗಾಯದ ಮೇಲ್ಭಾಗದಲ್ಲಿ ಸಡಿಲವಾಗಿ ಹತ್ತಿಯ ಸೀರೆ ಸುತ್ತಬಹುದು. ನಂತರ ಹೆರಿಗೆಯಾಗಿ ತಿಂಗಳಾದ ಮೇಲೆ ಸೂಕ್ತ ಬೆಲ್ಟನ್ನು ಮೂರ್ನಾಲ್ಕು ತಿಂಗಳವರೆಗೆ ಧರಿಸುತ್ತಾ ಬರಬಹುದು. ರಾತ್ರಿ ಮಲಗುವಾಗ, ಊಟ, ತಿಂಡಿ ಮಾಡುವಾಗ ಬೆಲ್ಟ್ ಧರಿಸುವುದು ಬೇಡ.



ಸ್ಪಂದನ
ಡಾ. ವೀಣಾ ಎಸ್. ಭಟ್

ಇವೆಲ್ಲಾ ವಿಧಾನಗಳಿಂದ ಹೊಟ್ಟೆಯ ತೂಕ ಕಡಿಮೆಯಾಗುವುದಿಲ್ಲ. ಗರ್ಭಧಾರಣೆಯಲ್ಲಿ ಹೆಚ್ಚುವರಿಯಾಗಿ ಕೊಬ್ಬು ಶೇಖರಣೆಯಾಗಿರುತ್ತದೆ. ಮಗುವಿಗೆ 6 ತಿಂಗಳು ಬರೀ ಎದೆಹಾಲು ಕುಡಿಸುವುದರಿಂದ ಇಡೀ ಶರೀರದ ಕೊಬ್ಬು ಕರಗಿ ಹೊಟ್ಟೆಯ ಬೊಜ್ಜೂ ಕರಗುತ್ತದೆಯೇ ವಿನಾ ಹೊಟ್ಟೆಯ ಬೊಜ್ಜನ್ನಷ್ಟೇ ಅದರಿಂದ ಕರಗಿಸಲು ಸಾಧ್ಯವಿಲ್ಲ. ಹೆಚ್ಚಿನ ಮಹಿಳೆಯರಿಗೆ ಹೊಟ್ಟೆಯ ಮಾಂಸಖಂಡಗಳ ದೃಢತೆ ಸರಿಯಾಗಿ ಇರದೇ ಇದ್ದಾಗ, ಹೊಟ್ಟೆಯ ಸ್ನಾಯುಗಳ ಬಲವನ್ನು ಕಾಯ್ದುಕೊಳ್ಳದೇ ಇದ್ದಾಗ ಹೆರಿಗೆಯ ನಂತರ, ವಯಸ್ಸಾಗುತ್ತಿದ್ದ ಹಾಗೆ ಹೊಟ್ಟೆ ಮುಂದೆ ಬರುತ್ತದೆ. ಸಿಸೇರಿಯನ್ ಹೆರಿಗೆ ಆಗಿದ್ದರೂ 6 ವಾರಗಳ ನಂತರ, ದೀರ್ಘವಾಗಿ ಉಸಿರನ್ನು ತೆಗೆದುಕೊಂಡು ಹೊಟ್ಟೆಯ ಸ್ನಾಯುಗಳನ್ನು ಒಳಗೆ ಎಳೆದು ಕೊಳ್ಳುತ್ತಾ ಇರಬೇಕು, ಮಂಡಿಯನ್ನು ಮಡಚದೆ, ನಿಧಾನವಾಗಿ ಎರಡೂ ಕಾಲುಗಳನ್ನು 30 ಡಿಗ್ರಿ ಮತ್ತು 60 ಡಿಗ್ರಿಗೆ ಎತ್ತುತ್ತಾ ಬರಬೇಕು. ಹೀಗೆ ಹೊಟ್ಟೆಯ ಸ್ನಾಯುಗಳ ದೃಢತೆಯನ್ನು ಕಾಪಾಡಿಕೊಂಡರೆ ಉದರ ಭಾಗದಲ್ಲಿ ಬೊಜ್ಜು ಹೆಚ್ಚು ಶೇಖರಣೆಯಾಗುವುದಿಲ್ಲ. ಇದರ ಜೊತೆಗೆ ಅಧಿಕ ಕೊಬ್ಬಿನ ಆಹಾರ ಹಾಗೂ ಜಂಕ್‌ಫುಡ್ ಸೇವನೆ ತ್ಯಜಿಸುವುದು, ಹೆಚ್ಚು ಹೆಚ್ಚು ಹಸಿರುಸೊಪ್ಪು, ತರಕಾರಿ, ಬೇಳೆಕಾಳುಗಳ ಸೇವನೆಯಿಂದಲೂ ತೂಕವನ್ನು ನಿಯಂತ್ರಿಸಿಕೊಳ್ಳಬಹುದು. ಬಾಣಂತನವೆಂದು ಅತಿಯಾಗಿ ವಿಶ್ರಾಂತಿ ತೆಗೆದುಕೊಳ್ಳದೆ, ನಿಮ್ಮ ಹಾಗೂ ನಿಮ್ಮ ಮಗುವಿನ ಕೆಲಸಗಳನ್ನು ನೀವೇ ಮಾಡಿಕೊಳ್ಳಿ. ಇದರಿಂದ ನಿಮ್ಮ ಟಮ್ಮಿ ಟ್ರಿಮ್ ಆಗಿರುತ್ತದೆ.

ಮನೆಯಲ್ಲೇ ಹೋಟೆಲ್ ರುಚಿಯ ಭಾಗ್ಯ

ರಸಾಸ್ವಾದ

ಹೋಟೆಲ್ ಸ್ಟೈಲ್ ಬೋಂಡಾ ಸೂಪ್, ವೆಜ್ ಕುರ್ಮಾ, ಢಾಬಾ ಸ್ಟೈಲ್ ದಾಲ್ ಫ್ರೈ, ಮಶ್ರೂಮ್ ಗ್ರೇವಿ, ರೆಸ್ಟೋರೆಂಟ್ ಶೈಲಿಯ ಪನ್ನೀರ್ ಬಟರ್ ಮಸಾಲ, ಫಿಶ್ ಫ್ರೈ, ಬೇಕರಿ ಸ್ಟೈಲ್ ಮ್ಯಾಂಗೋ ಕೇಕ್, ಸ್ಯಾಂಡ್‌ವಿಚ್... ಕೇಳುತ್ತಿದ್ದಂತೆಯೇ ಬಾಯಲ್ಲಿ ನೀರೂರುತ್ತದೆ ಅಲ್ಲವೇ?

ಮನೆಯಲ್ಲಿ ಎಷ್ಟೇ ರುಚಿಕಟ್ಟಾಗಿ ಅಡುಗೆ ಮಾಡಿದರೂ ಹೋಟೆಲ್, ರೆಸ್ಟೋರೆಂಟ್‌ನ ಖಾದ್ಯಗಳ ಸ್ವಾದವೇ ಬೇರೆ. ಹಾಗಾಗಿ, ವಾರಾಂತ್ಯ ಬಂದರೆ ಸಾಕು ಹೋಟೆಲ್, ಬೇಕರಿಗಳತ್ತಲೇ ಮನಸ್ಸು ಎಳೆಯುತ್ತದೆ. ಅಂಗಡಿಯಿಂದ ತಂದ ಗರಂ ಮಸಾಲ ಬೆರೆಸಿ, ಸಾಸ್ ಸುರಿದು, ಅದರ ಜೊತೆಗೆ ಇನ್ನೂ ಏನೇನೆಲ್ಲಾ ಸೇರಿಸಿ ಅಡುಗೆ ಸಿದ್ಧಪಡಿಸಿದರೂ ಹೋಟೆಲ್‌ನ ಆ ರುಚಿ ಹತ್ತದು ಎಂದು ಕೊರಗುವವರೇ ಹೆಚ್ಚು. ಇಂತಹ ಅನುಭವ ನಿಮಗೂ ಆಗಿದೆಯೇ? ಹಾಗಿದ್ದರೆ ಯೂಟ್ಯೂಬ್‌ನ 'ಭಾಗ್ಯ ಟಿ.ವಿ' ಚಾನೆಲ್ ನೋಡಿ.

ಹೋಟೆಲ್ ಶೈಲಿಯ ಖಾದ್ಯ ತಯಾರಿಯ ಗುಟ್ಟನ್ನು ರಟ್ಟು ಮಾಡುತ್ತಾ ತಮ್ಮ ಅಡುಗೆ 'ಅರಮನೆ'ಗೆ ಆಹ್ವಾನವೀಯುವ ಈ ಚಾನೆಲ್‌ನ ಒಡೆಯರಾದ ಭಾಗ್ಯಾ ಮತ್ತು ಗಿರೀಶ್ ದಂಪತಿ, ಈಗ ಬಹುತೇಕರ 'ಅಡುಗೆ'ಮನೆಯ ಮಾತಾಗಿದ್ದಾರೆ. ಬಾಣಲೆಗೆ ಹಾಕಿದ್ದನ್ನು ಎಷ್ಟು ನಿಮಿಷ ಬೇಯಿಸಬೇಕು, ಯಾವ ಹದದಲ್ಲಿ ಹುರಿಯಬೇಕು, ಈರುಳ್ಳಿ ಹಾಕಿದ ಬಳಿಕ ಟೊಮೆಟೊವನ್ನು ಯಾವ ಸಮಯಕ್ಕೆ ಸೇರಿಸಬೇಕು, ಸೊಪ್ಪನ್ನು ಹೇಗೆ ಬೇಯಿಸಬೇಕು, ಯಾವ ತರಕಾರಿಯನ್ನು ಎಷ್ಟು ಹೊತ್ತು ಬೇಯಿಸಬೇಕು... ಹೀಗೆ ಸಣ್ಣ ಸಣ್ಣ ಸಂಗತಿಗಳೂ ಅಡುಗೆ ತಯಾರಿಗೆ ಮುಖ್ಯವಾಗಿರುತ್ತವೆ. ಇವೆಲ್ಲವುಗಳ ನಾಡಿಮಿಡಿತ ಅರಿತಿರುವ ಭಾಗ್ಯಾ ಕೈಚಳಕದಲ್ಲಿ ಹದವಾದ ಪಾಕ ತಯಾರಾಗುತ್ತದೆ. ಅಡುಗೆಯ ಗಂಧ–ಗಾಳಿ ಗೊತ್ತಿರದವರು, ಹೊಸದಾಗಿ ಅಡುಗೆ ಮಾಡುವವರ ಕೈಯಲ್ಲೂ ಪರ್ಫೆಕ್ಟ್ ಪಾಕ ತಯಾರಾಗುವಂತೆ ಪಾಠ ಹೇಳಿಕೊಡುತ್ತಾರೆ ಗಿರೀಶ್. ಈ ಇಬ್ಬರ ಸಾಂಗತ್ಯದಲ್ಲಿ ಹೊರಹೊಮ್ಮುವ ರಸಪಾಕವು ವೀಕ್ಷಕರ ಬಾಯಲ್ಲಿ ನೀರೂರಿಸುತ್ತದೆ. ಬಹುತೇಕ ಅಡುಗೆ ಯೂಟ್ಯೂಬ್ ಚಾನೆಲ್‌ಗಳಲ್ಲಿ ಅಡುಗೆ ಮಾಡುವವರೇ ಪಾಠ ಹೇಳುವ 'ಪಾತ್ರ'ವನ್ನೂ ನಿರ್ವಹಿಸುತ್ತಾರೆ. ಇಲ್ಲಿ ಹಾಗಲ್ಲ. ಭಾಗ್ಯಾ ಅವರ ಕೈಯಲ್ಲಿ ರಸಪಾಕದ ತಯಾರಿ ನಡೆದರೆ, ಅದಕ್ಕೆ ತಕ್ಕಂತೆ ಗಿರೀಶ್ ಅವರ ಮಧುರ ಧ್ವನಿ ಜತೆಯಾಗುತ್ತದೆ. ಇವೆರಡರ ಮಿಳಿತದಿಂದ ಕರ್ಣಕ್ಕೂ ಹಿತ, ಜಿಹ್ವೆಗೂ ರುಚಿ ಹತ್ತಿಸುವ ದಂಪತಿ, ಈ ಚಾನೆಲ್‌ನಿಂದಲೇ ಬದುಕು ಕಟ್ಟಿಕೊಂಡಿದ್ದಾರೆ.

2018ರಲ್ಲಿ ಅವರು ಚಾನೆಲ್ ಶುರುಮಾಡಿದರೂ, ಅದು ಮುನ್ನೆಲೆಗೆ ಬಂದದ್ದು ಕೋವಿಡ್ ಲಾಕ್‌ಡೌನ್ ಸಮಯದಲ್ಲಿ. ಎಲ್ಲೆಡೆಯೂ ಹೋಟೆಲ್, ಬೇಕರಿ, ರೆಸ್ಟೋರೆಂಟ್‌ಗಳು ಬಾಗಿಲು ಮುಚ್ಚಿದ್ದಾಗ ಎಲ್ಲರ ಚಿತ್ತ ಅಡುಗೆ ಮನೆಯತ್ತ ಹೊರಳಿತು. ಭಾಗ್ಯಾ ಅವರ ರುಚಿಕಟ್ಟಾದ ಅಡುಗೆ ಪಾಠ ಆಗ ಬಹುತೇಕರ ಅಡುಗೆ ಮನೆಯಲ್ಲಿ ಪ್ರಯೋಗಕ್ಕೆ ಇಳಿಯಿತು. ಹೋಟೆಲ್‌ನ ರುಚಿ ನಾಲಿಗೆಗೆ ಹತ್ತಿತು. 13 ಲಕ್ಷಕ್ಕೂ ಹೆಚ್ಚು ವೀಕ್ಷಕವಲಯವನ್ನು ಹೊಂದಿರುವ ಇವರ ಚಾನೆಲ್‌ನ ರೆಸಿಪಿಗಳು ಈವರೆಗೆ 28 ಕೋಟಿ ವೀಕ್ಷಣೆ ಪಡೆದಿವೆ. ಅವರು ಹೋಟೆಲ್, ರೆಸ್ಟೋರೆಂಟ್ ಶೈಲಿಯ ಅಡುಗೆಗಳನ್ನು ಕಲಿತದ್ದು ಹೋಟೆಲ್‌ನಿಂದಲೇ. ಗಿರೀಶ್ ಅವರ ತಾಯಿ ಪುಟ್ಟದೊಂದು ಹೋಟೆಲ್ ನಡೆಸುತ್ತಿದ್ದರು. ಅವರ ಸಹಾಯಕ್ಕೆಂದು ಭಾಗ್ಯಾ ಹಾಗೂ ಗಿರೀಶ್ ಅಲ್ಲಿಗೆ ಹೋಗುತ್ತಿದ್ದರು. ಆಗ ತಾನೇ ಯೂಟ್ಯೂಬ್ ಚಾನೆಲ್ ಆರಂಭಿಸಿದ್ದ ದಂಪತಿ, ಹೋಟೆಲ್‌ನಲ್ಲಿ ದೊಡ್ಡ ಪ್ರಮಾಣದಲ್ಲಿ ತಯಾರಿಸುತ್ತಿದ್ದ ಅಡುಗೆಯನ್ನು ಮನೆಗೆ ಬಂದು ಸಣ್ಣ ಪ್ರಮಾಣದಲ್ಲಿ ಪ್ರಯೋಗ ಮಾಡಿ ಯೂಟ್ಯೂಬ್ ಅಂಗಳದಲ್ಲಿ ಹಂಚಿಕೊಳ್ಳತೊಡಗಿದರು. ಹೀಗೆ ಆ ರೆಸಿಪಿಗಳು ಬಹುತೇಕರ ಮೆಚ್ಚುಗೆಗೆ ಪಾತ್ರವಾಗತೊಡಗಿದವು.

–**ಸುಮಾ ಬಿ.**

ರುಚಿಯ ರಹಸ್ಯ ಅರಿಯೋಣ

ಯಾವುದೇ ಖಾದ್ಯ ತಯಾರಿಸುವಾಗಲೂ ಒಂದೇ ಬಗೆಯ ಪದಾರ್ಥಗಳನ್ನು ವಿವಿಧ ವಿಧಾನಗಳಲ್ಲಿ ಬಳಸಿದರೆ ರುಚಿ ಬದಲಾಗುತ್ತಾ ಹೋಗುತ್ತದೆ. ಇದರ ಸೀಕ್ರೆಟ್ ಗೊತ್ತಿದ್ದರೆ ಎಂತಹ ರೆಸಿಪಿಯನ್ನೂ ಸುಲಭದಲ್ಲಿ ತಯಾರಿಸಬಹುದು. ಉದಾಹರಣೆಗೆ, ಒಂದು ಬಾತ್ ಅಥವಾ ಸಾಂಬಾರ್ ತಯಾರಿಸಬೇಕೆಂದರೆ ಮಸಾಲೆಯನ್ನು ಹಸಿಯಾಗಿ ಬಳಸಿದರೆ ಒಂದು ಬಗೆಯ ರುಚಿ ಕೊಡುತ್ತದೆ, ಅದನ್ನು ಹುರಿದು ಬಳಸಿದರೆ ಮತ್ತೊಂದು ರುಚಿ, ಎಣ್ಣೆಯಲ್ಲಿ ಹುರಿದರೆ ಮಗದೊಂದು ರುಚಿ, ಪೌಡರ್ ಮಾಡಿ ಬಳಸಿದರೆ ಇನ್ನೊಂದು ಬಗೆಯ ರುಚಿ ಬರುತ್ತದೆ. ಒಂದೇ ಬಗೆಯ ಪದಾರ್ಥಗಳನ್ನು ಬಳಸಿ ನಾಲ್ಕು ರುಚಿಯಲ್ಲಿ ಅಡುಗೆ ತಯಾರಿಸಬಹುದು. ಆ ಕೌಶಲ ಅರಿತರೆ ಅಡುಗೆ ಸುಲಭ.

–**ಭಾಗ್ಯಾ**

ಭಾಗ್ಯಾ, ಗಿರೀಶ್ ದಂಪತಿ

ಪನ್ನೀರ್ ತವಾ ಫ್ರೈ

ಮೀನಿನಲ್ಲಿ ತವಾ ಫ್ರೈ ಕೇಳಿದ್ದೇವೆ. ಇದೇನು ಪನ್ನೀರ್ ತವಾ ಫ್ರೈ? ಮಾಂಸಾಹಾರಿಗಳಿಗೆ ತವಾ ಫ್ರೈ ಎಂದೊಡನೆ ಬಾಯಲ್ಲಿ ನೀರೂರುವುದುಂಟು, ಸಸ್ಯಾಹಾರಿಗಳೂ ಪನ್ನೀರ್‌ನಲ್ಲಿ ತವಾ ಫ್ರೈ ಮಾಡಿ ಸವಿದು ಜಿಹ್ವಾ ಚಾಪಲ್ಯ ತಣಿಸಿಕೊಳ್ಳಬಹುದು ಎನ್ನುತ್ತಾರೆ ಭಾಗ್ಯಾ ಮತ್ತು ಗಿರೀಶ್.

ಏನೇನು ಬೇಕು?: ಪನ್ನೀರ್ ಮ್ಯಾರಿನೇಟ್ ಮಾಡಿಕೊಳ್ಳಲು– ಖಾರದಪುಡಿ, ಕಾರ್ನ್‌ಫ್ಲೋರ್, ಗರಂ ಮಸಾಲ, ದನಿಯಾ ಪುಡಿ ತಲಾ ಒಂದು ಚಮಚ, ಅರ್ಧ ಚಮಚ ಜೀರಿಗೆ ಪುಡಿ, ಸ್ವಲ್ಪ ಅರಸಿನ ಪುಡಿ, ರುಚಿಗೆ ತಕ್ಕಷ್ಟು ಉಪ್ಪು, ಶುಂಠಿ–ಬೆಳ್ಳುಳ್ಳಿ ಪೇಸ್ಟ್ ಮತ್ತು ಮೊಸರು ತಲಾ ಒಂದು ಚಮಚ, 3 ಚಮಚ ಟೊಮೆಟೊ ಕೆಚಪ್, ಸ್ವಲ್ಪ ದೊಡ್ಡದಾಗಿ ಕತ್ತರಿಸಿಕೊಂಡ 250 ಗ್ರಾಂ ಪನ್ನೀರ್ ತುಂಡು.

ಹೀಗೆ ಮಾಡಿ: ಮೇಲೆ ಹೇಳಿರುವ ಎಲ್ಲ ಮಸಾಲೆಯನ್ನು ಚೆನ್ನಾಗಿ ಮಿಕ್ಸ್ ಮಾಡಿ ಪೇಸ್ಟ್ ಮಾಡಿಕೊಳ್ಳಬೇಕು. ಅದನ್ನು ಪನ್ನೀರ್ ತುಂಡುಗಳಿಗೆ ಸವರಿ 15ರಿಂದ 20 ನಿಮಿಷದವರೆಗೂ ಮ್ಯಾರಿನೇಟ್ ಆಗಲು ಬಿಡಬೇಕು. ತವಾವನ್ನು ಬಿಸಿ ಮಾಡಲು ಇಟ್ಟು, ಒಂದೂವರೆ ಚಮಚ ತುಪ್ಪ ಹಾಕಿ, ಅದು ಕರಗಿದ ಬಳಿಕ, ಮ್ಯಾರಿನೇಟ್ ಆದ ಪನ್ನೀರ್ ಅನ್ನು ತವಾದಲ್ಲಿ ಇಡಬೇಕು. ಎರಡೂ ಬದಿಯನ್ನು ಕಡಿಮೆ ಉರಿಯಲ್ಲಿ ಫ್ರೈ ಮಾಡಿಕೊಳ್ಳಬೇಕು. ಈಗ ರುಚಿಯಾದ ಪನ್ನೀರ್ ತವಾ ಫ್ರೈ ಸವಿಯಲು ಸಿದ್ಧ. ಜೊತೆಗೆ, ಮ್ಯಾರಿನೇಟ್ ಆದ ಪನ್ನೀರನ್ನು ಫ್ರಿಜ್‌ನಲ್ಲಿ ಇಟ್ಟು, ಬೇಕೆಂದಾಗ ತವಾದಲ್ಲಿ ಫ್ರೈ ಮಾಡಿಕೊಳ್ಳಬಹುದು.

ಭೂಮಿಕಾಗೆ ಬರಹಗಳನ್ನು ಕಳುಹಿಸಬೇಕಾದ ವಿಳಾಸ
ಮಹಿಳೆ, ಮಕ್ಕಳು, ಕುಟುಂಬ, ಸಂಬಂಧ, ಬಾಂಧವ್ಯ, ಭಾವನಾತ್ಮಕ ಬೆಸುಗೆಯಂತಹ ಸಂಗತಿಗಳ ಬಗ್ಗೆ ನೀವು ಲೇಖನ, ಲಹರಿ, ಪುಟ್ಟ ಪುಟ್ಟ ಬರಹಗಳನ್ನು 'ಭೂಮಿಕಾ'ಗೆ ಬರೆಯಬಹುದು. ಆರೋಗ್ಯಕರ ಜೀವನಶೈಲಿಗೆ ಪೂರಕವಾಗುವ ಟಿಪ್ಸ್‌ಗಳನ್ನು ಹಂಚಿಕೊಳ್ಳಬಹುದು. ನಮ್ಮ ಇ–ಮೇಲ್ ಐ.ಡಿ– bhoomika@prajavani.co.in

29 ಎ.ಸಿ.ಗಳ ವಿರುದ್ಧ ದೂರು

ಸ್ವಾತಂತ್ರ್ಯ ಯೋಧರಿಗೆ ಸಿಗದ ಗೌರವಧನ: ಉಪ ಲೋಕಾಯುಕ್ತರ ಆದೇಶ

ಪ್ರಜಾವಾಣಿ ವಾರ್ತೆ

ವರದಿ ಪರಿಣಾಮ

ಮಂಡ್ಯ: ಸ್ವಾತಂತ್ರ್ಯ ಯೋಧರಿಗೆ 'ಮಾಸಿಕ ಗೌರವಧನ' ಮತ್ತು ಅವರ ಅವಲಂಬಿತರಿಗೆ 'ಮಾಸಾಶನ' ಸಮರ್ಪಕವಾಗಿ ಪಾವತಿಯಾಗದ ಕಾರಣ, ಕರ್ನಾಟಕ ಲೋಕಾಯುಕ್ತವು ರಾಜ್ಯದ 16 ಜಿಲ್ಲೆಗಳ ವ್ಯಾಪ್ತಿಯ 29 ಉಪ ವಿಭಾಗಾಧಿಕಾರಿಗಳ ವಿರುದ್ಧ ಸ್ವಯಂ ಪ್ರೇರಿತ ಪ್ರಕರಣ ದಾಖಲಿಸಿಕೊಂಡಿದೆ.

ಬಾಗಲಕೋಟೆ, ಜಮಖಂಡಿ, ದೊಡ್ಡಬಳ್ಳಾಪುರ, ಬೆಳಗಾವಿ, ಬೈಲಹೊಂಗಲ, ಚಿಕ್ಕೋಡಿ, ಬಳ್ಳಾರಿ, ಹರಪನಹಳ್ಳಿ, ಹೊಸಪೇಟೆ, ಬೀದರ್, ಬಸವಕಲ್ಯಾಣ, ಮಂಗಳೂರು, ಪುತ್ತೂರು, ದಾವಣಗೆರೆ, ಹೊನ್ನಾಳಿ, ಹಾವೇರಿ, ಸವಣೂರು, ಕಲಬುರಗಿ, ಸೇಡಂ, ಕೋಲಾರ, ಕೊಪ್ಪಳ, ಮಂಡ್ಯ, ಪಾಂಡವಪುರ, ರಾಯಚೂರು, ಲಿಂಗಸುಗೂರು, ತುಮಕೂರು, ತಿಪಟೂರು, ಮಧುಗಿರಿ ಹಾಗೂ ಉಡುಪಿ ಉಪವಿಭಾಗಗಳ ಎ.ಸಿ.ಗಳ ವಿರುದ್ಧ ಪ್ರಕರಣ ದಾಖಲಿಸುವಂತೆ ಉಪಲೋಕಾಯುಕ್ತ–2 ನ್ಯಾಯಮೂರ್ತಿ ಬಿ.ವೀರಪ್ಪ ಆದೇಶಿಸಿದ್ದಾರೆ.

ನ್ಯೂನತೆ ನಿವಾರಿಸಿ, ಕೈಗೊಂಡ ಕ್ರಮಗಳ ಬಗ್ಗೆ ಪೂರಕ ದಾಖಲೆಗಳೊಂದಿಗೆ ಪಾಲನಾ ವರದಿಯನ್ನು ನವೆಂಬರ್ 26ರೊಳಗೆ ಖುದ್ದಾಗಿ ಹಾಜರಾಗಿ ಸಲ್ಲಿಸುವಂತೆ ಸೂಚಿಸಲಾಗಿದೆ. ಈ ಬಗ್ಗೆ ಮೇಲ್ವಿಚಾರಣೆ ವಹಿಸುವಂತೆ ಆಯಾ ಜಿಲ್ಲಾಧಿಕಾರಿಗಳಿಗೆ ಸೂಚಿಸಲಾಗಿದೆ.

'ಪ್ರಜಾವಾಣಿ'ಯಲ್ಲಿ ಪ್ರಕಟಗೊಂಡಿದ್ದ ವರದಿ

ಆ.18ರ 'ಪ್ರಜಾವಾಣಿ' ಸಂಚಿಕೆಯಲ್ಲಿ ಪ್ರಕಟವಾಗಿದ್ದ 'ಸ್ವಾತಂತ್ರ್ಯ ಯೋಧರಿಗೆ ಸಿಗದ ಗೌರವ ಧನ' ವಿಶೇಷ ವರದಿಯನ್ನು ಆದೇಶದಲ್ಲಿ ಪ್ರಸ್ತಾಪಿಸಲಾಗಿದೆ. 'ದೇಶಸೇವೆ ಮಾಡಿದವರ ಕುಟುಂಬಸ್ಥರನ್ನು ಹೀನಾಯ ಸ್ಥಿತಿಯಲ್ಲಿ ನಡೆಸಿಕೊಳ್ಳುತ್ತಿರುವುದು ಶೋಚನೀಯ ಹಾಗೂ ಅವರ ತ್ಯಾಗಕ್ಕೆ ನಾವು ನೀಡುವ ಕೊಡುಗೆ ಇದೆಯೇ?' ಎಂದೂ ಕೇಳಲಾಗಿದೆ.

'ಸುಪ್ರೀಂ ಮತ್ತು ಹೈಕೋರ್ಟ್ ಆದೇಶವಿದ್ದರೂ, ಸರ್ಕಾರದಿಂದ ಸಿಗಬೇಕಾದ ಸೌಲಭ್ಯಗಳನ್ನು ನೀಡದೇ ನಿರ್ಲಕ್ಷ್ಯ ತೋರುತ್ತಿರುವ ಅಧಿಕಾರಿಗಳ ವರ್ತನೆ ಲೋಕಾಯುಕ್ತ ಕಾಯ್ದೆಯಡಿ ಭ್ರಷ್ಟಾಚಾರ, ದುರಾಡಳಿತ ವ್ಯಾಪ್ತಿಗೆ ಬರಲಿದೆ' ಎಂದು ಉಲ್ಲೇಖಿಸಲಾಗಿದೆ.

ಕಳಪೆ ಬೀಜ: ಪರಿಹಾರಕ್ಕೆ ಆದೇಶ

ಯಾದಗಿರಿ: ಕಳಪೆ ತೊಗರಿ ಬೀಜದಿಂದ ಬೆಳೆನಷ್ಟ ಅನುಭವಿಸಿದ ರೈತನಿಗೆ ₹99 ಸಾವಿರ ಪರಿಹಾರ ನೀಡುವಂತೆ ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗವು ರಾಜ್ಯ ಬೀಜ ನಿಗಮದ ಭೀಮರಾಯನಗುಡಿಯ ಇಬ್ಬರು ಅಧಿಕಾರಿಗಳಿಗೆ ಆದೇಶಿಸಿದೆ.

ವಡಗೇರಾ ತಾಲ್ಲೂಕಿನ ಗುಲಸರಂ ಗ್ರಾಮದ ರೈತ ಚನ್ನಾರೆಡ್ಡಿ ಬಸವರಾಜ ಈ ಬಗ್ಗೆ ದೂರು ನೀಡಿದ್ದರು. ಅವರು ನಿಗಮದ ಭೀಮರಾಯನಗುಡಿ ಕೇಂದ್ರದಿಂದ ₹7,200 ಕೊಟ್ಟು 60 ಕೆ.ಜಿ. ತೊಗರಿ ಬೀಜ ಖರೀದಿಸಿದ್ದರು. ಬಿತ್ತನೆ ವೇಳೆ ಬೀಜಗಳಿಗೆ ಹುಳು ಹತ್ತಿ ಪೌಡರ್ ಆಗಿದ್ದರ ಬಗ್ಗೆ ಅಧಿಕಾರಿಗಳ ಗಮನಕ್ಕೆ ತಂದಿದ್ದರು. ಆಗ 'ಬೀಜಗಳು ಸರಿಯಾಗಿವೆ' ಎಂದು ಅಧಿಕಾರಿಗಳು ಪ್ರತಿಕ್ರಿಯಿಸಿದ್ದರು.

ವಿಚಾರಣೆ ನಡೆಸಿದ ಆಯೋಗದ ಪ್ರಭಾರ ಅಧ್ಯಕ್ಷ ಮಾಲತಿ ಗುರಣ್ಣ, ಉದ್ದೇಶಪೂರ್ವಕವಾಗಿ ಕಳಪೆ ಬೀಜ ನೀಡಲಾಗಿದೆ. ಪ್ರಕರಣದ ಖರ್ಚು ₹5 ಸಾವಿರ, ಮಾನಸಿಕ ಹಿಂಸೆಗೆ ₹10 ಸಾವಿರ ಸೇರಿ ಒಟ್ಟು ₹99 ಸಾವಿರ ಪರಿಹಾರ ನೀಡಬೇಕು ಎಂದು ಅಧಿಕಾರಿ ಅಶೋಕ ವಾಗ್ಮೋರೆ, ಮ್ಯಾನೇಜರ್‌ಗೆ ಆದೇಶಿಸಿದ್ದಾರೆ.

ಆದೇಶದ ದಿನದಿಂದ 45 ದಿನಗಳಲ್ಲಿ ಹಣ ನೀಡಲು ತಪ್ಪಿದ್ದಲ್ಲಿ ಶೇ 8ರಷ್ಟು ಬಡ್ಡಿ ನೀಡುವಂತೆ ಸೂಚಿಸಲಾಗಿದೆ.

ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ

ನಂ.4, 100 ಅಡಿ ರಿಂಗ್ ರಸ್ತೆ, ಬನಶಂಕರಿ 3ನೇ ಹಂತ, ಬೆಂಗಳೂರು – 560085. ದೂರವಾಣಿ ಸಂಖ್ಯೆ: 080–26980100.
E-mail: dpi.dsert-ka@nic.in Website: http://dsert.kar.nic.in

ಸಂಖ್ಯೆ: E-66367/DSERT/EDST/STDM/1/2025-ETC ದಿನಾಂಕ: 19-09-2025

ಟೆಂಡರ್ ಪ್ರಕಟಣೆ
(ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ನಿರ್ದೇಶಕರು, ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ, ಬೆಂಗಳೂರು ಇವರಿಂದ **E-TENDER FOR PROVIDING THE TECHNICAL SUPPORT SERVICE FOR OPERATING STUDIOs AT DSERT** ಸಂಬಂಧ ಅರ್ಹ ಬಿಡ್‌ದಾರರಿಂದ ಇ–ಟೆಂಡರ್ (ಟೆಂಡರ್ ಸಂಖ್ಯೆ: **DPI/2025-26/SE0378**) ಕರೆಯಲಾಗಿದೆ. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: **03.10.2025 ರಂದು ಸಂಜೆ 5.30 ಗಂಟೆಯವರೆಗೆ.** ಹೆಚ್ಚಿನ ಮಾಹಿತಿಗಾಗಿ ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್: **https://kppp.karnataka.gov.in** ನ್ನು ನೋಡಬಹುದು.

ಸಹಿ/– ನಿರ್ದೇಶಕರು
ಡಿ.ಎಸ್.ಇ.ಆರ್.ಟಿ., ಬೆಂಗಳೂರು.

ವಾಸಾಸಂಇ/ವಾ.ಪ್ರ/2897/ಎಎಎ/2025–26

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ,

ಲೋಕೋಪಯೋಗಿ ಇಲಾಖೆ, ಚಿಕ್ಕಮಗಳೂರು ವಿಭಾಗ, ಚಿಕ್ಕಮಗಳೂರು.

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: 16/2025–26 ದಿನಾಂಕ: 17.09.2025

ಅಲ್ಪಾವಧಿ ಟೆಂಡರ್ ಆಹ್ವಾನ ಪ್ರಕಟಣೆ

ಮೇಲ್ಕಂಡ ಟೆಂಡರ್ ಪ್ರಕಟಣೆಯಲ್ಲಿ ಚಿಕ್ಕಮಗಳೂರು ಜಿಲ್ಲೆ ಲೋಕೋಪಯೋಗಿ ಇಲಾಖೆ ಉಪವಿಭಾಗಗಳಿಗೆ ಒಳಪಡುವ ಲೆಕ್ಕ ಶೀರ್ಷಿಕೆ: 5054–03–337–0–16–154 ರಾಜ್ಯ ಹೆದ್ದಾರಿಗಳ ಸೇತುವೆ ಸುಧಾರಣೆಗಳು, 8443 ಠೇವಣಿ ವಂತಿಕೆ: 3054–04–337–1–10–200 ಜಿಲ್ಲಾ ಮುಖ್ಯರಸ್ತೆಗಳ ನಿರ್ವಹಣೆ, 4059–80–051–0–32–383 ನ್ಯಾಯಾಲಯ ಕಟ್ಟಡಗಳು ಹಾಗೂ ನ್ಯಾಯಾಲಯ ಅಧಿಕಾರಿಗಳ ವಸತಿ ಸಮುಚ್ಚಯ ನಿರ್ಮಾಣ, 3054–03–337–0–05–200 ರಾಜ್ಯ ಹೆದ್ದಾರಿಗಳ ರಸ್ತೆ ನಿರ್ವಹಣೆ ಅಡಿಯಲ್ಲಿನ ಒಟ್ಟು 10 ಕಾಮಗಾರಿಗಳಿಗೆ ಕೆಪಿಪಿ ಪೋರ್ಟಲ್ ಮೂಲಕ ಅರ್ಹ ಗುತ್ತಿಗೆದಾರರಿಂದ ಟೆಂಡರ್ ಆಹ್ವಾನಿಸಲಾಗಿದೆ. ಕಾಮಗಾರಿಗಳನ್ನು ವಹಿಸಿಕೊಳ್ಳುವ ಅಥವಾ ನಿರ್ವಹಿಸಿರುವ ಸಾಮರ್ಥ್ಯದ ಬಗ್ಗೆ (Standard Tender Document KW -1,2,3 & 4 ರಂತೆ) ವಿವರಗಳನ್ನು ಲಗತ್ತಿಸತಕ್ಕದ್ದು, ಗುತ್ತಿಗೆದಾರರಿಗೆ ಅಧಿನಿಯಮ 3ರಲ್ಲಿ ನಮೂದಿಸಿರುವ ಕನಿಷ್ಠ ಅರ್ಹತೆಗಳಿದ್ದರೆ ಮಾತ್ರ ಗುತ್ತಿಗೆಯನ್ನು ವಹಿಸಬಹುದಾಗಿರುತ್ತದೆ. ಕನಿಷ್ಠ ಅಂದಾಜು ಮೊತ್ತ ರೂ. 8.50 ಲಕ್ಷಗಳು ಹಾಗೂ ಗರಿಷ್ಠ ಅಂದಾಜು ಮೊತ್ತ ರೂ. 350.00 ಲಕ್ಷಗಳು ಆಗಿರುತ್ತವೆ. ಕೆಪಿಪಿ ಪೋರ್ಟಲ್ ಟೆಂಡರ್ ಸಲ್ಲಿಸಬೇಕಾಗಿರುವ 10 ಕಾಮಗಾರಿಗಳಿಗೆ (ಇ.ಸಂಖ್ಯೆ: 27263 (2ನೇ ಕರೆ), 24633 (2ನೇ ಕರೆ), 24618 (2ನೇ ಕರೆ), 24600 (2ನೇ ಕರೆ), 26799 (2ನೇ ಕರೆ), 24599 (2ನೇ ಕರೆ) ದಿನಾಂಕ: 24.09.2025, ಇ.ಸಂಖ್ಯೆ: 24602 (2ನೇ ಕರೆ), ದಿನಾಂಕ: 26.09.2025, ಇ.ಸಂಖ್ಯೆ: 24867, ದಿನಾಂಕ: 03.10.2025, ಇ.ಸಂಖ್ಯೆ: 24018, ದಿನಾಂಕ: 04.10.2025, ಇಂ.ಸಂಖ್ಯೆ: 27815 ದಿನಾಂಕ: 08.10.2025ರಂದು) ಸಂಜೆ 04:30 ಗಂಟೆಯೊಳಗೆ ಟೆಂಡರ್ ಸಲ್ಲಿಸಬೇಕು, ಹೆಚ್ಚಿನ ವಿವರಗಳಿಗೆ ಕಛೇರಿ ವೇಳೆಯಲ್ಲಿ ವಿಷಯ ನಿರ್ವಾಹಕರನ್ನು ಸಂಪರ್ಕಿಸಿ ತಿಳಿಯಬಹುದಾಗಿದೆ.

ಸಹಿ/– ಕಾರ್ಯಪಾಲಕ ಇಂಜಿನಿಯರ್,
ಲೋಕೋಪಯೋಗಿ ಇಲಾಖೆ, ಚಿಕ್ಕಮಗಳೂರು ವಿಭಾಗ, ಚಿಕ್ಕಮಗಳೂರು

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಕೋಲಾರ

ಕೆ.ಪಿ.ಪಿ ಟೆಂಡರ್ ಪ್ರಕಟಣೆ ಸಂಖ್ಯೆ: 08/ 2025–26, ದಿನಾಂಕ: 09.09.2025

2022–23ನೇ ಸಾಲಿನಲ್ಲಿ ಜಲ ಜೀವನ್ ಮಿಷನ್ ಯೋಜನೆಯಡಿ ಕೋಲಾರ ಜಿಲ್ಲಾ ವ್ಯಾಪ್ತಿಗೆ ಅನುಮೋದನೆಯಾದ (ಮನೆಮನೆಗೆ ನಳ ಸಂಪರ್ಕ ಕಲ್ಪಿಸುವ) ಕುಡಿಯುವ ನೀರು ಸರಬರಾಜು ಯೋಜನೆ ಕಾಮಗಾರಿಗಳಿಗೆ ಕೆಪಿಪಿಪಿ ಪೋರ್ಟಲ್ ಮುಖಾಂತರ ಟೆಂಡರ್ ಪ್ರಕಟಣೆಯನ್ನು ಕರ್ನಾಟಕ ರಾಜ್ಯಪಾಲರ ಪರವಾಗಿ ನೊಂದಾಯಿತ ಅರ್ಹ ಹಾಗೂ ಕೆಪಿಪಿಪಿನಲ್ಲಿ ನೊಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ ಇಲಾಖಾ ನಿಯಮಾವಳಿಯ ಮೇರೆಗೆ ಐಟಂವಾರು ಟೆಂಡರ್‌ಗಳನ್ನು ಕೆ.ಡಬ್ಲ್ಯೂ ನಮೂನೆಯಲ್ಲಿ ಆಹ್ವಾನಿಸಲಾಗಿದೆ. ಭರ್ತಿ ಮಾಡಿದ ಟೆಂಡರ್‌ಗಳನ್ನು ಕೆಪಿಪಿಪಿ ಪೋರ್ಟಲ್ ಮುಖಾಂತರ ಸಲ್ಲಿಸುವ ಕಡೆಯ **ದಿನಾಂಕ: 29.09.2025 ರಂದು 17.30 ಗಂಟೆಯವರೆಗೆ ಇರುತ್ತದೆ.** ಹೆಚ್ಚಿನ ವಿವರಗಳಿಗೆ ಇ–ಪ್ರಕ್ಯೂರ್‌ಮೆಂಟ್ ವೆಬ್‌ಸೈಟ್– **https://kppp.karnataka.gov.in** ವೆಬ್‌ಸೈಟ್‌ನಲ್ಲಿ ಪಡೆಯಬಹುದಾಗಿರುತ್ತದೆ.

ಸಹಿ/–
ಕಾರ್ಯಪಾಲಕ ಅಭಿಯಂತರರು,
ಗ್ರಾ.ಕು.ನೀ. ಮತ್ತು ನೈ ವಿಭಾಗ, ಕೋಲಾರ.

ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ:286/ಕೆಎಸ್‌ಎಂಸಿಎ/2025–26

ಖಾದಿ ಮತ್ತು ಗ್ರಾಮೋದ್ಯೋಗ ಆಯೋಗ

ಅತಿಸಣ್ಣ, ಸಣ್ಣ ಮತ್ತು ಮಧ್ಯಮ ಉದ್ದಿಮೆಗಳ ಮಂತ್ರಾಲಯ, ಭಾರತ ಸರ್ಕಾರ
ಮಲ್ಟಿ ಡಿಸಿಪ್ಲಿನರಿ ಟ್ರೈನಿಂಗ್ ಸೆಂಟರ್
ವಿಜಿನಾಪುರ, ಎಫ್‌ಸಿಐ ಗೋಡೌನ್ ಹತ್ತಿರ, ದೂರವಾಣಿನಗರ, ಬೆಂಗಳೂರು–560 016.

ವ್ಯಕ್ತಿಗಳು/ವೃತ್ತಿಪರರು/ಸಂಸ್ಥೆಗಳಿಂದ ಅರ್ಜಿ ಆಹ್ವಾನ

ಅಗತ್ಯವಿರುವ ವ್ಯಕ್ತಿಗಳಿಗೆ ಸ್ವ–ಹಣಕಾಸು ಕೌಶಲ್ಯ ಅಭಿವೃದ್ಧಿ ತರಬೇತಿಯನ್ನು ಒದಗಿಸಲು ಕೌಶಲ್ಯ ಅಭಿವೃದ್ಧಿ ತರಬೇತಿ ಕಾರ್ಯಕ್ರಮದಲ್ಲಿ ಕೆಲಸ ಮಾಡುತ್ತಿರುವ ವಿವಿಧ ವ್ಯಕ್ತಿಗಳು/ವೃತ್ತಿಪರರು/ಸಂಸ್ಥೆಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ವಿವಿಧ ಕೌಶಲ್ಯ ಅಭಿವೃದ್ಧಿ ಕೋರ್ಸ್‌ಗಳನ್ನು ನಡೆಸಲು ಬೆಂಗಳೂರಿನ ಕೆವಿಐಸಿಯ ಎಂಡಿಟಿಸಿ ಆಯ್ಕೆಯ ನಂತರ ಅವರನ್ನು ವೃತ್ತಿಪರ ತರಬೇತಿ ಸಹವರ್ತಿಗಳಾಗಿ (PTAs) ಸೇರಿಸಲಾಗುತ್ತದೆ. ಅನುಮೋದಿತ ತರಬೇತಿ ಕಾರ್ಯಕ್ರಮದ ವಿವರಗಳನ್ನು ಈ ಕಚೇರಿಯಿಂದ ಪಡೆಯಬಹುದು.

ಸ್ಥಳೀಯ ಅಗತ್ಯತೆ ಮತ್ತು ಮಾರುಕಟ್ಟೆ ಪ್ರವೃತ್ತಿ ಆಧಾರಿತ ತರಬೇತಿ ಕೋರ್ಸ್‌ಗಳನ್ನು ಹೆಚ್ಚಿನ ಉದ್ಯೋಗಾವಕಾಶ ಹೊಂದಿರುವ ಇತರ ಯಾವುದೇ ತರಬೇತಿ ಕೋರ್ಸ್‌ಗಳನ್ನು ಸಹ ಸಕ್ಷಮ ಪ್ರಾಧಿಕಾರದ ಅನುಮೋದನೆಗೆ ಒಳಪಟ್ಟು ಸಲ್ಲಿಸಬಹುದಾಗಿದೆ. ಆಸಕ್ತ ವ್ಯಕ್ತಿಗಳು/ವೃತ್ತಿಪರರು/ಸಂಸ್ಥೆಗಳು ತಮ್ಮ ವಿವರಗಳನ್ನು ನಿಗದಿತ ನಮೂನೆಯಲ್ಲಿ ಸಲ್ಲಿಸಬಹುದು. ಹೆಚ್ಚಿನ ವಿವರಗಳಿಗಾಗಿ, 080–2565 0285 ಅಥವಾ 8105788431 ಅಥವಾ 8299377420 ಅಥವಾ ಇಮೇಲ್: kvicbang@gmail.com ಅನ್ನು ಸಂಪರ್ಕಿಸಬಹುದು. ವಿವರವಾದ ನಿಬಂಧನೆ ಮತ್ತು ಷರತ್ತುಗಳನ್ನು ಎಂಪ್ಯಾನೆಲ್‌ಮೆಂಟ್ ಸಮಯದಲ್ಲಿ ತಿಳಿಸಲಾಗುತ್ತದೆ. ಯಾವುದೇ ಸೂಚನೆಯಿಲ್ಲದೇ ಅರ್ಜಿಗಳನ್ನು ಆಯ್ಕೆ ಮಾಡುವುದು ಅಥವಾ ತಿರಸ್ಕರಿಸುವ ಅಧಿಕಾರವನ್ನು ಕೆವಿಐಸಿ, ಎಂಡಿಟಿಸಿ, ಬೆಂಗಳೂರು, ಕಾಯ್ದಿರಿಸಿಕೊಂಡಿದೆ.

ಸಹಿ/–
ಉಪ ನಿರ್ದೇಶಕರು / ಪ್ರಾಂಶುಪಾಲರು

Infosys®
Navigate your next
Infosys Limited

Corporate Identification Number (CIN): L85110KA1981PLC013115
Regd. Office: Electronics City, Hosur Road, Bengaluru - 560 100.
Phone: 91 80 2852 0261, Fax: 91 80 2852 0362
investors@infosys.com, www.infosys.com

NOTICE

Notice is hereby given that a meeting of the Board of Directors of the Company will be held on Wednesday and Thursday, October 15 and 16, 2025 inter alia to:

1. Approve and take on record the audited consolidated financial results of the Company and its subsidiaries as per Indian Accounting Standards (INDAS) for the quarter and half year ending September 30, 2025;
2. Approve and take on record the audited standalone financial results of the Company as per INDAS for the quarter and half year ending September 30, 2025;
3. Approve and take on record the audited financial statements of the Company and its subsidiaries as per INDAS and IFRS for the quarter and half year ending September 30, 2025 and
4. Consider declaration of interim dividend, if any.

The financial results will be presented to the Board of Directors on October 16, 2025 for their approval.

The details will be made available on the website of the Company- www.infosys.com

For **Infosys Limited**
Sd/-
A.G.S. Manikantha
Company Secretary
Membership No. A21918

September 19, 2025
Bengaluru, India

ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮ

(ಕರ್ನಾಟಕ ಸರ್ಕಾರದ ಅಧೀನಕೊಳ್ಳಪಟ್ಟಿದೆ)
3ನೇ ಮಹಡಿ, ಕೌಶಲ್ಯ ಭವನ, ಬನ್ನೇರುಘಟ್ಟ ಮುಖ್ಯ ರಸ್ತೆ, ಡೈರಿ ಸರ್ಕಲ್, ಬೆಂಗಳೂರು–560029. ದೂ.ಸಂಖ್ಯೆ : 080–29522222. e-mail ID: skilldev.2017@gmail.com
ಕೌಶಲ್ಯ ಕರ್ನಾಟಕ

No. KSDC/ATRK/CR-05/2025-26 ದಿನಾಂಕ: 19.09.2025

ಆಸಕ್ತಿ ವ್ಯಕ್ತಪಡಿಸುವಿಕೆ (Expression of Interest)

ಕರ್ನಾಟಕ ಕೌಶಲ್ಯಾಭಿವೃದ್ಧಿ ನಿಗಮ (KSDC)ವು "ಪಾರಂಪರಿಕ ಹಾಗೂ ಪ್ರಾದೇಶಿಕ ಉದ್ಯೋಗ ಪಾತ್ರಗಳ ಕೌಶಲ್ಯ ತರಬೇತಿ" ನಡೆಸಲು ಆಸಕ್ತ, ಅನುಭವ ಹೊಂದಿರುವ ಮತ್ತು ಅರ್ಹ ಸರ್ಕಾರಿ ಸಂಸ್ಥೆಗಳು ಅಥವಾ ಕರ್ನಾಟಕದಲ್ಲಿ ಕಂಪನಿ, ಪಾಲುದಾರಿಕೆ, ಎನ್‌ಜಿಒ (NGO), ಸ್ವ–ಸಹಾಯ ಸಂಘ (SHG), ಸಹಕಾರ ಸಂಘ, ಸಮಾಜ, ಟ್ರಸ್ಟ್ ಅಥವಾ ವೃತ್ತಿಪರ ತರಬೇತಿ ಸಂಸ್ಥೆಗಳಿಂದ ಆಸಕ್ತಿ ವ್ಯಕ್ತಪಡಿಸುವಿಕೆ (Expression of Interest – EOI) ಆಹ್ವಾನಿಸಿದೆ. ದಾಖಲೆ ಸಂಖ್ಯೆ: KSDC/2025-26/PREQUAL_TENDER_NUMBER_4. EOI ದಾಖಲೆಗಳನ್ನು 20.09.2025 ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದ್ದು, ಪ್ರಸ್ತಾವನೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ 06.10.2025 ಸಂಜೆ 5.30 ಗಂಟೆಯೊಳಗೆ. ಆಸಕ್ತರು ತಮ್ಮ ಪ್ರಸ್ತಾವನೆಗಳನ್ನು ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (KPPP) (www.kppp.karnataka.gov.in) ಮೂಲಕ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ಅಥವಾ ಸ್ಪಷ್ಟೀಕರಣಕ್ಕಾಗಿ +91 9240214000 / +91 9240214001 ಸಹಾಯವಾಣಿ ಸಂಖ್ಯೆಗೆ ಕರೆಮಾಡಬಹುದು ಅಥವಾ support@eprochelpdesk.com ಗೆ ಇ–ಮೇಲ್ ಮಾಡಬಹುದು.

ಸಹಿ/–
ಕಾರ್ಯನಿರ್ವಾಹಕ ನಿರ್ದೇಶಕರು–02
ಕೆ.ಎಸ್.ಡಿ.ಸಿ., ಬೆಂಗಳೂರು.

ಡಿಐಪಿಆರ್/ಸಿಪಿ/2898/ಸಿಎಲ್/2025–26

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ

ರಾಜ್ಯ ಯುವ ಕೇಂದ್ರ, ನೃಪತುಂಗ ರಸ್ತೆ, ಬೆಂಗಳೂರು – 560001.
ದೂರವಾಣಿ: 080–22215601, 22211246 ಫ್ಯಾಕ್ಸ್: 080–22215602

ಸಂಖ್ಯೆ: ಡಿವೈಇಎಸ್/ತಾಂಶಾ/ಕ್ರಿಯೋ/28/2025–26 ದಿನಾಂಕ: 19–09–2025

ಮರು ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಉಪ–ನಿರ್ದೇಶಕರು (ಆಡಳಿತ), ಇವರು ಈ ಕೆಳಗೆ ತಿಳಿಸಿರುವ ಕಾಮಗಾರಿಗೆ ಅರ್ಹ ಗುತ್ತಿಗೆದಾರರಿಂದ ಟೆಂಡರನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ವಿವರ	ಒಂದು ಕಾಮಗಾರಿಗೆ ಮೀಸಲಿಟ್ಟ ಮೊತ್ತ	ಇ.ಎಂ.ಡಿ ಮೊತ್ತ (ರೂ. ಗಳಲ್ಲಿ)
1	ಮೈಸೂರು ಹಾಗೂ ಬೆಂಗಳೂರು ಗ್ರಾಮಾಂತರದಲ್ಲಿ (ದೊಡ್ಡಬಳ್ಳಾಪುರ) ಸೈಕ್ಲಿಂಗ್ ವೆಲೋಡ್ರೋಮ್ ನಿರ್ಮಿಸುವ ಕಾಮಗಾರಿಗೆ ತಾಂತ್ರಿಕ ನೆರವು ನೀಡಲು ಯೋಜನಾ ಸಮಾಲೋಚಕರನ್ನು ಒದಗಿಸುವ ಕುರಿತು. **(ಕರೆ–2)**	**1000.00 ಲಕ್ಷಗಳು**	**1,00,000/-**

ಆಸಕ್ತ ಟೆಂಡರ್‌ದಾರರು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್: **https://kppp.karnataka.gov.in** ಮೂಲಕ ತಮ್ಮ ಬಿಡ್‌ಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಬಹುದು. ಟೆಂಡರ್ ದಾಖಲೆಗಳನ್ನು ಉಚಿತವಾಗಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ವೀಕ್ಷಿಸಬಹುದು.

1) ಬಿಡ್‌ನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: **26–09–2025 ರಂದು ಸಮಯ: 16.30 ಗಂಟೆವರೆಗೆ.** 2) ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: **29–09–2025 ರಂದು ಸಮಯ: 11.00 ಗಂಟೆಗೆ.**

ಹೆಚ್ಚಿನ ಮಾಹಿತಿಗಾಗಿ ಮೇಲ್ಕಾಣಿಸಿದ ವಿಳಾಸ ಸಂಪರ್ಕಿಸಬಹುದು.

ಸಹಿ/– ಉಪ ನಿರ್ದೇಶಕರು (ಆಡಳಿತ) ಹಾಗೂ
ಟೆಂಡರ್ ಆಹ್ವಾನಿಸುವ ಪ್ರಾಧಿಕಾರ
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ

ವಾಸಾಸಂಇ/ವಾ.ಪ್ರ/2889/ಅಡ್ವರ್ಟೋ/2025–26

ಕೆ.ಎಂ.ಎಫ್ ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಮಹಾಮಂಡಳ ನಿಯಮಿತ

ಕಹಾಮ ಸಂಕೀರ್ಣ ಡಾ: ಎಂ. ಹೆಚ್. ಮರೀಗೌಡ ರಸ್ತೆ ಬೆಂಗಳೂರು–560 029
ಫೋನ್: 26096832/26096910 ಫ್ಯಾಕ್ಸ್: 080–25536105 E-mail: purchase@kmf.coop

ಸಂಖ್ಯೆ.: ಕಹಾಮ/ಖರೀದಿ/ ಟೆಂಡರ್–820/2025–26 ದಿನಾಂಕ 19.09.2025

ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

ಕರ್ನಾಟಕ ಸಹಕಾರ ಹಾಲು ಮಹಾಮಂಡಳ, ಬೆಂಗಳೂರು ಈ ಕೆಳಕಂಡ ವಿವರಗಳನ್ವಯ ಸೇವಾದಾರರನ್ನು ಗುರುತಿಸಲು ಆಸಕ್ತಿಯುಳ್ಳ ಸಂಸ್ಥೆದಾರರಿಂದ ಟೆಂಡರ್‌ನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಸಂಸ್ಥೆದಾರರು ವಿವರಗಳನ್ನು ಅಂತರ್‌ಜಾಲದ ಮೂಲಕ ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ ವಿಳಾಸ http://kppp.karnataka.gov.in ಗೆ ಭೇಟಿ ನೀಡಿ ಪಡೆಯಬಹುದಾಗಿದೆ.

Sl. No.	Item Description	Per Month Approx. Qty.	EMD (Rs.)
1	Manufacturing and supply of Bread & Bun under Nandini brand including storage, Marketing, distribution till retailers for a period of two years.	As mentioned in tender document	17,23,000/-

1) ಟೆಂಡರ್ ಪ್ರಾರಂಭವಾಗುವ ದಿನಾಂಕ : 19.09.2025 ರಿಂದ. 2) ಟೆಂಡರ್ ಪೂರ್ವಭಾವಿ ಸಭೆ ದಿನಾಂಕ : 03.10.2025 ಬೆಳಿಗ್ಗೆ 11.00 ಗಂಟೆಗೆ. 3) ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : 18.10.2025 ಸಂಜೆ 5.30 ಗಂಟೆಯ ಒಳಗಾಗಿ. 4) ತಾಂತ್ರಿಕ ಟೆಂಡರ್ ತೆರೆಯುವ ದಿನಾಂಕ: 21.10.2025 ಬೆಳಿಗ್ಗೆ 11.00 ಗಂಟೆಗೆ. 5) ವಾಣಿಜ್ಯ ಟೆಂಡರ್ ತೆರೆಯುವ ದಿನಾಂಕ: ತಾಂತ್ರಿಕ ದಾಖಲಾತಿಗಳ ಪರಿಶೀಲನೆಯ ನಂತರ. ಇನ್ನಿತರ ವಿವರಗಳನ್ನು ಟೆಂಡರ್ ದಾಖಲಾತಿಯಲ್ಲಿ ನೋಡಬಹುದು.

ಕರ್ನಾಟಕ ಹಾಲು ಮಹಾಮಂಡಳ ಪರವಾಗಿ
ಸಹಿ/– ನಿರ್ದೇಶಕರು (ಖರೀದಿ)

Government of Karnataka
HAVERI INSTITUTE OF MEDICAL SCIENCES, DEVAGIRI-YALLAPURA, HAVERI-581110

(Autonomous Institution of Government of Karnataka)
ಹಾವೇರಿ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ದೇವಗಿರಿ–ಯಲ್ಲಾಪುರ, ಹಾವೇರಿ-581110
Website: https://himshaveri.karnataka.gov.in E-mail: tenders.hims.dme@gmail.com

ಸಂ: ಹಿಮ್ಸ್/ಟೆಂಡರ್/10/2025–26, ದಿನಾಂಕ: 18/09/2025

ಮರು ಅಲ್ಪಾವಧಿ ಇ–ಟೆಂಡರ ಪ್ರಕಟಣೆ

ವಿಷಯ : **2025–26 ನೇ ಸಾಲಿಗಾಗಿ ಜಿಲ್ಲಾ ಆಸ್ಪತ್ರೆ ಹಾವೇರಿಯ ಒಳರೋಗಿ ವಿಭಾಗಕ್ಕೆ ಅವಶ್ಯವಿರುವ ಪಥ್ಯಾಹಾರ ಪೂರೈಸಿಕೊಳ್ಳುವ ಸಂಬಂಧ ಟೆಂಡರ್ ಕರೆಯುವ ಬಗ್ಗೆ.**

ಜಿಲ್ಲಾ ಆಸ್ಪತ್ರೆ ಹಾವೇರಿಯಲ್ಲಿ 2025–26 ನೇ ಸಾಲಿಗಾಗಿ **ಒಳರೋಗಿ ವಿಭಾಗಕ್ಕೆ ಅವಶ್ಯವಿರುವ ಪಥ್ಯಾಹಾರ ಪೂರೈಸಿಕೊಳ್ಳಲು** ಟೆಂಡರ್ ಮೂಲಕ ಅರ್ಹ ಸಂಸ್ಥೆಗಳ ಮುಖಾಂತರ ಪಡೆಯಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆಯ (KTPP Act) ಅಧಿನಿಯಮ 1999 ಮತ್ತು ನಿಯಮಗಳು 2000 ರ ಪ್ರಕಾರ ದ್ವಿ–ಲಕೋಟೆ ಪದ್ಧತಿಯಲ್ಲಿ ಇ–ಪ್ರೋಕ್ಯೂರ್‌ಮೆಂಟ್ (https://kppp.karnataka.gov.in) Portal ಮೂಲಕ ಟೆಂಡರ ಕರೆಯಲಾಗಿದೆ.

1	Tender Number	DME/2025-26/SE0537/CALL-2
2	Tender Uploading Date	18/09/2025
3	Pre-Bid Meeting	22/09/2025 At :10.30 AM
4	EMD Amount	Rs. 1,50,000.00
5	Approximate Tender Value	Rs. 100.00 Lakhs
6	Last Date and time to upload tender	25/09/2025 4.30 PM
7	Technical Bid Opening Date and time	Date: 26/09/2025 04.30 PM
8	Date of Document verification	29/09/2025 At: HIMS Haveri 10:30 AM
9	Financial Bid Opening Date and time	It will be intimated
10	Officer In-charge and contact details	Dean and Director, HIMS Haveri. 08375-200015/8660990320

ಸಹಿ/– ನಿರ್ದೇಶಕರು,
ಹಾವೇರಿ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ಹಾವೇರಿ.

Dipr/hvr/404/2025-2026

ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ
ಕಾಮಗಾರಿ ವಿಭಾಗ ಬೆಳಗಾವಿ.

ಸಂ.: ವಾಕರಸಾ/ಕಾನಿಅ/ಬೆವಿ/ನಕ್ಷೆ/382/2025–26 ದಿನಾಂಕ: 18–09–2025

ಕೆ.ಪಿ.ಪಿ.ಪಿ ಪೋರ್ಟಲ್ ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂ: 10/2025–26
(Through Gok Karnataka Public Procurement Portal www.kppp.karnataka.gov.in)

ಈ ಕೆಳಕಂಡ ಕಾಮಗಾರಿಗಳಿಗೆ ಕರ್ನಾಟಕ / ಕೇಂದ್ರ ಲೋಕೋಪಯೋಗಿ ಇಲಾಖೆ, ಎಂ.ಇ.ಎಸ್ ಗಳಲ್ಲಿ ನೊಂದಾಯಿತ ಅರ್ಹ ಸಿವಿಲ್ ಗುತ್ತಿಗೆದಾರರಿಂದ Gok Karnataka Public Procurement Portal ಮುಖಾಂತರ ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ಶೆಡ್ಯೂಲ್‌ನ ವಿವರಗಳಿಗಾಗಿ **www.kppp.karnataka.gov.in** ವೆಬ್‌ಸೈಟ್ ಲಾಗ್‌ಆನ್ ಮಾಡಿ ಪಡೆದುಕೊಳ್ಳಬಹುದು.

1) ಟೆಂಡರ್ ಪ್ರಕಟಣೆ ಸಂಖ್ಯೆ: **10**. ಕಾಮಗಾರಿಯ ಹೆಸರು: **ಬಾಗಲಕೋಟೆ ವಿಭಾಗದ ಬಾಗಲಕೋಟೆ ನವನಗರ, ಜಮಖಂಡಿ ಹಾಗೂ ರಬಕವಿ ಬಸ್ ನಿಲ್ದಾಣಗಳ ಆವರಣಕ್ಕೆ ಡಾಂಬರೀಕರಣ ನಿರ್ಮಿಸುವುದು.** ಟೆಂಡರ್ ಆಧಾರ: **ದ್ವಿ ಲಕೋಟೆ.** ಟೆಂಡರಿಗಿಟ್ಟ ಮೊತ್ತ: **ರೂ. 252=65 ಲಕ್ಷಗಳು.** ಮುಂಗಡ ಠೇವಣಿ ಮೊತ್ತ: **ರೂ.3,78,975–00.** ಗುತ್ತಿಗೆದಾರರ ದರ್ಜೆ: **ದರ್ಜೆ–2 ಮತ್ತು ಮೇಲ್ಪಟ್ಟು.** ಭರ್ತಿಮಾಡಿದ ಟೆಂಡರನ್ನು ಸಲ್ಲಿಸಲು ಕೊನೆಯ ದಿನಾಂಕ: **09–10–2025.**

ಇನ್ನುಳಿದ ವಿವರಗಳನ್ನು ವಿವರವಾದ ಟೆಂಡರ್ ಪ್ರಕಟಣೆಯಲ್ಲಿರುವಂತೆ ಖಚಿತಪಡಿಸಿಕೊಂಡು ಟೆಂಡರ್‌ನಲ್ಲಿ ಭಾಗವಹಿಸತಕ್ಕದ್ದು. ಹೆಚ್ಚಿನ ವಿವರಗಳನ್ನು ಈ ಕಛೇರಿಯಿಂದ ಪಡೆಯಬಹುದಾಗಿದೆ ಮತ್ತು ಈ ಕಛೇರಿ ದೂರವಾಣಿ ಸಂ. **0831–2451475** ಗೆ ಸಂಪರ್ಕಿಸ ಬಹುದಾಗಿದೆ ಹಾಗೂ ಸಹಾಯವಾಣಿ **(help desk) : +91-8046010000 and +91-8068948777** ಸಂಪರ್ಕಿಸಬಹುದಾಗಿದೆ. ಯಾವುದೇ ತಿದ್ದುಪಡಿ ಮತ್ತು ದಿನಾಂಕಗಳಲ್ಲಿನ ಮುಂದೂಡಿಕೆಗಳಿದ್ದಲ್ಲಿ Gok Karnataka Public Procurement Portal ನಲ್ಲಿ ಮಾತ್ರ ಪ್ರಕಟಿಸಲಾಗುವುದು.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು,
ವಾಕರಸಾ ಸಂಸ್ಥೆ, ಕಾಮಗಾರಿ ವಿಭಾಗ,
ಬೆಳಗಾವಿ.

ವಾಸಾಸಂಇ/ಬೆಳಗಾವಿ/1056/ಅಡ್ವರ್ಟೋ/2025–26

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಅಭಿಯಂತರರು,
ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ ಕೊಪ್ಪಳ

eepredkpl@gmail.com,

ಸಂ.ಪಂರಾಇಂ/ ವಿಕೊ/ತಾ.ಶಾ/ಸ.ಇಂ/ಟೆಂಡರ/2025–26/1508 ದಿನಾಂಕ: 18–09–2025

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕ ರಾಜ್ಯಪಾಲರ ಪರವಾಗಿ ಸಾರ್ವಜನಿಕ ಸಂಗಹಣೆಯಲ್ಲಿ ಪಾರದರ್ಶಕತೆ ಆದೇಶ 1999–2000 ರ ಪ್ರಕಾರ ಪಾರದರ್ಶಕತೆ ಆಕ್ಟ್ 2000 ನಿಯಮದಂತೆ ಸ್ಟ್ಯಾಂಡರ್ಡ ಬಿಡ್ ಡಾಕ್ಯೂಮೆಂಟ್ KW-1, 2, 3 ಮತ್ತು 4ರ ಪ್ರಕಾರ ನಿಯಮ ಗಳನ್ವಯ ಪಂಚಾಯತ್ ರಾಜ್ ಇಂಜಿನೀಯರಿಂಗ್/ ಪಿ.ಡಬ್ಲ್ಯೂ.ಡಿ ಇಲಾಖೆಯಲ್ಲಿ ನೊಂದಾಯಿಸಿದ ಅರ್ಹಗುತ್ತಿಗೆದಾರರಿಂದ "kppp.karnataka.gov.in ಪೋರ್ಟಲ್" ಮುಖಾಂತರ ಈ ಕೆಳಗೆ ನಮೂದಿಸಿದ ಅನುಬಂಧದಲ್ಲಿಯ 2024–25 ನೇ ಸಾಲಿನ 5054–ನೆರೆ ಪ್ರವಾಹ/5054-FLOOD ,2024-25ಮೈನಾರಟಿ, ಇನ್ನಿತರೆ ಅನುದಾನ ಯೋಜನೆಯಡಿ ಕೊಪ್ಪಳ ಜಿಲ್ಲೆಯ ವಿವಧ ತಾಲೂಕಿನ ಕಾಮಗಾರಿಗಳಿಗೆ ಟೆಂಡರ್ ಆಹ್ವಾನಿಸಲಾಗಿದೆ, ಅರ್ಹ ಗುತ್ತಿಗೆದಾರರು "kppp.karnataka.gov.in ಪೋರ್ಟಲ್" ಮುಖಾಂತರ ಭಾಗವಹಿಸಬಹುದು. ಹಾಗೂ ಇನ್ನಿತರೆ ಕಾಮಗಾರಿಗಳಿಗೆ ಟೆಂಡರ ಆಹ್ವಾನಿಸಲಾಗಿದೆ.

1) ಕನಕಗಿರಿ ತಾಲೂಕ ನೀರಲೂಟಿ ಕ್ರಾಸನಿಂದ ಮಲ್ಲಿಗೆವಾಡ ಕ್ರಾಸ್ ವರೆಗೆ ರಸ್ತೆ ಅಭಿವೃದ್ಧಿ ಹಾಗೂ ಡಾಂಬರೀಕರಣ VR-196-INDENT-16968 ಟಂಡರಗಿಟ್ಟ ಮೊತ್ತ ರೂ120.70 ಲಕ್ಷ ಇಎಂಡಿ–182000.00–ಕಾಲಾವಧಿ–6 ತಿಂಗಳು 2) ಕಾರಟಗಿ ತಾಲೂಕಿನ ಬೇವಿನಾಳ ಗ್ರಾಮದಿಂದ ಮೈಲಾಪೂರ ಹಳೇ ರಸ್ತೆವರೆಗೆ ರಸ್ತೆ ಅಭಿವೃದ್ಧಿ ಕಾಮಗಾರಿ. VR-236-INDENT -16967- ಟಂಡರಗಿಟ್ಟ ಮೊತ್ತರೂ120.80 ಲಕ್ಷ ಇಎಂಡಿ–181500.00–ಕಾಲಾವಧಿ–6 ತಿಂಗಳು 3) ಕನಕಗಿರಿ ತಾಲೂಕ ಕೆ.ಮಲ್ಲಾಪೂರ ಗ್ರಾಮದಿಂದ ಗುಡದೂರು ಗ್ರಾಮದವರೆಗೆ ರಸ್ತೆ ಅಭಿವೃದ್ಧಿ ಕಾಮಗಾರಿ. VR-204- INDENT -16966- ಟಂಡರಗಿಟ್ಟ ಮೊತ್ತ ರೂ 161.02ಲಕ್ಷ ಇಎಂಡಿ–242000.00–ಕಾಲಾವಧಿ–6 ತಿಂಗಳು 4) ಕನಕಗಿರಿ ತಾಲೂಕಿನ ಬಂಕಾಪೂರದಿಂದ ಮುಸಲಾಪೂರ ಮುಖ್ಯ ರಸ್ತೆವರೆಗೆ ರಸ್ತೆ ನಿರ್ಮಾಣ. VR-127- INDENT -17616- ಟಂಡರಗಿಟ್ಟ ಮೊತ್ತ ರೂ.225.00 ಲಕ್ಷ ಇಎಂಡಿ–338000.00–ಕಾಲಾವಧಿ– 6 ತಿಂಗಳು. 5) a) ಕೊಪ್ಪಳ ನಗರದ ಅಲ್ಪಸಂಖ್ಯಾತರ ಮೆಟ್ರಿಕ್ ನಂತರದ ಬಾಲಕರ ವಸತಿ ನಿಲಯ ವಿಜಯನಗರ ಬಡಾವಣೆ ದುರಸ್ತಿ ಕಾಮಗಾರಿ. b) ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ಪದವಿ ಪೂರ್ವ ಬಾಲಕಿಯರ ವಸತಿ ಕಾಲೇಜು ಹಿರೇಸಿಂದೋಗಿ ದುರಸ್ತಿ ಕಾಮಗಾರಿ. c) ಕುಷ್ಟಗಿ ಪಟ್ಟಣದ ಅಲ್ಪಸಂಖ್ಯಾತರ ಮೆಟ್ರಿಕ್ ನಂತರದ ಬಾಲಕರ ವಸತಿ ನಿಲಯ ಶಾಖಾಪೂರ ರಸ್ತೆ ಕುಷ್ಟಗಿ ಮೂಲಭೂತ ಸೌಕರ್ಯ ಕಾಮಗಾರಿ. d) ಕೊಪ್ಪಳ ನಗರದ ಮೆಟ್ರಿಕ್ ನಂತರದ ಬಾಲಕಿಯರ ವಸತಿ ನಿಲಯ ಗಣೇಶ ತೆಗ್ಗು –2 ದುರಸ್ತಿ ಕಾಮಗಾರಿ. ಕಾಲ್–2 INDENT 14343 PACK –1=RS.78.63 LAKHS EMD 157261. 00-6 ತಿಂಗಳು 6) ಕುಷ್ಟಗಿ ತಾಲೂಕ ವ್ಯಾಪ್ತಿಯ ಹನುಮಸಾಗರ–ಹನುಮನಾಳ ದಿಂದ ಗುಡದೂರಕಲ್ಲ ರಸ್ತೆ ಸುಧಾರಣೆ ಕಾಲ್–2 INDENT 18628 =RS.71.66 LAKHS EMD 143338.00-3 ತಿಂಗಳುಕಾಲಾವಧಿ 3 ತಿಂಗಳು 7) ಕುಷ್ಟಗಿ ತಾಲೂಕ ವ್ಯಾಪ್ತಿಯ ಮಾಲಗಿತ್ತಿಯಿಂದ ಹಾಬಲಕಟ್ಟಿ ರಸ್ತೆ ಸುಧಾರಣೆ. ಕಾಲ್–2 INDENT 18626 =RS.62.91 LAKHS EMD 125830.00-6 ತಿಂಗಳು ಕಾಲಾವಧಿ 3 ತಿಂಗಳು 8) a) ಕನಕಗಿರಿ ತಾಲೂಕಿನ ನವಲಿ ಗ್ರಾಮದ ಕನಕಗಿರಿ ಮುಖ್ಯ ರಸ್ತೆಯಿಂದ ಪಂಡಪ್ಪ ಶೆಟ್ಟಿ ಮನೆವರೆಗೆ ಸಿಸಿ ರಸ್ತೆ ನಿರ್ಮಾಣ. VR-215 b) ಕಾರಟಗಿ ತಾಲೂಕ ಬೂದಗುಂಪಾ ಗ್ರಾಮದ ಹಳೇ ಶೇಷಗಿರಿ ಕ್ಯಾಂಪನ ರಸ್ತೆಯಲ್ಲಿ ಡೆಕ್ ಸ್ಲ್ಯಾಬ್ ಬ್ರಿಡ್ಜ್ ನಿರ್ಮಾಣ.VR-7- ಕಾಲ್–2 INDENT 15925 (2A) PACK – 2=RS.63.93 LAKHS EMD 127860.00-3 ತಿಂಗಳು. 9) ಕುಷ್ಟಗಿ ತಾಲೂಕ ವ್ಯಾಪ್ತಿಯ ತಳುವಗೇರ ದಿಂದ ಹಿರೇನಂದಿಹಾಳ ರಸ್ತೆ ಸುಧಾರಣೆ INDENT NO 19010. RS.235.51 LAKHS EMD 353500.00-6 ತಿಂಗಳು.

ಸಾಮಾನ್ಯ ಸೂಚನೆಗಳು:– 1)ಗುತ್ತಿಗೆದಾರರು ಗುತ್ತಿಗೆಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಬೇಕು. 2)ಪೂರ್ವಾರ್ಹತೆಗೆ ಬೇಕಾಗುವ ಎಲ್ಲಾ ಪ್ರಮಾಣ ಪತ್ರ ಹಾಗೂ ದಾಖಲೆಗಳನ್ನು ಸ್ಕ್ಯಾನ್ ಮಾಡಿ, ಆನ್‌ಲೈನ್‌ನಲ್ಲಿ ಟೆಂಡರ್ ಭರ್ತಿ ಸಮಯದಲ್ಲಿ ಲಗತ್ತಿಸಬೇಕು. 3)ನಿಗಧಿತ ಇ.ಎಮ್.ಡಿ. ಹಣವನ್ನು ಆನ್‌ಲೈನ್ ಮೂಲಕ ನಿಗಧಿಪಡಿಸಿದಂತೆ ಸಂದಾಯ ಮಾಡಬೇಕು. ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಈ ಕೆಳಗೆ ಸಹಿ ಮಾಡಿದ ಕಛೇರಿ ಕೆಲಸದ ವೇಳೆಯಲ್ಲಿ ಪಡೆಯಬಹುದು ಮತ್ತು ಅಂತರ್ಜಾಲದ ಮೂಲಕ ವೆಬ್‌ಸೈಟ್ kppp.karnataka.gov.in portal ರಲ್ಲಿ ಪಡೆಯಬಹುದು. ಟೆಂಡರ್ ಹಾಗೂ ಮಾಹಿತಿಯನ್ನು ಸದರಿ ವೆಬ್‌ಸೈಟ್‌ನಲ್ಲಿ ದಿನಾಂಕ: **23.09.2025** ರ ನಂತರ ದಿಂದ Download ಮಾಡಿಕೊಳ್ಳಬಹುದಾಗಿದೆ.

ಟೆಂಡರ ವಿವರ: ಟೆಂಡರ್ ಆಕ್ಷೇಪಣೆ/ ಸ್ಪಷ್ಟೀಕರಣಗಳಿಗಾಗಿ ನಿಗಧಿಪಡಿಸಿದ ಅಂತಿಮ ದಿನಾಂಕ ಹಾಗೂ ಸಮಯದ ನಂತರ ಡೌನ್‌ಲೋಡ್ ಮಾಡಿಕೊಳ್ಳಬಹುದು : ಕ್ರ ಸಂ:5,6,7,8 ಕಾಮಗಾರಿಗಳಿಗೆ **23.09.2025** ಸಮಯ 10.00 ಗಂಟೆ ನಂತರ ದಿಂದ **30.09.2025** ಸಮಯ 16.00 ಗಂಟೆವರೆಗೆ ಟೆಂಡರ್‌ಗಳನ್ನು ಸ್ವೀಕರಿಸುವ ಅಂತಿಮ ದಿನಾಂಕ ಹಾಗೂ ಸಮಯ : ಕ್ರ ಸಂ:5,6,7,8 ಕಾಮಗಾರಿಗಳಿಗೆ **23.09.2025** ಸಮಯ 11.00 ಗಂಟೆ ನಂತರ ದಿಂದ: **30.09.2025** ಸಮಯ 16.30 ಗಂಟೆವರೆಗೆ ಟೆಂಡರ್ ತೆರೆಯುವ ದಿನಾಂಕ: ಕ್ರ ಸಂ:5,6,7,8 ಕಾಮಗಾರಿಗಳಿಗೆ **01.10.2025** ಕಚೇರಿ ಸಮಯದಲ್ಲಿ ಕೆಡಬ್ಲೂ 4 ಇದ್ದಲ್ಲಿ ಆರ್ಥಿಕ ಬಿಡ್ ತೆರೆಯುವ ದಿನಾಂಕ : ಸಕ್ಷಮ ಪ್ರಾಧಿಕಾರದಿಂದ ಅನುಮೋದನೆಗೊಂಡ ನಂತರ ತೆರೆಯಲಾಗುವುದು. ಟೆಂಡರ್ ಆಕ್ಷೇಪಣೆ/ ಸ್ಪಷ್ಟೀಕರಣಗಳಿಗಾಗಿ ನಿಗಧಿಪಡಿಸಿದ ಅಂತಿಮ ದಿನಾಂಕ ಹಾಗೂ ಸಮಯದ ನಂತರ ಡೌನ್‌ಲೋಡ್ ಮಾಡಿಕೊಳ್ಳಬಹುದು : ಕ್ರ ಸಂ:1,2,3,4,9 ಕಾಮಗಾರಿಗಳಿಗೆ **23.09.2025** ಸಮಯ 10.00 ಗಂಟೆ ನಂತರ ದಿಂದ **08.10.2025** ಸಮಯ 16.00 ಗಂಟೆವರೆಗೆ ಟೆಂಡರ್‌ಗಳನ್ನು ಸ್ವೀಕರಿಸುವ ಅಂತಿಮ ದಿನಾಂಕ ಹಾಗೂ ಸಮಯ : ಕ್ರ ಸಂ: 1,2,3,4,9 ಕಾಮಗಾರಿಗಳಿಗೆ **23.09.2025** ಸಮಯ 11.00 ಗಂಟೆ ನಂತರ ದಿಂದ: **08.10.2025** ಸಮಯ 16.30 ಗಂಟೆವರೆಗೆ ಟೆಂಡರ್ ತೆರೆಯುವ ದಿನಾಂಕ : ಕ್ರ ಸಂ: 1,2,3,4,9 ಕಾಮಗಾರಿಗಳಿಗೆ – **09.10.2025** ಕಚೇರಿ ಸಮಯದಲ್ಲಿ ಕೆಡಬ್ಲೂ 4 ಇದ್ದಲ್ಲಿ ಆರ್ಥಿಕ ಬಿಡ್ ತೆರೆಯುವ ದಿನಾಂಕ : ಸಕ್ಷಮ ಪ್ರಾಧಿಕಾರದಿಂದ ಅನುಮೋದನೆಗೊಂಡ ನಂತರ ತೆರೆಯಲಾಗುವುದು.

ಟಿಪ್ಪಣಿ: ಬಿಡ್‌ಗಳನ್ನು ತೆರೆಯುವ ವೇಳೆಯಲ್ಲಿ ಟೆಂಡರ್‌ನಲ್ಲಿ ಬಾಗವಹಿಸಿದ ಗುತ್ತಿಗೆದಾರರು ಇ.ಎಮ್.ಡಿ. ಮೂಲ ದಾಖಲೆಗಳನ್ನು ಪರಿಶೀಲನೆಗಾಗಿ ಒದಗಿಸತಕ್ಕದ್ದು. ಸೂಚನೆ:ಯಾವುದೇ ಅಥವಾ ಎಲ್ಲಾ ಟೆಂಡರ್‌ಗಳನ್ನು ಯಾವುದೇ ಕಾರಣವಿಲ್ಲದೇ, ಯಾವುದೇ ಹಂತದಲ್ಲಿ ತಿರಸ್ಕರಿಸುವ ಹಾಗೂ ಹಿಂತೆಗೆದುಕೊಳ್ಳುವ ಅಥವಾ ಯಾವುದೇ ಟೆಂಡರ ಅನುಮೋದಿಸುವ ಹಕ್ಕನ್ನು ಈ ಕೆಳಗೆ ಸಹಿ ಮಾಡಿದವರು ಕಾಯ್ದಿರಿಸಿಕೊಂಡಿದ್ದಾರೆ.

ಸಹಿ/–ಕಾರ್ಯನಿರ್ವಾಹಕ ಅಭಿಯಂತರರು,
ಪಂ.ರಾ.ಇಂ. ವಿಭಾಗ ಕೊಪ್ಪಳ.

ಡಿಐಪಿಆರ್/ಕೊಪ್ಪಳ/358/ಕೆಎಸ್‌ಎಂಸಿಎ/2025–26

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯನಿರ್ವಾಹಕ ಅಭಿಯಂತರರ ಕಾರ್ಯಾಲಯ, ಕೃಭಾಜನಿನಿ,
ಎ ಎಲ್ ಬಿ ಸಿ ವಿಭಾಗ, ಆಲಮಟ್ಟಿ – 586201
ತಾ: ಬ.ಬಾಗೇವಾಡಿ, ಜಿ:ವಿಜಯಪುರ.

ಸಂ:ಕೃ.ಭಾ.ಜ.ನಿ.ನಿ/ಎಎಲ್‌ಬಿಸಿ–ವಿಭಾಗ/ಡಿ.ಎಮ್/ಮುಖ್ಯ ಸ್ಥಾವರ/ 2025–26/916 ದಿನಾಂಕ:18.09.2025

ಅಲ್ಪಾವಧಿ ಸಂಕ್ಷಿಪ್ತ ಟೆಂಡರ್ ಪ್ರಕಟಣೆ 2ನೇ ಕರೆ
(ಕೆಪಿಪಿ ಪೋರ್ಟಲ್ ಮುಖಾಂತರ)

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕೃಭಾಜನಿನಿ, ಬೆಂಗಳೂರು, ಇವರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು, ಕೃಭಾಜನಿನಿ, ಎ.ಎಲ್.ಬಿ.ಸಿ ವಿಭಾಗ ಆಲಮಟ್ಟಿ, ತಾ: ನಿಡಗುಂದಿ ಜಿಲ್ಲೆ: ವಿಜಯಪುರ ಇವರು ಶೇಕಡಾವಾರು ಟೆಂಡರನ್ನು CEIG Class-I Electrical Contractor ಗುತ್ತಿಗೆದಾರರಿಂದ ಮುಖ್ಯ ಸ್ಥಾವರ (ಹೆಡ್ ವರ್ಕ) ಕಾಮಗಾರಿಗೆ ಟೆಂಡರನ್ನು ಆಹ್ವಾನಿಸಲಾಗಿರುತ್ತದೆ. ಕೆ.ಟಿ.ಟಿ.ಪಿ ಕಾಯ್ದೆ ನಿಯಮ–28 ರನ್ವಯ KW–3 ರಲ್ಲಿ **ದ್ವಿ ಲಕೋಟೆ** ಪದ್ದತಿಯನ್ನು ಅನುಸರಿಸಲಾಗುವದು. ಗುತ್ತಿಗೆದಾರರು ಭದ್ರತಾಠೇವಣಿ ಸಹಿತ ದ್ವಿ ಲಕೋಟೆಯಲ್ಲಿ ಟೆಂಡರನ್ನು ಸಂದಾಯ ಮಾಡುವಂತೆ ಕೋರಲಾಗಿದೆ. ವಿವರಗಳು ಈ ಕೆಳಗಿನಂತೆ;

ಇಂಡೆಂಟ್ ಸಂಖ್ಯೆ: 2454, ಟೆಂಡರಗಿಟ್ಟ ಮೊತ್ತ ರೂ. 83.89 ಲಕ್ಷಗಳು.
ವರ್ಗ– ಎಸ್.ಸಿ
ಟೆಂಡರ ಪ್ರಕ್ರಿಯೆಯ ವಿವಿಧ ಹಂತಗಳು:

1) ಟೆಂಡರ ಡಾಕುಮೆಂಟನ್ನು ಇ–ಪೋರ್ಟಲ್‌ನಲ್ಲಿ ವೀಕ್ಷಿಸುವ & ಭರ್ತಿ ಮಾಡಿದ ಬಿಡ್‌ನ್ನು ಸಲ್ಲಿಸುವ ಕಾಲಾವಧಿ **ದಿನಾಂಕ: 20.09.2025 ರಿಂದ 30.09.2025 ರ ಸಾಯಂಕಾಲ 5.00 ಘಂಟೆಯವರೆಗೆ.**
2) ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 03.10.2025 ಬೆಳಿಗ್ಗೆ 11.00 ಘಂಟೆಗೆ.**
3) ಆರ್ಥಿಕ ಬಿಡ್ ತೆರೆಯುವ **ದಿನಾಂಕ: 06.10.2025 ಬೆಳಿಗ್ಗೆ 11.00 ಘಂಟೆಗೆ.**

ಯಾವದೇ ಸಂದರ್ಭದಲ್ಲಾದರೂ, ಯಾವದೇ ಕಾರಣ ನೀಡದೇ ಟೆಂಡರನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಈ ಕೆಳಗೆ ಸಹಿ ಮಾಡಿರುವವರು ಕಾಯ್ದಿರಿಸಿಕೊಂಡಿರುತ್ತಾರೆ. ಟೆಂಡರಗೆ ಸಂಬಂಧಿಸಿದ ಹೆಚ್ಚಿನ ಮಾಹಿತಿಯನ್ನು ಈ ಕಛೇರಿಯ ಅವಧಿಯಲ್ಲಿ ಅಥವಾ https://kppp.karnataka.gov.in/#/portal/portal ವೆಬ್‌ಸೈಟನಲ್ಲಿ ಪಡೆದುಕೊಳ್ಳಬಹುದು.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು,
ಕೃಭಾಜನಿನಿ, ಎ ಎಲ್ ಬಿ ಸಿ ವಿಭಾಗ, ಆಲಮಟ್ಟಿ

ವಾಸಾಸಂಇ/ವಿಜಯಪುರ/345/ಕೆಎಸ್‌ಎಂಸಿಎ/2025–26

ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ
ಕಾಮಗಾರಿ ವಿಭಾಗ ಬೆಳಗಾವಿ.

ಸಂ.: ವಾಕರಸಾ/ಕಾನಿಅ/ಬೆವಿ/ನಕ್ಷೆ/382/2025–26 ದಿನಾಂಕ: 18–09–2025

ಕೆ.ಪಿ.ಪಿ.ಪಿ ಪೋರ್ಟಲ್ ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂ: 10/2025–26
(Through Gok Karnataka Public Procurement Portal www.kppp.karnataka.gov.in)

ಈ ಕೆಳಕಂಡ ಕಾಮಗಾರಿಗಳಿಗೆ ಕರ್ನಾಟಕ / ಕೇಂದ್ರ ಲೋಕೋಪಯೋಗಿ ಇಲಾಖೆ, ಎಂ.ಇ.ಎಸ್ ಗಳಲ್ಲಿ ನೊಂದಾಯಿತ ಅರ್ಹ ಸಿವಿಲ್ ಗುತ್ತಿಗೆದಾರರಿಂದ Gok Karnataka Public Procurement Portal ಮುಖಾಂತರ ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ಶೆಡ್ಯೂಲ್‌ನ ವಿವರಗಳಿಗಾಗಿ **www.kppp.karnataka.gov.in** ವೆಬ್‌ಸೈಟ್ ಲಾಗ್‌ಆನ್ ಮಾಡಿ ಪಡೆದುಕೊಳ್ಳಬಹುದು.

1) ಟೆಂಡರ್ ಪ್ರಕಟಣೆ ಸಂಖ್ಯೆ: **10**. ಕಾಮಗಾರಿಯ ಹೆಸರು: **ಬಾಗಲಕೋಟೆ ವಿಭಾಗದ ಬಾಗಲಕೋಟೆ ನವನಗರ, ಜಮಖಂಡಿ ಹಾಗೂ ರಬಕವಿ ಬಸ್ ನಿಲ್ದಾಣಗಳ ಆವರಣಕ್ಕೆ ಡಾಂಬರೀಕರಣ ನಿರ್ಮಿಸುವುದು.** ಟೆಂಡರ್ ಆಧಾರ: **ದ್ವಿ ಲಕೋಟೆ.** ಟೆಂಡರಿಗಿಟ್ಟ ಮೊತ್ತ: **ರೂ. 252=65 ಲಕ್ಷಗಳು.** ಮುಂಗಡ ಠೇವಣಿ ಮೊತ್ತ: **ರೂ.3,78,975–00.** ಗುತ್ತಿಗೆದಾರರ ದರ್ಜೆ: **ದರ್ಜೆ–2 ಮತ್ತು ಮೇಲ್ಪಟ್ಟು.** ಭರ್ತಿಮಾಡಿದ ಟೆಂಡರನ್ನು ಸಲ್ಲಿಸಲು ಕೊನೆಯ ದಿನಾಂಕ: **09–10–2025.**

ಇನ್ನುಳಿದ ವಿವರಗಳನ್ನು ವಿವರವಾದ ಟೆಂಡರ್ ಪ್ರಕಟಣೆಯಲ್ಲಿರುವಂತೆ ಖಚಿತಪಡಿಸಿಕೊಂಡು ಟೆಂಡರ್‌ನಲ್ಲಿ ಭಾಗವಹಿಸತಕ್ಕದ್ದು. ಹೆಚ್ಚಿನ ವಿವರಗಳನ್ನು ಈ ಕಛೇರಿಯಿಂದ ಪಡೆಯಬಹುದಾಗಿದೆ ಮತ್ತು ಈ ಕಛೇರಿ ದೂರವಾಣಿ ಸಂ. **0831–2451475** ಗೆ ಸಂಪರ್ಕಿಸ ಬಹುದಾಗಿದೆ ಹಾಗೂ ಸಹಾಯವಾಣಿ **(help desk) : +91-8046010000 and +91-8068948777** ಸಂಪರ್ಕಿಸಬಹುದಾಗಿದೆ. ಯಾವುದೇ ತಿದ್ದುಪಡಿ ಮತ್ತು ದಿನಾಂಕಗಳಲ್ಲಿನ ಮುಂದೂಡಿಕೆಗಳಿದ್ದಲ್ಲಿ Gok Karnataka Public Procurement Portal ನಲ್ಲಿ ಮಾತ್ರ ಪ್ರಕಟಿಸಲಾಗುವುದು.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು,
ವಾಕರಸಾ ಸಂಸ್ಥೆ, ಕಾಮಗಾರಿ ವಿಭಾಗ,
ಬೆಳಗಾವಿ.

ವಾಸಾಸಂಇ/ಬೆಳಗಾವಿ/1056/ಅಡ್ವರ್ಟೋ/2025–26

ಪ್ರಜಾವಾಣಿ
ಶನಿವಾರ • ಸೆಪ್ಟೆಂಬರ್ 20, 2025

ಸಂಚಾರಕ್ಕೆ ಸಂಚಕಾರ ತಂದ ರಸ್ತೆಗುಂಡಿ

ಐಟಿ–ಬಿಟಿ ಹಬ್ ಆಗಿರುವ ಬೆಳ್ಳಂದೂರು ಸುತ್ತಮುತ್ತ ಪ್ರಯಾಣಿಕರಿಗೆ ನಿತ್ಯವೂ ನರಕಯಾತನೆ

• ಶಿವರಾಜ್ ಮೌರ್ಯ

ಕೆ.ಆರ್.ಪುರ: ಐಟಿ–ಬಿಟಿಗೆ ಹೆಸರಾಗಿರುವ ಬೆಳ್ಳಂದೂರು ಈಗ ರಸ್ತೆಯಲ್ಲಿ ಬಿದ್ದಿರುವ ದೊಡ್ಡ ದೊಡ್ಡ ಗುಂಡಿಗಳಿಂದಾಗಿ ಅಪಖ್ಯಾತಿ ಪಡೆಯುತ್ತಿದೆ. ವಾಹನಗಳ ಸರಾಗ ಸಂಚಾರಕ್ಕೆ ಅಡ್ಡಿ ಉಂಟಾಗುತ್ತಿರುವ ಬಗ್ಗೆ ಐಟಿ ರಂಗದವರು ಧ್ವನಿ ಎತ್ತಿದ ಬಳಿಕ ಇಲ್ಲಿನ ಗುಂಡಿಗಳ ಬಗ್ಗೆ ರಾಷ್ಟ್ರ ಮಟ್ಟದಲ್ಲಿ ಚರ್ಚೆಯಾಗುತ್ತಿದೆ.

ಹೊರ ವರ್ತುಲ ರಸ್ತೆಯಾದ ಬೆಳ್ಳಂದೂರಿಗೆ ಪಣತ್ತೂರು ಮೂಲಕ ನಿತ್ಯ ಲಕ್ಷಾಂತರ ವಾಹನಗಳು ಸಂಚರಿಸುತ್ತವೆ. ವರ್ತೂರು, ಸರ್ಜಾಪುರ ರಸ್ತೆಗಳ ಮೂಲಕವೂ ಸಾವಿರಾರು ಐಟಿ ಉದ್ಯೋಗಿಗಳು ಇಲ್ಲಿಗೆ ಬರುತ್ತಾರೆ. ರಸ್ತೆಗಳಲ್ಲಿ ಬಿದ್ದಿರುವ ಗುಂಡಿಗಳಿಂದಾಗಿ ಇಲ್ಲಿನ ಸಂಚಾರ ನರಕವಾಗಿ ಪರಿವರ್ತನೆಗೊಂಡಿದೆ. ಮಳೆ ಬಂದಾಗ ರಸ್ತೆ ಯಾವುದು? ಗುಂಡಿ ಯಾವುದು? ಎಂದು ಗೊತ್ತಾಗದಷ್ಟು ನೀರು ತುಂಬಿರುತ್ತದೆ.

ಒಂದು ಕಿ.ಮೀ. ಚಲಿಸಲು ಅರ್ಧ ತಾಸು ಬೇಕಾಗುತ್ತದೆ. ಮನೆ ಬಿಟ್ಟು ಕಚೇರಿ ತಲುಪಲು ದಟ್ಟಣೆ ಮತ್ತು ಮಳೆಯ ಸಮಯದಲ್ಲಿ ನಾಲ್ಕು ತಾಸು ಸಾಕಾಗುತ್ತಿಲ್ಲ. ಇಲ್ಲಿನ ಸಂಚಾರ ನರಕಯಾತನೆಯಾಗಿದೆ ಎಂದು ಐಟಿ ಉದ್ಯೋಗಿಗಳು ದೂರಿದ್ದಾರೆ.

ಬ್ಲ್ಯಾಕ್‌ಬಕ್ ಸಂಸ್ಥಾಪಕ ರಾಜೇಶ್ ಯಬಾಜಿ, ಉದ್ಯಮಿ ಮೋಹನ್ ದಾಸ್ ಪೈ, ಬಯೋಕಾನ್ ಮುಖ್ಯಸ್ಥೆ ಕಿರಣ್ ಮಜುಂದಾರ್ ಷಾ ಮುಂತಾದವರು ಈ ಬಗ್ಗೆ ಧ್ವನಿ ಎತ್ತಿದ ಬಳಿಕ ಇಲ್ಲಿನ ರಸ್ತೆಗಳು ಗಮನ ಸೆಳೆದಿವೆ.

‘ಬೆಳಿಗ್ಗೆ ಎಂಟು ಗಂಟೆಗೆ ಮನೆ ಬಿಡುವ ಪರಿಸ್ಥಿತಿ ಇದೆ. ಸಂಜೆ ನಾಲ್ಕು ಗಂಟೆಯ ನಂತರ ಮನೆ ಬಿಟ್ಟು ತೆರಳುವ ಹಾಗಿಲ್ಲ. ಮೊನ್ನೆ ಕೆಲಸದ ನಿಮಿತ್ತ ದೇವರಬಿಸನಹಳ್ಳಿ ಸಕ್ರ ಆಸ್ಪತ್ರೆಯಿಂದ ಬೆಳ್ಳಂದೂರಿನಲ್ಲಿರುವ ಮನೆಗೆ ಬರಲು ಒಂದೂವರೆ ಕಿ.ಮೀ. ದೂರಕ್ಕೆ 45 ನಿಮಿಷ ಬೇಕಾಯಿತು. ದ್ವಿಚಕ್ರ ವಾಹನದಲ್ಲಿಯೇ ಹೀಗಾದರೆ ಬಸ್‌ಗಳಲ್ಲಿ ಸಂಚರಿಸಿದರೆ ಇನ್ನೂ ಅಧಿಕ ಸಮಯ ಬೇಕಾಗುತ್ತದೆ’ ಎಂದು ಬೆಳ್ಳಂದೂರು ನಿವಾಸಿ ರಾಜೇಶ್ ಅನುಭವ ಹಂಚಿಕೊಂಡರು.

‘ಯಾವುದೇ ಪಕ್ಷ ಅಧಿಕಾರಕ್ಕೆ ಬಂದರೂ ರಸ್ತೆ ಅಭಿವೃದ್ಧಿ ಬಗ್ಗೆ ಕಾಳಜಿ ವಹಿಸುತ್ತಿಲ್ಲ. ಮೂಲಸೌಕರ್ಯಗಳಲ್ಲಿ ರಸ್ತೆಯೇ ಮುಖ್ಯ. ಅದೇ ಸರಿಯಿಲ್ಲದಿದ್ದರೆ ಸಂಕಷ್ಟ ಅನುಭವಿಸಬೇಕಾಗುತ್ತದೆ. ಜನಪ್ರತಿನಿಧಿಗಳು ಒಬ್ಬರನ್ನೊಬ್ಬರು ದೂರುವುದನ್ನು ಬಿಟ್ಟು ಅಭಿವೃದ್ಧಿ ಪಥದ ಕಡೆ ಚಿಂತನೆ ನಡೆಸಿದರೆ ಮಾತ್ರ ಸಮಸ್ಯೆ ಬಗೆಹರಿಯಲು ಸಾಧ್ಯ’ ಎಂದು ವಕೀಲ ಸಂತೋಷ್ ಅವರು ತಿಳಿಸಿದರು.

ಪಕ್ಕದ ಬೊಮ್ಮನಹಳ್ಳಿ ಅಭಿವೃದ್ಧಿಯಾಗಿದೆ. ಮಹದೇವಪುರದಲ್ಲಿ ಮಾತ್ರ ಅಭಿವೃದ್ಧಿ ಗಗನಕುಸುಮವಾಗಿದೆ. ರಸ್ತೆಗಳು ಹೊಂಡಮಯವಾಗಿವೆ. ಇಲ್ಲಿನ ಜನಪ್ರತಿನಿಧಿಗಳು ಈ ಬಗ್ಗೆ ಗಮನ ಹರಿಸುತ್ತಿಲ್ಲ ಎಂದು ಪಣತ್ತೂರಿನ ಕಾಂಗ್ರೆಸ್ ಮುಖಂಡ ಮಹೇಶ್ ಆರಾಧ್ಯ ದೂರಿದರು.

ಬೆಳ್ಳಂದೂರಿನಂತೆ ಪ್ರಮುಖ ಸಂಪರ್ಕದ ಜಾಲ ಹೊಂದಿರುವ ಕನ್ನೆಲ್ಲಿ ರಸ್ತೆ, ವರ್ತೂರು ರಸ್ತೆ, ಬೋಗನಹಳ್ಳಿ ರಸ್ತೆ, ಮುನ್ನೆನಕೊಳಲು ರಸ್ತೆಗಳು ಸಂಪೂರ್ಣ ಹದಗೆಟ್ಟಿವೆ. ಕೆಲವೆಡೆ ರಸ್ತೆಗಳಿಗೆ ಚರಂಡಿ ವ್ಯವಸ್ಥೆ ಇಲ್ಲ. ಸಾವಿರಾರು ಅಪಾರ್ಟ್‌ಮೆಂಟ್‌ಗಳಿಗೆ ಸರಿಯಾದ ರಸ್ತೆಯೇ ಇಲ್ಲ. ರಸ್ತೆ ಇರುವ ಕಡೆ ಬಸ್ ತಂಗುದಾಣಗಳಿಲ್ಲ ಎಂದು ಹೇಳಿದರು.

ಜನರು ಏನಂತಾರೆ?

ಪ್ರತಿಸಲ ಮಳೆ ಬಂದಾಗೆಲ್ಲ ಗುಂಡಿಗಳು ಸಾಮಾನ್ಯವಾಗಿವೆ. ಬೀದಿಬದಿಯ ವ್ಯಾಪಾರಿಗಳು ರಸ್ತೆಯನ್ನು ಅತಿಕ್ರಮಿಸಿಕೊಂಡು ವ್ಯಾಪಾರ ಮಾಡುವುದು ಸಾಮಾನ್ಯವಾಗಿದೆ. ಐಟಿ ಕಾರಿಡಾರ್ ಎನಿಸಿಕೊಂಡಿರುವ ಬೆಳ್ಳಂದೂರಿಗೆ ಪ್ರಥಮ ಆದ್ಯತೆ ನೀಡಿ ರಸ್ತೆ ಹಾಗೂ ಸಂಚಾರ ವ್ಯವಸ್ಥೆ ಸುಧಾರಿಸಬಹುದಿತ್ತು. ಆದರೆ, ಆ ರೀತಿ ಮಾಡಿಲ್ಲ

ರಾಜೇಶ್, ಬೆಳ್ಳಂದೂರು ನಿವಾಸಿ

ಮಾಹಿತಿ ತಂತ್ರಜ್ಞಾನಕ್ಕೆ ಪ್ರಸಿದ್ಧಿಯಾಗಿರುವ ಮಹದೇವಪುರ ಕ್ಷೇತ್ರ ಈಗ ಸಂಚಾರ ದಟ್ಟಣೆಗೆ ಪ್ರಸಿದ್ಧಿ ಪಡೆಯುತ್ತಿದೆ. ಕಚೇರಿಗೆ ತೆರಳಲು ನಾಲ್ಕು ಗಂಟೆ ಮುಂಚೆ ಮನೆ ಬಿಡಬೇಕು. ಸಿಲ್ಕ್ ಬೋರ್ಡ್ ರಸ್ತೆಯಿಂದ ಬೆಳ್ಳಂದೂರಿಗೆ ತೆರಳಲು ಎರಡು ತಾಸು ಬೇಕು

ಸಂತೋಷ್, ವಕೀಲ

ಹೊರ ವರ್ತುಲ ರಸ್ತೆಯಲ್ಲಿನ ಸಂಚಾರ ದಟ್ಟಣೆ ಪಿಟಿಐ ಚಿತ್ರ

ವರ್ತೂರು–ಗುಂಜೂರು ಕಥೆಯೂ ಭಿನ್ನವಿಲ್ಲ

ವರ್ತೂರು–ಗುಂಜೂರು ರಸ್ತೆಯಲ್ಲಿಯೂ ಸಂಚಾರ ನರಕಯಾತನೆಯಾಗಿದೆ. ಮುತ್ತಸಂದ್ರದ ವರ್ತೂರು ಕೋಡಿ ಬಳಿ 1 ಕಿ.ಮೀ.ಗಿಂತ ಕಡಿಮೆ ದೂರವನ್ನು ಕ್ರಮಿಸಲು ಅರ್ಧ ತಾಸು ಬೇಕಾಗಿದೆ. ವರ್ತೂರು-ಗುಂಜೂರು ರಸ್ತೆಯಲ್ಲಿ ವಿಪರೀತ ದಟ್ಟಣೆ ಉಂಟಾಗುತ್ತಿದೆ.

‘ನನ್ನ ಮನೆಗೆ ತಲುಪಲು ಯಾವುದೇ ಪರ್ಯಾಯ ಮಾರ್ಗಗಳಿಲ್ಲ. ಇದೇ ರಸ್ತೆಯನ್ನು ಬಳಸುತ್ತಿದ್ದೇನೆ. ಪೆಟ್ರೋಲ್ ಬಂಕ್ ಮತ್ತು ಪೊಲೀಸ್ ಠಾಣೆ ನಡುವಿನ ರಸ್ತೆ ಬಹುತೇಕ ಪ್ರತಿದಿನ ಪಾರ್ಕಿಂಗ್ ಸ್ಥಳವಾಗಿ ಬದಲಾಗುತ್ತಿರುವುದರಿಂದ ಸಂಚಾರಕ್ಕೆ ತೊಡಕಾಗಿದೆ’ ಎಂದು ಸ್ಥಳೀಯ ನಿವಾಸಿ ಮಿಥುನ್ ಗಂಗಾಧರ್ ಹೇಳಿದರು.

ರಸ್ತೆಯ ಒಂದು ಭಾಗದಲ್ಲಿ ಕಾಮಗಾರಿ ನಡೆದಿದ್ದು, ಇನ್ನೊಂದು ಭಾಗ ಹಾಗೇ ಉಳಿದಿದೆ. ಐದು ತಿಂಗಳ ಹಿಂದೆ ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರು ವರ್ತೂರು-ಗುಂಜೂರು ರಸ್ತೆ ಕಾಮಗಾರಿ ಪರಿಶೀಲನೆ ನಡೆಸಿದ್ದರು. ₹20 ಕೋಟಿ ವೆಚ್ಚದ ಈ ಕಾಮಗಾರಿಯನ್ನು ಶೀಘ್ರ ಪೂರ್ಣಗೊಳಿಸಲು ಸೂಚಿಸಿದ್ದರು. ಆದರೆ, ಯಾವುದೇ ಪ್ರಗತಿಯಾಗಿಲ್ಲ ಎಂದು ಸ್ಥಳೀಯರು ದೂರಿದರು.

ದಟ್ಟಣೆ ಕಡಿಮೆ ಮಾಡಲು ರಸ್ತೆ ನಿರ್ಬಂಧ

ಎಚ್‌ಎಎಲ್ ವಿಮಾನ ನಿಲ್ದಾಣ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯ ಹೊರವರ್ತುಲ ರಸ್ತೆಯಲ್ಲಿ ಸಂಚಾರ ದಟ್ಟಣೆ ನಿಯಂತ್ರಣಕ್ಕಾಗಿ ಸೆ.19ರಿಂದ 26ರ ವರೆಗೆ ವಾಹನಗಳ ಸಂಚಾರ ಮಾರ್ಗ ಬದಲಾವಣೆ ಮಾಡಲಾಗಿದೆ.

ಲೇ ಅರೇಬಿಯಾ, ಬಿರಿಯಾನಿ ಜೋನ್, ಕ್ರೋಮ ಜಂಕ್ಷನ್ ಬಳಿ ಹೊರವರ್ತುಲ ರಸ್ತೆಯಿಂದ ಮಾರತ್ತಹಳ್ಳಿ–ಕಾಡುಬೀಸನಹಳ್ಳಿ ಸರ್ವಿಸ್ ರಸ್ತೆಗೆ ಸಂಚರಿಸುವ ಎಲ್ಲ ಮಾದರಿಯ ವಾಹನಗಳನ್ನು ತಾತ್ಕಾಲಿಕವಾಗಿ ನಿರ್ಬಂಧಿಸಲಾಗಿದೆ.

ಮಹದೇವಪುರ ಕಾರ್ತಿಕ್‌ನಗರ ಕಡೆಯಿಂದ ಲೇ ಅರೇಬಿಯಾ ಮತ್ತು ಬಿರಿಯಾನಿ ಪಾಯಿಂಟ್ ಮೂಲಕ ಮಾರತ್‌ಹಳ್ಳಿ–ಕಾಡುಬೀಸನಹಳ್ಳಿ ಸರ್ವಿಸ್ ರಸ್ತೆಗೆ ಸಂಚರಿಸುವ ವಾಹನಗಳ ಪ್ರವೇಶವನ್ನು ನಿರ್ಬಂಧಿಸಲಾಗಿದೆ. ಕಲಾಮಂದಿರ ಬಳಿ ಸರ್ವಿಸ್ ರಸ್ತೆಗೆ ತೆರಳಿ ಮಾರತ್‌ಹಳ್ಳಿಯ ಕಾಂತಿ ಸ್ವೀಟ್ಸ್ ಕೆಳಸೇತುವೆ ಬಳಿಯು–ಟರ್ನ್ ತೆಗೆದುಕೊಂಡು ಮಾರತ್ತಹಳ್ಳಿ ಸೇತುವೆ ಬಳಿ ಎಡಕ್ಕೆ ತಿರುಗಿ ಮುನ್ನೇನಕೊಳಲು, ಕಾಡುಬೀಸನಹಳ್ಳಿ ಜಂಕ್ಷನ್, ಪಣತ್ತೂರು ಮತ್ತು ಕರಿಯಮ್ಮನ ಅಗ್ರಹಾರ ಕಡೆಗೆ ಹೋಗಲು ಸರ್ವಿಸ್ ರಸ್ತೆಯಲ್ಲಿ ಸಂಚರಿಸಬಹುದು.

ದೇವರಬೀಸನಹಳ್ಳಿ ಹಾಗೂ ಬೆಳ್ಳಂದೂರು ಕಡೆಗೆ ಸಂಚರಿಸುವ ವಾಹನಗಳು ಹೊರವರ್ತುಲ ರಸ್ತೆಯ ಮೂಲಕವೇ ಸಂಚರಿಸಬೇಕು ಎಂದು ಸಂಚಾರ ಪೂರ್ವ ವಿಭಾಗದ ಡಿಸಿಪಿ ಸಾಹಿಲ್ ಬಾಗ್ಲಾ ತಿಳಿಸಿದ್ದಾರೆ.

‘ಧಮಕಿ ಪ್ರವೃತ್ತಿ ಬದಲಿಸಿ’

ಪ್ರಜಾವಾಣಿ ವಾರ್ತೆ

ನಿಖಿಲ್

ಬೆಂಗಳೂರು: ‘ಮೂಲಸೌಕರ್ಯ ಕೇಳುವ ಉದ್ಯಮಿಗಳಿಗೆ ಬೆದರಿಕೆ, ಧಮಕಿ ಹಾಕುವ ತಮ್ಮ ಪ್ರವೃತ್ತಿಯನ್ನು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಬದಲಿಸಿಕೊಳ್ಳಬೇಕು’ ಎಂದು ಜೆಡಿಎಸ್ ಯುವಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಹೇಳಿದ್ದಾರೆ.

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಬೆಂಗಳೂರಿನಲ್ಲಿ ರಸ್ತೆ ಸರಿಯಿಲ್ಲ ಎಂದು ಉದ್ಯಮಿಗಳು ಕೇಳಿದರೆ, ಅವರ ಬೆದರಿಕೆಗೆ ಹೆದರುವುದಿಲ್ಲ ಎಂದು ಉಪ ಮುಖ್ಯಮಂತ್ರಿ ಹೇಳಿದ್ದಾರೆ. ಇವರ ಸರ್ಕಾರ ಎಲ್ಲ ಸ್ವರೂಪದ ತೆರಿಗೆ ದರ ಹೆಚ್ಚಿಸಿದ್ದನ್ನು ಬಿಟ್ಟರೆ, ಮೂಲಸೌಕರ್ಯವನ್ನು ಹೆಚ್ಚಿಸಿಲ್ಲ’ ಎಂದರು.

‘ರಾಜ್ಯದ ಒಟ್ಟು ತೆರಿಗೆ ಆದಾಯದಲ್ಲಿ ಶೇ 30ರಷ್ಟು ಬೆಂಗಳೂರಿನಲ್ಲೇ ಸಂಗ್ರಹವಾಗುತ್ತದೆ. ಬೆಂಗಳೂರು ತೊರೆಯುವುದಾಗಿ ಬೇಸರ ವ್ಯಕ್ತಪಡಿಸುತ್ತಿರುವ ಉದ್ಯಮಿಗಳಿಗೆ ಉಪ ಮುಖ್ಯಮಂತ್ರಿ ಆತ್ಮವಿಶ್ವಾಸ ತುಂಬಬೇಕಿತ್ತು. ಆದರೆ ಬೆದರಿಕೆ ಹಾಕಿ, ಘನತೆ ಕಳೆದುಕೊಳ್ಳುತ್ತಿದ್ದಾರೆ’ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

‘₹402 ಕೋಟಿ ವ್ಯರ್ಥಕ್ಕೆ ಹಾದಿ’

‘ಜಾತಿವಾರು ಸಮೀಕ್ಷೆಗೆ ಕಾಂಗ್ರೆಸ್ ಸರ್ಕಾರದ ಸಚಿವರಿಂದಲೇ ವಿರೋಧ ವ್ಯಕ್ತವಾಗಿದೆ. ಹಿಂದೆ ಇದೇ ರೀತಿ ನಡೆಸಿದ್ದ ಸಮೀಕ್ಷೆಯ ವರದಿಯನ್ನು ಕಸದಬುಟ್ಟಿಗೆ ಎಸೆದು, ₹180 ಕೋಟಿ ವ್ಯರ್ಥ ಮಾಡಲಾಗಿತ್ತು. ಈಗ ₹402 ಕೋಟಿ ವ್ಯರ್ಥ ಮಾಡಲು ಹೊರಟಿದ್ದಾರೆ’ ಎಂದು ನಿಖಿಲ್ ಕುಮಾರಸ್ವಾಮಿ ಹೇಳಿದರು.

‘ಈ ಸಮೀಕ್ಷೆಯಲ್ಲಿ ಜನರ ಹಿತಾಸಕ್ತಿ ಇಲ್ಲ. ನಾಳೆ ಒಕ್ಕಲಿಗ ಸಮುದಾಯದ ಸಭೆ ಇದೆ. ನಿರ್ಮಲಾನಂದ ಸ್ವಾಮೀಜಿ ಅವರು ಸರ್ವ ಪಕ್ಷ ಸಭೆ ಕರೆದಿದ್ದಾರೆ. ದೇವೇಗೌಡ ಅವರು, ಕುಮಾರಸ್ವಾಮಿ ಅವರು ಮತ್ತು ನಾನು ಸಭೆಯಲ್ಲಿ ಭಾಗಿಯಾಗುತ್ತೇವೆ’ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಸುರ್ಜೇವಾಲಾ ಅಸಮಾಧಾನ

ಸಚಿವರು, ಪಕ್ಷದ ಪ್ರಮುಖರ ಸಭೆಯಲ್ಲಿ ರಸ್ತೆ ಗುಂಡಿಗಳ ಬಗ್ಗೆ ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲಾ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಗುಂಡಿಗಳನ್ನು ದುರಸ್ತಿ ಮಾಡದೆ ಇರುವುದರಿಂದ ವಿರೋಧ ಪಕ್ಷಗಳಿಗೆ ಅಸ್ತ್ರ ನೀಡಿದಂತೆ ಆಗಿದೆಯೆಂದು ಬೇಸರ ವ್ಯಕ್ತಪಡಿಸಿದ್ದಾರೆ ಎಂದು ಪಕ್ಷದ ಮೂಲಗಳು ಹೇಳಿವೆ.

ರಸ್ತೆ ಗುಂಡಿಗಳ ಕುರಿತು ಗುರುವಾರ ಸುದ್ದಿಗಾರರ ಜತೆ ಮಾತನಾಡಿದ್ದ ಉಪಮುಖ್ಯ ಮಂತ್ರಿ ಡಿ.ಕೆ.ಶಿವಕುಮಾರ್, ‘ರಸ್ತೆಗುಂಡಿಗಳನ್ನು ಮುಚ್ಚಲು ಗಡುವು ನೀಡಲಾಗಿದೆ. ಶಾಸಕರಿಗೆ ನೀಡಿರುವ ಅನುದಾನವನ್ನು ರಸ್ತೆ ದುರಸ್ತಿಗಾಗಿ ಬಳಸುವಂತೆ ಸೂಚಿಸಿದ್ದೇನೆ. ಇದು ಪ್ರಕೃತಿ. ಯಾರೋ ನಾಲ್ಕು ಜನ ಟ್ವೀಟ್ ಮಾಡುತ್ತಾರೆ, ರಾಜಕೀಯವಾಗಿ ಹೆಸರು ಬರುತ್ತದೆ ಎಂದು ಮಾಧ್ಯಮಗಳ ಮುಂದೆ ಹೇಳಿಕೆ ನೀಡಿದರೆ ಸಮಸ್ಯೆ ಬಗೆಹರಿಯುವುದಿಲ್ಲ. ಮಹಾರಾಷ್ಟ್ರ, ದೆಹಲಿಯಲ್ಲಿರುವ ರಸ್ತೆ ಗುಂಡಿ ನಾನು ತೋರಿಸುತ್ತೇನೆ ಬನ್ನಿ. ಬೇರೆ ಕಡೆ ರಸ್ತೆ ಗುಂಡಿ ಚರ್ಚೆಯಾಗದೆ, ಬೆಂಗಳೂರು ವಿಚಾರದಲ್ಲಿ ಏಕೆ ಚರ್ಚೆಯಾಗುತ್ತಿದೆ’ ಎಂದು ಪ್ರಶ್ನಿಸಿದ್ದರು. ಅವರ ಹೇಳಿಕೆಯನ್ನು ವಿರೋಧ ಪಕ್ಷಗಳು ಟೀಕಿಸಿದ್ದವು.

ಒಆರ್‌ಆರ್, ಸರ್ಜಾಪುರ ರಸ್ತೆಯ ದಟ್ಟಣೆ ನಿವಾರಣೆಗೆ ಸಭೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಹೊರ ವರ್ತುಲ ರಸ್ತೆ (ಒಆರ್‌ಆರ್), ಸರ್ಜಾಪುರ ರಸ್ತೆ ಮಾರ್ಗದಲ್ಲಿ ಸಂಚಾರ ದಟ್ಟಣೆ ನಿವಾರಣೆ ಸಂಬಂಧ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಅವರು ಶುಕ್ರವಾರ ಅಧಿಕಾರಿಗಳು, ಒಆರ್‌ಆರ್‌ಸಿಎ ಪ್ರತಿನಿಧಿಗಳು, ಡಬ್ಲ್ಯುಆರ್‌ಐ ಇಂಡಿಯಾ ತಂಡ, ಟೆಕ್ ಪಾರ್ಕ್‌ಗಳ ಪ್ರತಿನಿಧಿಗಳ ಜೊತೆ ಸಭೆ ನಡೆಸಿದರು.

ಹೊರ ವರ್ತುಲ ರಸ್ತೆ ಪ್ರದೇಶದ ರಸ್ತೆಗಳ ಸುಧಾರಣೆ, ಪಾದಚಾರಿಗಳಿಗೆ ಅನುಕೂಲ, ರಸ್ತೆ ಜಾಲದ ವಿಸ್ತರಣೆ, ಬಸ್ ಸೇವೆ ಬಲಪಡಿಸುವ ಕುರಿತು ಚರ್ಚಿಸಲಾಯಿತು. ಪೂರ್ವ ನಗರ ಪಾಲಿಕೆಯ ಪ್ರದೇಶದ ವಿಬ್ಗ್ಯೋರ್ ಶಾಲೆ ರಸ್ತೆ, ಮದರ್‌ಹುಡ್ ರಸ್ತೆ ಸೇರಿದಂತೆ ಎಲ್ಲ ಸಂಪರ್ಕ ರಸ್ತೆಗಳಲ್ಲಿ ಗುಂಡಿ ಮುಚ್ಚಲು ತಕ್ಷಣೆ ಕ್ರಮಗೊಳ್ಳಲಾಗುವುದು. ಒತ್ತುವರಿ ತೆರವುಗೊಳಿಸಲಾಗುವುದು ಎಂದು ಅಧಿಕಾರಿಗಳು ತಿಳಿಸಿದರು.

ಪೂರ್ವ ನಗರ ಪಾಲಿಕೆಯು ಇಬ್ಲೂರು ಜಂಕ್ಷನ್ ನಲ್ಲಿ ಸುರಕ್ಷಾ 75 ಅಡಿಯಲ್ಲಿ ಕಾಮಗಾರಿ ವೇಗಗೊಳಿಸಲಿದ್ದು, ಪಾದಚಾರಿಗಳ ಅನುಕೂಲಕ್ಕಾಗಿ ಸ್ಕೈವಾಕ್ ವಿಸ್ತರಿಸಲಾಗುತ್ತದೆ. ದಕ್ಷಿಣ ನಗರ ಪಾಲಿಕೆಯು ಹರಳೂರು ರಸ್ತೆ, ಕೈಕೊಂಡ್ರಹಳ್ಳಿ ರಸ್ತೆ, ಹೊಸ ರಸ್ತೆಗಳನ್ನು ಗುಂಡಿಗಳಿಲ್ಲದ ರಸ್ತೆಗಳನ್ನಾಗಿ ಮಾಡಲಾಗುವುದು. ಬಸ್ ನಿಲ್ದಾಣಗಳನ್ನು ಸುಲಭವಾಗಿ ಪ್ರವೇಶಿಸಲು ಅನುಕೂಲವಾಗುವಂತೆ ಅತಿಕ್ರಮಣಗಳನ್ನು ಮುಕ್ತಗೊಳಿಸಲಾಗುವುದು ಎಂದು ಮಾಹಿತಿ ನೀಡಿದರು.

ಬಿಎಂಟಿಸಿ ಫೀಡರ್ ಬಸ್ ಅನ್ನು ಕೆ.ಆರ್. ಪುರ ಮೆಟ್ರೊ ನಿಲ್ದಾಣದಿಂದ ಸಿಲ್ಕ್ ಬೋರ್ಡ್ ಮೆಟ್ರೊ ನಿಲ್ದಾಣದವರೆಗೆ ವಿಸ್ತರಿಸುವುದು, ಒಆರ್‌ಆರ್ ಪ್ರದೇಶದಲ್ಲಿ ಹೆಚ್ಚುವರಿ ಬಸ್ ಸೇವೆ ನೀಡಲು ಬಿಎಂಟಿಸಿಗೆ ಪ್ರಸ್ತಾವನೆ ಸಲ್ಲಿಸುವುದು, ಬಿಎಂಟಿಸಿ ಆದ್ಯತಾ ಮಾರ್ಗಕ್ಕಾಗಿ ಅಧ್ಯಯನ ನಡೆಸುವುದು, ಸರ್ಜಾಪುರ ರಸ್ತೆಯ ಸಮಗ್ರ ಅಭಿವೃದ್ಧಿ, ಎರಡೂ ಬದಿಯ ದ್ವಿತೀಯ ರಸ್ತೆ ಜಾಲ, ಜಂಕ್ಷನ್‌ಗಳ ಸುಧಾರಣೆ ಹಾಗೂ ಕ್ಯಾರೇಜ್‌ವೇ ಸರಳೀಕರಣ ಕಾರ್ಯ ಕೈಗೊಳ್ಳುವುದು ಮುಂತಾದ ವಿಚಾರಗಳ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು.

ಬೆಂಗಳೂರು ಪೂರ್ವ ನಗರ ಪಾಲಿಕೆ ಆಯುಕ್ತ ರಮೇಶ್ ಡಿ.ಎಸ್, ಬಿಎಂಟಿಸಿ ವ್ಯವಸ್ಥಾಪಕ ನಿರ್ದೇಶಕ ರಾಮಚಂದ್ರನ್ ಆರ್., ವಿವಿಧ ಅಧಿಕಾರಿಗಳು, ಪ್ರತಿನಿಧಿಗಳು ಭಾಗವಹಿಸಿದ್ದರು.

ಟೀಕೆ ಸಹಿಸದ ಡಿಸಿಎಂ: ಬಿಜೆಪಿ

ಬೆಂಗಳೂರು: ಹಲವಾರು ವರ್ಷಗಳಿಂದ ಇರುವ ಸಮಸ್ಯೆಗಳು, ನಗರದ ಕುಂದುಕೊರತೆಗಳ ಬಗ್ಗೆ ಕಂಪನಿಗಳು ಧ್ವನಿ ಎತ್ತಿದರೆ ಸರ್ಕಾರಕ್ಕೆ ಸಹಿಸಿಕೊಳ್ಳಲು ಆಗುತ್ತಿಲ್ಲ ಎಂದು ಬಿಜೆಪಿ ಶಾಸಕ ಡಾ.ಸಿ.ಎನ್.ಅಶ್ವತ್ಥನಾರಾಯಣ ಟೀಕಿಸಿದ್ದಾರೆ.

‘ಕಂಪನಿಗಳು ಬೇಕಿದ್ದರೆ ಬೆಂಗಳೂರಿನಲ್ಲಿ ಇರಲಿ, ಇಲ್ಲವಾದರೆ ಹೋಗಲಿ’ ಎಂದು ಡಿ.ಕೆ.ಶಿವಕುಮಾರ್ ನೀಡಿರುವ ಹೇಳಿಕೆಯನ್ನು ಖಂಡಿಸಿದ ಅವರು, ‘ಇದು ಯಾವ ಸಂಸ್ಕೃತಿ, ಇದು ಜನಪರ ಸರ್ಕಾರದ ಮಾತುಗಳೇ? ಈ ದುರಹಂಕಾರದ ಮಾತುಗಳನ್ನು ಬಿಟ್ಟು, ಜನಪರವಾಗಿ ಕೆಲಸ ಮಾಡಿ ವಿಶ್ವಾಸ ಮೂಡಿಸಬೇಕು’ ಎಂದು ತಿಳಿಸಿದರು.

ಬೆಂಗಳೂರಿನ ಸಮಸ್ಯೆ, ವೈಫಲ್ಯವನ್ನು ತಿಳಿಸಿ, ಕುಂದುಕೊರತೆ ಹೇಳಿದಾಗ ಅದನ್ನು ಇವರಿಗೆ ಸಹಿಸಿಕೊಳ್ಳಲು ಆಗುವುದಿಲ್ಲ ಎಂದು ಆಕ್ಷೇಪಿಸಿದರು.

ಯುವ ಜನರ ಪರಿಸ್ಥಿತಿ ಏನಾಗಬೇಕು?: ರಾಜ್ಯದಲ್ಲಿರುವ ಸಾಫ್ಟ್‌ವೇರ್ ಕಂಪನಿಗಳು ಬೇರೆ ರಾಜ್ಯಗಳಿಗೆ ಹೋದರೆ ಇಲ್ಲಿರುವ ಯುವಜನರ ಪರಿಸ್ಥಿತಿ ಏನಾಗಬೇಕು ಎಂದು ಬಿಜೆಪಿ ಶಾಸಕ ಸಿ.ಕೆ.ರಾಮಮೂರ್ತಿ ಅವರು ಪ್ರಶ್ನಿಸಿದರು.

ಬೆಂಗಳೂರಿನ ಹಲವು ಸಾಫ್ಟ್‌ವೇರ್ ದಿಗ್ಗಜರು ಮತ್ತು ಹಲವು ಕಂಪನಿಗಳು ಬೆಂಗಳೂರಿನ ರಸ್ತೆ ಗುಂಡಿಗಳ ತೊಂದರೆ ಬಗ್ಗೆ ಮಾತನಾಡಿದಾಗ ಅವರನ್ನು ಕರೆಸಿ ಮಾತನಾಡಿ, ಸಮಸ್ಯೆ ಬಗೆಹರಿಸಲು ಕ್ರಮ ತೆಗೆದುಕೊಳ್ಳಬೇಕಿತ್ತು. ಆದರೆ, ಅವರ ಜತೆ ಮಾತನಾಡದೇ ಉಪಮುಖ್ಯಮಂತ್ರಿ ಶಿವಕುಮಾರ್ ಅವರು ನೀಡಿರುವ ಹೇಳಿಕೆ ಇಡೀ ಸಾಫ್ಟ್‌ವೇರ್ ಕಂಪನಿಗಳಿಗೆ ಬಹಳಷ್ಟು ನೋವು ಉಂಟುಮಾಡಿದೆ ಎಂದು ಹೇಳಿದರು.

ರಿಂಗ್ ರಸ್ತೆಗಳು ಸೇರಿ, ಬೆಂಗಳೂರಿನ ಎಲ್ಲ ರಸ್ತೆಗಳೂ ಗುಂಡಿ ಬಿದ್ದು ಅವ್ಯವಸ್ಥೆಯಾಗಿದೆ. ಸರ್ಕಾರದಿಂದ ರಸ್ತೆ ಅಭಿವೃದ್ಧಿಗೆ ₹25 ಕೋಟಿ ಅಥವಾ ₹50 ಕೋಟಿ ಕೊಡುತ್ತೇವೆ ಎಂದು ಹೇಳುತ್ತಾರೆ. ಆದರೆ, ರಸ್ತೆ ಸರಿಪಡಿಸಲು ಈವರೆಗೆ ಒಂದೂ ಟೆಂಡರ್ ಕರೆದಿಲ್ಲ ಎಂದು ಆರೋಪಿಸಿದರು.

ಬೆಂಗಳೂರಿನ ಜನ ಶೇ 60ರಷ್ಟು ತೆರಿಗೆಯನ್ನು ಪಾವತಿಸುತ್ತಿದ್ದಾರೆ. ಆದ್ದರಿಂದ, ಎಲ್ಲ ಸಾಫ್ಟ್‌ವೇರ್ ಕಂಪನಿಗಳ ಜತೆ ಮಾತನಾಡಿ, ರಾಜ್ಯಕ್ಕೆ ಮರಳುವಂತೆ ಮಾಡಬೇಕೆ ಹೊರತು ನೋವು ಉಂಟು ಮಾಡುವ ಹೇಳಿಕೆಯನ್ನು ನೀಡಬಾರದು. ಬದಲಾಗಿ ಬೆಂಗಳೂರಿನ ಅಭಿವೃದ್ಧಿಗೆ ಸರ್ಕಾರ ಒತ್ತು ನೀಡಬೇಕು ಎಂದು ಅವರು ಹೇಳಿದರು.

ಮಳೆ ಅನಾಹುತ ಪ್ರದೇಶಗಳಿಗೆ ಮುಖ್ಯ ಕಾರ್ಯದರ್ಶಿ ಭೇಟಿ

ಗುಂಡಿ, ಚರಂಡಿ ಸರಿಪಡಿಸಲು ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಸುರಿಯುತ್ತಿರುವ ಧಾರಾಕಾರ ಮಳೆಯಿಂದಾಗಿ ಉಂಟಾಗಿರುವ ಅನಾಹುತಗಳ ಬಗ್ಗೆ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರು ಶುಕ್ರವಾರ ವಿವಿಧ ಪ್ರದೇಶಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಸಿಲ್ಕ್ ಬೋರ್ಡ್ ಮೇಲ್ಸೇತುವೆ ಕೆಳಭಾಗದ ಸುತ್ತ, ರಾಜಕಾಲುವೆಯನ್ನು ಸ್ವಚ್ಛಗೊಳಿಸಬೇಕು. ಬಳಕೆಯಾಗದ ಜಾಗದಲ್ಲಿರುವ ಕಟ್ಟಡ ಅವಶೇಷ, ರಾಜಕಾಲುವೆಯಲ್ಲಿರುವ ಹೂಳನ್ನು ತೆರವುಗೊಳಿಸಬೇಕು. ಪೇವರ್ ಬ್ಲಾಕ್ಸ್ ಅಳವಡಿಸಬೇಕು. ಸಿಲ್ಕ್ ಬೋರ್ಡ್ ಜಂಕ್ಷನ್‌ನಲ್ಲಿ ಜಲಾವೃತವಾಗುವುದನ್ನು ತಪ್ಪಿಸಲು ಕ್ರಮ ಕೈಗೊಳ್ಳಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಬಿಎಂಆರ್‌ಸಿಎಲ್ ವತಿಯಿಂದ ಪಾದಚಾರಿ ಮೇಲ್ಸೇತುವೆ ನಿರ್ಮಾಣವಾಗುತ್ತಿದೆ. ಮೆಟ್ರೊ ಕಾಮಗಾರಿಯನ್ನು ಮುಂದಿನ ವರ್ಷದ ಜೂನ್‌ಗೆ ಪೂರ್ಣಗೊಳಿಸಬೇಕು. ಮೆಟ್ರೊ ನಿಗಮದಿಂದ ಸ್ಕೈವಾಕ್ ನಿರ್ಮಾಣ ಮಾಡಬೇಕು. ಪಾಲಿಕೆಯಿಂದ ಎತ್ತರದ ಪಾದಚಾರಿ ಮಾರ್ಗ (ಎಚ್‌ಆರ್‌ಪಿಸಿ) ನಿರ್ಮಾಣ ಮಾಡಬೇಕು. ರಾಜಕಾಲುವೆಯಲ್ಲಿ ಹೂಳೆತ್ತಬೇಕು. ಆ ಹೂಳನ್ನು ಸ್ಥಳದಲ್ಲಿಯೇ ಬಿಡದೆ ತೆರವುಗೊಳಿಸಬೇಕು ಎಂದು ತಿಳಿಸಿದರು.

ಕೆಎಎಲ್ ಕಾಲೊನಿಯಲ್ಲಿ ಅಳವಡಿಸಲು ಬೃಹತ್ ಪೈಪ್‌ಗಳನ್ನು ಜಂಕ್ಷನ್‌ನಲ್ಲಿ ಹಾಕಿದ್ದು, ಅದನ್ನು ತೆರವುಗೊಳಿಸಬೇಕು. ಸಿಲ್ಕ್ ಬೋರ್ಡ್ ಮೆಟ್ರೊ ಕಾಮಗಾರಿ ನಡೆಯುವ ಸ್ಥಳದಲ್ಲಿ ಅವಶೇಷಗಳನ್ನು ರಸ್ತೆಯಲ್ಲೇ ಹಾಕಿದ್ದು, ಅದನ್ನು ತಕ್ಷಣ ತೆರವುಗೊಳಿಸಬೇಕು ಎಂದು ಸೂಚನೆ ನೀಡಿದರು.

ಎಚ್‌ಎಸ್‌ಆರ್ 6ನೇ ಸೆಕ್ಟರ್ ಮಂಗಮ್ಮನ ಪಾಳ್ಯ ಮುಖ್ಯರಸ್ತೆ ಬಳಿ ನಡೆಯುತ್ತಿರುವ ಮೆಟ್ರೊ ಕಾಮಗಾರಿಯ ಅನುಪಯುಕ್ತ ವಸ್ತುಗಳನ್ನು ತೆರವುಗೊಳಿಸಿ, ರಸ್ತೆ ಡಾಂಬರೀಕರಣ ಮಾಡುವಂತೆ ತಿಳಿಸಿದರು.

ವೈಟ್ ಟಾಪಿಂಗ್ ಕಾಮಗಾರಿ ನಡೆಯುತ್ತಿರುವ ಅಗರ ಕೆರೆ ರಸ್ತೆಯನ್ನು ಪರಿಶೀಲಿಸಿದರು. ಕೆಲಸ ವೇಗವಾಗಿ ನಡೆಯುತ್ತಿಲ್ಲ ಎಂದು ಸ್ಥಳೀಯರು ಅಧಿಕಾರಿಗಳ ಗಮನಕ್ಕೆ ತಂದರು. ಗುತ್ತಿಗೆದಾರರು ಯಾರು? ಕೆಲಸ ಯಾವಾಗ ಆರಂಭವಾಗಿದೆ? ಯಾವಾಗ ಮುಗಿಯುತ್ತದೆ ಎಂಬ ಬಗ್ಗೆ ಮಾಹಿತಿ ನೀಡುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಅಗರ ಜಂಕ್ಷನ್ ಬಳಿ ಮೇಲ್ಸೇತುವೆಯಿಂದ ಬೀಳುವ ನೀರಿಗೆ ಅಳವಡಿಸಿರುವ ಪೈಪ್ ಹಾಳಾಗಿರುವುದನ್ನು ಸರಿಪಡಿಸಲು ಸೂಚಿಸಿದರು. ಸರ್ಜಾಪುರ ಸರ್ವಿಸ್ ರಸ್ತೆಯನ್ನು ಆದ್ಯತೆ ಮೇಲೆ ಅಭಿವೃದ್ಧಿಪಡಿಸಬೇಕು. ಇಬ್ಲೂರು ಜಂಕ್ಷನ್ ಬಳಿ ಪಾದಚಾರಿ ಮೇಲ್ಸೇತುವೆ ನಿರ್ಮಿಸಬೇಕು. ಹಾಳಾಗಿರುವ ಪಣತ್ತೂರು ರಸ್ತೆ ದುರಸ್ತಿ ಮಾಡಬೇಕು. ವಿಬ್‌ಗಯಾರ್ ಸ್ಕೂಲ್ ರಸ್ತೆ, ತೂಬರಹಳ್ಳಿ ಬಳಿ ರಸ್ತೆ ಹಾಗೂ ಚರಂಡಿ ಕಾಮಗಾರಿಗೆ ವೇಗ ನೀಡಬೇಕು ಎಂದು ಹೇಳಿದರು.

ಮಳೆಯಿಂದಾಗಿ ಉಂಟಾಗಿರುವ ಅನಾಹುತಗಳ ಬಗ್ಗೆ ಪರಿಶೀಲನೆ ಮಾಡಲು ನಗರದ ವಿವಿಧ ಸ್ಥಳಗಳಿಗೆ ಶುಕ್ರವಾರ ಭೇಟಿ ನೀಡಿದ್ದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರು ಹಾಳಾಗಿರುವ ರಸ್ತೆಯ ಫೋಟೊ ತೆಗೆದರು

ಚರಂಡಿ, ಕೆಸರಿನಲ್ಲಿ ಸಿಲುಕಿದ ಶಾಲಾ ಬಸ್

ರಸ್ತೆಯಲ್ಲಿ ಬಿದ್ದಿರುವ ಗುಂಡಿಯಲ್ಲಿ ಸಿಲುಕಿದ ಶಾಲಾ ಬಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ರಸ್ತೆಗಳಲ್ಲಿ ಬಿದ್ದಿರುವ ಗುಂಡಿಗಳಿಂದಾಗಿ ವಾಹನ ಸಂಚಾರಕ್ಕೆ ಅಡಚಣೆ ಉಂಟಾಗುತ್ತಿದೆ. ಅದರಲ್ಲೂ ಶಾಲೆಗೆ ಮಕ್ಕಳನ್ನು ಕರೆದೊಯ್ಯುವ ಬಸ್ ಚಾಲಕರು ತೀವ್ರ ಸಮಸ್ಯೆಗೆ ಒಳಗಾಗುತ್ತಿದ್ದಾರೆ.

ಶುಕ್ರವಾರ ಬೆಳಿಗ್ಗೆ ಹಾಗೂ ಮಧ್ಯಾಹ್ನ ಬೇರೆ ಬೇರೆ ಶಾಲೆಯ ಎರಡು ಬಸ್‌ಗಳು ಗುಂಡಿ ಹಾಗೂ ಕೆಸರಿನಲ್ಲಿ ಸಿಲುಕಿಕೊಂಡಿದ್ದವು. ಬಳಗೆರೆ ಪಣತ್ತೂರು ರಸ್ತೆಯಲ್ಲಿ ಈ ಘಟನೆ ನಡೆದಿದೆ.

ಕ್ರೈಸ್ಟ್ ಪಬ್ಲಿಕ್ ಶಾಲೆಯ ಬಸ್ ರಸ್ತೆಯಲ್ಲಿ ಸಾಗುವಾಗ ಚಕ್ರಗಳು ಚರಂಡಿಯಲ್ಲಿ ಸಿಲುಕಿಕೊಂಡಿದ್ದವು. ಬಸ್ ಮೇಲಕ್ಕೆ ಎತ್ತಲು ಸಾಹಸ ಪಡಬೇಕಾಯಿತು. ನ್ಯೂ ಹೊರೈಜನ್ ಗುರುಕುಲ ಶಾಲೆಗೆ ಸೇರಿದ ಇನ್ನೊಂದು ಬಸ್ ಕೆಸರಿನಲ್ಲಿ ಸಿಲುಕಿಕೊಂಡಿತ್ತು. ಚಾಲಕ ಪರದಾಡಿದರು. ಸ್ಥಳಕ್ಕೆ ಜೆಸಿಬಿ ಯಂತ್ರ ತರಿಸಿ ಬಸ್ ಮೇಲಕ್ಕೆ ಎತ್ತಲಾಯಿತು. ಕಳೆದ ವಾರವೂ ಇದೇ ಶಾಲೆಯ ಬಸ್, ರಸ್ತೆಯಲ್ಲಿ ಗುಂಡಿಯಿಂದಾಗಿ ವಾಲಿತ್ತು.

ಗುಂಡಿಗಳಿಂದ ಶಾಲಾ ಬಸ್‌ಗಳು ಸುಗಮವಾಗಿ ಸಂಚರಿಸಲು ಸಾಧ್ಯವಾಗುತ್ತಿಲ್ಲ. ಮಕ್ಕಳ ಸುರಕ್ಷತೆಯ ಬಗ್ಗೆ ಆತಂಕ ವ್ಯಕ್ತವಾಗುತ್ತಿದೆ ಎಂದು ಪೋಷಕರು ಹೇಳಿದರು.

‘ಕಳೆದ ವಾರದ ಘಟನೆಯ ಬಳಿಕ ಚರಂಡಿಗೆ ಪೈಪ್ ಅಳವಡಿಸಲಾಗಿದೆ. ಆದಷ್ಟು ಬೇಗ ರಸ್ತೆ ದುರಸ್ತಿ ಕೆಲಸವನ್ನು ಪೂರ್ಣಗೊಳಿಸಬೇಕು’ ಎಂದು ಪೋಷಕ ಸುನಿಲ್ ಕುಮಾರ್ ವುಪ್ಪುಲ ಆಗ್ರಹಿಸಿದರು.

‘ಕೇವಲ 2.5 ಕಿ.ಮೀ ಸಂಚರಿಸಲು ಎರಡೂವರೆ ಗಂಟೆ ಬೇಕಾಗುತ್ತಿದೆ’ ಎಂದು ನೀಲಿಮಾ ಕುಮಾರ ಆತಂಕ ವ್ಯಕ್ತಪಡಿಸಿದರು.

ನಕಲಿ ಪ್ರಮಾಣಪತ್ರ: ಎಫ್‌ಡಿಎ ಅಮಾನತು

ಹೊಸಪೇಟೆ (ವಿಜಯನಗರ): ‘ನಕಲಿ ದಾಖಲೆ ಸಲ್ಲಿಸಿ, ಅಂಗವಿಕಲ ಕೋಟಾದಡಿ ಸರ್ಕಾರಿ ವೈದ್ಯಕೀಯ ಸೀಟು ಪಡೆಯಲು ನೆರವು ನೀಡಿದ್ದ ಹಗರಿಬೊಮ್ಮನಹಳ್ಳಿ ಸರ್ಕಾರಿ ಆಸ್ಪತ್ರೆಯ ಪ್ರಥಮ ದರ್ಜೆ ಸಹಾಯಕ (ಎಫ್‌ಡಿಎ) ಉಮೇಶ್ ನಾಗಪ್ಪ ಚೌಧರಿಯನ್ನು ಅಮಾನತು ಮಾಡಲಾಗಿದೆ’ ಎಂದು ಡಾ.ಎಲ್.ಆರ್.ಶಂಕರ್ ನಾಯ್ಕ್ ತಿಳಿಸಿದರು.

‘ಪ್ರಕರಣ ಬೆಳಕಿಗೆ ಬಂದ ತಕ್ಷಣ ಸಮಗ್ರ ತನಿಖೆ ನಡೆಸಿ ಬೆಂಗಳೂರಿನ ಮಲ್ಲೇಶ್ವರ ಪೊಲೀಸ್ ಠಾಣೆ ತನಿಖಾಧಿಕಾರಿಗೆ ವರದಿ ಸಲ್ಲಿಸಿದ್ದೇನೆ. ಹಗರಿಬೊಮ್ಮನಹಳ್ಳಿಯಲ್ಲಿ 13 ಮತ್ತು ಹೊಸಪೇಟೆಯಲ್ಲಿ 7 ಅಂಗವಿಕಲರ ವಿಶಿಷ್ಟ ಗುರುತಿನ ಚೀಟಿ (ಯುಡಿಐಡಿ) ನೀಡಿದ್ದು ಗೊತ್ತಾಗಿದೆ’ ಎಂದು ಅವರು ಶುಕ್ರವಾರ ‘ಪ್ರಜಾವಾಣಿ’ಗೆ ತಿಳಿಸಿದರು.

‘ಉಮೇಶ್ ಮೊದಲು ಹೊಸಪೇಟೆಯಲ್ಲಿದ್ದು, ಜುಲೈ 9ರಂದು ಹಗರಿಬೊಮ್ಮನಹಳ್ಳಿಗೆ ವರ್ಗಾವಣೆಗೊಂಡಿದ್ದ, ಎರಡೂ ಕಡೆ ಆತನೇ ಯುಡಿಐಡಿ ಕಾರ್ಡ್ ವಿತರಣೆ ಮಾಡಿದ್ದು ಮೇಲ್ನೋಟಕ್ಕೆ ಕಂಡುಬಂದಿದೆ’ ಎಂದು ತಿಳಿಸಿದರು.

ಶಾಸಕರಿಗೆ ₹80 ಲಕ್ಷ ವರದಿಗೆ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಶಾಸಕರಿಗೆ ₹80 ಲಕ್ಷ ಕೊಟ್ಟಿರುವುದಾಗಿ ಆನೇಕಲ್ ಇನ್‌ಸ್ಪೆಕ್ಟರ್ ಹೇಳಿಕೆ ನೀಡಿದ್ದಾರೆ. ಈ ವಿಚಾರವಾಗಿ ಎರಡು ದಿನಗಳಲ್ಲಿ ವರದಿ ನೀಡುವಂತೆ ಸೂಚಿಸಿದ್ದೇನೆ’ ಎಂದು ಗೃಹ ಸಚಿವ ಜಿ.ಪರಮೇಶ್ವರ ಹೇಳಿದ್ದಾರೆ.

ಹಿರಿಯ ಪೊಲೀಸ್ ಅಧಿಕಾರಿಗಳ ಜತೆ ಶುಕ್ರವಾರ ಸಭೆ ನಡೆಸಿದ ಬಳಿಕ ಅವರು ಸುದ್ದಿಗಾರರ ಜತೆ ಮಾತನಾಡಿದರು.

‘ಶಾಸಕರ ಮೇಲೆ ಆರೋಪ ಮಾಡುತ್ತಾನೆ ಎಂದಾದರೆ, ಈವರೆಗೂ ಯಾಕೆ ಕ್ರಮ ತೆಗೆದುಕೊಂಡಿಲ್ಲ. ವರದಿ ಕೊಟ್ಟರೆ ತಕ್ಷಣ ಕ್ರಮ ತೆಗೆದುಕೊಳ್ಳುತ್ತೇವೆ’ ಎಂದು ಹೇಳಿದರು.

ಡ್ರಗ್ಸ್ ದಂಧೆಯ ಜತೆ ನಂಟು ಹೊಂದಿದ್ದ ಇನ್‌ಸ್ಪೆಕ್ಟರ್ ಸೇರಿ 11 ಮಂದಿ ಪೊಲೀಸರನ್ನು ಅಮಾನತುಗೊಳಿಸಲಾಗಿದೆ. ಅವರ ವಿರುದ್ಧ ತಕ್ಷಣವೇ ಇಲಾಖಾ ವಿಚಾರಣೆ ನಡೆಸಿ, ಸರ್ಕಾರಕ್ಕೆ ವರದಿ ನೀಡುವಂತೆ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ ಎಂದರು.

‘ಡ್ರಗ್ಸ್ ಮಾಫಿಯಾ ಮತ್ತು ಇತರ ಅಕ್ರಮ ದಂಧೆಯಲ್ಲಿ ಪೊಲೀಸರು ಶಾಮೀಲಾಗಿರುವುದು ಕಂಡುಬಂದರೆ ಇನ್ನು ಎಚ್ಚರಿಕೆ ಕೊಡುವುದಿಲ್ಲ. ನೇರ ಕ್ರಮ ತೆಗೆದುಕೊಳ್ಳುತ್ತೇವೆ’ ಎಂದರು.

ರಸ್ತೆ ಬಂದ್: ಶಾಲಾ ಮಕ್ಕಳ ಪರದಾಟ

ಯಲಹಂಕ: ಆವಲಹಳ್ಳಿ ಸಮೀಪದ ಪ್ರೆಸಿಡೆನ್ಸಿ ಶಾಲೆಯ ಬಳಿ ಶಾಲಾ ವಾಹನಗಳು, ಮಕ್ಕಳು ಹಾಗೂ ಪೋಷಕರು, ಓಡಾಡುತ್ತಿದ್ದ ರಸ್ತೆಯನ್ನು ವ್ಯಕ್ತಿಯೊಬ್ಬರು ಶುಕ್ರವಾರ ಏಕಾಏಕಿ ಬಂದ್ ಮಾಡಿದ ಪರಿಣಾಮ, ವಿದ್ಯಾರ್ಥಿಗಳು ಶಾಲೆಗೆ ತೆರಳಲು ತೊಂದರೆ ಅನುಭವಿಸಿದರು.

ಹಲವು ವರ್ಷಗಳಿಂದ ಪ್ರೆಸಿಡೆನ್ಸಿ ಶಾಲೆಯ ವಾಹನಗಳು, ಮಕ್ಕಳು ಮತ್ತು ಪೋಷಕರು ಈ ರಸ್ತೆಯನ್ನು ಬಳಸುತ್ತಿದ್ದರು. ಆದರೆ ಈ ರಸ್ತೆಯು ನಮಗೆ ಸೇರಿದ್ದೆಂದು ಹೇಳಿಕೊಂಡಿದ್ದ ಪಕ್ಕದ ಜಮೀನಿನ ಮಾಲೀಕರಾದ ವಸಂತ ಎಂಬ ಮಹಿಳೆ ಮತ್ತು ಪ್ರೆಸಿಡೆನ್ಸಿ ಶಾಲೆಯ ನಡುವೆ ಹಲವಾರು ವರ್ಷಗಳಿಂದ ವಿವಾದ ಏರ್ಪಟ್ಟಿತ್ತು. ಇದುವರೆಗೂ ಸಮಸ್ಯೆ ಬಗೆಹರಿದಿಲ್ಲ. ಇದೇ ವಿವಾದಕ್ಕೆ ಸಂಬಂಧಿಸಿದಂತೆ ಪ್ರೆಸಿಡೆನ್ಸಿ ಶಾಲೆಯವರು 2017ರಲ್ಲಿ ನ್ಯಾಯಾಲಯದ ಮೆಟ್ಟಿಲೇರಿದ್ದರು.

ಜಮೀನಿನ ಮಾಲೀಕರು ರಸ್ತೆಯು ತಮ್ಮ ಪರವಾಗಿ ಆಗಿದೆ ಎಂದು ಎರಡು ದಿನಗಳ ಹಿಂದೆ ಜೆಸಿಬಿಯಿಂದ ರಸ್ತೆಯಲ್ಲಿ ಗುಂಡಿ ತೆಗೆಸಿದ್ದರು. ಗುರುವಾರ ಪ್ರೆಸಿಡೆನ್ಸಿ ಶಾಲೆಯವರು ಹೈಕೋರ್ಟ್‌ನ ಮೊರೆಹೋಗಿ ಈ ಆದೇಶಕ್ಕೆ ತಡೆಯಾಜ್ಞೆ ತಂದಿದ್ದರು.

ವಿಚಾರಣೆ ವೇಳೆ, ಸದ್ಯಕ್ಕೆ ಶಾಲಾ ಮಕ್ಕಳ ಓಡಾಟಕ್ಕೆ ತೊಂದರೆಯಾಗದಂತೆ ಮುಂದಿನ ವಿಚಾರಣೆಯವರೆಗೆ ಯಥಾಸ್ಥಿತಿ ಕಾಪಾಡಿಕೊಳ್ಳುವಂತೆ ನ್ಯಾಯಾಲಯ ಆದೇಶ ನೀಡಿತ್ತು.

ಈ ಮಧ್ಯೆ ಜಮೀನಿನ ಮಾಲೀಕರು ಶುಕ್ರವಾರ ಮತ್ತೆ ರಸ್ತೆಯಲ್ಲಿ ಗುಂಡಿ ತೋಡಿದ್ದರಿಂದ ಸಮಸ್ಯೆ ಉಂಟಾಯಿತು. ಸ್ಥಳಕ್ಕೆ ಆಗಮಿಸಿದ ರಾಜಾನುಕುಂಟೆ ಪೊಲೀಸರು, ಜಮೀನಿನ ಮಾಲೀಕರಿಗೆ ಕೋರ್ಟ್ ಆದೇಶದ ಪ್ರತಿಯನ್ನು ತೋರಿಸಿ, ರಸ್ತೆಯನ್ನು ಮುಚ್ಚಲು ವ್ಯವಸ್ಥೆ ಕಲ್ಪಿಸಿ, ಸಂಚಾರಕ್ಕೆ ಅನುವು ಮಾಡಿಕೊಟ್ಟರು.

ಆವಲಹಳ್ಳಿ ಸಮೀಪ ರಸ್ತೆಯಲ್ಲಿ ಗುಂಡಿ ತೋಡಿರುವುದು

ಮುಖ್ಯಾಂಶಗಳು

- ಪ್ರೆಸಿಡೆನ್ಸಿ ಶಾಲೆಯ ಮಕ್ಕಳಿಗೆ ತೊಂದರೆ
- ಶಾಲೆ– ಜಮೀನು ಮಾಲೀಕರ ನಡುವೆ ವಿವಾದ
- ಕೋರ್ಟ್ ಮೆಟ್ಟಿಲೇರಿದ್ದ ಶಾಲೆ

ಚರಂಡಿ ಸಮಸ್ಯೆಯಿಂದಾಗಿ ರಸ್ತೆಯಲ್ಲೇ ಹರಿದ ನೀರು • ವಾಹನ ಸಂಚಾರಕ್ಕೆ ತೊಡಕು

ಮಳೆ ಅಬ್ಬರ: ಇಳೆಗೆ ಬಿದ್ದ ಮರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗುರುವಾರ ರಾತ್ರಿ ಮತ್ತು ಶುಕ್ರವಾರ ಸುರಿದ ಮಳೆಯಿಂದಾಗಿ ನಗರದ ಹಲವು ಕಡೆಗಳಲ್ಲಿ ಮರಗಳು ಮುರಿದುಬಿದ್ದಿವೆ. ಅಲ್ಲದೆ ಚರಂಡಿ ವ್ಯವಸ್ಥೆ ಸಮರ್ಪಕವಾಗಿ ಇಲ್ಲದೇ ಅನೇಕ ಪ್ರದೇಶಗಳಲ್ಲಿ ರಸ್ತೆಯ ಮೇಲೆ ನೀರು ನಿಂತಿತ್ತು.

ರಾಜಾಜಿನಗರ, ಯಲಹಂಕ, ಬಸವನಗುಡಿ, ದೊಮ್ಮಲೂರು, ಶಾಂತಿನಗರ, ರಾಜರಾಜೇಶ್ವರಿ ನಗರ, ಡಾ. ರಾಜಕುಮಾರ್ ರಸ್ತೆ, ಗಿರಿನಗರ, ಅಟ್ಟೂರು, ಜಕ್ಕೂರು ಎಂಸಿಎಚ್‌ಎಸ್ ಬಡಾವಣೆ ಸೇರಿದಂತೆ ವಿವಿಧೆಡೆ ಮರಗಳು ರಸ್ತೆಗಳ ಮೇಲೆ ಬಿದ್ದಿದ್ದು ಅವುಗಳನ್ನು ತೆರವುಗೊಳಿಸಲಾಗಿದೆ ಎಂದು ಜಿಬಿಎ ಅಧಿಕಾರಿಗಳು ತಿಳಿಸಿದ್ದಾರೆ.

ಮರ ಬಿದ್ದ ಕಾರಣ ಹೊಸೂರು ರಸ್ತೆಯ ಯುಕೊ ಬ್ಯಾಂಕ್‌ನಿಂದ ಮೈಕ್ರೋ ಲ್ಯಾಂಡ್ ರಸ್ತೆ ಕಡೆಗಿನ ಸಂಪರ್ಕ ರಸ್ತೆಯನ್ನು ತಾತ್ಕಾಲಿಕವಾಗಿ ಮುಚ್ಚಲಾಗಿದೆ. ಸೇಂಟ್ ಮಾರ್ಕ್ಸ್ ರಸ್ತೆಯಲ್ಲಿ ಮರ ಬಿದ್ದ ಕಾರಣ, ಎಸ್‌ಬಿಐನಿಂದ ಕ್ಯಾಶ್ ಫಾರ್ಮಸಿ ಜಂಕ್ಷನ್ ಕಡೆಗೆ ಹೋಗುವ ರಸ್ತೆಯನ್ನು ತಾತ್ಕಾಲಿಕವಾಗಿ ಮುಚ್ಚಲಾಗಿತ್ತು. ಬಂಬೂಬಜಾರ್ ಜಂಕ್ಷನ್‌ನಲ್ಲಿ ಮರ ಬಿದ್ದಿದ್ದರಿಂದ ಕ್ವೀನ್ಸ್ ರಸ್ತೆಯ ಕಡೆಗೆ ಸಾಗುವ ವಾಹನಗಳಿಗೆ ಅಡ್ಡಿಯಾಯಿತು.

ರಸ್ತೆಯಲ್ಲಿ ನೀರು: ಹೆಣ್ಣೂರು ಕಡೆಯಿಂದ ಬಾಗಲೂರು ಮುಖ್ಯರಸ್ತೆ ಕಡೆಗೆ ಸಾಗುವ ರಸ್ತೆ ಜಲಾವೃತಗೊಂಡಿತ್ತು. ಯಲಹಂಕ ಸರ್ವಿಸ್ ರಸ್ತೆಯಲ್ಲೇ ನೀರು ಹರಿದಿದೆ. ಹೆಬ್ಬಾಳ ಕಡೆಯಿಂದ ವಿಮಾನ ನಿಲ್ದಾಣ ರಸ್ತೆ ಕಡೆಗೆ ಸಾಗುವ ವಾಹನಗಳಿಗೆ ರಸ್ತೆಯಲ್ಲೇ ಹರಿದ ನೀರು ತೊಡಕು ಉಂಟುಮಾಡಿತು.

ಗೆದ್ದಲಹಳ್ಳಿ ಜಂಕ್ಷನ್‌ನಲ್ಲಿ ನೀರು ನಿಂತಿದ್ದರಿಂದ ವಡ್ಡರಪಾಳ್ಯ ಕಡೆಗೆ ವಾಹನಗಳು ನಿಧಾನಗತಿಯಿಂದ ಸಾಗಿದವು. ರಾಮಮೂರ್ತಿ ನಗರದಲ್ಲಿ ನೀರು ನಿಂತಿದ್ದರಿಂದ ಎಂಎಂಟಿ ಜಂಕ್ಷನ್ ಕಡೆಗೆ ಹೋಗುವ ವಾಹನಗಳು ಸಾಲುಗಟ್ಟಿ ನಿಲ್ಲುವಂತಾಯಿತು. ಹೊಂಗಸಂದ್ರ ಮೆಟ್ರೊ–ಎಲೆಕ್ಟ್ರಾನಿಕ್ ಸಿಟಿ ಎತ್ತರಿಸಿದ ಮಾರ್ಗದ ಬಳಿ ನೀರು ನಿಂತಿದ್ದರಿಂದ ವಾಹನ ಸಂಚಾರಕ್ಕೆ ತೊಡಕಾಯಿತು.

ಮಳೆ ವಿವರ: ಗುರುವಾರ ರಾತ್ರಿಯಿಂದ ಶುಕ್ರವಾರ ರಾತ್ರಿಯವರೆಗೆ 24 ಗಂಟೆಗಳಲ್ಲಿ ಹಲವು ಪ್ರದೇಶಗಳಲ್ಲಿ ಅಧಿಕ ಮಳೆ ದಾಖಲಾಗಿದೆ.

ಬಿಳೇಕಲ್ಲು 5.5 ಸೆಂ.ಮೀ., ಅರಕೆರೆ 5.3 ಸೆಂ.ಮೀ., ಬೇಗೂರು 5.3 ಸೆಂ.ಮೀ., ಕುಮಾರಸ್ವಾಮಿ ಬಡಾವಣೆ 5.3 ಸೆಂ.ಮೀ., ವಿದ್ಯಾಪೀಠ 5.3 ಸೆಂ.ಮೀ., ಬಸವನಗುಡಿ 5.3 ಸೆಂ.ಮೀ., ಗಾಳಿ ಆಂಜನೇಯ ದೇವಸ್ಥಾನ 5.2 ಸೆಂ.ಮೀ., ಹಂಪಿನಗರ 5.2 ಸೆಂ.ಮೀ., ಮಾರುತಿ ಮಂದಿರ 5.2 ಸೆಂ.ಮೀ., ಸಾರಕ್ಕಿ 5.2 ಸೆಂ.ಮೀ., ಪುಟ್ಟೇನಹಳ್ಳಿ 5.2 ಸೆಂ.ಮೀ., ಬೊಮ್ಮನಹಳ್ಳಿ 4.9 ಸೆಂ.ಮೀ., ಪೀಣ್ಯ ಕೈಗಾರಿಕಾ ಪ್ರದೇಶ 4.4 ಸೆಂ.ಮೀ., ಹೆಗ್ಗನಹಳ್ಳಿ 4.4 ಸೆಂ.ಮೀ., ಜ್ಞಾನಭಾರತಿ 4.4 ಸೆಂ.ಮೀ., ರಾಜರಾಜೇಶ್ವರಿ ನಗರ 4.4 ಸೆಂ.ಮೀ., ನಾಗಪುರ 4.3 ಸೆಂ.ಮೀ., ಸಂಪಂಗಿರಾಮನಗರ 4.3 ಸೆಂ.ಮೀ., ಕೋರಮಂಗಲ 4.1 ಸೆಂ.ಮೀ., ದೊಮ್ಮಲೂರು 4 ಸೆಂ.ಮೀ. ಮಳೆ ದಾಖಲಾಗಿದೆ.

ಹೊಸೂರು ರಸ್ತೆಗೆ ಅಡ್ಡವಾಗಿ ಬಿದ್ದಿರುವ ಮರವನ್ನು ತೆರವುಗೊಳಿಸುವ ಕಾರ್ಯ ನಡೆಯಿತು

ಚಿಟಿಕೆ ಸುದ್ದಿ

ಅನಾರೋಗ್ಯದಿಂದ ಚಿರತೆ ಮೃತ

ಆನೇಕಲ್: ತಾಲ್ಲೂಕಿನ ಬನ್ನೇರುಘಟ್ಟ ಜೈವಿಕ ಉದ್ಯಾನದಲ್ಲಿ ಗುರುವಾರ ಅನಾರೋಗ್ಯದಿಂದ 15 ವರ್ಷದ ಗಂಡು ಚಿರತೆ ಅರ್ಜುನ್ ಮೃತಪಟ್ಟಿದೆ. ನಿರಂಜನ್ ಮತ್ತು ಸರಸ್ವತಿಗೆ ಜನಿಸಿದ್ದ ಅರ್ಜುನ್ ಚಿರತೆ ಕಳೆದ ಕೆಲ ದಿನಗಳಿಂದ ಅನಾರೋಗ್ಯದಿಂದ ಬಳಲುತ್ತಿತ್ತು.

ಮರಣೋತ್ತರ ಪರೀಕ್ಷೆಯಲ್ಲಿ ಪಯೋಥೋರಾಕ್ಸ್ ಮತ್ತು ಸೆಪ್ಟಿಸೆಮಿಯಾ ಎಂಬ ಕಾಯಿಲೆಯಿಂದ ಮೃತಪಟ್ಟಿದೆ ಎಂದು ವರದಿ ಬಂದಿದೆ. ಹೆಚ್ಚಿನ ಮಾಹಿತಿಗಾಗಿ ಚಿರತೆ ಮಾದರಿಗಳನ್ನು ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ ಎಂದು ಉದ್ಯಾನದ ಪತ್ರಿಕಾ ಪ್ರಕಟಣೆ ತಿಳಿಸಿದೆ.

ಅನುಮತಿ ಪಡೆಯದೆ ಆನೆ ಜೊತೆ ರೀಲ್ಸ್

ಮೈಸೂರು: 'ದಸರಾ ಜಂಬೂ ಸವಾರಿಯಲ್ಲಿ ಭಾಗವಹಿಸುವ ಆನೆಗಳು ವಾಸ್ತವ್ಯ ಹೂಡಿರುವ ಸ್ಥಳಕ್ಕೆ ಗುರುವಾರ ರಾತ್ರಿ ಅನುಮತಿ ಪಡೆಯದೆ ತೆರಳಿ ಆನೆಗಳೊಂದಿಗೆ ಅಪಾಯಕಾರಿಯಾಗಿ ರೀಲ್ಸ್ ಮಾಡಿ ಜಾಲತಾಣದಲ್ಲಿ ಹರಿಬಿಟ್ಟಿದ್ದ ಯುವತಿ ವಿರುದ್ಧ ಪ್ರಕರಣ ದಾಖಲಿಸಿಕೊಂಡು ದಂಡ ವಿಧಿಸಲಾಗುವುದು' ಎಂದು ಅರಣ್ಯ ಇಲಾಖೆಯ ಅಧಿಕಾರಿಗಳು ತಿಳಿಸಿದ್ದಾರೆ.

ಯುವತಿ ಅನುಮತಿ ಪಡೆಯದೆಯೇ ಆನೆಯ ಬಳಿಗೆ ತೆರಳಿ, ಸೊಂಡಿಲನ್ನು ತಬ್ಬಿಕೊಂಡು ವಿಡಿಯೊ ಚಿತ್ರೀಕರಿಸಿದ್ದಾರೆ. ವಿಡಿಯೊ ನೋಡಿದ ಹಲವರು ಅರಣ್ಯ ಇಲಾಖೆಯ ಕಾರ್ಯವೈಖರಿ ಬಗ್ಗೆ ಆಕ್ರೋಶ ವ್ಯಕ್ತಪಡಿಸಿದ್ದರು.

'ಸಿಬ್ಬಂದಿಯ ಕಣ್ತಪ್ಪಿಸಿ ಆನೆಯ ಬಳಿಗೆ ತೆರಳಿದ್ದ ಯುವತಿಯನ್ನು ಪತ್ತೆ ಹಚ್ಚಲಾಗುವುದು. ಈ ಹಿಂದೆ ಇಂಥದ್ದೇ ಪ್ರತ್ಯೇಕ ಮೂರು ಪ್ರಕರಣಗಳಲ್ಲಿಲ್ಲಿ ₹1 ಸಾವಿರ ದಂಡ ವಿಧಿಸಿದ್ದೇವೆ' ಎಂದು ವನ್ಯಜೀವಿ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ ಐ.ಬಿ. ಪ್ರಭುಗೌಡ ತಿಳಿಸಿದ್ದಾರೆ.

ಮಾಯಾಗೆ ರೈಸಿಂಗ್ ಸ್ಟಾರ್ ಪುರಸ್ಕಾರ

ಬೆಂಗಳೂರು: ಇನ್ಫರ್ಮೇಷನ್ ಸರ್ವೀಸಸ್ ಗ್ರೂಪ್ (ಐಎಸ್‌ಜಿ) ನೀಡುವ 'ಐ.ಎಸ್.ಜಿ. ಸಿಲ್ವರ್ ರೈಸಿಂಗ್ ಸ್ಟಾರ್' ಪುರಸ್ಕಾರಕ್ಕೆ ನಗರದ ಸಾಫ್ಟ್‌ವೇರ್ ಎಂಜಿನಿಯರ್ ಮಾಯಾ ಜೆ. ಭಾಜನರಾಗಿದ್ದಾರೆ.

ಡಿಜಿಟಲ್ ತಂತ್ರಜ್ಞಾನ ಕ್ಷೇತ್ರದ ಸಾಧನೆಗೆ ಅವರನ್ನು ಆಯ್ಕೆ ಮಾಡಲಾಗಿದೆ. ರಿಸಲ್ಟ್ಸ್ ಸಿ.ಎಕ್ಸ್ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಮಾಯಾ ಅವರು, 'ರೊಬೋಟಿಕ್ ಪ್ರೊಸೆಸ್ ಆಟೊಮೇಶನ್' (ಆರ್.ಪಿ.ಎ) ತಂತ್ರಜ್ಞಾನದಲ್ಲಿ ವಿಶೇಷ ಸಾಧನೆ ತೋರಿದ್ದಾರೆ. ಉದ್ಯಮ ಕ್ಷೇತ್ರದ ಮುಂಚೂಣಿಯ ಸಾಧಕರನ್ನು, ವಿಶೇಷವಾಗಿ ಡಿಜಿಟಲ್ ಜಗತ್ತಿನ ಸಾಧಕಿಯರನ್ನು ಗುರುತಿಸುವುದು ಈ ಪುರಸ್ಕಾರದ ಉದ್ದೇಶವಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಚಿತ್ರಕಲೆ ಸ್ಪರ್ಧೆ 24ಕ್ಕೆ

ಬೆಂಗಳೂರು: ಇಂದಿರಾಗಾಂಧಿ ರಾಷ್ಟ್ರೀಯ ಕಲಾಕೇಂದ್ರದ (ಐಜಿಎನ್‌ಸಿಎ) ಬೆಂಗಳೂರು ಪ್ರಾದೇಶಿಕ ಕೇಂದ್ರ ಹಾಗೂ ನ್ಯಾಷನಲ್ ಗ್ಯಾಲರಿ ಆಫ್ ಮಾಡರ್ನ್ ಆರ್ಟ್ (ಎನ್‌ಜಿಎಂಎ) ಜಂಟಿಯಾಗಿ ಇದೇ 24ರಂದು ಬೆಳಿಗ್ಗೆ 9ರಿಂದ ಚಿತ್ರಕಲೆ ಸ್ಪರ್ಧೆ ಹಮ್ಮಿಕೊಂಡಿವೆ.

ಮಲ್ಲತ್ತಹಳ್ಳಿಯಲ್ಲಿರುವ ಐಜಿಎನ್‌ಸಿಎ ಪ್ರಾದೇಶಿಕ ಕಚೇರಿಯಲ್ಲಿ ಈ ಸ್ಪರ್ಧೆ ನಡೆಯಲಿದೆ. 'ವಿಕಸಿತ ಭಾರತ @ 2047' ಸ್ಪರ್ಧೆಯ ವಿಷಯ ವಸ್ತುವಾಗಿದೆ. ಪ್ರೌಢಶಾಲಾ ವಿದ್ಯಾರ್ಥಿಗಳು, ಕಾಲೇಜು ವಿದ್ಯಾರ್ಥಿಗಳು ಹಾಗೂ ವೃತ್ತಿಪರ ಕಲಾವಿದರೆಂದು ಮೂರು ವಿಭಾಗಗಳಲ್ಲಿ ಸ್ಪರ್ಧೆ ಹಮ್ಮಿಕೊಳ್ಳಲಾಗಿದೆ. ಸಂಪರ್ಕಕ್ಕೆ: 080 23212320 ಅಥವಾ 23212332

ಅಧಿಕಾರಿಗಳ ವರ್ಗ

ಬೆಂಗಳೂರು: ಐಎಎಸ್ ಅಧಿಕಾರಿ ಖುಶ್ಬೂ ಜಿ. ಚೌಧರಿ ಅವರನ್ನು ಶಿಕ್ಷಣ ಇಲಾಖೆಯ (ಉನ್ನತ ಶಿಕ್ಷಣ) ಕಾರ್ಯದರ್ಶಿ ಹುದ್ದೆಗೆ ವರ್ಗಾವಣೆ ಮಾಡಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಆದೇಶಿಸಿದೆ.

ಅವರಿಗೆ, ಕರ್ನಾಟಕ ರಾಜ್ಯ ಕೈಗಾರಿಕಾ ಮೂಲಸೌಕರ್ಯ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕಿ ಹುದ್ದೆಯ ಹೆಚ್ಚುವರಿ ಹೊಣೆಯನ್ನೂ ನೀಡಲಾಗಿದೆ. ರಾಷ್ಟ್ರೀಯ ಜೀವನೋಪಾಯ ಮಿಷನ್‌ನ ಯೋಜನಾ ನಿರ್ದೇಶಕಿ ಆರ್. ಸ್ನೇಹಲ್ ಅವರಿಗೆ 5ನೇ ಹಣಕಾಸು ಆಯೋಗದ ಕಾರ್ಯದರ್ಶಿ ಹುದ್ದೆಯ ಹೆಚ್ಚುವರಿ ಹೊಣೆ ನೀಡಲಾಗಿದೆ. ಮುಖ್ಯ ಕಾರ್ಯದರ್ಶಿಯ ವಿಶೇಷಾಧಿಕಾರಿ ಪಲ್ಲವಿ ಅಕುರಾತಿ ಅವರಿಗೆ ಸಕಾಲದ ಹೆಚ್ಚುವರಿ ಯೋಜನಾ ನಿರ್ದೇಶಕಿ ಹುದ್ದೆಯ ಹೆಚ್ಚುವರಿ ಹೊಣೆ ನೀಡಲಾಗಿದೆ.

6 ವರ್ಷದಿಂದ ಓಡುತ್ತಿರುವ ವಿಶೇಷ ರೈಲು

ಸಾಮಾನ್ಯ ರೈಲು ಆಗಿ ಪರಿವರ್ತಿಸಿದರೆ ಟಿಕೆಟ್ ದರದಲ್ಲಿ ಉಳಿತಾಯ

• ಬಾಲಕೃಷ್ಣಪಿ.ಎಚ್.

ಬೆಂಗಳೂರು: ಯಶವಂತಪುರ–ಹೊಸಪೇಟೆ–ವಿಜಯಪುರ ನಡುವೆ ಆರು ವರ್ಷಗಳಿಂದ ಸಂಚರಿಸುತ್ತಿರುವ ವಿಶೇಷ ರೈಲನ್ನು, ಇದುವರೆಗೆ ಸಾಮಾನ್ಯ ರೈಲಾಗಿ ಪರಿವರ್ತಿಸಿಲ್ಲ. ಇದರಿಂದಾಗಿ ಪ್ರಯಾಣಿಕರು ಹೆಚ್ಚುವರಿಯಾಗಿ ಶೇ 30ರಷ್ಟು ದರ ಪಾವತಿಸುತ್ತಿದ್ದಾರೆ.

ಜನದಟ್ಟಣೆ ಹೆಚ್ಚು ಇರುವ ಸಂದರ್ಭಗಳಲ್ಲಿ ವಿಶೇಷ ರೈಲುಗಳನ್ನು ಓಡಿಸಲಾಗುತ್ತದೆ. ಸಾಮಾನ್ಯ ರೈಲುಗಳಿಗಿಂತ ವಿಶೇಷ ರೈಲುಗಳಲ್ಲಿ ಟಿಕೆಟ್ ದರ ಶೇ 30ರಷ್ಟು ಹೆಚ್ಚಿರುತ್ತದೆ. ಹಬ್ಬ ಅಥವಾ ವಿಶೇಷ ದಿನಗಳಲ್ಲಿ ಸಂಚರಿಸುವ ವಿಶೇಷ ರೈಲುಗಳು ಸಾಂದರ್ಭಿಕವಾಗಿರುವುದರಿಂದ ಪ್ರಯಾಣಿಕರು ಈ ಬಗ್ಗೆ ಆಕ್ಷೇಪಿಸಿಲ್ಲ. ಆದರೆ, ನಿಯಮಿತವಾಗಿ ಸಂಚರಿಸುವ ವಿಶೇಷ ರೈಲುಗಳನ್ನು ಸಾಮಾನ್ಯ ರೈಲುಗಳಾಗಿ ಬದಲಾಯಿಸದೇ ಇರುವುದಕ್ಕೆ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ರೈಲುಗಳನ್ನು ಮೂರು ತಿಂಗಳು, ಆರು ತಿಂಗಳು ಓಡಿಸಿ ಜನಸಂಚಾರ ಕಡಿಮೆ ಇದ್ದರೆ ನಿಗದಿಯಾದ ತಾತ್ಕಾಲಿಕ ಸಮಯ ಮುಗಿದ ಬಳಿಕ ರದ್ದು ಮಾಡುವ, ಜಾಸ್ತಿ ಇದ್ದರೆ ಸಾಮಾನ್ಯ ರೈಲುಗಳಾಗಿ ಪರಿವರ್ತಿಸುವ ಪದ್ಧತಿ ರೈಲ್ವೆಯಲ್ಲಿ ಇತ್ತು. ಆದರೆ, ಕೋವಿಡ್‌–19 ನಂತರ ವಿಶೇಷ ರೈಲುಗಳನ್ನು ಸಾಮಾನ್ಯ ರೈಲುಗಳಾಗಿ ಪರಿವರ್ತಿಸುವ ಕ್ರಮವನ್ನೇ ಮರೆತುಬಿಟ್ಟಿದೆ ಎಂದು ಪ್ರಯಾಣಿಕರು ದೂರಿದ್ದಾರೆ.

ಸುರೇಶ್ ಅಂಗಡಿ ರೈಲ್ವೆ ಖಾತೆ ರಾಜ್ಯ ಸಚಿವರಾಗಿದ್ದ ಸಂದರ್ಭದಲ್ಲಿ ಯಶವಂತಪುರ–ವಿಜಯಪುರ, ಮಂಗಳೂರು–ವಿಜಯಪುರ ಸಹಿತ ಹಲವು ವಿಶೇಷ ರೈಲುಗಳು ಆರಂಭವಾಗಿದ್ದವು. ಆ ನಂತರ ರೈಲ್ವೆ ಸಚಿವರಾದವರು ಈ ರೈಲುಗಳ ಬಗ್ಗೆ ಗಮನಹರಿಸಿಲ್ಲ. ಅಧಿಕಾರಿಗಳು ಕೂಡ ವಿಶೇಷ ರೈಲಿನ ಅವಧಿಯನ್ನು ವಿಸ್ತರಿಸುತ್ತಾ ಬಂದರೇ ವಿನಃ ಸಾಮಾನ್ಯ ರೈಲಾಗಿ ಪರಿವರ್ತಿಸಲಿಲ್ಲ. ಕರಾವಳಿ ಭಾಗದ ಸಂಸದರ ಒತ್ತಡದಿಂದಾಗಿ ಮಂಗಳೂರು–ವಿಜಯಪುರ ವಿಶೇಷ ರೈಲು ಆರು ವರ್ಷಗಳ ಬಳಿಕ ಸಾಮಾನ್ಯ ರೈಲಾಗಿ ಈ ತಿಂಗಳ ಆರಂಭದಲ್ಲಿ ಪರಿವರ್ತನೆಗೊಂಡಿತು. ಉಳಿದ ಪ್ರದೇಶಗಳ ಜನಪ್ರತಿನಿಧಿಗಳು ಈ ರೀತಿ ಒತ್ತಡ ಹಾಕದೇ ಇರುವುದರಿಂದ ಹಾಗೇ ಉಳಿದಿವೆ ಎಂದು ರೈಲ್ವೆ ಹೋರಾಟಗಾರ ಕೆ.ಎನ್. ಕೃಷ್ಣಪ್ರಸಾದ್ ಅಸಮಾಧಾನ ವ್ಯಕ್ತಪಡಿಸಿದರು.

ರೈಲು (ಸಾಂದರ್ಭಿಕ ಚಿತ್ರ)

20 ವಿಶೇಷ ರೈಲು: ನೈರುತ್ಯ ರೈಲ್ವೆಯ ಬೆಂಗಳೂರು, ಹುಬ್ಬಳ್ಳಿ, ಮೈಸೂರು ವಿಭಾಗಗಳಲ್ಲಿ ಸಾರಿಗೆ-ಆಧಾರಿತ ಅಭಿವೃದ್ಧಿ (ಟಿಒಡಿ) ಆಧಾರದಲ್ಲಿ ಸುಮಾರು 20 ವಿಶೇಷ ರೈಲುಗಳು ಸಂಚರಿಸುತ್ತಿವೆ. '0' (ಸೊನ್ನೆ) ಯಿಂದ ಆರಂಭವಾಗುವ ಸಂಖ್ಯೆಯನ್ನು ಹೊಂದಿರುವ ಎಲ್ಲ ರೈಲುಗಳು ವಿಶೇಷ ರೈಲುಗಳಾಗಿವೆ.

'ಟಿಒಡಿ ರೈಲುಗಳನ್ನು ಪರಿವರ್ತಿಸುವ ಬಗ್ಗೆ ವಿಭಾಗ ಮಟ್ಟದಲ್ಲಿ ತೀರ್ಮಾನ ಕೈಗೊಳ್ಳುವಂತಿಲ್ಲ. ರೈಲ್ವೆ ಮಂಡಳಿಯಲ್ಲೇ ನಿರ್ಧಾರ ಕೈಗೊಳ್ಳಬೇಕು. ರೈಲ್ವೆ ಮಂಡಳಿಗೆ ಪ್ರಸ್ತಾವ ಸಲ್ಲಿಸಿದ್ದೇವೆ. ರೈಲ್ವೆ ಮಂಡಳಿ ಸಭೆಗಳಲ್ಲಿ, ಐಆರ್‌ಸಿಟಿಸಿ ಸಭೆಗಳಲ್ಲಿಯೂ ಈ ಬಗ್ಗೆ ಚರ್ಚೆ ನಡೆಸಿದ್ದೇವೆ. ಒಂದೊಂದೇ ರೈಲು ಪರಿವರ್ತನೆಯಾಗುತ್ತಿದೆ' ಎಂದು ನೈರುತ್ಯ ರೈಲ್ವೆ ಸಾರ್ವಜನಿಕ ಸಂಪರ್ಕ ಅಧಿಕಾರಿ ಮಂಜುನಾಥ್ ಕನಮಡಿ ತಿಳಿಸಿದರು.

'ಅಧಿಕ ದರ ಪಾವತಿ'

ಕೃಷ್ಣಪ್ರಸಾದ್

ಬೆಂಗಳೂರಿನಿಂದ ಹುಬ್ಬಳ್ಳಿಗೆ ರಾಣಿ ಚನ್ನಮ್ಮ ರೈಲಿನಲ್ಲಿ 3 ಟೈರ್ ಎ.ಸಿಯಲ್ಲಿ ಸಂಚರಿಸಿದರೆ ₹765 ಟಿಕೆಟ್ ದರವಿದೆ. ಬೆಳಗಾವಿ ಸೂಪರ್ ಫಾಸ್ಟ್‌ನಲ್ಲಿ ಸಂಚರಿಸಿದರೆ ₹800 ಇದೆ. ಅದೇ ವಿಶೇಷ ರೈಲಿನಲ್ಲಿ ಸಂಚರಿಸಬೇಕಿದ್ದರೆ ₹1,055 ನೀಡಬೇಕಾಗುತ್ತದೆ. ಇದೇ ರೀತಿ ಸಾಮಾನ್ಯ ಬೋಗಿಯಿಂದ ಹಿಡಿದು ಎಲ್ಲದಕ್ಕೂ ಶೇ 30ರಷ್ಟು ಹೆಚ್ಚು ಪಾವತಿಸಿ ಪ್ರಯಾಣಿಸಬೇಕಾಗುತ್ತದೆ. ವಿಜಯಪುರ, ಬಾಗಲಕೋಟೆ ಸಹಿತ ಉತ್ತರ ಕರ್ನಾಟಕದ ಅನೇಕ ಜಿಲ್ಲೆಗಳಿಂದ ಕಾರ್ಮಿಕರು ಬೆಂಗಳೂರಿಗೆ ಬರುತ್ತಾರೆ. ಸಾಮಾನ್ಯ ರೈಲುಗಳಾದರೆ ಅವರಿಗೆ ಸ್ವಲ್ಪ ಹಣ ಉಳಿತಾಯವಾಗುತ್ತದೆ. ಟಿಒಡಿ ರೈಲುಗಳನ್ನು ಸಾಮಾನ್ಯ ರೈಲುಗಳನ್ನಾಗಿ ಮಾಡಬೇಕು ಎಂದು ರೈಲ್ವೆ ಖಾತೆ ರಾಜ್ಯ ಸಚಿವರ, ನೈರುತ್ಯ ರೈಲ್ವೆ ಅಧಿಕಾರಿಗಳ ಗಮನಕ್ಕೆ ತರಲಾಗಿದೆ. ಈ ಬಗ್ಗೆ ಗಮನಹರಿಸಿ ಸಾಮಾನ್ಯ ರೈಲುಗಳನ್ನಾಗಿ ಪರಿವರ್ತಿಸಬೇಕು ಎಂದು ರೈಲ್ವೆ ಹೋರಾಟಗಾರ ಕೆ.ಎನ್. ಕೃಷ್ಣಪ್ರಸಾದ್ ಒತ್ತಾಯಿಸಿದರು.

'ಕಾಯ್ದಿರಿಸಲು ಕಷ್ಟ'

ರೇವಣಸಿದ್ದಪ್ಪ

ವಿಶೇಷ ರೈಲುಗಳ ಅವಧಿಯನ್ನು ಸಾಮಾನ್ಯವಾಗಿ ಮೂರು ತಿಂಗಳಿಗೊಮ್ಮೆ ವಿಸ್ತರಿಸಲಾಗುತ್ತದೆ. ಮುಂಗಡವಾಗಿ ಕಾಯ್ದಿರಿಸುವವರಿಗೆ ಇದರಿಂದ ಸಮಸ್ಯೆಯಾಗುತ್ತಿದೆ. ಅಂದರೆ ಸೆಪ್ಟೆಂಬರ್ 30ಕ್ಕೆ ರೈಲಿನ ಅವಧಿ ಮುಕ್ತಾಯಗೊಳ್ಳುವುದಿದ್ದರೆ ಒಂದೆರಡು ದಿನ ಮುಂಚಿತವಾಗಿ ವಿಸ್ತರಣೆಯ ಆದೇಶವನ್ನು ರೈಲ್ವೆಯವರು ಹೊರಡಿಸುತ್ತಾರೆ. ಅಕ್ಟೋಬರ್ ಮೊದಲ ವಾರದಲ್ಲಿ ಸಂಚರಿಸಲು ಸೆಪ್ಟೆಂಬರ್‌ನಲ್ಲಿ ಅಥವಾ ಎರಡು ತಿಂಗಳು ಮುಂಚೆಯೇ ಕಾಯ್ದಿರಿಸಲು ಮುಂದಾದರೆ ವಿಸ್ತರಣೆಯ ಆದೇಶ ಬರುವವರೆಗೆ ಕಾಯ್ದಿರಿಸುವ ಅವಕಾಶ ನೀಡಿರುವುದಿಲ್ಲ ಎಂದು ರೈಲು ಪ್ರಯಾಣಿಕ, ಬೆಂಗಳೂರಿನಲ್ಲಿ ಉದ್ಯೋಗಿಯಾಗಿರುವ ದಾವಣಗೆರೆಯ ರೇವಣಸಿದ್ದಪ್ಪ ತಿಳಿಸಿದರು.

'ಇಲಾಖೆ ಅಡಿಯೇ ಜಿಬಿಎ ಅರಣ್ಯ ಶಾಖೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಿಂದಿನ ಬಿಬಿಎಂಪಿಯಲ್ಲಿ ತೆರೆಯಲಾಗಿದ್ದ ಅರಣ್ಯ ಶಾಖೆಯನ್ನು ಮರಳಿ ಪಡೆದು ಇಲಾಖೆಯ ಅಡಿಯಲ್ಲೇ ಜಿಬಿಎ ಅರಣ್ಯ ವಿಭಾಗವನ್ನು ರಚಿಸುವ ಕುರಿತು ಪರಿಶೀಲಿಸುವಂತೆ ಅರಣ್ಯ ಸಚಿವ ಈಶ್ವರ ಖಂಡ್ರೆ ಸೂಚನೆ ನೀಡಿದ್ದಾರೆ.

ಬಿಬಿಎಂಪಿ ವಿಸರ್ಜಿಸಿ ಈಗ ಜಿಬಿಎ ಅಡಿ 5 ನಗರ ಪಾಲಿಕೆಗಳನ್ನು ನಿರ್ಮಿಸಲಾಗಿದೆ. ಆದರೆ ಅರಣ್ಯ ಇಲಾಖೆಯಲ್ಲಿಯೇ ಸಿಬ್ಬಂದಿ ಕೊರತೆ ಇರುವುದರಿಂದ ಐದು ವಿಭಾಗಗಳಿಗೆ ಸಿಬ್ಬಂದಿ ನಿಯೋಜನೆ ಅಸಾಧ್ಯ. ಈ ಕಾರಣದಿಂದ ಹಾಲಿ ಇರುವ ಅರಣ್ಯ ವಿಭಾಗವನ್ನು, ಅರಣ್ಯ ಇಲಾಖೆಗೆ ವಾಪಸ್ ಪಡೆಯುವುದು ಸೂಕ್ತ ಎನ್ನುವ ಅಭಿಪ್ರಾಯ ವ್ಯಕ್ತವಾಗಿರುವುದರಿಂದ ಪ್ರತ್ಯೇಕ ವಿಭಾಗವನ್ನು ಇಲಾಖೆ ಅಡಿಯಲ್ಲಿಯೇ ರೂಪಿಸುವ ಬಗ್ಗೆ ಪರಾಮರ್ಶೆ ನಡೆಸಿ ಎಂದು ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯ ಪಡೆ) ಅವರಿಗೆ ಸೂಚಿಸಿದ್ದಾರೆ.

ಬೆಂಗಳೂರಿನಲ್ಲಿ ಮರಗಳ ಮಾಲೀಕತ್ವ ಮತ್ತು ನಿರ್ವಹಣೆ ಜವಾಬ್ದಾರಿ ಜಿಬಿಎಯದ್ದು. ಮರದ ಕೊಂಬೆ ಬಿದ್ದು ಸಾರ್ವಜನಿಕರು ಮೃತಪಟ್ಟರೆ ಇಲ್ಲವೇ ಗಾಯಗೊಂಡರೆ ಅರಣ್ಯ ವಿಭಾಗದ ಅಧಿಕಾರಿಗಳ ಮೇಲೆಯೇ ಪೊಲೀಸರು ಪ್ರಕರಣ ದಾಖಲಿಸುತ್ತಿದ್ದು, ಇದು ಸಿಬ್ಬಂದಿಯ ಆತ್ಮಸ್ಥೈರ್ಯ ಕುಗ್ಗಿಸುತ್ತಿದೆ. ಇದಕ್ಕೂ ಹೊಸ ವಿಭಾಗದಲ್ಲಿ ಸ್ಪಷ್ಟ ಕ್ರಮಗಳನ್ನು ಉಲ್ಲೇಖಿಸುವಂತೆ ಈಶ್ವರ ಖಂಡ್ರೆ ಸೂಚನೆ ನೀಡಿದ್ದಾರೆ.

ರಾಷ್ಟ್ರೀಯ ಕಾರ್ಯಾಗಾರ: ಇಸ್ರೊ ಅಧ್ಯಕ್ಷ ಡಾ.ವಿ.ನಾರಾಯಣ್ ಮಾಹಿತಿ

ಡಿಸೆಂಬರ್‌ಗೆ ರೋಬೊ ಗಗನಯಾನ

ಪ್ರಜಾವಾಣಿ ವಾರ್ತೆ

ಆನೇಕಲ್: 'ಇಸ್ರೊ ಮಾನವ ಸಹಿತ ಗಗನಯಾನದ ಸಿದ್ಧತೆ ಶೇ 85ರಷ್ಟು ಪೂರ್ಣಗೊಂಡಿದೆ. ಗಗನಯಾನಿಗಳನ್ನು ಬಾಹ್ಯಾಕಾಶಕ್ಕೆ ಕಳುಹಿಸಿ, ಸುರಕ್ಷಿತವಾಗಿ ವಾಪಸ್ ಕರೆತರುವುದು ನಮ್ಮ ಗುರಿಯಾಗಿದೆ. ವರ್ಷಾಂತ್ಯಕ್ಕೆ ಎರಡು ಮಾನವರಹಿತ ಗಗನಯಾನ ಕೈಗೊಳ್ಳುವ ಯೋಜನೆ ರೂಪಿಸಲಾಗಿದೆ. ಡಿಸೆಂಬರ್‌ನಲ್ಲಿ ಅಪ್ ಹ್ಯುಮಾನಾಯ್ಡ್ (ಮಾನವ ರೂಪದ ರೋಬೊ) ಅನ್ನು ಬಾಹ್ಯಾಕಾಶಕ್ಕೆ ಕಳುಹಿಸಲಾಗುತ್ತಿದೆ ಎಂದು ಇಸ್ರೊ ಅಧ್ಯಕ್ಷ ಡಾ.ವಿ. ನಾರಾಯಣ್ ತಿಳಿಸಿದರು.

ಪಟ್ಟಣಕ್ಕೆ ಸಮೀಪದ ಅಲಯನ್ಸ್ ವಿಶ್ವವಿದ್ಯಾಲಯ ಮತ್ತು ಭಾರತೀಯ ವಿಜ್ಞಾನ ಸಂಸ್ಥೆ (ಐಐಎಸ್‌ಸಿ) ಸಹಯೋಗದಲ್ಲಿ ಶುಕ್ರವಾರ ಆಯೋಜಿಸಿದ್ದ ಹೈಡ್ರೋಜನ್ ಇಂಧನ ತಂತ್ರಜ್ಞಾನ ಕುರಿತ ರಾಷ್ಟ್ರೀಯ ಕಾರ್ಯಾಗಾರದಲ್ಲಿ ಭಾಗವಹಿಸಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿ, '2027ರ ಮೊದಲ ತ್ರೈಮಾಸಿಕದೊಳಗೆ ಮಾನವ ಸಹಿತ ಯಾನ ಕೈಗೊಳ್ಳಲು ಸಿದ್ಧತೆ ನಡೆಸಲಾಗಿದೆ. ಇದರ ದಿನಾಂಕವನ್ನು ಪ್ರಧಾನಿ ನಿರ್ಧರಿಸಲಿದ್ದಾರೆ' ಎಂದು ತಿಳಿಸಿದರು.

'ಮಾನವ ಸಹಿತ ಗಗನಯಾನದ ಯಶಸ್ಸಿನ ಮೇಲೆ ಶೇ100ರಷ್ಟು ವಿಶ್ವಾಸ ಹೊಂದಿದ್ದೇವೆ. ಗಗನಯಾನಿ ಶುಭಾಂಶು ಶುಕ್ಲಾ ಅವರು ಅಂತರರಾಷ್ಟ್ರೀಯ ಬಾಹ್ಯಾಕಾಶಕ್ಕೆ ಹೋಗಿ ಬಂದಿದ್ದಾರೆ. ಗಗನಯಾನಕ್ಕೆ ಅಗತ್ಯ ಇರುವ ಮಾಹಿತಿ ಮತ್ತು ಮಾರ್ಗದರ್ಶನ ನೀಡುತ್ತಿದ್ದಾರೆ. ಅವರ ಅನುಭವ ಮತ್ತು ಪರಿಣತಿ ಗಗನಯಾನ ಕಾರ್ಯಕ್ರಮಕ್ಕೆ ಉಪಯೋಗ ಆಗಲಿದೆ ಎಂದರು.

'ದೇಶದ ಕಟ್ಟ ಕಡೆಯ ವ್ಯಕ್ತಿಗೂ ಬಾಹ್ಯಾಕಾಶ ತಂತ್ರಜ್ಞಾನ ತಲುಪಿಸುವ ಗುರಿ ಹೊಂದಿದ್ದೇವೆ. ಸಂವಹನ, ಮಾಹಿತಿ ತಂತ್ರಜ್ಞಾನ ಸೇರಿದಂತೆ ವಿವಿಧ ವಿಭಾಗಗಳಲ್ಲಿ ಇಸ್ರೊ ಕಾರ್ಯನಿರ್ವಹಿಸುತ್ತಿದೆ. ಇದರಿಂದ ಟೆಲಿಕಮ್ಯೂನಿಕೇಷನ್, ರೈಲ್ವೆ ಮಾನಿಟರಿಂಗ್, ಟೆಲಿ ಮೆಡಿಸಿನ್ ಸೇರಿದಂತೆ ವಿವಿಧ ಕ್ಷೇತ್ರಗಳಿಗೆ ಉಪಯುಕ್ತವಾಗಲಿದೆ' ಎಂದರು.

ಆನೇಕಲ್‌ನ ಅಲಯನ್ಸ್ ವಿಶ್ವವಿದ್ಯಾಲಯ ಮತ್ತು ಭಾರತೀಯ ವಿಜ್ಞಾನ ಸಂಸ್ಥೆ (ಐಐಎಸ್‌ಸಿ) ಸಹಯೋಗದಲ್ಲಿ ಆಯೋಜಿಸಿದ್ದ ಕಾರ್ಯಾಗಾರದಲ್ಲಿ ಇಸ್ರೊ ಅಧ್ಯಕ್ಷ ಡಾ.ವಿ.ನಾರಾಯಣ್ ಮಾತನಾಡಿದರು

ಇಂಧನ ಬೇಡಿಕೆ ತಗ್ಗಿಸಲು ಹೈಡ್ರೋಜನ್ ಬಳಕೆ

ಆನೇಕಲ್: ಹೆಚ್ಚುತ್ತಿರುವ ಇಂಧನ ಬೇಡಿಕೆ ಮತ್ತು ಹಸಿರುಮನೆ ಅನಿಲ ಹೊರಸೂಸುವಿಕೆ ತಗ್ಗಿಸುವ ಸವಾಲು ಜಾಗತಿಕ ಮಟ್ಟದಲ್ಲಿ ಎದುರಿಸಲಾಗುತ್ತಿದೆ. ಹೈಡ್ರೋಜನ್ ಬಳಕೆಯಿಂದ ಹಸಿರುಮನೆ ಅನಿಲಗಳ ಹೊರಸೂಸುವಿಕೆ ಕಡಿಮೆ ಮಾಡಬಹುದು ಎಂದು ಇಸ್ರೊ ಅಧ್ಯಕ್ಷ ಡಾ.ವಿ. ನಾರಾಯಣ್ ಹೇಳಿದರು.

ಭಾರತದ ಬಾಹ್ಯಾಕಾಶ ಮಿಷನ್, ಸಾರಿಗೆ ಮತ್ತು ಶುದ್ಧ ಇಂಧನ ವಿಭಾಗದಲ್ಲಿ ಹೈಡ್ರೋಜನ್ ಪರಿವರ್ತನಾ ಸಾಮರ್ಥ್ಯವನ್ನು ಹೊಂದಿದೆ. ಶುದ್ಧ ಪರಿಸರ ಹೊಂದಲು ಪ್ರಮುಖ ಪಾತ್ರ ವಹಿಸುತ್ತದೆ. ಈ ಇಂಧನವು ಶುದ್ಧ ಮತ್ತು ಹಸಿರು ಇಂಧನವಾಗಿದ್ದು, ಭವಿಷ್ಯದ ಭರವಸೆಯಾಗಿದೆ. ಇಸ್ರೊ ಹಲವು ಯಶಸ್ಸುಗಳಲ್ಲಿ ಹೈಡ್ರೋಜನ್ ಪ್ರಮುಖ ಪಾತ್ರ ವಹಿಸಲಿದೆ ಎಂದು ಹೇಳಿದರು.

2010-11ರಲ್ಲಿ ಟಾಟಾ ಮೋಟಾರ್ಸ್ ಸಹಯೋಗದಲ್ಲಿ ಇಸ್ರೊ ಹೈಡ್ರೋಜನ್ ಇಂಧನ ಬಳಸುವ ಬಸ್ ನಿರ್ಮಿಸಿ ಯಶಸ್ವಿಯಾಗಿ ಪರೀಕ್ಷೆ ನಡೆಸಿತ್ತು. 2025ರ ಜೂನ್‌ನಲ್ಲಿ ಐದು ಹೈಡ್ರೋಜನ್ ಬಸ್‌ಗಳು ವಾಣಿಜ್ಯ ಸೇವೆ ನೀಡುತ್ತಿವೆ. ಬಿಎಚ್‌ಇಎಲ್ ಮತ್ತು ಎನ್‌ಟಿಪಿಸಿ ಹೈಡ್ರೋಜನ್ ಗ್ಯಾಸ್ ಟರ್ಬೈನ್ ಎಂಜಿನ್ ನಿರ್ಮಿಸುತ್ತಿವೆ ಎಂದು ತಿಳಿಸಿದರು.

ಸ್ಥಳೀಯ ಚುನಾವಣೆಗೆ 'ಕೈ' ಸಿದ್ಧತೆ

ಸಚಿವರು, ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿಗೆ ಹೊಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗ್ರೇಟರ್ ಬೆಂಗಳೂರು ವ್ಯಾಪ್ತಿಯ ಐದು ನಗರ ಪಾಲಿಕೆಗಳ ಚುನಾವಣೆ, ಜಿಲ್ಲಾ, ತಾಲ್ಲೂಕು ಪಂಚಾಯಿತಿ ಚುನಾವಣೆಗೆ ಕಾಂಗ್ರೆಸ್ ಸಿದ್ಧತೆ ಆರಂಭಿಸಿದ್ದು, ಸಚಿವರು, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಗೆ ಹೊಣೆ ನೀಡಲಾಗಿದೆ.

ಪಕ್ಷದ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಈ ಕುರಿತು ಕೆಪಿಸಿಸಿ ಕಚೇರಿಯಲ್ಲಿ ಸುದೀರ್ಘ ಚರ್ಚೆ ನಡೆಸಿದ್ದು, ಚುನಾವಣೆಗೆ ಸ್ಪರ್ಧಿಸುವ ಆಕಾಂಕ್ಷಿಗಳ ಪಟ್ಟಿ ಸಿದ್ಧಪಡಿಸಲು ಹಾಗೂ ಎಲ್ಲ ಆಕಾಂಕ್ಷಿಗಳು ತಕ್ಷಣದಿಂದಲೇ ತಮ್ಮ ತಮ್ಮ ವಾರ್ಡ್, ಕ್ಷೇತ್ರಗಳಲ್ಲಿ ಸಕ್ರಿಯರಾಗಲು ಸೂಚನೆ ನೀಡಿದ್ದಾರೆ ಎನ್ನಲಾಗಿದೆ.

'ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯನ್ನು ಆಡಳಿತಾತ್ಮಕ ದೃಷ್ಟಿಯಿಂದ ವಿಭಜನೆ ಮಾಡಿದ ಶ್ರೇಯ ಕಾಂಗ್ರೆಸ್‌ಗೆ ಸಲ್ಲಬೇಕಾದರೆ ಗ್ರೇಟರ್ ಬೆಂಗಳೂರು ಪ್ರಾಧಿಕಾರದ ವ್ಯಾಪ್ತಿಯ ಪಾಲಿಕೆಗಳನ್ನು ಗೆಲ್ಲಲೇಬೇಕು. ಎಲ್ಲ ಐದು ಪಾಲಿಕೆಗಳಲ್ಲೂ ಅಧಿಕಾರದ ಚುಕ್ಕಾಣಿ ಹಿಡಿಯಬೇಕು. ಸಚಿವರು ಪ್ರತಿ ಪಾಲಿಕೆಯನ್ನು ಹಂಚಿಕೆ ಮಾಡಿಕೊಂಡು ಸೂಕ್ತ ಕಾರ್ಯತಂತ್ರ ರೂಪಿಸಲು ಸೂಚಿಸಿದ್ದಾರೆ' ಎಂದು ಪಕ್ಷದ ಮೂಲಗಳು ತಿಳಿಸಿವೆ.

ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಚುನಾವಣೆಗೂ ಸಜ್ಜಾಗಬೇಕು. ಆಕಾಂಕ್ಷಿಗಳ ಪಟ್ಟಿ ಸಿದ್ಧಪಡಿಸಿ, ಅವರ ಸಾಮಾಜಿಕ ಸೇವೆ, ಗೆಲ್ಲುವ ಸಾಮರ್ಥ್ಯವನ್ನು ಪರಿಶೀಲನೆ ಮಾಡಬೇಕು. ಕ್ಷೇತ್ರದ ಕೆಲಸ ಕಾರ್ಯಗಳಲ್ಲಿ ತೊಡಗಿಸಿಕೊಳ್ಳುವಂತೆ ಸೂಚಿಸಬೇಕು ಎಂದು ಸಲಹೆ ನೀಡಿದ್ದಾರೆ ಎನ್ನಲಾಗಿದೆ.

ಗ್ಯಾರಂಟಿ ಯೋಜನೆಗಳಿಂದ ರಾಜ್ಯದಲ್ಲಿ ಪಕ್ಷ ಅಧಿಕಾರ ಪಡೆಯಲು ಸಾಧ್ಯವಾಗಿದೆ. ಯೋಜನೆ ಜಾರಿಯ ನಂತರ ಒಂದು ಕೋಟಿಗೂ ಹೆಚ್ಚು ಕುಟುಂಬಗಳಿಗೆ ಅನುಕೂಲವಾಗಿದೆ. ತಲಾ ಆದಾಯವೂ ಹೆಚ್ಚಾಗಿದೆ. ಜನರು ಕಾಂಗ್ರೆಸ್ ಬೆಂಬಲಕ್ಕೆ ನಿಂತಿದ್ದಾರೆ. ಈ ಅವಕಾಶವನ್ನು ಸದುಪಯೋಗ ಮಾಡಿಕೊಳ್ಳಬೇಕು. ಈ ಹೊಣೆಯನ್ನು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಎಲ್ಲ ಐವರು ಉಪಾಧ್ಯಕ್ಷರಿಗೆ ವಹಿಸಬೇಕು ಎಂದು ಸಲಹೆ ನೀಡಿರುವುದಾಗಿ ಪಕ್ಷದ ಮೂಲಗಳು ಹೇಳಿವೆ.

ಕಾವೇರಿ ನೀರು ಪೂರೈಕೆಯಲ್ಲಿ ವ್ಯತ್ಯಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗ್ರೇಟರ್ ಬೆಂಗಳೂರು ಪ್ರಾಧಿಕಾರ(ಜಿಬಿಎ) ನಾಗರಬಾವಿಯ ಬಿಡಿಎ ಕಾಂಪ್ಲೆಕ್ಸ್ ಬಳಿ ಕಾಮಗಾರಿ ಕೈಗೊಂಡಿದ್ದು, ಈ ಸಂದರ್ಭದಲ್ಲಿ 600 ಮಿ.ಮೀ. ವ್ಯಾಸದ ನೀರಿನ ಕೊಳವೆ ಕುಸಿದಿರುವ ಕಾರಣ ಕಾವೇರಿ ನೀರಿನ ಪೂರೈಕೆಯಲ್ಲಿ ವ್ಯತ್ಯಯವಾಗಿದೆ.

ಸೆ.20ರಂದು (ಶನಿವಾರ) ಹಲವು ಭಾಗಗಳಲ್ಲಿ ನೀರಿನ ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ ಎಂದು ಸರ್‌ಎಂವಿ ಲೇಔಟ್ ಭಾಗದ ಜಲಮಂಡಳಿಯ ಕಾರ್ಯನಿರ್ವಾಹಕ ಎಂಜಿನಿಯರ್ ತಿಳಿಸಿದ್ದಾರೆ.

ನಾಗರಬಾವಿ 1ನೇ ಹಂತದಿಂದ 14ನೇ ಹಂತ, ಜ್ಞಾನಭಾರತಿ ಬಡಾವಣೆ, ವಿಜಯನಗರ, ಬನವಾಸಿ ರಸ್ತೆ, ಕೋರಮಂಗಲ, ಗಾಂಧಿನಗರ ಸುತ್ತ ಮುತ್ತಲಿನ ಪ್ರದೇಶಗಳು, ಬಿಡಿಎ ಕಾಂಪ್ಲೆಕ್ಸ್ ಸುತ್ತಮುತ್ತಲಿನ ಭಾಗಗಳಲ್ಲಿ ನೀರಿನ ಸರಬರಾಜು ಇರುವುದಿಲ್ಲ ಎಂದು ತಿಳಿಸಿದ್ದಾರೆ.

ವಿನಾಯಕ ಬಡಾವಣೆ, ಕೊಟ್ಟಿಗೆ ಪಾಳ್ಯ, ಸಜ್ಜೆಪಾಳ್ಯ, ಮಾಳಗಾರ, ಸುಮನಹಳ್ಳಿ, ನರಸಿಂಹಯ್ಯನ ಪಾಳ್ಯ, ಎಂಪಿಎಂ ಬಡಾವಣೆ, ಐಟಿಐ ಬಡಾವಣೆ, ಮಲ್ಲತ್ತಹಳ್ಳಿ, ಗೌರಮ್ಮ ಬಡಾವಣೆ, ಈರನಪಾಳ್ಯ, ಪೂರ್ಣಚಂದ್ರ ಬಡಾವಣೆ, ಹೊನ್ನಪ್ಪ ಬಡಾವಣೆ, ಭೈರವೇಶ್ವರ ನಗರ, ಕಲ್ಯಾಣ ನಗರ, ಬಿಡಿಎ ಲೇಔಟ್, ಕೋಕೋನೆಟ್ ಗಾರ್ಡನ್, ಗಾರ್ಡನ್ ವಿಲಾಸ್, ಸುಬ್ಬಣ್ಣ ಗಾರ್ಡನ್, ಅನ್ನಪೂರ್ಣೇಶ್ವರಿ ನಗರ, ಕೆನರಾ ಬ್ಯಾಂಕ್ ಕಾಲೊನಿ ಪ್ರದೇಶಗಳಲ್ಲಿ ನೀರಿನ ವ್ಯತ್ಯಯ ಆಗಲಿದೆ ಎಂದು ಹೇಳಿದ್ದಾರೆ.

ಇಂದು ವಿದ್ಯುತ್ ವ್ಯತ್ಯಯ

ಬೆಂಗಳೂರು: ಕೆಪಿಟಿಸಿಎಲ್ ತುರ್ತು ನಿರ್ವಹಣಾ ಕಾಮಗಾರಿ ಕೈಗೊಂಡಿರುವ ಕಾರಣ ಶನಿವಾರ ಬೆಳಿಗ್ಗೆ 8ರಿಂದ ಸಂಜೆ 6ರವರೆಗೆ ಈ ಕೆಳಕಂಡ ಸ್ಥಳಗಳಲ್ಲಿ ವಿದ್ಯುತ್ ಪೂರೈಕೆ ಇರುವುದಿಲ್ಲ ಎಂದು ಬೆಸ್ಕಾಂ ಪ್ರಕಟಣೆ ತಿಳಿಸಿದೆ.

ಶೋಭಾ ಸಿಟಿ, ಚೊಕ್ಕನಹಳ್ಳಿ, ಡೋಮಿನೊ ಪಿಜ್ಜಾ ಇನ್ ಪ್ಯಾರಡೈಸ್ ನೂರ್ ನಗರ, ಎಕ್ಸ್ ಸರ್ವಿಸ್‌ಮೆನ್ ಲೇಔಟ್, ಪೊಲೀಸ್ ಕ್ವಾಟ್ರರ್ಸ್, ಆರ್. ಕೆ.ಹೆಗಡೆ ನಗರ, ಶಬರಿ ನಗರ, ಹೊಸ ಶಾಂತಿ ನಗರ, ಕೆಂಪೇಗೌಡ ಲೇಯು, ನಾಗೇನಹಳ್ಳಿ ಗ್ರಾಮ, ರೀಜೆನ್ಸಿ ಪಾರ್ಕ್, ಎಸ್ತರ್ ಹಾರ್ಮೋನಿಕ್ ಲೇಔಟ್, ಬಾಲಾಜಿ ಲೇಔಟ್, ನಾಗೇನಹಳ್ಳಿ ಜಿಮ್, ಸ್ಲಂ ಬೋರ್ಡ್ ಮತ್ತು ಬೆಂಚ್ ರಾಯಲ್ ವುಡ್, ಅರ್ಕಾವತಿ ಲೇಔಟ್ ಥಣಿಸಂದ್ರ, ಬೆಳ್ಳಹಳ್ಳಿ ಗ್ರಾಮ, ತಿರುಮೇನಹಳ್ಳಿ ಗ್ರಾಮ, ಮಿತ್ತಗಾನಹಳ್ಳಿ ಮತ್ತು ಕೋಗಿಲು ಗ್ರಾಮ, ಬೆಲಹಳ್ಳಿ, ವಿಧಾನಸೌಧ ಲೇಔಟ್, ಕರ್ನಾಟಕ ಕಾಲೇಜು, ಭಾರತೀಯ ಸಿಟಿ ಮತ್ತು ಸುತ್ತಮುತ್ತಲಿನ ಪ್ರದೇಶಗಳು

ಥಲವಾದಿ, ಶ್ರೀವತ್ಸ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಶ್ರೀವತ್ಸ

ಶ್ರೀವತ್ಸ

ಬೆಂಗಳೂರು: ಕುರುಬರನ್ನು ಪರಿಶಿಷ್ಟ ಪಂಗಡದ ಪಟ್ಟಿಗೆ ಸೇರ್ಪಡೆ ಮಾಡುವ ವಿಚಾರಕ್ಕೆ ಸಂಬಂಧಿಸಿದಂತೆ ಹೇಳಿಕೆ ನೀಡಿದ್ದ ವಿಧಾನ ಪರಿಷತ್‌ನ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಹಾಗೂ ಮೈಸೂರಿನ ಕೃಷ್ಣರಾಜ ಕ್ಷೇತ್ರದ ಶಾಸಕ ಟಿ.ಎಸ್.ಶ್ರೀವತ್ಸ ಅವರ ವಿರುದ್ಧ ವಿಧಾನಸೌಧ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಕರ್ನಾಟಕ ಪ್ರದೇಶ ಕುರುಬರ ಎಸ್‌.ಟಿ ಹೋರಾಟ ಸಮಿತಿ ರಾಜ್ಯ ಅಧ್ಯಕ್ಷ ಸಿದ್ದಣ್ಣ ತೇಜಿ ಅವರು ನೀಡಿದ ದೂರು ಆಧರಿಸಿ ಭಾರತೀಯ ನ್ಯಾಯ ಸಂಹಿತೆ (ಬಿಎನ್‌ಎಸ್) 353(2) (ಎರಡು ಸಮುದಾಯಗಳ ನಡುವೆ ದ್ವೇಷ ಬಿತ್ತುವ ಹೇಳಿಕೆ) ಅಡಿ ಎಫ್‌ಐಆರ್ ದಾಖಲು ಮಾಡಿಕೊಳ್ಳಲಾಗಿದೆ ಎಂದು ಪೊಲೀಸರು ಹೇಳಿದರು.

ಇಬ್ಬರ ವಿರುದ್ಧವೂ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿ ರಾಜ್ಯ ಪೊಲೀಸ್ ಮಹಾ ನಿರ್ದೇಶಕರಿಗೆ ಶುಕ್ರವಾರ ಬೆಳಿಗ್ಗೆ ಸಿದ್ದಣ್ಣ ತೇಜಿ ದೂರು ನೀಡಿದ್ದರು. ಆ ದೂರನ್ನು ಸಂಬಂಧಿಸಿದ ಠಾಣೆಗೆ ವರ್ಗಾವಣೆ ಮಾಡಲಾಗಿತ್ತು.

'ಛಲವಾದಿ ನಾರಾಯಣಸ್ವಾಮಿ, ಶ್ರೀವತ್ಸ ಅವರು ಮುಖ್ಯಮಂತ್ರಿ ಅವರನ್ನು ವಿರೋಧಿಸುವ ಭರದಲ್ಲಿ ಇಡೀ ಕುರುಬ ಸಮಾಜಕ್ಕೆ ಅವಮಾನ ಮಾಡಿದ್ದಾರೆ. ಪರಿಶಿಷ್ಟ ಪಂಗಡದವರು ಹಾಗೂ ವಾಲ್ಮೀಕಿ ಸಮಾಜದವರು ಕುರುಬ ಸಮಾಜದ ಮೇಲೆ ದಂಗೆ ಏಳಬೇಕು ಎನ್ನುವ ರೀತಿಯಲ್ಲಿ ಜಾಲತಾಣ ಹಾಗೂ ಮಾಧ್ಯಮಗಳಲ್ಲಿ ಹೇಳಿಕೆ ನೀಡಿದ್ದಾರೆ. ಸಮುದಾಯದ ಜನರನ್ನು ಪ್ರಚೋದಿಸುವ ಮೂಲಕ ರಾಜ್ಯದಲ್ಲಿ ಶಾಂತಿ ಸುವ್ಯವಸ್ಥೆ ಹಾಳುಮಾಡಲು ಪ್ರಯತ್ನಿಸಿದ್ದಾರೆ. ಅವರ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು' ಎಂದು ಸಿದ್ದಣ್ಣ ತೇಜಿ ಅವರು ನೀಡಿದ ದೂರು ಆಧರಿಸಿ ಎಫ್‌ಐಆರ್‌ನಲ್ಲಿ ಉಲ್ಲೇಖಿಸಲಾಗಿದೆ.

ವಿಫಲರಾದಾಗ ಜಾತಿ ಅಸ್ತ್ರ ಬಳಕೆ: ಶೋಭಾ

ಬೀದರ್: 'ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ವಿಫಲರಾದಾಗಲೆಲ್ಲಾ ಜಾತಿ ಅಸ್ತ್ರ ಬಳಸುತ್ತಾರೆ' ಎಂದು ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಟೀಕಿಸಿದರು.

ಶುಕ್ರವಾರ ಇಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, 'ಹಿಂದೆ ಲಿಂಗಾಯತರು–ವೀರಶೈವರನ್ನು ಒಡೆಯುವ ಕೆಲಸ ಮಾಡಿದ್ದರು. ಈಗ ಎಲ್ಲಾ ಜಾತಿ ಒಡೆಯಲು ಮುಂದಾಗಿದ್ದಾರೆ' ಎಂದರು.

'ಒಕ್ಕಲಿಗರು ಮತ್ತು ಲಿಂಗಾಯತರಲ್ಲಿ ಬೇರೆ ಬೇರೆ ಪಂಗಡಗಳಿವೆ. ಆದರೆ, ಹೊಸದಾಗಿ ಒಕ್ಕಲಿಗ ಕ್ರಿಶ್ಚಿಯನ್, ಲಿಂಗಾಯತ ಕ್ರಿಶ್ಚಿಯನ್, ಗಾಣಿಗ ಕ್ರಿಶ್ಚಿಯನ್, ವೀರಶೈವ ಕ್ರಿಶ್ಚಿಯನ್, ನೇಕಾರ ಕ್ರಿಶ್ಚಿಯನ್ ಎಲ್ಲಿಂದ ಬಂದರು?' ಎಂದು ಪ್ರಶ್ನಿಸಿದರು. 'ಹಿಂದೂ ಸಮಾಜದವರು ಜಾತಿ–ಧರ್ಮ ಬಿಟ್ಟು ಒಟ್ಟಾಗುವ ಕಾಲ ಬಂದಿದೆ. ಇಲ್ಲದಿದ್ದರೆ ನಮ್ಮನ್ನು ವಿಂಗಡಿಸುತ್ತ ಹೋಗುತ್ತಾರೆ. ಬ್ರಿಟಿಷರಿಗೆ ಯಾವ ರೀತಿಯ ಮನಃಸ್ಥಿತಿ ಇತ್ತೋ ಅದೇ ಮನಃಸ್ಥಿತಿ ಸಿದ್ದರಾಮಯ್ಯನವರ ಸರ್ಕಾರ ಹೊಂದಿದೆ' ಎಂದು ಹೇಳಿದರು.

ಉಮಾಶ್ರೀ ಸೇರಿ 15 ಮಂದಿಗೆ ಪ್ರಶಸ್ತಿ

ಉಮಾಶ್ರೀ

ಬೆಂಗಳೂರು: ಕಬ್ಬನ್ ಪಾರ್ಕ್ ನಡಿಗೆದಾರರ ಸಂಘ ನೀಡುವ 'ಅಂತರರಾಷ್ಟ್ರೀಯ ಮಹಿಳಾ ಸಾಧಕಿ ಪ್ರಶಸ್ತಿ'ಗೆ ನಟಿ ಉಮಾಶ್ರೀ ಸೇರಿ ವಿವಿಧ ಕ್ಷೇತ್ರಗಳ 15 ಮಂದಿ ಆಯ್ಕೆಯಾಗಿದ್ದಾರೆ.

ಶುಕ್ರವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಘದ ಅಧ್ಯಕ್ಷ ಎಸ್. ಉಮೇಶ್, '2025ನೇ ಸಾಲಿನ ಈ ಪ್ರಶಸ್ತಿಗೆ ಕುಸುಮಾ (ತೋಟಗಾರಿಕೆ), ದೀಕ್ಷಾ ವಿ. (ಶಾಸ್ತ್ರೀಯ ನೃತ್ಯ), ರಜನಿ (ವಿದ್ಯುನ್ಮಾನ ಮಾಧ್ಯಮ), ಸುಶೀಲಾ ಡೋಣೂರ (ಮುದ್ರಣ ಮಾಧ್ಯಮ), ದೀಪಶ್ರೀ ಎಸ್. (ಶೈಕ್ಷಣಿಕ), ಸಂಜನಾ ಬಾಯ್ (ಶೈಕ್ಷಣಿಕ), ಅನುರಾಧ (ಶಿಕ್ಷಣ), ಡಾ. ಚೈತನ್ಯಾ ಶ್ರೀಧರ್ (ಮನೋವೈದ್ಯಕೀಯ), ಗಾಯತ್ರಿ ಚಂದ್ರಶೇಖರ್ (ಸಮಾಜ ಸೇವೆ), ಅನುಷ್ಕಾ ರೈ (ನಟನೆ), ಅರ್ಚನಾ ಸಿಂಗ್ (ನಟನೆ), ಖುಷ್ಬೂ (ನಟನೆ), ಕೃಪಾ (ಮಾಡೆಲಿಂಗ್) ಹಾಗೂ ಆರ್ಚಿ (ಮಾಡೆಲಿಂಗ್) ಆಯ್ಕೆಯಾಗಿದ್ದಾರೆ' ಎಂದು ತಿಳಿಸಿದರು.

'ಅ.5ರಂದು ರವೀಂದ್ರ ಕಲಾಕ್ಷೇತ್ರದಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ಹಮ್ಮಿಕೊಳ್ಳಲಾಗಿದೆ'ಎಂದುಹೇಳಿದರು.

ನಗರದಲ್ಲಿ ಇಂದು

ಮಹಿಳಾ ಸಬಲೀಕರಣದ ಬಗ್ಗೆ ಕಾನೂನು ಅರಿವು ಮತ್ತು ಮಹಿಳೆಯರಿಗಾಗಿ ಇರುವ ಕಲ್ಯಾಣ ಕಾರ್ಯಕ್ರಮಗಳ ಬಗ್ಗೆ ಪ್ರದರ್ಶನ ಮಳಿಗೆ ಹಾಗೂ ಮಹಿಳೆಯರಿಗೆ ಉಚಿತ ಆರೋಗ್ಯ ತಪಾಸಣೆ ಶಿಬಿರ: ಉದ್ಘಾಟನೆ: ಅನು ಸಿವರಾಮನ್, ಅಧ್ಯಕ್ಷತೆ: ಶಾಲಿನಿ ರಜನೀಶ್, ಆಯೋಜನೆ: ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ, ಬೆಂಗಳೂರು ನಗರ ಜಿಲ್ಲಾಡಳಿತ, ಸ್ಥಳ: ಸಂಭ್ರಮ ಸಭಾಂಗಣ, ಸುಧಾರಣೆ ಸಂಸ್ಥೆಗಳ ಸಂಕೀರ್ಣ, ಡಾ.ಎಂ.ಎಚ್. ಮರಿಗೌಡ ರಸ್ತೆ, ಬೆಳಿಗ್ಗೆ 10

ವಿಶ್ವ ಅಲ್ಝೈಮರ್ ದಿನದ ಪ್ರಯುಕ್ತ 'ಸ್ಮೃತಿ–ಮೆಮರಿ ವೆಲ್‌ನೆಸ್ ಡ್ರೈವ್' ಕಾರ್ಯಕ್ರಮ: ತಜ್ಞರೊಂದಿಗೆ ಸಂವಾದ, ನೆನಪಿನ ಶಕ್ತಿ ವರ್ಧಕ ಆಟಗಳು, ಚಿತ್ರಕಲಾ ಸ್ಪರ್ಧೆ, ಆಯೋಜನೆ: ನೈಟಿಂಗೇಲ್ಸ್ ಮೆಡಿಕಲ್ ಟ್ರಸ್ಟ್, ಸ್ಥಳ: ಕೃಷ್ಣರಾವ್ ಪಾರ್ಕ್, ಬಸವನಗುಡಿ, ಬೆಳಿಗ್ಗೆ 9ರಿಂದ

'ಕನ್ನಡ ಸಾಹಿತ್ಯದಲ್ಲಿ ಸಾಮರಸ್ಯದ ನೆಲೆಗಳು' ವಿಷಯದ ಕುರಿತು ಉಪನ್ಯಾಸ: ಸಂತೋಷ್ ಹಾನಗಲ್, ಉದ್ಘಾಟನೆ: ಎಂ. ಪ್ರಕಾಶಮೂರ್ತಿ, ಅತಿಥಿಗಳು: ಸರವಣನ್, ಶ್ರೀನಿವಾಸಮೂರ್ತಿ, ಅಧ್ಯಕ್ಷತೆ: ಕೆ.ಆನಂದ್, ಆಯೋಜನೆ: ಗಾಂಧಿನಗರ ವಿಧಾನಸಭಾ ಕ್ಷೇತ್ರ ಕನ್ನಡ ಸಾಹಿತ್ಯ ಪರಿಷತ್ತು, ಸ್ಥಳ: ಬಿಬಿಎಂಪಿ ಪದವಿ ಮತ್ತು ಪದವಿಪೂರ್ವ ಕಾಲೇಜು, ಮಾಗಡಿ ರಸ್ತೆ, ಬೆಳಿಗ್ಗೆ 10

76ನೇ ಸಂಸ್ಥಾಪನಾ ದಿನಾಚರಣೆ: ಅತಿಥಿಗಳು: ಗಿರಿರಾಜ್ ಸಿಂಗ್, ಶೋಭಾ ಕರಂದ್ಲಾಜೆ, ಕೆ. ಸುಧಾಕರ್, ಜಿ. ಲಕ್ಷ್ಮಿನಾರಾಯಣ, ಪದ್ಮಿನಿ ಸಿಂಗ್ಲಾ, ಆಯೋಜನೆ: ಕೇಂದ್ರ ರೇಷ್ಮೆ ಮಂಡಳಿ, ಸ್ಥಳ: ಡಾ.ಬಾಬು ರಾಜೇಂದ್ರ ಪ್ರಸಾದ್ ಅಂತರರಾಷ್ಟ್ರೀಯ ಸಮಾವೇಶ ಕೇಂದ್ರ, ಕೃಷಿ ವಿಜ್ಞಾನ ವಿಶ್ವವಿದ್ಯಾಲಯ, ಗಾಂಧಿ ಕೃಷಿ ವಿಜ್ಞಾನ ಕೇಂದ್ರ, ಬೆಳಿಗ್ಗೆ 10

ಬಿಎಎಸ್‌ಎಲ್‌ಪಿ ಕೋರ್ಸ್‌ಗೆ ಚಾಲನೆ: ಅತಿಥಿಗಳು: ಎಂ. ಪುಷ್ಪವತಿ, ಬಿ.ಎಸ್. ಶಂಕರನಾರಾಯಣ ರಾವ್, ವಿ. ನಾರಾಯಣಸ್ವಾಮಿ, ಆಯೋಜನೆ ಹಾಗೂ ಸ್ಥಳ: ಇನ್‌ಸ್ಟಿಟ್ಯೂಟ್ ಆಫ್ ಸ್ಪೀಚ್ ಆ್ಯಂಡ್ ಹಿಯರಿಂಗ್, ಅಗ್ರಹಾರ ದಾಸರಹಳ್ಳಿ, ಬೆಳಿಗ್ಗೆ 11

ಸಮುದಾಯ ಸಂಪರ್ಕ: ಸಂವಾದ: ಡಾ. ಪ್ರಭಾ ಎಸ್. ಚಂದ್ರ, ಆಯೋಜನೆ: ನಿಮ್ಹಾನ್ಸ್, ತೋಟಗಾರಿಕೆ ಇಲಾಖೆ, ಸ್ಥಳ: ಲಾಲ್‌ಬಾಗ್ ಉದ್ಯಾನ, ಬೆಳಿಗ್ಗೆ 11

ಮೊದಲನೇ ವರ್ಷದ ಬಿಇ ತರಗತಿಗಳ ಉದ್ಘಾಟನಾ ಸಮಾರಂಭ: ಮುಖ್ಯ ಅತಿಥಿ: ಧರ್ಮೇಂದ್ರ, ಅಧ್ಯಕ್ಷತೆ: ಎಸ್. ಮರಿಸ್ವಾಮಿ, ಆಯೋಜನೆ ಹಾಗೂ ಸ್ಥಳ: ಜೆಪಿಎನ್ ಸಭಾಂಗಣ, ಡಾ. ಅಂಬೇಡ್ಕರ್ ತಾಂತ್ರಿಕ ಮಹಾವಿದ್ಯಾಲಯ, ಮಲ್ಲತ್ತಹಳ್ಳಿ, ಮಧ್ಯಾಹ್ನ 1.30

ಮಾಲತಿ ಪಟ್ಟಣಶೆಟ್ಟಿ

ಮನೆಯಂಗಳದಲ್ಲಿ ಮಾತುಕತೆ: ತಿಂಗಳ ಅತಿಥಿ: ಪ್ರೊ. ಮಾಲತಿ ಪಟ್ಟಣಶೆಟ್ಟಿ, ಆಯೋಜನೆ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಮಧ್ಯಾಹ್ನ 3

'ಸುರಂಗದಾಚೆ: ಉತ್ತಮ ಸಂಚಾರ ಮಾರ್ಗಗಳ ಹುಡುಕಾಟ' ವಿಚಾರಸಂಕಿರಣ: ಹೆಬ್ಬಾಳದಿಂದ ಸಿಲ್ಕ್‌ಬೋರ್ಡ್‌ವರೆಗಿನ ಜೋಡಿ ಸುರಂಗ ಯೋಜನೆಯ ಬಗ್ಗೆ ಚರ್ಚೆ: ಶಹೀನ್ ಶಶಾ, ಅಶೀಷ್ ವರ್ಮಾ, ಆಯೋಜನೆ: ಫ್ರೈಡೇಸ್ ಫಾರ್ ಫ್ಯೂಚರ್ ಕರ್ನಾಟಕ, ಸ್ಥಳ: ಆಶೀರ್ವಾದ್ (ಲಾಯೊಲಾ ಸಭಾಂಗಣ), ಸೇಂಟ್ ಮಾರ್ಕ್ಸ್ ರಸ್ತೆ, ಸಂಜೆ 4

ವೀಲ್‌ಚೇರ್ ಟೆನ್ನಿಸ್ ಪಂದ್ಯಾವಳಿಯ ಸಮಾರೋಪ ಸಮಾರಂಭ: ಅತಿಥಿಗಳು: ಪ್ರಣವ್ ಮೊಹಂತಿ, ಎಂ.ಕೆ. ಶ್ರೀಧರ್, ಸುನಿಲ್ ಯಜಮಾನ್, ಆಯೋಜನೆ ಹಾಗೂ ಸ್ಥಳ: ಕರ್ನಾಟಕ್ ವಿಲ್‌ಚೇರ್ ಟೆನ್ನಿಸ್ ಅಸೋಸಿಯೇಷನ್, ಎಸ್.ಎಂ. ಕೃಷ್ಣ ಟೆನ್ನಿಸ್ ಕ್ರೀಡಾಂಗಣ, ಕಬ್ಬನ್ ಪಾರ್ಕ್, ಸಂಜೆ 4.30

'ಅರಿವಾಮೆ' ಸಂಭ್ರಮ: ಆಯೋಜನೆ–ಸ್ಥಳ: ಇಂಡಿಯನ್ ಹೆರಿಟೇಜ್ ಅಕಾಡೆಮಿ, ಕೋರಮಂಗಲ, ಸಂಜೆ 5

ಪೂರ್ಣಾ ಸುರೇಶ್ ಅವರ 'ನರ್ತನ ಯೋಗ' ಪುಸ್ತಕ ಬಿಡುಗಡೆ: ಮುಖ್ಯ ಅತಿಥಿಗಳು: ನಾಗೇಶ್ ವಿ. ಬೆಟ್ಟಕೋಟೆ, ಕೆ. ಸುಬ್ರಮಣ್ಯಂ, ಉಪಸ್ಥಿತಿ: ಉಷಾ ದಾತಾರ್, ಸನ್ಮಾನ: ಸರ್ವೋತ್ತಮ ಕಾಮತ್, ಆಯೋಜನೆ: ಕಲಾಸಂಕುಲ, ಸ್ಥಳ: ಜೆಎಸ್ಎಸ್ ಸಭಾಂಗಣ, ಜಯನಗರ 8ನೇ ಬ್ಲಾಕ್, ಸಂಜೆ 6

'ಶಂಕರ ಭಗವತ್ಪಾದ ಶಿವೋಹಂ ಶಿವೋಹಂ' ಭರತನಾಟ್ಯ ಪ್ರದರ್ಶನ: ರಕ್ಷಾ ಕಾರ್ತಿಕ್ ಹಾಗೂ ತಂಡ, ಅತಿಥಿಗಳು: ಕೇದಾರ್ ಸಿ.ಎಸ್., ವಿ.ಆರ್. ರಮೇಶ್, ರಾಮ್‌ಕುಮಾರ್ ತಿರುಮೂರ್ತಿ, ಆಯೋಜನೆ: ನಟನಂ ಇನ್‌ಸ್ಟಿಟ್ಯೂಟ್ ಆಫ್ ಡಾನ್ಸ್, ಸ್ಥಳ: ಮೆಡೈ ದಿ ಸ್ಟೇಜ್, ಕೋರಮಂಗಲ, ಸಂಜೆ 6

ಕೃಷ್ಣಯಾಜಿ

ಯಕ್ಷ ಸಂಕ್ರಾಂತಿ: ಹೊಸ್ತೋಟ ಮಂಜುನಾಥ ಭಾಗವತ ವಿರಚಿತ 'ರಾಮ ನಿರ್ಯಾಣ', 'ಕಾಲಯವನ', ಸಿದ್ಧಕಟ್ಟೆ ವಿಶ್ವನಾಥ ಶೆಟ್ಟಿ ವಿರಚಿತ 'ಗಿರಿ ಪೂಜೆ', ದೇವಿದಾಸ ವಿರಚಿತ 'ಚಿತ್ರ ಸೇನ' ಯಕ್ಷಗಾನ ಪ್ರದರ್ಶನ, ಅತಿಥಿ ಕಲಾವಿದರು: ಕೃಷ್ಣಯಾಜಿ ಬಳ್ಕೂರು, ರಾಮಚಂದ್ರ ಹೆಗಡೆ ಕೊಂಡದಕುಳಿ, ಜಬ್ಬಾರ್ ಸಮೋ, ಆಯೋಜನೆ: ರೀಗಲ್ ಜುವೆಲರ್ಸ್, ಸ್ಥಳ: ರವಿಂದ್ರ ಕಲಾಕ್ಷೇತ್ರ, ಸಂಜೆ 6

ಭರತನಾಟ್ಯ ಪ್ರದರ್ಶನ: ಕಾಳಿಕಾಂಬ ಫೈನ್ ಆರ್ಟ್ಸ್ ವಿದ್ಯಾರ್ಥಿಗಳಿಂದ, ಆಯೋಜನೆ: ಅಖಿಲ ಭಾರತ ಯುವ ಸಂಗೀತ ನೃತ್ಯ ಕಲಾವಿದರ ಒಕ್ಕೂಟ, ಸ್ಥಳ: ರಾಮಮಂದಿರ, ರಾಜಾಜಿನಗರ 4ನೇ ಬ್ಲಾಕ್, ಸಂಜೆ 6.30

ರೇವಾ ವಿಶ್ವವಿದ್ಯಾಲಯದ ಕುಲಾಧಿಪತಿ ಪಿ. ಶ್ಯಾಮರಾಜು ಭರವಸೆ

ಬಡತನ ನಿರ್ಮೂಲನೆಗೆ ಸಹಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಡತನ ನಿರ್ಮೂಲನೆಯಲ್ಲಿ ಎದುರಾಗುವ ಸವಾಲುಗಳನ್ನು ಎದುರಿಸಲು ಹಾಗೂ ವಿಶ್ವಸಂಸ್ಥೆಯ ಸುಸ್ಥಿರ ಅಭಿವೃದ್ಧಿ ಗುರಿಗಳನ್ನು ತಲುಪಲು ರೇವಾ ವಿಶ್ವವಿದ್ಯಾಲಯ ಸಹಕಾರ ನೀಡಲಿದೆ ಎಂದು ವಿಶ್ವವಿದ್ಯಾಲಯದ ಕುಲಾಧಿಪತಿ ಪಿ. ಶ್ಯಾಮರಾಜು ತಿಳಿಸಿದರು.

ರೇವಾ ವಿಶ್ವವಿದ್ಯಾಲಯ ಕ್ಯಾಂಪಸ್‌ನಲ್ಲಿ ಹಮ್ಮಿಕೊಂಡಿದ್ದ ಸಮ್ಮೇಳನದಲ್ಲಿ ಮಾತನಾಡಿದ ಅವರು, ಬಡತನ ನಿರ್ಮೂಲನೆ ವಿಚಾರದಲ್ಲಿ ವಿಶ್ವಸಂಸ್ಥೆ ವಿಶೇಷ ಗಮನ ನೀಡಿ ಎಲ್ಲಾ ದೇಶಗಳ ಸಹಕಾರವನ್ನು ಪಡೆಯುತ್ತಿದೆ. ಇದಕ್ಕಾಗಿ ಜಾಗತಿಕ ನೆಲೆಯಲ್ಲಿ ತಜ್ಞರು, ನಾನಾ ಕ್ಷೇತ್ರದ ಪ್ರಮುಖರು ಸಲಹೆಗಳನ್ನು ನೀಡುತ್ತಿದ್ದಾರೆ. ಜಾಗತಿಕ ಸಹಯೋಗ ಬಲಪಡಿಸಲು ಸಮ್ಮೇಳನ ಸಹಕಾರಿಯಾಗಿದೆ ಎಂದು ತಿಳಿಸಿದರು.

ಮೂರು ದಿನಗಳ ಸಮ್ಮೇಳನದಲ್ಲಿ ವಿವಿಧ ದೇಶಗಳ ವಿಶ್ವವಿದ್ಯಾಲಯಗಳ ಪ್ರಾಧ್ಯಾಪಕರು, ಶೈಕ್ಷಣಿಕ ಕ್ಷೇತ್ರದ ಪ್ರಮುಖರು ಭಾಗವಹಿಸಿದ್ದಾರೆ. ಸಾಮಾಜಿಕ ನ್ಯಾಯ, ನವೀನ ಪದ್ಧತಿಗಳು, ತಂತ್ರಜ್ಞಾನ, ಉದ್ಯಮಶೀಲತೆ ಮತ್ತು ಬಡತನ ನಿರ್ಮೂಲನೆಗೆ ಅಂತರ್ ಶಿಸ್ತೀಯ ವಿಧಾನಗಳ ಬಗ್ಗೆ ಚರ್ಚೆಗಳು ನಡೆದವು.

ರೇವಾ ವಿಶ್ವವಿದ್ಯಾನಿಲಯದ ಕುಲಪತಿ ಸಂಜಯ್ ಆರ್. ಚಿಟ್ನಿಸ್ ಮೊದಲಾದವರು ಇದ್ದರು.



ಬಡತನ ನಿರ್ಮೂಲನೆ ಕುರಿತು ಬೆಂಗಳೂರಿನ ರೇವಾ ವಿಶ್ವವಿದ್ಯಾನಿಲಯದಲ್ಲಿ ಅಂತರ ರಾಷ್ಟ್ರೀಯ ಸಮ್ಮೇಳನ ನಡೆಯಿತು.

ವಿವೇಚನೆ ಅನುಸಾರ 'ಧರ್ಮ' ನಮೂದು

ಜಾತಿ ಕಾಲಂನಲ್ಲಿ 'ವೀರಶೈವ ಲಿಂಗಾಯತ' ಎಂದೇ ಬರೆಯಿಸಿ
• ವೀರಶೈವ ಲಿಂಗಾಯತ ಏಕತಾ ಸಮಾವೇಶ ನಿರ್ಣಯ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: 'ರಾಜ್ಯ ಸರ್ಕಾರ ನಡೆಸುವ ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆ ವೇಳೆ ವೀರಶೈವ ಲಿಂಗಾಯತ ಸಮಾಜದವರು ಜಾತಿ ಕಾಲಂನಲ್ಲಿ ಕಡ್ಡಾಯವಾಗಿ 'ವೀರಶೈವ ಲಿಂಗಾಯತ' ಬರೆಸಬೇಕು ಎಂದು ಇಲ್ಲಿ ನಡೆದ ವೀರಶೈವ ಲಿಂಗಾಯತ ಏಕತಾ ಸಮಾವೇಶ ನಿರ್ಣಯಿಸಿದೆ.

'ಆದರೆ, ಸಮಾಜದವರು ತಮ್ಮ ವಿವೇಚನೆಗೆ ಅನುಗುಣವಾಗಿ ಧರ್ಮದ ಹೆಸರು ನಮೂದಿಸಬಹುದು' ಎಂದು ಶುಕ್ರವಾರ ನಡೆದ ಸಮಾವೇಶ ನಿರ್ಣಯ ಅಂಗೀಕರಿಸಿತು.

ನೆಹರೂ ಮೈದಾನದಲ್ಲಿ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಏರ್ಪಡಿಸಿದ್ದ ಸಮಾವೇಶಲ್ಲಿ ಮಹಾರಾಷ್ಟ್ರ, ಆಂಧ್ರಪ್ರದೇಶ, ತೆಲಂಗಾಣ ರಾಜ್ಯಗಳಲ್ಲದೆ ನಾಡಿನ ವಿವಿಧ ಭಾಗಗಳ ಮಠಾಧೀಶರು, ಜನಪ್ರತಿನಿಧಿಗಳು ಪಾಲ್ಗೊಂಡಿದ್ದರು.

'ವೀರಶೈವ ಮತ್ತು ಲಿಂಗಾಯತ ಬೇರೆಯಲ್ಲ ಎಂಬ ಸಂದೇಶವನ್ನು ಸಾರುವುದರ ಜೊತೆಗೆ, ಸಮಾಜದಲ್ಲಿರುವ ಭಿನ್ನಾಭಿಪ್ರಾಯಗಳನ್ನು ಸರಿಪಡಿಸಿಕೊಂಡು ಒಗ್ಗಟ್ಟು ಪ್ರದರ್ಶಿಸಬೇಕು' ಎಂಬ ತೀರ್ಮಾನವೂ ಕೈಗೊಳ್ಳಲಾಯಿತು.

> **ಸಮಾಜದವರಲ್ಲಿ ಸಾಂಪ್ರದಾಯಿಕ ಆಚರಣೆಗಳು ಕಡಿಮೆಯಾಗುತ್ತಿವೆ. ಧಾರ್ಮಿಕ ಆಚರಣೆಯಲ್ಲಿ ನಮ್ಮದು ಬಲಿಷ್ಠ ಸಮಾಜ ಎಂದು ಸಾಬೀತುಪಡಿಸಿ, ಬಲಿಷ್ಠಗೊಳಿಸಬೇಕು**
> **ಸಿದ್ಧಲಿಂಗ ಸ್ವಾಮೀಜಿ,** ಸಿದ್ಧಗಂಗಾ ಮಠ

> **ಸಮಾಜವು ಪಟ್ಟಭದ್ರ ಹಿತಾಸಕ್ತಿಯ ಕೈಯಲ್ಲಿ ಸಿಲುಕಿದೆ. ಸ್ವಾರ್ಥ ಮತ್ತು ರಾಜಕಾರಣಕ್ಕೆ ಸಮಾಜವನ್ನೇ ಬಲಿಕೊಡುತ್ತಿದ್ದಾರೆ. ಪ್ರತ್ಯೇಕ ಧರ್ಮಕ್ಕೆ ಒಗ್ಗಟ್ಟಾಗಿ ಹೋರಾಡಬೇಕಿದೆ.**
> **ವಿಜಯಾನಂದ ಕಾಶಪ್ಪನವರ,** ಶಾಸಕ

'ಸಮೀಕ್ಷೆಯಲ್ಲಿ ಹೊಸ ಜಾತಿಗಳನ್ನು ಸೇರಿಸಿ, ಅಖಂಡ ಹಿಂದೂ ಸಮಾಜವನ್ನು ವಿಂಗಡಿಸಲಾಗಿದೆ. ಹಿಂದೂಗಳ ಸಂಖ್ಯೆ ಕುಂಠಿತಗೊಳಿಸಲು ಕಾಣದ ಕೈಗಳು ಕೆಲಸ ಮಾಡಿವೆ. ವೀರಶೈವ ಲಿಂಗಾಯತ ಸಮಾಜವನ್ನು ಸ್ವತಂತ್ರ ಧರ್ಮವಾಗಿಸಲು ಮಹಾಸಭಾ ಪ್ರಯತ್ನಿಸಿದರೂ ಕೇಂದ್ರ ಸರ್ಕಾರ ಮಾನ್ಯ ಮಾಡಲಿಲ್ಲ. ಹೀಗಾಗಿ, ಸಮೀಕ್ಷೆಯಲ್ಲಿ ಸಂವಿಧಾನ ಮಾನ್ಯ ಮಾಡಿದ ಧರ್ಮವನ್ನೇ ಉಲ್ಲೇಖಿಸಬೇಕು. ಹೊಸಧರ್ಮ ಹುಟ್ಟುಹಾಕುವ ಬದಲು, ಇರುವ ಧರ್ಮ ಸುಭದ್ರವಾಗಿಸೋಣ' ಎಂದು ಬಾಳೆಹೊನ್ನೂರು ರಂಭಾಪುರಿ ಮಠದ ಪ್ರಸನ್ನರೇಣುಕ ವೀರಸೋಮೇಶ್ವರ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

ಮುಂಡರಗಿ ಅನ್ನದಾನೀಶ್ವರ ಮಠದ ಅನ್ನದಾನೀಶ್ವರ ಸ್ವಾಮೀಜಿ ಮಾತನಾಡಿ, 'ವೀರಶೈವ ಮಹಾಸಭಾಕ್ಕೆ ಲಿಂಗಾಯತ ಶಬ್ದವನ್ನು ಅನಿವಾರ್ಯವಾಗಿ ಸೇರಿಸಲಾಯಿತು. ವೀರಶೈವ ಸಮಾಜಕ್ಕೆ 12 ಉಪನಾಮಗಳಿವೆ. ವೀರಶೈವರು ಅಸ್ತಿತ್ವ ರಕ್ಷಣೆಗೆ ಆದ್ಯತೆ ನೀಡಬೇಕು' ಎಂದರು.

ಮಹಾಸಭಾದ ಉಪಾಧ್ಯಕ್ಷರೂ ಆಗಿರುವ ಸಚಿವ ಈಶ್ವರ ಖಂಡ್ರೆ, 'ವೀರಶೈವ ಮತ್ತು ಲಿಂಗಾಯತ ಒಂದೇ ಧರ್ಮವಾಗಿವೆ. ಅಲ್ಲಲ್ಲಿ ಒಡಕಿನ ಧ್ವನಿ ಕೇಳಿಬರುತ್ತಿರುವುದು ವಿಷಾದನೀಯ. ವೀರಶೈವ ಲಿಂಗಾಯತಕ್ಕೆ ಪ್ರತ್ಯೇಕ ಧರ್ಮ ವಾಗಬೇಕು ಎನ್ನುವುದು ನಮ್ಮ ಬೇಡಿಕೆ. ಇತ್ತೀಚೆಗೆ ಸಮಾಜ ಕವಲುದಾರಿಯಲ್ಲಿ ಸಾಗುತ್ತಿರುವುದರಿಂದ, ಸಾಕಷ್ಟು ಸಮಸ್ಯೆ, ಸವಾಲುಗಳನ್ನು ಎದುರಿಸುವಂತಾಗಿದೆ. ಸಮಾಜದ ಅಸ್ತಿತ್ವಕ್ಕೆ ನಮ್ಮಲ್ಲಿರುವ ವೈಮನಸ್ಸನ್ನು ಬದಿಗಿಟ್ಟು ಸಂಘಟಿತ ರಾಗಬೇಕು' ಎಂದು ಕರೆ ನೀಡಿದರು.

ಕಾಶಿಪೀಠದ ಮಲ್ಲಿಕಾರ್ಜುನ ವಿಶ್ವಾರಾಧ್ಯ ಶಿವಾಚಾರ್ಯ, ಶ್ರೀಶೈಲಪೀಠದ ಚನ್ನಸಿದ್ದರಾಮ ಸ್ವಾಮೀಜಿ, ಉಜ್ಜಯನಿ ಸಿದ್ದಲಿಂಗ ದೇಶಿಕೇಂದ್ರ ಸ್ವಾಮೀಜಿ, ಶಿರಹಟ್ಟಿಯ ಫಕ್ಕೀರ ಸಿದ್ದರಾಮ ಸ್ವಾಮೀಜಿ, ಮುಪ್ಪಿನ ಬಸವಲಿಂಗ ಸ್ವಾಮೀಜಿ, ಮೂರು ಸಾವಿರ ಮಠದ ಗುರುಸಿದ್ದ ರಾಜಯೋಗೀಂದ್ರ ಸ್ವಾಮೀಜಿ, ಶಿರಹಟ್ಟಿ ಫಕೀರ ದಿಂಗಾಲೇಶ್ವರ ಸ್ವಾಮೀಜಿ, ಕೆಎಲ್‌ಇ ಸಂಸ್ಥೆಯ ಅಧ್ಯಕ್ಷ ಪ್ರಭಾಕರ ಕೋರೆ, ವಿಧಾನ ಪರಿಷತ್ತು ಮಾಜಿ ಸಭಾಪತಿ ವೀರಣ್ಣ ಮತ್ತಿಕಟ್ಟಿ, ಪ್ರಮುಖರಾದ ಶಂಕರಣ್ಣ ಮುನವಳ್ಳಿ ಹಾಗೂ ಮಲ್ಲಿಕಾರ್ಜುನ ಸಾವಕಾರ ಉಪಸ್ಥಿತರಿದ್ದರು.

'ಸ್ಪಷ್ಟ ನಿರ್ಧಾರ ತೆಗೆದುಕೊಳ್ಳಲಿ'

'ಕೇಂದ್ರ ಸರ್ಕಾರವು ಜನವರಿಯಲ್ಲಿ ಜಾತಿಗಣತಿ, ಜನಗಣತಿ ನಡೆಸಲಿದೆ. ಅದಕ್ಕೂ ಮುನ್ನ ಮಹಾಸಭಾ ಸಮಾಜದ ಪ್ರಮುಖರನ್ನು ಮಠಾಧೀಶರನ್ನು ಕರೆದು ಸಭೆ ನಡೆಸಿ, ಧರ್ಮ ಮತ್ತು ಜಾತಿ ಕುರಿತು ಸ್ಪಷ್ಟ ತೀರ್ಮಾನ ತೆಗೆದುಕೊಳ್ಳಬೇಕು' ಎಂದು ಸಂಸದ ಬಸವರಾಜ ಬೊಮ್ಮಾಯಿ ಹೇಳಿದರು.

'ಏನೇ ತೀರ್ಮಾನ ತೆಗೆದುಕೊಂಡರೂ ಸಂವಿಧಾನ ಬದ್ಧವಾಗಿ ಇರಬೇಕು. ಶೇ 30ರಷ್ಟಿದ್ದ ವೀರಶೈವ ಲಿಂಗಾಯತರ ಜನಸಂಖ್ಯೆ ಶೇ 11ಕ್ಕೆ ಕುಸಿದಿದೆ. ನಮ್ಮಲ್ಲಿರುವ ಒಡಕೇ ಇದಕ್ಕೆ ಕಾರಣ. ನಾವೆಲ್ಲರೂ ಆಂತರಿಕವಾಗಿ ಆತ್ಮದ ಸಮೀಕ್ಷೆ ಮಾಡಿಕೊಳ್ಳಬೇಕು. ಕೋರ್ಟ್ ಮತ್ತು ಸಂವಿಧಾನ ಏನು ಹೇಳುತ್ತದೆ ಎಂದು ಅರ್ಥ ಮಾಡಿಕೊಂಡು, ಹೋರಾಟ ನಡೆಸಬೇಕು' ಎಂದರು.

'ಲಿಂಗಾಯತ ಸನಾತನ ಹಿಂದೂ ಧರ್ಮದ ಪ್ರಮುಖ ಜನಾಂಗವಾಗಿದ್ದು, ಇವರೆಲ್ಲರೂ ಹಿಂದೂಗಳೇ ಆಗಿದ್ದಾರೆ. ರಾಜ್ಯ ಸರ್ಕಾರ ನಡೆಸುವ ಸಮೀಕ್ಷೆಯಲ್ಲಿ ಧರ್ಮದ ಕುರಿತು ಗೊಂದಲಗಳಿದ್ದು, ಕೆಲವರು ಕೋರ್ಟ್‌ನಲ್ಲಿ ಪ್ರಕರಣ ದಾಖಲಿಸಿದ್ದಾರೆ. ಅಂಕಿ-ಅಂಶಗಳು ತಪ್ಪಾಗಿ ನಮೂದಾದರೆ ಸರ್ಕಾರ ವಿಶ್ವಾಸ ಕಳೆದುಕೊಳ್ಳುತ್ತದೆ. ಸಮೀಕ್ಷೆಗೂ ಮೊದಲು ಸರ್ಕಾರ ಗೊಂದಲ ಪರಿಹರಿಸಬೇಕು. ಇಲ್ಲವೇ ಹೊಸದಾಗಿ ಸಮೀಕ್ಷೆ ನಡೆಸಲು ಮುಂದಾಗಬೇಕು' ಸಂಸದ ಜಗದೀಶ ಶೆಟ್ಟರ್ ಆಗ್ರಹಿಸಿದರು.

'ಹಿಂದುಳಿದ ಪಟ್ಟಿಗೆ ಸೇರಿಸಲು ಹೋರಾಟ'

'ವೀರಶೈವ ಲಿಂಗಾಯತ ಸಮಾಜದಲ್ಲಿ ತೀರಾ ಹಿಂದುಳಿದ ನಾಲ್ಕು ಜಾತಿಗಳಿಗೆ ರಾಜ್ಯದಲ್ಲಿ 1 'ಎ' ಪ್ರವರ್ಗ, 32 ಜಾತಿಗಳಿಗೆ 2 'ಎ' ಪ್ರವರ್ಗ ಮೀಸಲಾತಿ, 52 ಜಾತಿಗಳಿಗೆ ಹಿಂದುಳಿದ ವರ್ಗದ ಮಾನ್ಯತೆ, ಕೇಂದ್ರದಲ್ಲಿ ಇಡೀ ಸಮಾಜವನ್ನು ಹಿಂದುಳಿದ ಪಟ್ಟಿಗೆ ಸೇರಿಸುವ ಕುರಿತು ಮಹಾಸಭಾ ಹೋರಾಟ ನಡೆಸಲಿದೆ' ಎಂದು ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ಅಧ್ಯಕ್ಷ ಶಂಕರ ಬಿದರಿ ಹೇಳಿದರು.

'ಸಮಾಜದ ಉಪಪಂಗಡಗಳ ಅಭಿವೃದ್ಧಿ ಸಂಸ್ಥೆಗಳ ಪದಾಧಿಕಾರಿಗಳಿಗೆ ಮಹಾಸಭಾದಲ್ಲಿ ಸೂಕ್ತ ಸ್ಥಾನ ನೀಡಲು 3 ತಿಂಗಳಲ್ಲಿ ಕ್ರಮವಹಿಸಲಾಗುವುದು. ರಾಜ್ಯದಲ್ಲಿ ಅಂದಾಜು 2 ಕೋಟಿಯಷ್ಟಿರುವ ಸಮಾಜದ ಜನರು ಮಹಾಸಭಾದ ಸದಸ್ಯರಾಗಬೇಕು ಎಂಬುದು ನಮ್ಮ ಆಶಯ' ಎಂದರು.

ಸುದ್ದಿ 2 ನಿಮಿಷ

ಮಾದಿಗ ಮುಖಂಡರ ಸಭೆ ಇಂದು

ಬೆಂಗಳೂರು: ಮಾದಿಗ ಮುಖಂಡರ ತುರ್ತು ಸಭೆಯನ್ನು ಬೆಂಗಳೂರಿನ ಅರಮನೆ ಮೈದಾನದ ಗಾಯತ್ರಿ ವಿಹಾರದ (ಗೇಟ್ ನಂ.4) ಸಭಾಂಗಣ ದಲ್ಲಿ ಸೆ.20ರಂದು ಮಧ್ಯಾಹ್ನ 2.30ಕ್ಕೆ ಕರೆಯಲಾಗಿದೆ.

ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ವೇಳೆ ಮಾದಿಗ ಎಂದು ಕಡ್ಡಾಯವಾಗಿ ಬರೆಯಿಸುವುದು, ದೇವದಾಸಿಯರಲ್ಲಿ ಜಾಗೃತಿ ಮೂಡಿಸುವುದು, ಬಡ್ತಿಯಲ್ಲಿ ಒಳಮೀಸಲಾತಿ ಜಾರಿ ಸೇರಿದಂತೆ ವಿವಿಧ ವಿಷಯಗಳ ಕುರಿತು ಚರ್ಚಿಸಲಾಗುತ್ತದೆ. ಜೊತೆಗೆ ಒಳಮೀಸಲಾತಿ ಹೋರಾಟದಲ್ಲಿ ಮುಂಚೂಣಿಯಲ್ಲಿದ್ದು, ಅಗಲಿರುವ ಹೋರಾಟಗಾರರನ್ನು ಸ್ಮರಿಸಿ ಶ್ರದ್ಧಾಂಜಲಿ ಸಲ್ಲಿಸಲಾಗುವುದು. ಹಾಲಿ-ಮಾಜಿ ಶಾಸಕರು, ಸಂಸದರು, ಜನಪ್ರತಿನಿಧಿಗಳು, ಚಿಂತಕರು, ನಿವೃತ್ತ ಅಧಿಕಾರಿಗಳು, ಸಾಹಿತಿಗಳು, ಹೋರಾಟಗಾರರು, ವಿವಿಧ ಸಂಘಟನೆಗಳ ಮುಖಂಡರು ಪಾಲ್ಗೊಳ್ಳಲಿದ್ದಾರೆ. ಮಾದಿಗರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳುವಂತೆ ಮಾಜಿ ಸಚಿವ ಎಚ್. ಆಂಜನೇಯ ಮನವಿ ಮಾಡಿದ್ದಾರೆ.



'ತೀಯಾ ಎಂದೇ ನಮೂದಿಸಿ'

ಮಂಗಳೂರು: 'ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆ ವೇಳೆ ಬೆಳ್ಚಾಡ, ಮಲೆಯಾಳಿ ಬಿಲ್ಲವ ಸಮುದಾಯಕ್ಕೆ ಸೇರಿದವರು ಒಂಬತ್ತನೇ ಕಾಲಂನಲ್ಲಿ 'ತೀಯಾ' ಎಂದೇ ನಮೂದಿಸಬೇಕು' ಎಂದು ಭಾರತೀಯ ತೀಯಾ ಸಮಿತಿಯ ಅಧ್ಯಕ್ಷ ಸದಾಶಿವ ಉಳ್ಳಾಲ್ ಹೇಳಿದರು.

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಅವರು, 'ಸಮುದಾಯದವರು ಹಿಂದೆ ಮಾಡಿದಂತೆ ತಪ್ಪು ಮಾಡಬಾರದು. ಸಮೀಕ್ಷೆಗೆ ಬರುವವರು ಸರಿಯಾಗಿ ಜಾತಿ ನಮೂದಿಸಿದ್ದಾರೆಯೇ ಎಂದು ಖಚಿತಪಡಿಸಿಕೊಳ್ಳಬೇಕು. ಸರ್ಕಾರಿ ಸೌಲಭ್ಯಗಳಿಗಾಗಿ ರಾಜ್ಯದಲ್ಲಿರುವ 4 ಲಕ್ಷಕ್ಕೂ ಅಧಿಕ ಜನಸಂಖ್ಯೆಯ ತೀಯಾ ಸಮಾಜದವರು ಜನಬಲ ತೋರಿಸಬೇಕಿದೆ' ಎಂದು ತಿಳಿಸಿದರು.

ಕುದ್ರೋಳಿ ಶ್ರೀ ಭಗವತೀ ಕ್ಷೇತ್ರದ ಅಧ್ಯಕ್ಷ ಗಣೇಶ್ ಕುಂಟಲ್ಪಾಡಿ, ಮುಖಂಡರಾದ ರಾಜ್‌ಗೋಪಾಲ್, ದಿನೇಶ್ ಕುಂಪಲ, ಚಿದಾನಂದ ಗುರಿಕಾರ, ಉಮೇಶ್, ಸುರೇಶ್ ಭಟ್ನಗರ, ವಿಶ್ವನಾಥ, ಪ್ರೇಮ್‌ಚಂದ್, ಜಯಂತ್ ಕೊಂಡಾಣ, ರಾಕೇಶ್, ಮೋನಪ್ಪ ಮಜಿ, ಸರಳಾ ನಾಗೇಶ್, ಸುಕೇಶ್ ಇದ್ದರು.

ಬಿಜೆಪಿ ಚಿಂತನಾ ಶಿಬಿರದಲ್ಲಿ ನಿರ್ಣಯ: ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ

'ಧರ್ಮ ಕಾಲಂನಲ್ಲಿ ಹಿಂದೂ ಎಂದೇ ಬರೆಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಜಾತಿವಾರು ಸಮೀಕ್ಷೆ ವೇಳೆ ಯಾವುದೇ ಜಾತಿ, ಸಮುದಾಯದವರೇ ಇರಲಿ ಧರ್ಮದ ಕಾಲಂನಲ್ಲಿ ಹಿಂದೂ ಎಂದೇ ನಮೂದಿಸಬೇಕು ಎಂದು ಪಕ್ಷದ ರಾಜಕೀಯ ಚಿಂತನಾ ಶಿಬಿರದಲ್ಲಿ ನಿರ್ಣಯಿಸಲಾಗಿದೆ' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಹೇಳಿದರು.

ಚಿಂತನಾ ಶಿಬಿರದ ಬಳಿಕ ಸುದ್ದಿ ಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯ ಸರ್ಕಾರ ಧರ್ಮ ಒಡೆಯುವ ಕೆಲಸಕ್ಕೆ ಕೈಹಾಕಿದೆ. ಇದೊಂದು ದುರಂತ ಎಂದರು.

ಜಾತಿ, ಉಪಜಾತಿ ಹೆಸರು ನಮೂದಿಸುವುದು ಆಯಾ ಜಾತಿ, ಸಮುದಾಯಕ್ಕೆ ಬಿಟ್ಟ ವಿಚಾರ. ಅದನ್ನು ಅವರು ತೀರ್ಮಾನಿಸಬೇಕು. ದೇಶ ಮತ್ತು ರಾಜ್ಯದ ಹಿತದೃಷ್ಟಿಯಿಂದ ಧರ್ಮದ ಕಾಲಂನಲ್ಲಿ ಹಿಂದೂ ಬರೆಸಬೇಕು ಎಂದು ಅವರು ಮನವಿ ಮಾಡಿದರು.

ಬಿಜೆಪಿ ರಾಜಕೀಯ ಚಿಂತನಾ ಶಿಬಿರದಲ್ಲಿ ಸಹ ಉಸ್ತುವಾರಿ ಸುಧಾಕರ ರೆಡ್ಡಿ, ಉಸ್ತುವಾರಿ ರಾಧಾ ಮೋಹನದಾಸ್ ಅಗರ್‌ವಾಲ್, ಬಿ.ವೈ.ವಿಜಯೇಂದ್ರ, ಬಿ.ಎಲ್.ಸಂತೋಷ್ ಆರ್.ಅಶೋಕ, ಛಲವಾದಿ ನಾರಾಯಣಸ್ವಾಮಿ ಉಪಸ್ಥಿತರಿದ್ದರು

ರಾಜ್ಯದಲ್ಲಿ ಕಾಂಗ್ರೆಸ್ ನೇತೃತ್ವದ ಸರ್ಕಾರ ಜಾತಿ ಜನಗಣತಿ ಮಾಡಲು ಮುಂದಾಗಿದೆ. ರಾಜ್ಯಗಳಿಗೆ ಜಾತಿ ಗಣತಿ ಮಾಡುವ ಅಧಿಕಾರ ಇಲ್ಲದಿದ್ದರೂ 47 ಹೊಸ ಜಾತಿಗಳ ಸೃಷ್ಟಿಸುವ ಮೂಲಕ 'ಸಮೀಕ್ಷೆ' ಹೆಸರಿನಲ್ಲಿ ಗಣತಿಗೆ ಮುಂದಾಗಿದೆ. ಕ್ರಿಶ್ಚಿಯನ್ ಲಿಂಗಾಯತ, ಕ್ರಿಶ್ಚಿಯನ್ ಒಕ್ಕಲಿಗ, ಕ್ರಿಶ್ಚಿಯನ್ ನೇಕಾರ, ಕ್ರಿಶ್ಚಿಯನ್ ಪರಿಶಿಷ್ಟ ಜಾತಿ, ಕ್ರಿಶ್ಚಿಯನ್ ಪರಿಶಿಷ್ಟ ಪಂಗಡ ಎಂದು ಗೊಂದಲ ಸೃಷ್ಟಿ ಮಾಡಿದೆ ಎಂದರು ವಿಜಯೇಂದ್ರ ದೂರಿದರು.

'ಸಿದ್ದರಾಮಯ್ಯ ಸರ್ಕಾರ ಅಧಿಕಾರಕ್ಕೆ ಬಂದ ಬಳಿಕ ಕಾಂತರಾಜ ವರದಿ ಬಗ್ಗೆ ಸಾಕಷ್ಟು ಚರ್ಚೆಗಳಾಗಿವೆ. ಈ ವರದಿ ಅವೈಜ್ಞಾನಿಕ ಎಂದು ನಾವು ವಿರೋಧಿಸಿದ್ದೆವು. ರಾಹುಲ್ ಗಾಂಧಿಯವರು ಹೇಳಿದ್ದಾರೆಂಬ ಒಂದೇ ಕಾರಣಕ್ಕೆ ಕಾಂತರಾಜ ವರದಿಯನ್ನು ಸಿದ್ದರಾಮಯ್ಯ ಸರ್ಕಾರ ಕಸದ ಬುಟ್ಟಿಗೆ ಹಾಕಿತು. ಹಿಂದೆ ಸಿದ್ದರಾಮಯ್ಯ ಸರ್ಕಾರ ವೀರಶೈವ-ಲಿಂಗಾಯತ ಪ್ರತ್ಯೇಕ ಧರ್ಮ ಎಂಬ ಗೊಂದಲ ಸೃಷ್ಟಿಸಿ ಸಮಾಜದಲ್ಲಿ ಬೆಂಕಿ ಹಚ್ಚುವ ಕೆಲಸ ಮಾಡಿದ್ದರು' ಎಂದು ವಿಜಯೇಂದ್ರ ಟೀಕಿಸಿದರು.

ಸುದ್ದಿಗೋಷ್ಠಿಯಲ್ಲಿ ವಿರೋಧ ಪಕ್ಷದ ನಾಯಕರಾದ ಆರ್.ಅಶೋಕ, ಛಲವಾದಿ ನಾರಾಯಣ ಸ್ವಾಮಿ, ಸಂಸದರಾದ ಗೋವಿಂದ ಕಾರಜೋಳ, ವಿಶ್ವೇಶ್ವರ ಹೆಗಡೆ ಕಾಗೇರಿ, ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ವಿ.ಸುನಿಲ್ ಕುಮಾರ್, ರಾಜ್ಯ ಉಪಾಧ್ಯಕ್ಷ ಬೈರತಿ ಬಸವರಾಜ್, ಶಾಸಕರಾದ ಅರವಿಂದ ಬೆಲ್ಲದ, ಶಶಿಕಲಾ ಜೊಲ್ಲೆ ಉಪಸ್ಥಿತರಿದ್ದರು.

ನಿರ್ಣಯ

ಪ್ರಧಾನಿ ಮೋದಿ ನೇತೃತ್ವದಲ್ಲಿ ಎನ್‌ಡಿಎ ಸರ್ಕಾರವು ಸರಳೀಕೃತ ಜಿಎಸ್‌ಟಿ ಮೂಲಕ ಐತಿಹಾಸಿಕ ನಿರ್ಧಾರವನ್ನು ಪ್ರಕಟಿಸಿದ್ದಾರೆ. ಇದಕ್ಕೆ ರಾಜ್ಯ ಮತ್ತು ದೇಶದ ಜನ ಸಂತೋಷ ವ್ಯಕ್ತಪಡಿಸಿದ್ದಾರೆ. ಇದಕ್ಕಾಗಿ ಪ್ರಧಾನಿ ಮೋದಿ ಮತ್ತು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರಿಗೆ ಅಭಿನಂದಿಸುವ ನಿರ್ಣಯವನ್ನು ತೆಗೆದುಕೊಳ್ಳಲಾಯಿತು ಎಂದು ಬಿ.ವೈ.ವಿಜಯೇಂದ್ರ ಹೇಳಿದರು.

ಎಸ್‌ಟಿಗೆ ಕುರುಬ ವಾಲ್ಮೀಕಿ ಜಯಂತಿ ಸಭೆ: ಬಹಿಷ್ಕಾರ

ಹೊಸಪೇಟೆ (ವಿಜಯನಗರ): 'ಕುರುಬರು ಸೇರಿ ವಿವಿಧ ಸಮಾಜ ದವರನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸುವ ಹುನ್ನಾರ ನಡೆದಿದೆ' ಎಂದು ಆರೋಪಿಸಿ ವಾಲ್ಮೀಕಿ ಸಮಾಜದವರು ಶುಕ್ರವಾರ ವಾಲ್ಮೀಕಿ ಜಯಂತಿ ಪೂರ್ವಭಾವಿ ಸಭೆಯನ್ನು ಬಹಿಷ್ಕರಿಸಿದರು.

ಜಿಲ್ಲಾಧಿಕಾರಿ ಕವಿತಾ ಎಸ್. ಮನ್ನಿಕೇರಿ ಅವರು ಕರೆದಿದ್ದ ಸಭೆ ಆರಂಭವಾಗುತ್ತಿದ್ದಂತೆಯೇ, 'ಸರ್ಕಾರದ ನಿಲುವಿಗೆ ವಿರೋಧ ತಿಳಿಸಿ. ಸಭೆಯನ್ನು ಬಹಿಷ್ಕರಿಸುತ್ತೇವೆ' ಎಂದರು.

'ರಾಜನಹಳ್ಳಿ ಗುರುಪೀಠದಲ್ಲಿ ಗುರುವಾರ ನಡೆದ ಸಭೆಯಲ್ಲೂ ಗದ್ದಲ ಆಗಿತ್ತು. ನಮಗೆ ಅನ್ಯಾಯ ಮಾಡಲು, ರಾಜ್ಯ ಸರ್ಕಾರ ಮುಂದಾಗಿದೆ. ಇದಕ್ಕೆ ವಿರೋಧ ಇದೆ. ನ್ಯಾಯ ಸಿಗುವವರೆಗೂ, ಹೋರಾಡುತ್ತೇವೆ' ಎಂದು ಹೇಳಿ ಮುಖಂಡರು ಸಭೆಯಿಂದ ಹೊರನಡೆದರು.

'ಹಿಂದೂ ಧರ್ಮಕ್ಕೆ ಧಕ್ಕೆ ತರಲು ಸಂಚು'

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: 'ಹಿಂದೂ ಧರ್ಮ ಅಪಮಾನಿಸಲು ಕೆಲ ಮಠಾಧೀಶರು ಲಿಂಗಾಯತ-ವೀರಶೈವ ಪ್ರತ್ಯೇಕ ಧರ್ಮಕ್ಕೆ ಬೇಡಿಕೆ ಇಟ್ಟಿದ್ದಾರೆ' ಎಂದು ಶಾಸಕ ಬಸನಗೌಡಪಾಟೀಲ ಯತ್ನಾಳ ಶುಕ್ರವಾರ ಇಲ್ಲಿ ಆರೋಪಿಸಿದರು.

> **ಹಿಂದೂ ಧರ್ಮ ಬೇಡ ಎನ್ನುವ ಸ್ವಾಮೀಜಿಗಳು ಕೇಸರಿ ಬಟ್ಟೆ ಬದಲು ಹಸಿರು, ಬಿಳಿ ಬಟ್ಟೆ ಧರಿಸಲಿ. ಅಂಥ ಸ್ವಾಮೀಜಿ ಬೇಕಾಗಿಲ್ಲ. ಹಿಂದೂ ಧರ್ಮ ಬೇಡ ಎನ್ನುವುದು ದೇಶವೇ ಬೇಡ ಎಂದಂತೆ**
> **ಬಸನಗೌಡ ಪಾಟೀಲ ಯತ್ನಾಳ,** ಶಾಸಕ

'ಲಿಂಗಾಯತರು ಮತ್ತು ವೀರಶೈವರ ಸಂಪ್ರದಾಯವೂ ಒಂದೇ ಆಗಿದೆ. ಕಮ್ಯುನಿಸ್ಟ್ ಮನಸ್ಥಿತಿಯ ಕೆಲ ಸ್ವಾಮೀಜಿಗಳು ಸ್ವಾರ್ಥಕ್ಕೆ ಪ್ರತ್ಯೇಕ ಧರ್ಮದ ಬೇಡಿಕೆ ಇಟ್ಟಿದ್ದಾರೆ. ಹಿಂದೂ ಧರ್ಮಕ್ಕೆ ಧಕ್ಕೆ ತರಲು ವ್ಯವಸ್ಥಿತ ಸಂಚು ನಡೆದಿದೆ' ಎಂದು ಟೀಕಿಸಿದರು.

'ಲಿಂಗಾಯತ ವೀರಶೈವ ಅಧಿಕೃತ ಧರ್ಮವಲ್ಲ. ಕೇಂದ್ರ ಸರ್ಕಾರದಿಂದ ಮಾನ್ಯತೆಯೂ ಸಿಕ್ಕಿಲ್ಲ. ಲಿಂಗಾಯತ ಸಮಾಜದವರು ಜಾತಿ ಸಮೀಕ್ಷೆ ವೇಳೆ ಧರ್ಮ ಕಾಲಂನಲ್ಲಿ ಹಿಂದೂ, ಜಾತಿ ಕಾಲಂನಲ್ಲಿ ಲಿಂಗಾಯತ ಅಥವಾ ವೀರಶೈವ ಎಂದು ಬರೆಸಬೇಕು' ಎಂದರು.

'ಮಹಾಸಭಾದಿಂದ ಹೊರಗೆ ಬರಲಿ': 'ಬಿ.ಎಸ್. ಯಡಿಯೂರಪ್ಪ, ಶಾಮನೂರು ಶಿವಶಂಕರಪ್ಪ, ಈಶ್ವರ ಖಂಡ್ರೆ ಅವರ ಕುಟುಂಬಗಳಲ್ಲಿ ಸಿಲುಕಿ ವೀರಶೈವ ಲಿಂಗಾಯತ ಮಹಾಸಭಾ ನಲುಗುತ್ತಿದೆ' ಎಂದು ಆರೋಪಿಸಿದರು.

'ಬೆಳಗಾವಿಯಲ್ಲಿ ಪಂಚಮಸಾಲಿ ಸಮಾಜದವರ ಮೇಲೆ ಲಾಠಿ ಚಾರ್ಜ್ ನಡೆದಾಗ ಈ ನಾಯಕರು ಏಕೆ ಮೌನವಾಗಿದ್ದರು? ಸಮಾಜದ ಮೇಲೆ ಕಳಕಳಿಯಿದ್ದರೆ ಈ ಮುಖಂಡರು ಮಹಾಸಭಾ ವಿಸರ್ಜಿಸಬೇಕು' ಎಂದು ಒತ್ತಾಯಿಸಿದರು.

ಸಮೀಕ್ಷೆಗೆ ಬ್ರಾಹ್ಮಣ ಮಹಾಸಭಾ ವಿರೋಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಿಂದುಳಿದ ವರ್ಗಗಳ ಆಯೋಗ ಕೈಗೊಂಡಿರುವ ಸಾಮಾಜಿಕ-ಶೈಕ್ಷಣಿಕ ಸಮೀಕ್ಷೆಯನ್ನು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ವಿರೋಧಿಸಿದ್ದು, ಇಡೀ ಪ್ರಕ್ರಿಯೆಯು ಹಲವು ನ್ಯೂನತೆಯಿಂದ ಕೂಡಿದೆ ಎಂದು ಆರೋಪಿಸಿದೆ.

ಶುಕ್ರವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಮಹಾಸಭಾ ಅಧ್ಯಕ್ಷ ಎಸ್. ರಘುನಾಥ್, 'ಸಮೀಕ್ಷೆ ಕೈಪಿಡಿಯಲ್ಲಿ ಉಪಜಾತಿಗಳನ್ನು ಮುಖ್ಯಜಾತಿಯಾಗಿ ತೋರಿಸಲಾಗಿದೆ. ಎಲ್ಲ ಉಪಜಾತಿಗಳನ್ನು ಸೇರಿಸಿ, 1,561 ಹೊಸ ಜಾತಿಗಳ ಪಟ್ಟಿಯನ್ನು ಸಿದ್ಧಪಡಿಸಲಾಗಿದೆ. ಬ್ರಾಹ್ಮಣ ಎಂಬ ಶೀರ್ಷಿಕೆಯಡಿ ಸಮುದಾಯದ ಉಪಜಾತಿ ಗಳನ್ನು ತರದೆ, ಗೊಂದಲ ಸೃಷ್ಟಿಸಲಾಗಿದೆ. ಇದರಿಂದಾಗಿ ಸಮುದಾಯದವರ ಸಂಖ್ಯೆ ಚದುರಿ ಹೋಗುವ ಸಾಧ್ಯತೆಯಿದೆ. ಅಲ್ಲದೆ, ಕ್ರೈಸ್ತ ಬ್ರಾಹ್ಮಣರು, ಮುಜವರ್ ಮುಸ್ಲಿಂ ಬ್ರಾಹ್ಮಣರು, ವೇದವ್ಯಾಸ ಕ್ರೈಸ್ತ ಬ್ರಾಹ್ಮಣರು ಎಂಬ ಹೊಸ ಜಾತಿಗಳನ್ನು ಆಯೋಗ ಹುಟ್ಟು ಹಾಕಿದೆ' ಎಂದು ಆಕ್ರೋಶ ವ್ಯಕ್ತಪಡಿಸಿದರು.

> **ಒಂದು ವೇಳೆ ಸಮೀಕ್ಷೆ ನಡೆಸಿದರೆ ಧರ್ಮದ ಕಾಲಂನಲ್ಲಿ ಹಿಂದೂ, ಜಾತಿಯ ಕಾಲಂನಲ್ಲಿ ಬ್ರಾಹ್ಮಣ ಎಂದು ಉಲ್ಲೇಖಿಸಬೇಕು. ಉಪ ಜಾತಿಯನ್ನು ನಮೂದಿಸಬೇಕಾದ ಅಗತ್ಯವಿಲ್ಲ**
> **ಎಸ್.ರಘುನಾಥ್,**
> ಅಧ್ಯಕ್ಷ, ಅಖಿಲ ಭಾರತ ಬ್ರಾಹ್ಮಣ ಮಹಾಸಭಾ

'ಚುನಾವಣಾ ಆಯೋಗದ ಮತದಾರರ ಪಟ್ಟಿಯಂತೆ ಸಮೀಕ್ಷೆ ನಡೆಸುವ ಬದಲು, ವಿದ್ಯುತ್ ಮೀಟರ್ ಸಂಖ್ಯೆ ಪ್ರಕಾರ ಸಮೀಕ್ಷೆ ನಡೆಸಲು ತಯಾರಿ ನಡೆಸಲಾಗಿದೆ. ಈ ಬಗ್ಗೆ ಜಾಗೃತಿ ಮೂಡಿಸದ ಕಾರಣ ಎಷ್ಟೋ ಜನರು ಮನೆಗಳಿಗೆ ಅಂಟಿಸಿದ ಚೀಟಿಗಳನ್ನು ಹರಿದು ಹಾಕಿದ್ದಾರೆ. ಈ ಸಮೀಕ್ಷೆ ಕೈಗೊಳ್ಳುವ ಮೊದಲು ಎಲ್ಲ ಜಾತಿಗಳ ಮುಖಂಡರ ಸಭೆ ನಡೆಸಬೇಕಿತ್ತು. ಸಮೀಕ್ಷೆ ನಡೆಸಲು 17 ದಿನಗಳ ಕಾಲಾವಕಾಶ ಮಾತ್ರ ನೀಡಲಾಗಿದೆ. ದಸರಾ ರಜೆ ಇರುವ ಕಾರಣ ಜನರು ಬೇರೆಡೆಗೆ ತೆರಳಿರುತ್ತಾರೆ. ಇದು ಸಮೀಕ್ಷೆಗೆ ಸರಿಯಾದ ಸಮಯವಲ್ಲ' ಎಂದರು.

'ಬ್ರಾಹ್ಮಣ ಜನಾಂಗದಲ್ಲಿ ಹಲವರು ಬಡವರಿದ್ದಾರೆ. ನಮ್ಮ ಸಮುದಾಯವನ್ನು ಪಕ್ಕಕ್ಕೆ ಇಡದೆ, ಹಿಂದುಳಿದವರಿಗೆ ಸರ್ಕಾರಿ ಸೌಲಭ್ಯಗಳನ್ನು ಒದಗಿಸಬೇಕು' ಎಂದು ಹೇಳಿದರು.

'ಬುದ್ಧನ ಅನುಯಾಯಿಗಳು ಬೌದ್ಧ ಧರ್ಮ ನಮೂದಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಿಂದುಳಿದ ವರ್ಗಗಳ ಆಯೋಗ ಕೈಗೊಂಡಿರುವ ಸಾಮಾಜಿಕ-ಶೈಕ್ಷಣಿಕ ಸಮೀಕ್ಷೆಯಲ್ಲಿ ಹಿಂದುಳಿದ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಬುದ್ಧನ ಅನುಯಾಯಿಗಳು ಧರ್ಮದ ಕಾಲಂನಲ್ಲಿ 'ಬೌದ್ಧ' ಎಂದು ನಮೂದಿಸಬೇಕು ಎಂದು ಅಖಿಲ ಕರ್ನಾಟಕ ಬೌದ್ಧ ದಾಖಲಾತಿ ಆಂದೋಲನ ಸಮಿತಿ ಮನವಿ ಮಾಡಿದೆ.

ಮಾವಳ್ಳಿ ಶಂಕರ್

ಶುಕ್ರವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಮಿತಿ ಸಂಚಾಲಕ ಮಾವಳ್ಳಿ ಶಂಕರ್, 'ಅಸ್ಪೃಶ್ಯತೆ, ಅಪಮಾನಗಳನ್ನು ಎದುರಿಸಿದ್ದ ಬಿ.ಆರ್.ಅಂಬೇಡ್ಕರ್ ಅವರು, ಲಕ್ಷಾಂತರ ಅನುಯಾಯಿಗಳೊಂದಿಗೆ ಬೌದ್ಧ ಧರ್ಮ ಸ್ವೀಕರಿಸಿದ್ದರು. ಅದರಂತೆ ಸಂವಿಧಾನದಲ್ಲಿಯೂ ಮೂಲ ಧರ್ಮಕ್ಕೆ ಮರಳಲು ಅವಕಾಶ ಕಲ್ಪಿಸಲಾಗಿದೆ. ಪರಿಶಿಷ್ಟ ಜಾತಿಯಲ್ಲಿಯೇ ಮುಂದುವರಿಯಲು ಇಚ್ಛಿಸುವವರು, ಧರ್ಮದ ಕಾಲಂ 8ರ ಕ್ರಮ ಸಂಖ್ಯೆ 6ರಲ್ಲಿರುವ ಬೌದ್ಧ ಎನ್ನುವ ಅವಕಾಶವನ್ನು ಆಯ್ಕೆ ಮಾಡಿಕೊಳ್ಳಬಹುದು. ಜಾತಿ ಕಾಲಂ 9ರಲ್ಲಿ ಪರಿಶಿಷ್ಟ ಜಾತಿಯೆಂದು ಉಲ್ಲೇಖಿಸಿ, ಉಪಜಾತಿ ಕಾಲಂ 10ರಲ್ಲಿ ಮೂಲ ಜಾತಿ ನಮೂದಿಸಬಹುದು' ಎಂದರು.

'ಪೂರ್ಣ ಪ್ರಮಾಣದಲ್ಲಿ ಬೌದ್ಧರೆಂದು ಘೋಷಣೆ ಮಾಡುಕೊಳ್ಳಲು ಇಚ್ಛಿಸುವವರು, ಧರ್ಮದ ಕಾಲಂನಲ್ಲಿ ಬೌದ್ಧ ಆಯ್ಕೆ ಮಾಡಿಕೊಳ್ಳುವ ಜತೆಗೆ, ಜಾತಿ ಕಾಲಂನಲ್ಲಿಯೂ ಬೌದ್ಧ ಎಂದೇ ನಮೂದಿಸಬಹುದು. ಇದರಿಂದಾಗಿ ಸಂವಿಧಾನದತ್ತವಾದ ಧಾರ್ಮಿಕ ಸ್ವಾತಂತ್ರ್ಯವನ್ನು ಸಂಪೂರ್ಣವಾಗಿ ಪಡೆದುಕೊಂಡು, ಶಿಕ್ಷಣ, ಉದ್ಯೋಗ, ರಾಜಕೀಯ ಮೀಸಲಾತಿ ಹಕ್ಕುಗಳನ್ನು ಪಡೆಯಬಹುದಾಗಿದೆ. ಜಾತಿ, ಅಸ್ಪೃಶ್ಯತೆಯ ಕರಾಳತೆಯಿಂದ ಮುಕ್ತರಾಗಿ, ಗೌರವಯುತ ಬದುಕು ಕಟ್ಟಿಕೊಳ್ಳಲು ಅವಕಾಶ ದೊರೆಯಲಿದೆ' ಎಂದು ಹೇಳಿದರು.

ಸಮಿತಿ ಸಂಚಾಲಕರಾದ ಎಂ. ವೆಂಕಟಸ್ವಾಮಿ, ಎನ್. ಮೂರ್ತಿ, ಬಿ.ಗೋಪಾಲ, ಹ.ರಾ.ಮಹೇಶ್, ಹೆಣ್ಣೂರು ಶ್ರೀನಿವಾಸ್ ಉಪಸ್ಥಿತರಿದ್ದರು.

ಕಣ್ಣಿನಲ್ಲಿತ್ತು 10 ಸೆಂ.ಮೀ ಉದ್ದದ ಹುಳ

ಮಡಿಕೇರಿ: ವ್ಯಕ್ತಿಯೊಬ್ಬರ ಕಣ್ಣಿನಲ್ಲಿದ್ದ 10 ಸೆಂ.ಮೀ ಉದ್ದದ ಹುಳವೊಂದನ್ನು ಇಲ್ಲಿನ ಇಕ್ಷಾ ಸೂಪರ್ ಸ್ಪೆಷಾಲಿಟಿ ಕಣ್ಣಿನ ಆಸ್ಪತ್ರೆಯ ವೈದ್ಯಕೀಯ ನಿರ್ದೇಶಕ ಡಾ.ಎ.ಜಿ.ಚಿಣ್ಣಪ್ಪ ಹಾಗೂ ಡಾ.ಗುರುಪ್ರಸಾದ್ ನೇತೃತ್ವದ ತಂಡ ಶಸ್ತ್ರಚಿಕಿತ್ಸೆ ಮೂಲಕ ಹೊರ ತೆಗೆದಿದೆ.



ವ್ಯಕ್ತಿಯ ಕಣ್ಣಿನೊಳಗಿದ್ದ ಹುಳ

'ಕೊಡಗು ಜಿಲ್ಲೆಯ 64 ವರ್ಷದ ಮಾಜಿ ಸೈನಿಕರೊಬ್ಬರಿಗೆ ಎಡಗಣ್ಣಿನಲ್ಲಿ ತುರಿಕೆ ಮತ್ತು ಊತದ ಸಮಸ್ಯೆಯಿತ್ತು. ತಪಾಸಣೆ ವೇಳೆ ಕಣ್ಣಿನ ಹೊರಪದರದಲ್ಲಿ ಹುಳ ಕಾಣಿಸಿತ್ತು.

'ಲೋವಾ ಲೋವಾ' ಎಂದು ಕರೆಯಲಾಗುವ ಹುಳ ಪ್ರಾಣಿಗಳ ಮೈಮೇಲಿರುತ್ತದೆ. ಅದರ ಲಾರ್ವಗಳು ಸೊಳ್ಳೆ ಮತ್ತು ನೊಣಗಳ ಮೂಲಕ ಮನುಷ್ಯನ ರಕ್ತ ಸೇರುತ್ತವೆ. ರೋಗ ನಿರೋಧಕ ಶಕ್ತಿ ಕಡಿಮೆ ಇದ್ದವರ ರಕ್ತದಲ್ಲಿ ಚಲಿಸಿ ಕಣ್ಣು, ಮಿದುಳು ಸೇರಿ ಬೆಳೆಯಲಿವೆ.

'ಹುಳ ಮಿದುಳನ್ನು ಪ್ರವೇಶಿಸಿದರೆ ಜೀವಕ್ಕೆ ಅಪಾಯವಾಗುವ ಸಾಧ್ಯತೆ ಇದೆ. ಸಕಾಲದಲ್ಲಿ ಶಸ್ತ್ರಚಿಕಿತ್ಸೆಯಾಗದೇ ಇದ್ದಿದ್ದರೆ ಕಣ್ಣನ್ನೇ ಕಳೆದುಕೊಳ್ಳುವ ಸಂಭವವಿತ್ತು' ಎಂದು ಡಾ.ಎ.ಜಿ.ಚಿಣ್ಣಪ್ಪ 'ಪ್ರಜಾವಾಣಿ'ಗೆ ತಿಳಿಸಿದರು.

ಪತ್ರಿಕೋದ್ಯಮ ಪ್ರಶಸ್ತಿ ಪ್ರದಾನ, ಮಾಧ್ಯಮಗಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸಲಹೆ

ಸರ್ಕಾರದ ಜನವಿರೋಧಿ ಕಾರ್ಯಗಳನ್ನೂ ತಿಳಿಸಲಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಊಹಾ ಪತ್ರಿಕೋದ್ಯಮಕ್ಕೆ ಅವಕಾಶ ನೀಡದೇ ಸರ್ಕಾರಗಳ ಜನಪರ ವಿಚಾರದ ಜತೆಯಲ್ಲಿಯೇ ಜನ ವಿರೋಧಿ ಕೆಲಸಗಳನ್ನೂ ಮಾಧ್ಯಮಗಳು ಜನರಿಗೆ ವಸ್ತುನಿಷ್ಠವಾಗಿ ತಿಳಿಸಬೇಕು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸಲಹೆ ನೀಡಿದರು.

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಶುಕ್ರವಾರ ಆಯೋಜಿಸಿದ್ದ 2024 ನೇ ವರ್ಷದ 'ವಡ್ಡರ್ಸೆ ರಘುರಾಮ ಶೆಟ್ಟಿ ಸಾಮಾಜಿಕ ನ್ಯಾಯ ಪತ್ರಿಕೋದ್ಯಮ ಪ್ರಶಸ್ತಿ' ಹಾಗೂ 2017 ರಿಂದ 2023ರವರೆಗಿನ ಪರಿಸರ ಮತ್ತು ಅಭಿವೃದ್ಧಿ ಪತ್ರಿಕೋದ್ಯಮ ಪ್ರಶಸ್ತಿ ಪ್ರದಾನ ಮಾಡಿ ಮಾತನಾಡಿದರು.

'ಮಾಧ್ಯಮಗಳು ಸತ್ಯ ಅಸತ್ಯದ ಶೋಧನೆ ನಡೆಸಬೇಕು. ಸತ್ಯ ಶೋಧನೆ ಮಾಡಬೇಕೇ ಹೊರತು ಒಬ್ಬ ವ್ಯಕ್ತಿಯು ತಪ್ಪು ಮಾಡದಿದ್ದರೂ, ಸುಮ್ಮನೆ ಆರೋಪಗಳನ್ನು ಮಾಡಬಾರದು. ಈಗಿನ ಮಾಧ್ಯಮಗಳು ಇಂತಹ ಸಂಹಿತೆಗಳನ್ನು ಅನುಸರಿಸುತ್ತಿಲ್ಲ' ಎಂದರು.

'ಅನಗತ್ಯ ವಿಷಯಗಳಿಗೆ ಮಾಧ್ಯಮಗಳು ಒತ್ತು ನೀಡಿ ಸಮಾಜದ ಸ್ವಾಸ್ಥ್ಯ ಹಾಳು ಮಾಡಬಾರದು. ಮೈಸೂರು ದಸರಾ ಸಾಂಸ್ಕೃತಿಕ ಹಬ್ಬ. ಕರ್ನಾಟಕವು ಸಹಿಷ್ಣುತೆ, ಸೌಹಾರ್ದತೆಯ ನಾಡು. ದಸರಾ ಉದ್ಘಾಟನೆಗೆ ಸಾಹಿತಿ ಬಾನು ಮುಷ್ತಾಕ್ ಅವರನ್ನು ಆಯ್ಕೆ ಮಾಡಿದರೆ ಅದಕ್ಕೆ ಧರ್ಮದ ಲೇಪನ ಮಾಡಲಾಯಿತು. ಮಾಧ್ಯಮಗಳಲ್ಲೂ ಪರ ವಿರೋಧದ ಚರ್ಚೆಗಳು ನಡೆಯಿತು. ಈಗ ನ್ಯಾಯಾಲಯವೇ ರಾಜ್ಯ ಸರ್ಕಾರದ ಕ್ರಮವನ್ನು ಎತ್ತಿ ಹಿಡಿದಿದೆ' ಎಂದು ಸಿದ್ದರಾಮಯ್ಯ ಹೇಳಿದರು.

'ಸಮಾಜದಲ್ಲಿನ ಅಸಮಾನತೆಗೆ ಕಾರಣಗಳು ಹಾಗೂ ಸಾಮಾಜಿಕ ನ್ಯಾಯದ ಬಗ್ಗೆ ಜನರಲ್ಲಿ ಮಾಧ್ಯಮಗಳು ಜಾಗೃತಿ ಮೂಡಿಸಬೇಕು. ಪರಿಸರ ಅಭಿವೃದ್ಧಿ ಸಂರಕ್ಷಣೆಗೂ ಹೆಚ್ಚು ಒತ್ತು ನೀಡಬೇಕು. ಪತ್ರಕರ್ತರು ಪರಿಸರ ನ್ಯಾಯಕ್ಕೆ ಬದ್ಧವಾಗಿರಬೇಕು' ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಸಚಿವ ಬೈರತಿ ಸುರೇಶ್, ವಿಧಾನ ಪರಿಷತ್‌ನ ಮುಖ್ಯ ಸಚೇತಕ ಸಲೀಂ ಅಹಮದ್, ಸದಸ್ಯರಾದ ಸದಸ್ಯರಾದ ನಸೀರ್ ಅಹಮದ್, ಕೆ.ಶಿವಕುಮಾರ್, ಪ್ರಶಸ್ತಿ ಆಯ್ಕೆ ಸಮಿತಿ ಅಧ್ಯಕ್ಷ ನ್ಯಾ.ಅಶೋಕ ಹಿಂಚಿಗೇರಿ, ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರ ಕೆ.ವಿ. ಪ್ರಭಾಕರ್, ಚಲನಚಿತ್ರ ಅಕಾಡೆಮಿ ಅಧ್ಯಕ್ಷ ಸಾಧು ಕೋಕಿಲ, ಮಾಧ್ಯಮ ಅಕಾಡೆಮಿ ಅಧ್ಯಕ್ಷೆ ಆಯೇಷಾ ಖಾನಂ, ಇಲಾಖೆ ಕಾರ್ಯದರ್ಶಿ ಬಿ.ಬಿ.ಕಾವೇರಿ, ಆಯುಕ್ತ ಹೇಮಂತ್ ನಿಂಬಾಳ್ಕರ್ ಹಾಜರಿದ್ದರು.

ಬೆಂಗಳೂರಿನಲ್ಲಿ ಶುಕ್ರವಾರ ನಡೆದ ಕಾರ್ಯಕ್ರಮದಲ್ಲಿ 2024ನೇ ಸಾಲಿನ 'ವಡ್ಡರ್ಸೆ ರಘುರಾಮ ಶೆಟ್ಟಿ ಸಾಮಾಜಿಕ ನ್ಯಾಯ ಪತ್ರಿಕೋದ್ಯಮ ಪ್ರಶಸ್ತಿ'ಯನ್ನು ಸಿದ್ದರಾಮಯ್ಯ ಅವರು ಪತ್ರಕರ್ತ ಡಿ. ಉಮಾಪತಿ ಅವರಿಗೆ ಪ್ರದಾನ ಮಾಡಿದರು (ಎಡಚಿತ್ರ). ಅಭಿವೃದ್ಧಿ ಪತ್ರಿಕೋದ್ಯಮ ಪ್ರಶಸ್ತಿ ಪಡೆದ ಎಂ.ಎನ್. ಯೋಗೇಶ್ (ಮಧ್ಯೆ). ಪರಿಸರ ಪತ್ರಿಕೋದ್ಯಮ ಪ್ರಶಸ್ತಿ ಪಡೆದ ಆರ್. ಮಂಜುನಾಥ್ –ಪ್ರಜಾವಾಣಿ ಚಿತ್ರಗಳು

ಪ್ರಜಾವಾಣಿಯ ಇಬ್ಬರಿಗೆ ಪ್ರಶಸ್ತಿ

ಪತ್ರಕರ್ತ ಡಿ.ಉಮಾಪತಿ ಅವರು ವಡ್ಡರ್ಸೆ ರಘುರಾಮಶೆಟ್ಟಿ ಪ್ರಶಸ್ತಿ, 'ಪ್ರಜಾವಾಣಿ'ಯ ಆರ್.ಮಂಜುನಾಥ್ ಅವರೊಂದಿಗೆ ವಿಜಯಲಕ್ಷ್ಮಿ ಶಿಬರೂರು, ಬಿ.ಎಂ.ಟಿ.ರಾಜೀವ್, ವಿನೋದ್‌ಕುಮಾರ್ ಬಿ.ನಾಯ್ಕ್, ಮಾಲತೇಶ ಅಂಗೂರ, ಸುಧೀರ್ ಶೆಟ್ಟಿ, ಮಲ್ಲಿಕಾರ್ಜುನ ಹೊಸಪಾಳ್ಯ ಅವರು ಪರಿಸರ ಪತ್ರಿಕೋದ್ಯಮ ಪ್ರಶಸ್ತಿ ಪಡೆದರು.

'ಪ್ರಜಾವಾಣಿ'ಯ ಎಂ.ಎನ್. ಯೋಗೇಶ್ ಅವರ ಜತೆಯಲ್ಲಿ ಚೀ.ಜ.ರಾಜೀವ, ದೇವಯ್ಯ ಗುತ್ತೇದಾರ್, ಗಿರೀಶ್ ಲಿಂಗಣ್ಣ, ನೌಶಾದ್ ಬಿಜಾಪುರ್, ಜಿ.ಟಿ.ಸತೀಶ್, ಎಸ್.ಗಿರೀಶ್ ಬಾಬು ಅಭಿವೃದ್ಧಿ ಪತ್ರಿಕೋದ್ಯಮ ಪ್ರಶಸ್ತಿ ಸ್ವೀಕರಿಸಿದರು.

ಮಳೆ: ದ್ರಾಕ್ಷಿ ತೋಟ, ಸೇತುವೆ ಜಲಾವೃತ

ಪ್ರಜಾವಾಣಿ ವಾರ್ತೆ

ಚಿಕ್ಕಬಳ್ಳಾಪುರ: ಜಿಲ್ಲೆಯ ವಿವಿಧೆಡೆ ಗುರುವಾರ ರಾತ್ರಿ ಭಾರಿ ಮಳೆ ಸುರಿದಿದೆ. ನಗರದಿಂದ ಮಂಚನಬಲೆ ಗ್ರಾಮಕ್ಕೆ ಸಾಗುವ ರಸ್ತೆಯ ಕೆಳಸೇತುವೆ ಜಲಾವೃತವಾಗಿದೆ.

ಇಲ್ಲಿ ಕಾರುಗಳು, ಬೈಕ್‌ಗಳು ಸಿಲುಕಿದ್ದು ಚಾಲಕರು ಹೊರ ಬರಲು ಹರಸಾಹಸಪಟ್ಟರು. ಈ ಮಾರ್ಗದಲ್ಲಿ ಸಂಚಾರ ವ್ಯತ್ಯಯವಾಯಿತು.

ತಾಲ್ಲೂಕಿನ ಗ್ರಾಮೀಣ ಭಾಗಗಳಲ್ಲಿ ದ್ರಾಕ್ಷಿ ತೋಟ, ಹೂ ತೋಟಗಳಿಗೆ ನೀರು ನುಗ್ಗಿದೆ. ವಾಪಸಂದ್ರದ ಮುಖ್ಯರಸ್ತೆ ಜಲಾವೃತವಾಗಿದ್ದು, ಮತ್ತು ದೊಡ್ಡಮೋರಿ ತುಂಬಿ ಹರಿಯಿತು.

ಚಿಕ್ಕಬಳ್ಳಾಪುರದಿಂದ ಮಂಚನಬಲೆಗೆ ಸಾಗುವ ರಸ್ತೆ ಕೆಳ ಸೇತುವೆಯಲ್ಲಿ ತುಂಬಿದ್ದ ಮಳೆ ನೀರಿನಲ್ಲಿ ಸಿಲುಕಿದ್ದ ಕಾರಿನಿಂದ ಮಗುವನ್ನು ಹೊರಗೆ ಕರೆ ತಂದ ವೃದ್ಧ

ನೀರಿನಲ್ಲಿ ಕೊಚ್ಚಿ ಹೋದ ವ್ಯಕ್ತಿ

ಬರೂರು (ಬೀದರ್ ಜಿಲ್ಲೆ): ಮಳೆ ನೀರಿನಿಂದ ಮುಳುಗಿದ್ದ ಸೇತುವೆ ದಾಟುವಾಗ, ಗ್ರಾಮದ ಗದ್ದಾಮಿಧಿ ಪ್ರಭಾಕರ ರೆಡ್ಡಿ (65) ಎಂಬವರು ಕೊಚ್ಚಿ ಕೊಂಡು ಹೋದ ಘಟನೆ ತಾಲ್ಲೂಕಿನ ಬರೂರು ಸಮೀಪ ನಡೆದಿದೆ.

ಗುರುವಾರ ಗ್ರಾಮದಿಂದ ಗಂಗವಾರಕ್ಕೆ ಸಂಪರ್ಕ ಕಲ್ಪಿಸುವ ರಸ್ತೆಯಲ್ಲಿನ ಸೇತುವೆ ದಾಟುವಾಗ ಹಳ್ಳದ ನೀರಿನ ರಭಸಕ್ಕೆ ಕೊಚ್ಚಿಕೊಂಡು ಹೋಗಿದ್ದಾರೆ.

ಅಗ್ನಿಶಾಮಕ ಸಿಬ್ಬಂದಿ, ಮೀನುಗಾರರು ಶೋಧ ಕಾರ್ಯ ಕೈಗೊಂಡಿದ್ದು, ಶುಕ್ರವಾರ ಸಂಜೆವರೆಗೂ ಪ್ರಭಾಕರ ರೆಡ್ಡಿ ಪತ್ತೆಯಾಗಿರಲಿಲ್ಲ.

ಜಲಾಶಯಗಳ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು	ಹೊರಹರಿವು
			(ಕ್ಯೂಸೆಕ್‌ಗಳಲ್ಲಿ)	
ಕೆ ಆರ್ ಎಸ್ *	124.80	123.54	8,800	8,278
ಹಾರಂಗಿ	2,859	2,858.11	1,040	1,600
ಕಬಿನಿ	2,284.00	2,282.35	1,953	2,050
ಹೇಮಾವತಿ	2,922	2,920.01	2,583	6,335
ಲಿಂಗನಮಕ್ಕಿ	1,819	1,816.70	4,075	7,680
ಸೂಪಾ (ಮೀ)	564	559.85	3,373.84	4,303.31
ಮಾಣಿ	595	594.94	394	634
ತುಂಗಭದ್ರಾ	1,633	1,626.06	11,351	11,146
ಮಲಪ್ರಭಾ	2,079.5	2,079.50	1,494	1,494
ಘಟಪ್ರಭಾ	2175	2,174.50	2,156	1,837
ಭದ್ರಾ *	186	185.6	4,121	4,121
ಆಲಮಟ್ಟಿ (ಮೀ)	519.6	519.58	25,469	20,585
ನಾರಾಯಣಪುರ (ಮೀ)	492.25	492.23	30,000	37,080

* ನೆಲಮಟ್ಟದಿಂದ

ಚಿಟಿಕೆ ಸುದ್ದಿ

ಸಿಂದಗಿಯಲ್ಲಿ ಭೂಕಂಪನ: ಆತಂಕ

ಸಿಂದಗಿ (ವಿಜಯಪುರ ಜಿಲ್ಲೆ): ಪಟ್ಟಣದ ವಿವಿಧೆಡೆ ಗುರುವಾರ ರಾತ್ರಿ 10.47ರಿಂದ ಶುಕ್ರವಾರ ನಸುಕಿನ 5ರವರೆಗೆ 4–5 ಬಾರಿ ಭೂಮಿ ಕಂಪಿಸಿದ ಅನುಭವವಾಯಿತು.

ಭೂಮಿಯೊಳಗಿನಿಂದ ಭಾರಿ ಪ್ರಮಾಣದ ಶಬ್ದ ಕೇಳಿ ಬಂದಿದೆ. ಆತಂಕಗೊಂಡ ಜನರು, ಮನೆಗಳಿಂದ ಹೊರಬಂದಿದ್ದಾರೆ.

‘ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಅಧಿಕಾರಿಗಳು ಭೇಟಿ ನೀಡಿ, ಪರಿಶೀಲಿಸಿದ್ದಾರೆ. ರಿಕ್ಟರ್ ಮಾಪಕದಲ್ಲಿ ತೀವ್ರತೆ ದಾಖಲಾಗಿಲ್ಲ. ಆತಂಕಪಡುವ ಸ್ಥಿತಿ ಇಲ್ಲ’ ಎಂದು ಜಿಲ್ಲಾಡಳಿತ ತಿಳಿಸಿದೆ.

ಮುಸ್ಲಿಂ ಸಾಹಿತ್ಯ ಪ್ರಶಸ್ತಿ: ಆಹ್ವಾನ

ಮಂಗಳೂರು: ಕರ್ನಾಟಕ ಮುಸ್ಲಿಂ ಲೇಖಕರ ಸಂಘವು ರಾಜ್ಯಮಟ್ಟದ ‘ಮುಸ್ಲಿಂ ಸಾಹಿತ್ಯ ಪ್ರಶಸ್ತಿ’ಗೆ ಕೃತಿಗಳನ್ನು ಆಹ್ವಾನಿಸಿದೆ. ಪ್ರಶಸ್ತಿ ₹10 ಸಾವಿರ ನಗದು, ಪ್ರಶಸ್ತಿ ಪತ್ರ ಒಳಗೊಂಡಿದೆ.

ಮುಸ್ಲಿಂ ಬರಹಗಾರರು ಕನ್ನಡದಲ್ಲಿ ಪ್ರಕಟವಾದ 2024ನೇ ಸಾಲಿನ ಕೃತಿಯ ನಾಲ್ಕು ಪ್ರತಿಗಳನ್ನು ಸೆ. 30ರ ಒಳಗೆ ಕಳುಹಿಸಬೇಕು. ಅನುವಾದಿತ ಕೃತಿಗಳನ್ನು ಪರಿಗಣಿಸುವುದಿಲ್ಲ ಎಂದು ಸಂಘದ ಅಧ್ಯಕ್ಷ ಉಮರ್ ಯು.ಎಚ್.ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಕೃತಿ ಕಳುಹಿಸಬೇಕಾದ ವಿಳಾಸ: ಸಂಚಾಲಕರು, ಮುಸ್ಲಿಂ ಸಾಹಿತ್ಯ ಪ್ರಶಸ್ತಿ, ಮುಸ್ಲಿಂ ಲೇಖಕರ ಸಂಘ, ಹಿದಾಯತ್ ಸೆಂಟರ್, ಬೀಬಿ ಅಲಾಬಿ ರಸ್ತೆ, ಮಂಗಳೂರು–575001. ಮಾಹಿತಿಗೆ ಮೊ.9845054191, 0824-2410358 ಸಂಪರ್ಕಿಸಿ.

ಮಾಜಿ ಸೈನಿಕನ ಬಂಧನ

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಸಾಮಾಜಿಕ ಜಾಲತಾಣಗಳಲ್ಲಿ ನಿಂದಿಸಿದ್ದ ಮಾಜಿ ಸೈನಿಕ, ಹಾಸನ ಜಿಲ್ಲೆ ಸಕಲೇಶಪುರದ ನಿವಾಸಿ ವಸಂತಕುಮಾರ್ ಅವರನ್ನು ಸಿಸಿಬಿಯ ಸೈಬರ್ ಅಪರಾಧ ವಿಭಾಗದ ಪೊಲೀಸರು ಬಂಧಿಸಿದ್ದಾರೆ.

ವಸಂತಕುಮಾರ್ ಅವರು ಸೇನೆಯಿಂದ ನಿವೃತ್ತರಾದ ಬಳಿಕ ಸಕಲೇಶಪುರ ಸಮೀಪದ ಗ್ರಾಮವೊಂದರಲ್ಲಿ ವ್ಯವಸಾಯ ಮಾಡಿಕೊಂಡಿದ್ದರು. ಐ.ಪಿ ವಿಳಾಸ ಆಧರಿಸಿ ಆರೋಪಿಯನ್ನು ಪತ್ತೆಹಚ್ಚಿ ಬಂಧಿಸಲಾಯಿತು ಎಂದು ಪೊಲೀಸರು ಹೇಳಿದರು.

ಮೈಸೂರು ನಗರದಲ್ಲಿ ಇತ್ತೀಚೆಗೆ ನಡೆದಿದ್ದ ಕಾರ್ಯಕ್ರಮದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಪಾಲ್ಗೊಂಡಿದ್ದರು. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಭಾಷಣ ಮಾಡುವಾಗ ಮುರ್ಮು ಅವರನ್ನು ಕನ್ನಡ ಬರುತ್ತಾ ಎಂಬುದಾಗಿ ಕೇಳಿದ್ದರು. ಈ ರೀತಿ ಪ್ರಶ್ನೆ ಮಾಡಿದ್ದ ವಿಡಿಯೊವೊಂದು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿತ್ತು.

ವಸಂತಕುಮಾರ್ ಫೇಸ್‌ಬುಕ್‌ನ ಹನುಮಂತ ಭಕ್ತ ಎಂಬ ಖಾತೆಯಲ್ಲಿ ಅಶ್ಲೀಲವಾಗಿ ಕಮೆಂಟ್ ಮಾಡಿದ್ದರು. ಈ ಸಂಬಂಧ ಬಂದ ದೂರು ಆಧರಿಸಿ, ಸಿಸಿಬಿಯ ಸಾಮಾಜಿಕ ಜಾಲತಾಣಗಳ ನಿರ್ವಹಣಾ ವಿಭಾಗದ ಅಧಿಕಾರಿಗಳು, ಆರೋಪಿಯನ್ನು ಬಂಧಿಸಿದ್ದಾರೆ.

ಅನರ್ಹರಿಗೆ ವಸತಿ ಯೋಜನೆ ಹಣ

₹2 ಕೋಟಿಗೂ ಹೆಚ್ಚು ವಂಚನೆ: ಮೂವರು ಆರೋಪಿಗಳ ಬಂಧನ

• ಚಿದಂಬರಪ್ರಸಾದ

ಮುಖ್ಯಾಂಶಗಳು

- ಅವ್ಯವಹಾರದ ಬಗ್ಗೆ ಸಕಲೇಶಪುರ ಠಾಣೆಯಲ್ಲಿ ಪ್ರಕರಣ ದಾಖಲು
- ಅಧಿಕಾರಿಗಳ ಲಾಗಿನ್‌ನಲ್ಲಿ ವೈಯಕ್ತಿಕ ಮೊಬೈಲ್ ಸಂಖ್ಯೆ ದಾಖಲು

ಹಾಸನ: ಜಿಲ್ಲೆಯಲ್ಲಿ ವಸತಿ ಯೋಜನೆಯ 190 ಫಲಾನುಭವಿಗಳಿಗೆ ತಲುಪಬೇಕಿದ್ದ ಅನುದಾನದ ಮೊತ್ತ ಅನರ್ಹರ ಖಾತೆಗೆ ಜಮೆಯಾಗಿದೆ. ನೈಜ ಫಲಾನುಭವಿಗಳು ತಾಲ್ಲೂಕು ಪಂಚಾಯಿತಿಯಲ್ಲಿ ದೂರು ದಾಖಲಿಸಿದ ಬಳಿಕ ‘ಅಕ್ರಮ’ ಬೆಳಕಿಗೆ ಬಂದಿದೆ.

ಪ್ರಧಾನಮಂತ್ರಿ ಆವಾಸ್ ಯೋಜನೆಯ ₹2 ಕೋಟಿಗೂ ಹೆಚ್ಚು ಹಣ ವಂಚನೆ ಆರೋಪದ ಅಡಿ, ಜಿಲ್ಲಾ ಪ್ರಭಾರ ನೋಡಲ್ ಅಧಿಕಾರಿ ರಾಜೇಶ್ ಎಂ, ಹಾಸನ ತಾಲ್ಲೂಕಿನ ಅಂಕಪುರ ಗ್ರಾಮ ಪಂಚಾಯಿತಿ ಸದಸ್ಯ ರಾಮೇಗೌಡ, ಗ್ರೇಡ್ –1 ಕಾರ್ಯದರ್ಶಿ ಬ್ಯಾಟರಾಯಿಗೌಡ ಅವರನ್ನು ಪೊಲೀಸರು ಬಂಧಿಸಿದ್ದಾರೆ.

‘ಈ ಮೂವರೂ ಶಾಮೀಲಾಗಿ, ಸಕಲೇಶಪುರ ತಾಲ್ಲೂಕಿನ ವಿವಿಧ ಫಲಾನುಭವಿಗಳಿಗೆ ಸೇರಬೇಕಾಗಿದ್ದ ಹಣವನ್ನು, ಹಾಸನ ತಾಲ್ಲೂಕಿನ ಅಂಕಪುರ ಪಂಚಾಯಿತಿ ವ್ಯಾಪ್ತಿಯ ಅನರ್ಹರ ಖಾತೆಗೆ ಜಮೆ ಆಗುವಂತೆ ಮಾಡಿದ್ದಾರೆ’ ಎಂದು ಆರೋಪಿಸಲಾಗಿದೆ.

ಸಕಲೇಶಪುರ ತಾಲ್ಲೂಕು ಪಂಚಾಯಿತಿ ಅಧಿಕಾರಿಗಳು ದೂರು ನೀಡಿದ್ದರು.

ನಿಯಮ ಏನು?: ಫಲಾನುಭವಿಗಳ ಮನೆ ನಿರ್ಮಾಣದ ಪ್ರಗತಿಯ ಬಗ್ಗೆ ಪಿಡಿಒಗಳು ಫೋಟೊ ತೆಗೆದು ನೋಡಲ್ ಅಧಿಕಾರಿಗೆ ಕಳುಹಿಸಬೇಕು. ಅದನ್ನು ತಾಲ್ಲೂಕು ಪಂಚಾಯಿತಿ ಕಾರ್ಯ ನಿರ್ವಹಣಾ ಅಧಿಕಾರಿ (ಇಒ) ಗಮನಕ್ಕೆ ತರಬೇಕು. ಇಒ ಅವರು ವೆಬ್‌ಸೈಟ್‌ನಲ್ಲಿ ಮಾಹಿತಿ ದಾಖಲಿಸಬೇಕು. ನಂತರ ಜಿಲ್ಲಾ ಪಂಚಾಯಿತಿಗೆ ಕಳುಹಿಸಲಾಗುತ್ತದೆ.

ಸಕಲೇಶಪುರ ನೋಡಲ್ ಅಧಿಕಾರಿ ಆಗಿದ್ದ ರಾಜೇಶ್, 2022ರ ಜುಲೈನಿಂದ ಜಿಲ್ಲಾ ನೋಡಲ್ ಅಧಿಕಾರಿಯಾಗಿ ಹೆಚ್ಚುವರಿ ಪ್ರಭಾರದಲ್ಲಿ ಇದ್ದರು.

2025ರ ಫೆ.2ರಂದು ತಾಲ್ಲೂಕು ಪಂಚಾಯಿತಿ ಇಒಗೆ ಹೊಸ ಲಾಗಿನ್ ಸೃಷ್ಟಿಸಿ, ಅದರಲ್ಲಿ ತಮ್ಮದೇ ಮೊಬೈಲ್ ಫೋನ್ ಸಂಖ್ಯೆ ಹಾಕಿದ್ದರು. ಯಾವುದೇ ಮಾಹಿತಿ ದೊರೆಯಬಾರದೆಂದು, ಲಾಗಿನ್‌ನಲ್ಲಿ ದಾಖಲೆ ಅಪ್‌ಲೋಡ್ ಮಾಡುವ ಬಗ್ಗೆ ಅಭಿವೃದ್ಧಿ ಅಧಿಕಾರಿಗಳಿಗೆ ತರಬೇತಿಯನ್ನೂ ನೀಡಿರಲಿಲ್ಲ. ತಮ್ಮದೇ ಮೊಬೈಲ್ ಸಂಖ್ಯೆ ದಾಖಲಿಸಿದ್ದರಿಂದ ಅವ್ಯವಹಾರ ಆಗಿರುವುದು ಇ.ಒ ಮತ್ತು ಜಿಪಂ ಸಿಇಒ ಅವರ ಗಮನಕ್ಕೂ ಬಂದಿರಲಿಲ್ಲ.

ಬೆಳಕಿಗೆ ಬಂದಿದ್ದು ಹೇಗೆ?: ನೈಜ ಫಲಾನುಭವಿಗಳ ದೂರು ಆಧರಿಸಿ ಆನ್‌ಲೈನ್‌ನಲ್ಲಿ ಪರಿಶೀಲಿಸಿದಾಗ, ಸಕಲೇಶಪುರ ತಾಲ್ಲೂಕಿನ ಗ್ರಾಮ ಪಂಚಾಯಿತಿ, ಫಲಾನುಭವಿ ಹೆಸರು, ಗ್ರಾಮ, ಫಲಾನುಭವಿ ಸಂಖ್ಯೆ, ಮಂಜೂರಾತಿ ಸಂಖ್ಯೆಗಳಷ್ಟೇ ನಮೂದಾಗಿದ್ದವು. ಜೊತೆಗೆ, ಹಾಸನ ತಾಲ್ಲೂಕಿನ ಜನರ ಬ್ಯಾಂಕ್ ಖಾತೆ ಹಾಗೂ ಐಎಫ್‌ಎಸ್‌ಸಿ ಕೋಡ್‌ಗಳನ್ನು ನಮೂದಿಸಿದ್ದು ಕಂಡುಬಂತು. ನಂತರ, ಕೂಲಂಕಷ ತನಿಖೆ ನಡೆಸಿದಾಗ, ಹಣ ನೈಜ ಫಲಾನುಭವಿಗಳ ಖಾತೆಗೆ ಜಮೆಯಾಗಿಲ್ಲ ಎಂಬುದು ಖಚಿತಪಟ್ಟಿತು.

> ನೈಜ ಫಲಾನುಭವಿಗಳ ಮನೆಗಳ ಅನುದಾನವನ್ನು ಅನ್ಯರ ಖಾತೆಗೆ ವರ್ಗಾಯಿಸಿ ದುರ್ಬಳಕೆ ಮಾಡಲಾಗಿದೆ. ಇದೊಂದು ರೀತಿ ದರೋಡೆ. ಯಾರೇ ತಪ್ಪು ಮಾಡಿದ್ದರೂ ನಿರ್ದಾಕ್ಷಿಣ್ಯ ಕ್ರಮಕೈಗೊಳ್ಳಲಾಗುವುದು
> **ಕೃಷ್ಣ ಬೈರೇಗೌಡ,** ಜಿಲ್ಲಾ ಉಸ್ತುವಾರಿ ಸಚಿವ

ಅರಸೀಕೆರೆಯಲ್ಲಿ ₹ 27 ಲಕ್ಷ ಅನುದಾನ ಅನರ್ಹರಿಗೆ ಮಂಜೂರು

ಅರಸೀಕೆರೆ ತಾಲ್ಲೂಕಿನ ಬಾಣಾವರ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿಯೂ ಇಂಥದ್ದೇ ‘ಅಕ್ರಮ’ ಬೆಳಕಿಗೆ ಬಂದಿದೆ.

ತಾಲ್ಲೂಕು ಲಾಗಿನ್ ದುರ್ಬಳಕೆ ಆರೋಪದಲ್ಲಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಕುಮಾರಸ್ವಾಮಿ ಎನ್. ಅವರನ್ನು ಅಮಾನತು ಮಾಡಲಾಗಿದೆ. ತಾಲ್ಲೂಕು ವಸತಿ ನೋಡಲ್ ಅಧಿಕಾರಿ ಪಾಲಾಕ್ಷ ಅವರನ್ನು ಕರ್ತವ್ಯದಿಂದ ಬಿಡುಗಡೆಗೊಳಿಸಲಾಗಿದೆ.

ಪಾಲಾಕ್ಷ ಅವರು ರಾಜೇಶ್ ಎಂ.ಕೆ. ಅವರೊಂದಿಗೆ ಶಾಮೀಲಾಗಿ 90 ಅನರ್ಹರ ಬ್ಯಾಂಕ್ ಖಾತೆಗೆ ಯೋಜನೆಯ ಒಟ್ಟು ₹ 27 ಲಕ್ಷ ಮೊದಲ ಕಂತಿನ ಅನುದಾನ ಜಮೆ ಮಾಡಿ ಕರ್ತವ್ಯ ಲೋಪ ಎಸಗಿದ್ದಾರೆಂದು ಅರಸೀಕೆರೆ ನಗರ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ.

ಸಿಗಂದೂರು: 22ರಿಂದ ನವರಾತ್ರಿ

ಪ್ರಜಾವಾಣಿ ವಾರ್ತೆ

ಸಿಗಂದೂರು ಚೌಡೇಶ್ವರಿ ದೇವಿ

ತುಮರಿ (ಶಿವಮೊಗ್ಗ): ‘ಸಾಗರ ತಾಲ್ಲೂಕಿನ ಸಿಗಂದೂರು ಚೌಡೇಶ್ವರಿ ದೇವಸ್ಥಾನದಲ್ಲಿ ಸೆ. 22ರಿಂದ ಅ. 2ರ ವರೆಗೆ ನವರಾತ್ರಿ ಉತ್ಸವ ನಡೆಯಲಿದೆ’ ಎಂದು ದೇವಾಲಯದ ಆಡಳಿತ ಮಂಡಳಿ ತಿಳಿಸಿದೆ.

ಪ್ರತಿದಿನ ದೇವಿಗೆ ಪ್ರಾತಃಕಾಲ ಪೂಜೆ, ತೈಲಾಭಿಷೇಕ, ಶೈಲಪುತ್ರಿ ಆರಾಧನೆ, ಶುದ್ಧಿ ಪುಣ್ಯಾಹ, ಗಣಹೋಮ, ಕುಂಕುಮಾರ್ಚನೆ, ಪಂಚಾಮೃತ ಅಭಿಷೇಕ, ಮಹಾಭಿಷೇಕ, ಅಲಂಕಾರ ಪೂಜೆನಡೆಯಲಿದೆ.

ನವರಾತ್ರಿ ಪ್ರಯುಕ್ತ ದೇವಿಗೆ ಪ್ರತಿನಿತ್ಯ ದುರ್ಗಾ ಹವನ, ಚಂಡಿಕಾ ಹೋಮ, ನವಚಂಡಿಕಾ ಹೋಮ, ಗುರುಗಳ ಆರಾಧನೆ ನಡೆಯಲಿದೆ. ಮಧ್ಯಾಹ್ನ 12.30ಕ್ಕೆ ನೈವೇದ್ಯ, ರಾತ್ರಿ 7.30 ರಿಂದ ದೀಪೋತ್ಸವ, 8ರಿಂದ ಅಷ್ಟಾವಧಾನ ಸೇವೆ, ಮಹಾ ಮಂಗಳಾರತಿ ಜರುಗಲಿದೆ. ಧರ್ಮಾಧಿಕಾರಿ ಎಸ್.ರಾಮಪ್ಪ ನೇತೃತ್ವದಲ್ಲಿ ಕಾರ್ಯಕ್ರಮಗಳು ನಡೆಯಲಿವೆ.

ಪ್ರತಿದಿನ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಲಿವೆ. ವಸತಿ ವ್ಯವಸ್ಥೆ, ದರ್ಶನ, ನಿತ್ಯ ಪೂಜೆಯಲ್ಲಿ ಬದಲಾವಣೆ ಇಲ್ಲ ಎಂದು ದೇವಸ್ಥಾನದ ಆಡಳಿತ ಮಂಡಳಿಯ ಪ್ರಧಾನ ಕಾರ್ಯದರ್ಶಿ ರವಿಕುಮಾರ್ ಎಚ್.ಆರ್. ತಿಳಿಸಿದರು.

ಅರ್ಜಿ ತಿರಸ್ಕಾರದ ವಿರುದ್ಧ ಮೇಲ್ಮನವಿ 4ರಿಂದ ಅರಣ್ಯವಾಸಿಗಳ ಅಭಿಯಾನ

ಪ್ರಜಾವಾಣಿ ವಾರ್ತೆ

ಕಾರವಾರ: ‘ಅರಣ್ಯವಾಸಿಗಳ ಅರ್ಜಿಯನ್ನು ಪುನರ್ ಪರಿಶೀಲಿಸದೆ, ತಿರಸ್ಕರಿಸಿದ್ದರ ವಿರುದ್ಧ ಮೇಲ್ಮನವಿ ಸಲ್ಲಿಸಲು ಅ.4ರಂದು ಶಿರಸಿಯಲ್ಲಿ ಅಭಿಯಾನ ಆರಂಭಿಸಲಿದ್ದೇವೆ’ ಎಂದು ಅರಣ್ಯ ಭೂಮಿ ಹಕ್ಕು ಹೋರಾಟಗಾರರ ವೇದಿಕೆ ಅಧ್ಯಕ್ಷ ರವೀಂದ್ರ ನಾಯ್ಕ ಹೇಳಿದರು.

> ಅ.14ರಂದು ಅರಣ್ಯವಾಸಿಗಳ ಭವಿಷ್ಯದ ಕುರಿತ ಪ್ರಕರಣದ ಅಂತಿಮ ಹಂತದ ವಿಚಾರಣೆ ನಡೆಯಲಿದೆ. ಹೀಗಾಗಿ, ರಾಜ್ಯವ್ಯಾಪಿ ಆಂದೋಲನ ನಡೆಸಲಾಗುತ್ತಿದೆ
> **ರವೀಂದ್ರ ನಾಯ್ಕ,** ಅರಣ್ಯ ಭೂಮಿ ಹಕ್ಕು ಹೋರಾಟಗಾರರ ವೇದಿಕೆ ಅಧ್ಯಕ್ಷ

‘ಕೇಂದ್ರ ಸರ್ಕಾರಕ್ಕೆ ವರದಿ ಸಲ್ಲಿಸುವ ಮುನ್ನ ರಾಜ್ಯದ ಮುಖ್ಯ ಕಾರ್ಯದರ್ಶಿ ಅವರು ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ, ಸಂಬಂಧಿಸಿದ ಇಲಾಖೆಯ ಸಚಿವರ ಗಮನಕ್ಕೂ ತಂದಿಲ್ಲ’ ಎಂದೂ ಇಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಆರೋಪಿಸಿದರು.

‘ಅರ್ಜಿ ಪುನರ್ ಪರಿಶೀಲಿಸಬೇಕೆಂಬ ಅರಣ್ಯ ಹಕ್ಕು ಕಾಯ್ದೆ ನಿಯಮವನ್ನು ಅನುಸರಿಸಿಲ್ಲ. ಸುಪ್ರೀಂ ಕೋರ್ಟ್ ನಿರ್ದೇಶನ ಮತ್ತು ಕೇಂದ್ರದ ಮಾರ್ಗಸೂಚಿ ಪಾಲಿಸಿಲ್ಲ. ವರದಿ ಪ್ರಕಾರ, ರಾಜ್ಯದಲ್ಲಿ 2,53,269 ಅರಣ್ಯವಾಸಿಗಳ ಅರ್ಜಿ ತಿರಸ್ಕರಿಸಲಾಗಿದೆ’ ಎಂದರು.

‘ರಾಜ್ಯದಲ್ಲಿ ಒಟ್ಟು ಅರ್ಜಿಗಳಲ್ಲಿ ಶೇ 87.77 ಅರಣ್ಯವಾಸಿಗಳ ಅರ್ಜಿಗಳು ತಿರಸ್ಕೃತವಾಗಿವೆ. ಶೇ 3.2ರಷ್ಟು ಅರ್ಜಿದಾರರಿಗಷ್ಟೇ ಸಾಗುವಳಿ ಹಕ್ಕು ಸಿಕ್ಕಿದೆ. ಅರ್ಜಿ ತಿರಸ್ಕಾರದ ವಿರುದ್ಧ ಕಾನೂನಾತ್ಮಕ ಹೋರಾಟವೂ ನಡೆಯಲಿದೆ’ ಎಂದು ಹೇಳಿದರು.

12 ವಿದ್ಯಾರ್ಥಿನಿಯರು ಅಸ್ವಸ್ಥ ಕಲುಷಿತ ನೀರು ಸೇವನೆ ಶಂಕೆ

ಪ್ರಜಾವಾಣಿ ವಾರ್ತೆ

ತುಮಕೂರು: ನಗರದ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಮೆಟ್ರಿಕ್ ನಂತರದ ಬಾಲಕಿಯರ ಹಾಸ್ಟೆಲ್‌ನಲ್ಲಿ ಗುರುವಾರ ರಾತ್ರಿ 12 ಮಂದಿ ವಿದ್ಯಾರ್ಥಿನಿಯರ ಆರೋಗ್ಯದಲ್ಲಿ ಏರುಪೇರಾಗಿ ಆಸ್ಪತ್ರೆಗೆ ದಾಖಲಾಗಿದ್ದು, ಚಿಕಿತ್ಸೆ ಬಳಿಕ ಚೇತರಿಸಿಕೊಂಡಿದ್ದಾರೆ.

ಊಟದ ನಂತರ ಹೊಟ್ಟೆ ನೋವು, ವಾಂತಿಯಾಗಿದೆ. ಎಲ್ಲರನ್ನು ಜಿಲ್ಲಾ ಆಸ್ಪತ್ರೆಗೆ ಸೇರಿಸಿದ್ದು ಶುಕ್ರವಾರ ಬೆಳಗ್ಗೆ ಬಿಡುಗಡೆಯಾದರು. ಹಾಸ್ಟೆಲ್‌ನಲ್ಲಿ 165 ವಿದ್ಯಾರ್ಥಿನಿಯರಿದ್ದಾರೆ. ಮೂರು ದಿನದ ಹಿಂದೆ ಹಾಸ್ಟೆಲ್‌ನ ಸಂಪ್ ಸ್ವಚ್ಛಗೊಳಿಸಿ, ಅದರಿಂದಲೇ ನೀರು ಪೂರೈಸಲಾಗಿತ್ತು. ಆ ನೀರು ಸೇವಿಸಿ ಅಸ್ವಸ್ಥರಾಗಿರಬಹುದು ಎಂಬ ಶಂಕೆ ವ್ಯಕ್ತವಾಗಿದೆ.

ಜಿಲ್ಲಾಧಿಕಾರಿ ಶುಭ ಕಲ್ಯಾಣ್, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಜಿಲ್ಲಾ ಅಧಿಕಾರಿ ಸಿದ್ದರಾಜು ಆಸ್ಪತ್ರೆಗೆ ಭೇಟಿ ನೀಡಿ ಪರಿಶೀಲಿಸಿದರು.

‘2 ದಿನ ನೀರಿನ ಕ್ಯಾನ್ ಬಳಸಲು ಸೂಚಿಸಲಾಗಿದೆ. ನೀರು ಪರೀಕ್ಷಿಸಲು ತಿಳಿಸಲಾಗಿದೆ. ಒಬ್ಬ ವೈದ್ಯರನ್ನು ಹಾಸ್ಟೆಲ್ ಬಳಿ ನಿಯೋಜಿಸಲಾಗಿದೆ’ ಎಂದು ಜಿಲ್ಲಾಧಿಕಾರಿ ತಿಳಿಸಿದ್ದಾರೆ.

ಸಂಭ್ರಮದ ‘ಕೋಡಿ’...

ಪ್ರಜಾವಾಣಿ ಚಿತ್ರ
ಸಂಜೀವ ಅಕ್ಕಿ

ವಿಜಯಪುರ ನಗರದ ಐತಿಹಾಸಿಕ ಭೂತನಾಳ ಕೆರೆ ಶುಕ್ರವಾರ ತುಂಬಿ ಕೋಡಿ ಬಿದ್ದಿದ್ದು, ಯುವಕರು ಬೈಕ್ ಸಮೇತ ಮೋಜಿನಾಟದಲ್ಲಿ ತೊಡಗಿದ್ದರು

ನೌಕರರ ನೇಮಕಕ್ಕೆ ನಕಲಿ ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿನ ಎಲ್ಲ ಪ್ರೌಢಶಾಲೆ ಹಾಗೂ ಪದವಿಪೂರ್ವ ಕಾಲೇಜುಗಳಿಗೆ ಹೊರಗುತ್ತಿಗೆ ಆಧಾರದಲ್ಲಿ ಗ್ರೂಪ್ ‘ಡಿ’ ನೌಕರರನ್ನು ನೇಮಿಸಿಕೊಳ್ಳುವಂತೆ ಹೊರಡಿಸಿರುವ ಆದೇಶ ನಕಲಿ ಎಂದು ಶಾಲಾ ಶಿಕ್ಷಣ ಇಲಾಖೆ ಹೇಳಿದೆ.

ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಸೂಚನೆಯಂತೆ ಎಲ್ಲ ಶಾಲಾ–ಕಾಲೇಜುಗಳಲ್ಲೂ ಅಗತ್ಯವಿರುವ ಗ್ರೂಪ್ ‘ಡಿ’ ನೌಕರರನ್ನು ಕಿಯೋನಿಕ್ಸ್ ಮೂಲಕ ನೇಮಿಸಿಕೊಳ್ಳುವಂತೆ ಶಾಲಾ ಶಿಕ್ಷಣ ಇಲಾಖೆ ಜಂಟಿ ನಿರ್ದೇಶಕರು ಹೊರಡಿಸಿದ್ದ ಆದೇಶ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಈ ಆದೇಶದ ಪ್ರತಿಯಲ್ಲಿ ‘ಈ ಕಚೇರಿ ಟಿಪ್ಪಣಿ ಮಾನ್ಯ ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ’ ಎಂಬ ಅಡಿ ಬರಹವೂ ಇದೆ.

ನಕಲಿ ಆದೇಶ ಕುರಿತು ಲಿಖಿತ ಹೇಳಿಕೆ ಬಿಡುಗಡೆ ಮಾಡಿರುವ ಶಾಲಾ ಶಿಕ್ಷಣ ಇಲಾಖೆ, ‘ನಕಲಿ ಆದೇಶದ ಅನ್ವಯ ಯಾವುದೇ ಜಿಲ್ಲೆಯಲ್ಲಿ ಗ್ರೂಪ್ ‘ಡಿ’ ನೌಕರರ ನೇಮಕಾತಿ ಪ್ರಕ್ರಿಯೆ ಆರಂಭಿಸಿದ್ದರೆ ತಕ್ಷಣ ಹಿಂಪಡೆಯಬೇಕು. ಈ ಕುರಿತು ಅನುಪಾಲನಾ ವರದಿಯನ್ನು ಸಲ್ಲಿಸಬೇಕು’ ಎಂದು ಸೂಚಿಸಿದೆ.

‘ಸಿಕ್ಕಿದ್ದು ಪುರುಷರ ಬುರುಡೆ’

ಧರ್ಮಸ್ಥಳ ಗ್ರಾಮ ಪಂಚಾಯಿತಿ ಉಪಾಧ್ಯಕ್ಷರ ವಿಚಾರಣೆ

ಪ್ರಜಾವಾಣಿ ವಾರ್ತೆ

ಮಂಗಳೂರು: ಧರ್ಮಸ್ಥಳ ಗ್ರಾಮದಲ್ಲಿ ನಡೆದಿದೆ ಎನ್ನಲಾದ ಅಪರಾಧ ಕೃತ್ಯಗಳ ಆರೋಪ ಕುರಿತು ತನಿಖೆ ನಡೆಸುತ್ತಿರುವ ವಿಶೇಷ ತನಿಖಾ ತಂಡಕ್ಕೆ (ಎಸ್‌ಐಟಿ) ಸೆ.17 ಮತ್ತು 18ರಂದು ಸಿಕ್ಕಿರುವ ಬುರುಡೆಗಳು, ಮೂಳೆಗಳು ಪುರುಷರವು ಎಂದು ಎಸ್‌ಐಟಿ ಮೂಲಗಳು ತಿಳಿಸಿವೆ.

ನೇತ್ರಾವತಿ ಸ್ನಾನಘಟ್ಟ ಬಳಿಯ ಬಂಗ್ಲೆಗುಡ್ಡೆಯಲ್ಲಿ ಎಸ್‌ಐಟಿ ಮಹಜರು ನಡೆಸಿದ ಸಂದರ್ಭದಲ್ಲಿ ಏಳು ತಲೆಬುರುಡೆ ಮತ್ತು ಬಹಳಷ್ಟು ಮೂಳೆಗಳು ಸಿಕ್ಕಿದ್ದವು. ಇವುಗಳನ್ನು ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಿದ್ದು, ವೈದ್ಯರ ಪ್ರಾಥಮಿಕ ವರದಿ ಪ್ರಕಾರ ಅವೆಲ್ಲವೂ ಪುರುಷರವು ಎಂದು ಗೊತ್ತಾಗಿದೆ ಎಂದು ಮೂಲಗಳು ಹೇಳಿವೆ.

ಒಂದು ಬುರುಡೆ ಕೊಡಗು ಜಿಲ್ಲೆ ಪೊನ್ನಂಪೇಟೆ ತಾಲ್ಲೂಕಿನ ಯು.ಬಿ ಅಯ್ಯಪ್ಪ ಅವರದು ಎಂದು ಪ್ರಾಥಮಿಕ ತನಿಖೆಯಲ್ಲಿ ಗುರುವಾರ ಪತ್ತೆಯಾಗಿತ್ತು. ಎಲ್ಲ ಬುರುಡೆಗಳ ಮಾಹಿತಿ ಕಲೆ ಹಾಕಲು ಪ್ರಯತ್ನಿಸುತ್ತಿದ್ದು ವಿಸ್ತೃತ ತನಿಖೆಯಲ್ಲಿ ಪೂರ್ಣ ಮಾಹಿತಿ ಲಭ್ಯವಾಗಲಿದೆ.

ಅಪರಾಧ ಪ್ರಕರಣಗಳಿಗೆ ಸಂಬಂಧಿಸಿ ಮಾಹಿತಿ ಕಲೆ ಹಾಕುವ ಪ್ರಕ್ರಿಯೆಯ ಭಾಗವಾಗಿ ಧರ್ಮಸ್ಥಳ ಗ್ರಾಮ ಪಂಚಾಯಿತಿ ಉಪಾಧ್ಯಕ್ಷ ಶ್ರೀನಿವಾಸ ರಾವ್ ಮತ್ತು ಮಾಜಿ ಅಧ್ಯಕ್ಷ ಕೇಶವ ಗೌಡ ಅವರನ್ನು ಎಸ್‌ಐಟಿ ಶುಕ್ರವಾರ ಬೆಳಿಗ್ಗೆ ವಿಚಾರಣೆಗೆ ಒಳಪಡಿಸಿದೆ.

ಬೆಳ್ತಂಗಡಿಯಲ್ಲಿ ಇರುವ ಎಸ್‌ಐಟಿ ಕಚೇರಿಗೆ ತೆರಳಿ ಇಬ್ಬರೂ ಮಾಹಿತಿ ನೀಡಿದ್ದಾರೆ. ಗ್ರಾಮದಲ್ಲಿ ಹೂತುಹಾಕಿದ ಮೃತದೇಹಗಳ ಬಗ್ಗೆ ಮಾಹಿತಿಯನ್ನು ಪಡೆದುಕೊಳ್ಳಲಾಗಿದೆ ಎಂದು ತಿಳಿದು ಬಂದಿದೆ.

ತಿಮರೋಡಿ ಮನೆಗೆ ನೋಟಿಸ್

ವಿಚಾರಣೆಗೆ ಹಾಜರಾಗಬೇಕು ಎಂಬ ಮಾಹಿತಿ ನೀಡಲು ಬೆಳ್ತಂಗಡಿ ಪೊಲೀಸರು ಸೌಜನ್ಯಾ ಪರ ಹೋರಾಟಗಾರ ಮಹೇಶ್ ಶೆಟ್ಟಿ ತಿಮರೋಡಿ ಅವರ ಮನೆಗೆ ಶುಕ್ರವಾರ ಬೆಳಿಗ್ಗೆ ತೆರಳಿದ್ದರು. ಈ ಸಂದರ್ಭದಲ್ಲಿ ಮನೆಯಲ್ಲಿ ಯಾರೂ ಇಲ್ಲದ್ದರಿಂದ ಗೋಡೆಗೆ ನೋಟಿಸ್ ಅಂಟಿಸಲಾಗಿದೆ.

ಶಸ್ತ್ರಾಸ್ತ್ರ ಕಾಯ್ದೆಯ ವಿವಿಧ ಕಲಂಗಳ ಅಡಿ ಮಹೇಶ್ ಶೆಟ್ಟಿ ಮೇಲೆ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ. ಇದಕ್ಕೆ ಸಂಬಂಧಿಸಿ ವಿಚಾರಣೆಗೆ ಸೆ.21ರಂದು ಠಾಣೆಗೆ ಬರುವಂತೆ ನೋಟಿಸ್‌ನಲ್ಲಿ ಸೂಚಿಸಲಾಗಿದೆ.

ಆ.26ರಂದು ಮಹೇಶ್ ಶೆಟ್ಟಿ ಮನೆಯಲ್ಲಿ ನಡೆಸಿದ ಶೋಧ ಕಾರ್ಯದಲ್ಲಿ ಬಂದೂಕು ಮತ್ತು ಎರಡು ತಲವಾರುಗಳು ಪತ್ತೆಯಾಗಿದ್ದವು.

ಈ ಕುರಿತು ಎಸ್‌ಐಟಿ ದೂರು ದಾಖಲಿಸಿತ್ತು.

‘ನಿರ್ಲಕ್ಷಿಸಿದರೆ ಪ್ರತ್ಯೇಕ ರಾಜ್ಯ ಬೇಡಿಕೆ’

ಬೆಳಗಾವಿ: ‘ಸುವರ್ಣ ವಿಧಾನಸೌಧವನ್ನು ಉತ್ತರ ಕರ್ನಾಟಕದ ಆಡಳಿತ ಶಕ್ತಿಕೇಂದ್ರವಾಗಿ ಮಾಡಿಲ್ಲ. ಈ ಭಾಗದ ಅಭಿವೃದ್ಧಿಗೆ ಹಿನ್ನಡೆಯಾಗಿದೆ. ಸರ್ಕಾರ ಇದೇ ರೀತಿ ನಿರ್ಲಕ್ಷ್ಯ ಮುಂದುವರಿಸಿದರೆ, ಪ್ರತ್ಯೇಕ ರಾಜ್ಯಕ್ಕೆ ಬೇಡಿಕೆ ಇಡುತ್ತೇವೆ’ ಎಂದು ಉತ್ತರ ಕರ್ನಾಟಕ ವಿಕಾಸ ವೇದಿಕೆ ಮುಖಂಡ ಅಶೋಕ ಪೂಜಾರಿ ಎಚ್ಚರಿಕೆ ನೀಡಿದರು.

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಅವರು, ‘ಕಲ್ಯಾಣ ಕರ್ನಾಟಕದ ಮಾದರಿಯಲ್ಲಿ ಕಿತ್ತೂರು ಕರ್ನಾಟಕಕ್ಕೆ ಪ್ರತ್ಯೇಕ ಸಚಿವಾಲಯ ಸ್ಥಾಪಿಸುವಂತೆ ಒತ್ತಾಯಿಸಿ ಸೆಪ್ಟೆಂಬರ್ 23ರಂದು ಪ್ರಾದೇಶಿಕ ಆಯುಕ್ತರ ಕಚೇರಿ ಆವರಣದಲ್ಲಿ ಪ್ರತಿಭಟಿಸಲಾಗುವುದು’ ಎಂದರು.

ಎಸ್‌ಬಿಐ ದರೋಡೆ ಪ್ರಕರಣ: ಚಿನ್ನಾಭರಣ, ನಗದು ವಶ

ಪ್ರಜಾವಾಣಿ ವಾರ್ತೆ

ವಿಜಯಪುರ: ಜಿಲ್ಲೆಯ ಚಡಚಣದ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ (ಎಸ್‌ಬಿಐ) ಶಾಖೆಯ ದರೋಡೆ ಪ್ರಕರಣ ಸಂಬಂಧ ಮಹಾರಾಷ್ಟ್ರದ ಹುಲಜಂತಿಯಲ್ಲಿ ಪೊಲೀಸರು ಕಾರ್ಯಾಚರಣೆ ನಡೆಸಿ, ₹ 41.4 ಲಕ್ಷ ನಗದು, 6.55 ಕೆ.ಜಿ ಚಿನ್ನಾಭರಣ ವಶಪಡಿಸಿಕೊಂಡಿದ್ದಾರೆ.

‘ಪಾಳು ಬಿದ್ದ ಮನೆಯೊಂದರಲ್ಲಿ ಚೀಲದಲ್ಲಿ ದರೋಡೆಕೋರರು ಬಚ್ಚಿಟ್ಟಿದ್ದ ನಗದು, ಚಿನ್ನಾಭರಣ ವಶಪಡಿಸಿಕೊಳ್ಳಲಾಗಿದೆ’ ಎಂದು ವಿಜಯಪುರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಲಕ್ಷ್ಮಣ ನಿಂಬರಗಿ ಅವರು ಸುದ್ದಿಗಾರರಿಗೆ ತಿಳಿಸಿದರು.

ಮೂವರು ಆರೋಪಿಗಳು ಪಂಢರಪುರ ಮಾರ್ಗವಾಗಿ ಕಾರಿನಲ್ಲಿ ಪರಾರಿ ಆಗುವಾಗ ಹುಲಜಂತಿ ಬಳಿ ಬೈಕ್‌ಗೆ ಡಿಕ್ಕಿ ಹೊಡೆದಿದ್ದರು. ಸ್ಥಳೀಯರು ಅಡ್ಡಗಟ್ಟಿದಾಗ, ಸ್ಥಳದಲ್ಲೇ ಕಾರು ಬಿಟ್ಟು ಕದ್ದ ಮಾಲಿನೊಂದಿಗೆ ಪರಾರಿಯಾಗಿದ್ದರು’ ಎಂದರು.

ಪಾಸ್ ಇದ್ದರಷ್ಟೆ ಹೆಚ್ಚಿನ ಕಾರ್ಯಕ್ರಮಗಳಿಗೆ ಪ್ರವೇಶ, ಎಲ್ಲಿ ಸಿಗುತ್ತದೆಂಬ ಮಾಹಿತಿ ಇಲ್ಲ

ಈ ಬಾರಿ ‘ಪಾಸ್ ಉಳ್ಳವರ’ ದಸರಾ

• ಎಂ.ಮಹೇಶ್

ಮೈಸೂರು: ಮೈಸೂರು ದಸರಾ ಮಹೋತ್ಸವದ ಪ್ರಮುಖ ಕಾರ್ಯಕ್ರಮಗಳಿಗೆ ಈ ಬಾರಿ ಜಿಲ್ಲಾಡಳಿತವು ಟಿಕೆಟ್ ಹಾಗೂ ‘ಪಾಸ್ ವ್ಯವಸ್ಥೆ’ ಮಾಡಿದೆ. ಹೀಗಾಗಿ, ಜನಸಾಮಾನ್ಯರು ವೀಕ್ಷಿಸಲು ಅವಕಾಶ ದೊರೆಯುವುದು ಕಷ್ಟಸಾಧ್ಯ ಎನ್ನುವಂತಾಗಿದೆ.

ಹಣವುಳ್ಳವರು ಹಾಗೂ ಪ್ರಭಾವಿಗಳಿಗೆ ಮಾತ್ರವೇ ಅವಕಾಶ ಸಿಗಲಿದ್ದು, ಹೊರ ಜಿಲ್ಲೆಗಳಿಂದ ಬರಲಿರುವ ಸಾವಿರಾರು ಮಂದಿಗೆ ಕಾರ್ಯಕ್ರಮ ವೀಕ್ಷಣೆ ತೀವ್ರ ತೊಡಕಾಗಿ ಪರಿಣಮಿಸಲಿದೆ.

ನಾಡಹಬ್ಬ ಸೆ.22ರಿಂದ ಅ.2ರವರೆಗೆ ನಡೆಯಲಿದೆ. ಚಾಮುಂಡಿಬೆಟ್ಟದಲ್ಲಿ ಉದ್ಘಾಟನಾ ಸಮಾರಂಭಕ್ಕೂ ಮೊದಲ ಬಾರಿಗೆ ಪಾಸ್ ಕಡ್ಡಾಯಗೊಳಿಸಲಾಗಿದೆ. ಆದರೆ, ಪಾಸ್ ಅನ್ನು ಎಲ್ಲಿ, ಯಾರು ಕೊಡುತ್ತಾರೆ? ಮಾನದಂಡವೇನು, ಒಬ್ಬರಿಗೆ ಎಷ್ಟು ಪಾಸ್ ವಿತರಿಸಲಾಗುತ್ತದೆ ಎಂದು ಜಿಲ್ಲಾಡಳಿತದಿಂದ ಈವರೆಗೂ ಮಾಹಿತಿ ನೀಡಿಲ್ಲ. ಇದು ಗೊಂದಲ ಮೂಡಿಸಿದೆ.

> ಸೀಮಿತ ಆಸನಗಳ ವ್ಯವಸ್ಥೆ ಹಾಗೂ ಸಾರ್ವಜನಿಕರ ಹಿತದೃಷ್ಟಿಯಿಂದಾಗಿ ಪಾಸ್ ಕಡ್ಡಾಯಗೊಳಿಸಲಾಗಿದೆ. ಟಿಕೆಟ್ ಖರೀದಿಸಿಯೂ ಪ್ರವೇಶ ಪಡೆಯಬಹುದು
> **ಜಿ.ಲಕ್ಷ್ಮೀಕಾಂತ ರೆಡ್ಡಿ,** ಜಿಲ್ಲಾಧಿಕಾರಿ

ಉತ್ಸವದ ಪ್ರಮುಖ ಆಕರ್ಷಣೆಯಾದ ಜಂಬೂಸವಾರಿಯನ್ನು ಅಂಬಾವಿಲಾಸ ಅರಮನೆ ಆವರಣದಲ್ಲಿ ವೀಕ್ಷಿಸಲು ಹಿಂದಿನಿಂದಲೂ ಟಿಕೆಟ್ ಹಾಗೂ ಪಾಸ್ ವ್ಯವಸ್ಥೆ ಇದೆ. ಗೋಲ್ಡ್ ಕಾರ್ಡ್, ಜಂಬೂಸವಾರಿ ಟಿಕೆಟ್ ಅಥವಾ ಪಾಸ್ ಇದ್ದವರಿಗಷ್ಟೆ ಅವಕಾಶ ನೀಡಲಾಗುತ್ತದೆ.

ಆದರೆ, ಇದೇ ಪ್ರಥಮ ಬಾರಿಗೆ ಇತರ ಹಲವು ಕಾರ್ಯಕ್ರಮಗಳಿಗೂ ಪಾಸ್ ಕಡ್ಡಾಯಗೊಳಿಸಲಾಗಿದೆ. ಟಿಕೆಟ್‌ಗಳನ್ನು ಆನ್‌ಲೈನ್‌ನಲ್ಲಿ ಅಧಿಕೃತ ಜಾಲತಾಣದ (mysoredasara.gov.in) ಮೂಲಕ ಮಾರಾಟ ಮಾಡಲಾಗುತ್ತಿದೆ. ಆದರೆ, ಪಾಸ್‌ಗಳ ಬಗ್ಗೆ ಸ್ಪಷ್ಟ ಮಾಹಿತಿ ದೊರೆಯುತ್ತಿಲ್ಲ.

ಷೋಗಳಿಗೂ ಬೇಕು ಟಿಕೆಟ್

ಬನ್ನಿಮಂಟಪದ ಪಂಜಿನ ಕವಾಯತು ಮೈದಾನದಲ್ಲಿ ಸೆ. 27ರ ಸಂಜೆ 4ಕ್ಕೆ ವೈಮಾನಿಕ ಪ್ರದರ್ಶನ, ಸೆ.28 ಹಾಗೂ 29ರಂದು ಸಂಜೆ 6ಕ್ಕೆ ಡ್ರೋನ್ ಷೋ, ಅ.1ರಂದು ಸಂಜೆ 4ಕ್ಕೆ ವೈಮಾನಿಕ ಪ್ರದರ್ಶನ, ಡ್ರೋನ್ ಷೋ, ಪಂಜಿನ ಕವಾಯತು ಪೂರ್ವಾಭ್ಯಾಸ ಮತ್ತು ಅ. 2ರಂದು ಸಂಜೆ 6ಕ್ಕೆ ಪಂಜಿನ ಕವಾಯತು, ಡ್ರೋನ್ ಷೋ ನಡೆಯಲಿದೆ.

ಈ ಬಾರಿ ಡ್ರೋನ್ ಷೋಗೂ ಜಿಲ್ಲಾಡಳಿತದಿಂದ ಟಿಕೆಟ್ ಮಾರಲಿದ್ದು, ಟಿಕೆಟ್‌ಗೆ ₹1 ಸಾವಿರ ದರ ನಿಗದಿಪಡಿಸಲಾಗಿದೆ. ಪಂಜಿನ ಕವಾಯತುಗೆ ಟಿಕೆಟ್ ದರ ₹1,500 ನಿಗದಿಪಡಿಸಲಾಗಿದೆ.

ಎಷ್ಟೆಷ್ಟು ದರ? (₹ ಗಳಲ್ಲಿ)	
ಗೋಲ್ಡ್ ಕಾರ್ಡ್	6,500
ಅರಮನೆ ಆವರಣದಲ್ಲಿ ಜಂಬೂಸವಾರಿ ಟಿಕೆಟ್	3,500
ಪಂಜಿನ ಕವಾಯತು	1,500
ಯುವ ದಸರಾ	5,000 2,000
ಡ್ರೋನ್ ಷೋ	1,000

ಮೈಸೂರು ನಗರ ಹೊರವಲಯದ ಉತ್ತನಹಳ್ಳಿ ಬಳಿ ಸೆ.23ರಿಂದ 27ರವರೆಗೆ ನಡೆಯುವ ‘ಯುವ ದಸರಾ’ದಲ್ಲಿ ಪಾಲ್ಗೊಳ್ಳಲು ದಿನದ ಟಿಕೆಟ್‌ಗೆ ₹ 5ಸಾವಿರ ಹಾಗೂ ₹ 2,500 ಟಿಕೆಟ್ ನಿಗದಿಪಡಿಸಲಾಗಿದ್ದು, ಅವುಗಳನ್ನು ‘ಬುಕ್ ಮೈ ಷೋ’ ಮೂಲಕ ಪಡೆಯಬಹುದು. ಇದರ ಮೂಲಕ ಜಿಲ್ಲಾಡಳಿತ ‘ವರಮಾನ’ ಸಂಗ್ರಹಕ್ಕೆ ಯೋಜಿಸಿದೆ.

ಕುಪ್ಪಣ್ಣ ಉದ್ಯಾನದಲ್ಲಿ ಆಯೋಜಿಸಿರುವ ‘ಫಲಪುಷ್ಪ ಪ್ರದರ್ಶನ’ ಹಾಗೂ ‘ದಸರಾ ವಸ್ತುಪ್ರದರ್ಶನ’ಕ್ಕೂ ಟಿಕೆಟ್ ಇದೆ.

ಉಳಿದಂತೆ, ಅರಮನೆ ಆವರಣ ಸೇರಿದಂತೆ ವಿವಿಧ ವೇದಿಕೆಗಳಲ್ಲಿ ನಡೆಯುವ ಸಾಂಸ್ಕೃತಿಕ ಕಾರ್ಯಕ್ರಮ, ರೈತ ದಸರಾ, ಮಹಿಳಾ ದಸರಾ, ಯೋಗ ದಸರಾ, ಕವಿಗೋಷ್ಠಿ, ಕನ್ನಡ ಪುಸ್ತಕ ಮೇಳ, ಕ್ರೀಡಾಕೂಟ, ಕುಸ್ತಿ ಪಂದ್ಯ ವೀಕ್ಷಣೆಗೆ ಉಚಿತ ಪ್ರವೇಶವಿದೆ.

ಪ್ರಜಾವಾಣಿ
ಶನಿವಾರ • ಸೆಪ್ಟೆಂಬರ್ 20, 2025
ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ

ಸುಭಾಷಿತ

ಧ್ಯಾನವು ಅನಂತ ಆನಂದಕ್ಕೆ ಇರುವ ಹೆಬ್ಬಾಗಿಲು.

ಸ್ವಾಮಿ ವಿವೇಕಾನಂದ

ಸಂಪಾದಕೀಯ

ಶರಾವತಿ ಕೊಳ್ಳದ ಹೊಸ ಯೋಜನೆ ಹಳೆಯ ತಪ್ಪುಗಳು ಮರುಕಳಿಸದಿರಲಿ

ಅಪೂರ್ವ ಅರಣ್ಯ ಪ್ರದೇಶ, ಜೀವವೈವಿಧ್ಯ ಹಾಗೂ ವಿಶ್ವಪ್ರಸಿದ್ಧ ಜೋಗ ಜಲಪಾತ ಒಳಗೊಂಡಿರುವ ಶಿವಮೊಗ್ಗ ಜಿಲ್ಲೆಯ ಶರಾವತಿ ಕಣಿವೆಯ ಪ್ರದೇಶ, 'ಅಭಿವೃದ್ಧಿಯೋ ಸಂರಕ್ಷಣೆಯೋ' ಎನ್ನುವ ಆಯ್ಕೆಯ ಸಂಘರ್ಷಕ್ಕೆ ಮತ್ತೊಮ್ಮೆ ಗುರಿಯಾಗಿದೆ. 'ಕರ್ನಾಟಕ ವಿದ್ಯುತ್ ನಿಗಮ ನಿಯಮಿತ' (ಕೆಪಿಸಿಎಲ್) ಯೋಜಿಸಿರುವ, 'ಶರಾವತಿ ಪಂಪ್ಡ್ ಸ್ಟೋರೇಜ್ ಪ್ರಾಜೆಕ್ಟ್' (ಪಿಎಸ್‌ಪಿ) ಅನುಷ್ಠಾನಕ್ಕೆ ಸ್ಥಳೀಯರು ಹಾಗೂ ಪರಿಸರವಾದಿಗಳು ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಯೋಜನೆಯ ವಿರುದ್ಧ ಪ್ರತಿಭಟನೆ ಹಮ್ಮಿಕೊಳ್ಳುವುದಾಗಿ ಎಚ್ಚರಿಕೆ ನೀಡಿದ್ದಾರೆ. ಪರಿಸರ ಸಾರ್ವಜನಿಕ ಅಹವಾಲು ಸಭೆಯಲ್ಲಿ ಯೋಜನೆಯನ್ನು ವಿರೋಧಿಸಿ ಸುಮಾರು 10 ಸಾವಿರ ಅಹವಾಲುಗಳು ಸಲ್ಲಿಕೆಯಾಗಿವೆ. 2000 ಮೆ.ವಾ ಸಾಮರ್ಥ್ಯದ ಈ ಜಲವಿದ್ಯುತ್ ಯೋಜನೆಯು ರಾಜ್ಯಕ್ಕೆ ಶುದ್ಧ ಇಂಧನ ಹಾಗೂ ಗ್ರಿಡ್ ಸ್ಥಿರತೆಯನ್ನು ಒದಗಿಸಲಿದೆ ಎನ್ನುವುದು 'ಕೆಪಿಸಿಎಲ್' ನೀಡುತ್ತಿರುವ ಭರವಸೆ. ಸೌರಶಕ್ತಿ ಅಥವಾ ಪವನಶಕ್ತಿಯನ್ನು ಬಳಸುವ ಮೂಲಕ ಗೇರುಸೊಪ್ಪ ಜಲಾಶಯದಿಂದ ಮೇಲಿನ ತಲಕಳಲೆ ಜಲಾಶಯಕ್ಕೆ ನೀರನ್ನು ಪಂಪ್ ಮಾಡಿ, ಆ ನೀರನ್ನು ಟರ್ಬೈನ್‌ಗಳ ಮೂಲಕ ಹಾಯಿಸಿ ವಿದ್ಯುತ್ ಉತ್ಪಾದಿಸಲಾಗುವುದು; ಆ ಮೂಲಕ ಅತ್ಯಧಿಕ ಬೇಡಿಕೆ ಇರುವ ಸಮಯದಲ್ಲಿ ಗುಣಮಟ್ಟದ ವಿದ್ಯುತ್ ಪೂರೈಸುವುದು ಸಾಧ್ಯವಾಗಲಿದೆ ಎಂದು ಹೇಳಲಾಗುತ್ತಿದೆ. ಕಾಗದದ ಮೇಲೇನೋ ಉದ್ದೇಶಿತ ಯೋಜನೆ ಆಕರ್ಷಕವಾಗಿ ಕಾಣಿಸುತ್ತಿದೆ. ಲಭ್ಯ ಮೂಲ ಸೌಕರ್ಯಗಳನ್ನು ಬಳಸಿಕೊಂಡು ಹಾಗೂ ಜಲವಿದ್ಯುತ್ ಅವಲಂಬನೆಯ ಮೂಲಕ ರಾಜ್ಯದ ವಿದ್ಯುತ್ ಜಾಲವನ್ನು ಬಲಪಡಿಸುವ ಆಶ್ವಾಸನೆಯ ಜೊತೆಗೆ, ಪಳೆಯುಳಿಕೆ ಇಂಧನಗಳನ್ನು ಸುಡದಿರುವ ಭರವಸೆಯನ್ನೂ ಯೋಜನೆ ನೀಡುತ್ತಿದೆ.

ಗುಣಮಟ್ಟದ ವಿದ್ಯುತ್ ದೊರಕಿಸಿಕೊಡುವ ಯೋಜನೆಗಳಿಗಾಗಿ ಸಮೃದ್ಧ ಜೀವವೈವಿಧ್ಯ, ಅಪೂರ್ವ ಅರಣ್ಯ ಸಂಪತ್ತು ಹಾಗೂ ಸಮುದಾಯಗಳು ಬೆಲೆ ತೆರುವಂತೆ ಆಗಬಾರದು.

'ಪಿಎಸ್‌ಪಿ' ಯೋಜನೆಗೆ ಸಂಬಂಧಿಸಿದಂತೆ ಸಾಕಷ್ಟು ಭರವಸೆಗಳನ್ನು ಕೆಪಿಸಿಎಲ್ ನೀಡುತ್ತಿದೆಯಾದರೂ, ಆ ಭರವಸೆಗಳ ಹಿಂದೆ ನಿರ್ಲಕ್ಷಿಸಲಾಗದಷ್ಟು ಗಂಭೀರವಾದ ಸಂಗತಿಗಳಿವೆ. ಯುನೆಸ್ಕೊದ ವಿಶ್ವ ಪಾರಂಪರಿಕ ತಾಣಗಳ ಪಟ್ಟಿಯಲ್ಲಿರುವ ಪಶ್ಚಿಮ ಘಟ್ಟಗಳ ವ್ಯಾಪ್ತಿಗೆ ಸೇರಿದ 'ಸಿಂಹ ಬಾಲದ ಸಿಂಗಳೀಕಗಳ ಅಭಯಾರಣ್ಯ' ಪ್ರದೇಶದಲ್ಲಿ ಉದ್ದೇಶಿತ ಯೋಜನೆ ಅಸ್ತಿತ್ವಕ್ಕೆ ಬರಲಿದೆ. ವಿದ್ಯುತ್ ಯೋಜನೆಗಾಗಿ ಸುರಂಗ ನಿರ್ಮಾಣ, ಸ್ಫೋಟದಂಥ ಚಟುವಟಿಕೆಗಳು ಹಾಗೂ 16 ಸಾವಿರಕ್ಕೂ ಹೆಚ್ಚು ಅಮೂಲ್ಯ ಮರಗಳನ್ನು ಕಡಿಯುವುದು ಈ ಭಾಗದ ಸೂಕ್ಷ್ಮ ಪರಿಸರ ಹಾಗೂ ಜೀವವೈವಿಧ್ಯದ ಮೇಲೆ ಉಂಟು ಮಾಡಬಹುದಾದ ದುಷ್ಪರಿಣಾಮಗಳ ಬಗ್ಗೆ ಪರಿಸರವಾದಿಗಳು ಆತಂಕ ವ್ಯಕ್ತಪಡಿಸಿದ್ದಾರೆ. ಯೋಜನೆಗೆ ಸಂಬಂಧಿಸಿದ ಪರಿಸರ ಪರಿಣಾಮ ಮೌಲ್ಯಮಾಪನ ದೋಷಗಳಿಂದ ಕೂಡಿದೆ ಹಾಗೂ ಪಾರದರ್ಶಕವಾಗಿಲ್ಲ ಎಂದು ಪರಿಸರವಾದಿಗಳು ಆರೋಪಿಸಿದ್ದಾರೆ. ಪ್ರಸಕ್ತ ಯೋಜನೆಯು ಹಳೆಯ ಗಾಯಗಳನ್ನು ಕೆದಕುವ ಪ್ರಯತ್ನವಾಗಿದೆ; 1960ರ ದಶಕದಲ್ಲಿ ಲಿಂಗನಮಕ್ಕಿ ಜಲಾಶಯ ನಿರ್ಮಾಣದ ಸಂದರ್ಭದಲ್ಲಿ ನಿರ್ವಸಿತರಾಗಿದ್ದ ಕುಟುಂಬವರ್ಗಗಳಿಗೆ ಸೇರಿದವರು ಮತ್ತೊಮ್ಮೆ ಅಂತಹುದೇ ಸವಾಲನ್ನು ಎದುರಿಸಬೇಕಾಗುತ್ತದೆ ಎಂದು ಹೇಳಲಾಗುತ್ತಿದೆ. ಲಿಂಗನಮಕ್ಕಿ ಜಲಾಶಯ ನಿರ್ಮಾಣದಲ್ಲಿ ಭೂಮಿ ಕಳೆದುಕೊಂಡವರಿಗೆ ದೊರೆಯಬೇಕಿದ್ದ ನ್ಯಾಯಯುತ ಪರಿಹಾರ ಹಾಗೂ ಮೂಲಸೌಕರ್ಯಗಳ ಭರವಸೆಗಳು ಪೂರ್ಣ ಪ್ರಮಾಣದಲ್ಲಿ ಈಡೇರಿಲ್ಲ. ಭೂಮಿಯನ್ನು ಕಳೆದುಕೊಂಡಿದ್ದರ ಜೊತೆಗೆ, ನಂಬಿಕೆದ್ರೋಹಕ್ಕೂ ಒಳಗಾದ ನೋವು ಅವರದು. ಹಳೆಯ ಗಾಯಗಳು ಮಾಯದಿರುವ ಸಮುದಾಯಗಳನ್ನು ಮತ್ತೊಮ್ಮೆ ತ್ಯಾಗ ಮಾಡುವಂತೆ ಒತ್ತಾಯಿಸಲಾಗುತ್ತಿದೆ ಹಾಗೂ ಹಳೆಯ ತಪ್ಪುಗಳು ಮರುಕಳಿಸುವುದಿಲ್ಲ ಎಂದು ಹೇಳಲಾಗುತ್ತಿದೆ.

ಶರಾವತಿ ಪಂಪ್ಡ್ ಸ್ಟೋರೇಜ್ ಯೋಜನೆಯನ್ನು ಕೈಬಿಡುವುದೇ ಸೂಕ್ತ ಎಂದು ಪರಿಸರವಾದಿಗಳು ಅಭಿಪ್ರಾಯಪಟ್ಟಿದ್ದಾರೆ. ಬ್ಯಾಟರಿ ಶಕ್ತಿ ಶೇಖರಣಾ ವ್ಯವಸ್ಥೆ, ಸೌರಶಕ್ತಿಯಿಂದ ತಾರಸಿ ವಿದ್ಯುತ್ ಯೋಜನೆ ಹಾಗೂ ಸೂಕ್ಷ್ಮ ಜಲವಿದ್ಯುತ್ ಯೋಜನೆಯಂಥ ಪರ್ಯಾಯಗಳನ್ನು ಕಂಡುಕೊಳ್ಳುವ ಸಲಹೆಗಳೂ ವ್ಯಕ್ತವಾಗಿವೆ. ವಿದ್ಯುತ್ ಉತ್ಪಾದನೆಯ ಹೆಸರಿನಲ್ಲಿ ಭವಿಷ್ಯದಲ್ಲಿ ಬೆಂಗಳೂರಿಗೆ ನೀರು ಸಾಗಿಸುವ ಯೋಜನೆ ಇದಾಗಲಿದೆ ಎನ್ನುವ ಶಂಕೆಯೂ ಜನರಲ್ಲಿದೆ. ಒಂದು ವೇಳೆ, ಯೋಜನೆಯನ್ನು ಜಾರಿಗೊಳಿಸುವುದೇ ಆದಲ್ಲಿ, ಯೋಜನೆಯಿಂದ ಪರಿಸರದ ಮೇಲಾಗುವ ಪರಿಣಾಮಗಳ ಕುರಿತಂತೆ ಸ್ವತಂತ್ರ ಪರಿಸರ ಮೌಲ್ಯಮಾಪನವನ್ನು ಸರ್ಕಾರ ಹೊಸತಾಗಿ ನಡೆಸುವುದು ಅಗತ್ಯ. ಜೀವವೈವಿಧ್ಯ ತಾಣಗಳನ್ನು ಸಂರಕ್ಷಿಸುವ ಬದ್ಧತೆಯೊಂದಿಗೆ ಮುಕ್ತ ಸಮಾಲೋಚನೆ ನಡೆಯಬೇಕಾಗಿದೆ. ಎಲ್ಲಕ್ಕಿಂತಲೂ ಮುಖ್ಯವಾಗಿ, ಭೂಸ್ವಾಧೀನ, ಪುನರ್ವಸತಿ ಮತ್ತು ಪುನರ್ ವ್ಯವಸ್ಥೆ ಕಾಯ್ದೆ 2013ರ ಅನ್ವಯ ಸಂತ್ರಸ್ತ ಕುಟುಂಬಗಳಿಗೆ ನ್ಯಾಯಯುತ ಪರಿಹಾರ ದೊರಕಿಸಿಕೊಡುವುದರ ಜೊತೆಗೆ ಜೀವನೋಪಾಯಕ್ಕೆ ಅಗತ್ಯವಾದ ಎಲ್ಲ ನೆರವು ನೀಡಬೇಕಾಗಿದೆ. ಗುಣಮಟ್ಟದ ವಿದ್ಯುತ್‌ನ ಅಗತ್ಯ ರಾಜ್ಯಕ್ಕಿದೆ ಎನ್ನುವುದರಲ್ಲಿ ಅನುಮಾನವಿಲ್ಲ. ಆದರೆ, ಈ ಅಗತ್ಯ ಪೂರೈಕೆಗಾಗಿ ಅಮೂಲ್ಯ ಪರಿಸರ ಹಾಗೂ ನಾಗರಿಕರ ಘನತೆಯ ಬೆಲೆ ತೆರುವಂತೆ ಆಗಬಾರದು.

ಚುರುಮುರಿ... ಜಾಲಾಡಿ

ಬಿಜೆಪಿಗೇಕೆ ಸಿಟ್ಟು?

ಲೋಕಸಭಾ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಮತಗಳ್ಳತನದ ಎರಡು ಮಾದರಿಗಳನ್ನು ವಿವರಿಸಿ, ಅದಕ್ಕೆ ಪೂರಕವಾದ ವಿವರವನ್ನೂ ನೀಡಿದರು. ಬಿಜೆಪಿ ರೊಚ್ಚಿಗೆದ್ದು ರಾಹುಲ್ ಗಾಂಧಿ ಅವರ ಮೇಲೆ ಬೈಗುಳಗಳ ಮಳೆ ಸುರಿಸುತ್ತಿದೆ. ರಾಹುಲ್ ಗಾಂಧಿ ಅವರ ಆರೋಪ ಇದ್ದಿದ್ದು ಚುನಾವಣಾ ಆಯೋಗದ ಮೇಲೆ. ಆರೋಪಕ್ಕೆ ಉತ್ತರ ನೀಡಬೇಕಿರುವುದೂ ಆಯೋಗವೇ! ಬಿಜೆಪಿ ಯಾಕೆ ರೊಚ್ಚಿಗೆದ್ದಿದೆ ಅಂತ ಗೊತ್ತಾಗುತ್ತಿಲ್ಲ.

ದರ್ಶನ್ ಜೈನ್, 'ಫೇಸ್‌ಬುಕ್'ನಿಂದ

ಕಿಡಿನುಡಿ

ಮತಗಳ್ಳತನದ ಆರೋಪಕ್ಕೆ ಸಂಬಂಧಿಸಿದಂತೆ ರಾಹುಲ್ ಗಾಂಧಿ ಅವರನ್ನು ವಿಚಾರಣೆಗೆ ಒಳಪಡಿಸಬೇಕು. ದೇಶದೊಳಗೆ ಆಂತರಿಕ ಕಲಹ ಹೆಚ್ಚಿಸಲು ಈ ಆರೋಪ ಮಾಡಲಾಗುತ್ತಿದೆ. ಚುನಾವಣಾ ಆಯೋಗ, ತೆರಿಗೆ ಇಲಾಖೆ, ಜಾರಿ ನಿರ್ದೇಶನಾಲಯ ಸೇರಿ ಇತರ ಸಂಸ್ಥೆಗಳ ಮೇಲಿನ ವಿಶ್ವಾಸ ಹೋಗುವ ರೀತಿಯಲ್ಲಿ ಕಾಂಗ್ರೆಸ್ ಕೆಲಸ ಮಾಡುತ್ತಿದೆ.

ಶೋಭಾ ಕರಂದ್ಲಾಜೆ, ಕೇಂದ್ರ ಸಚಿವೆ

25 ವರ್ಷಗಳ ಹಿಂದೆ

ಬುಧವಾರ, 20-9-2000

• **ಮಲ್ಲೇಶ್ವರಿಗೆ ಚಾರಿತ್ರಿಕ ಒಲಿಂಪಿಕ್ಸ್ ಕಂಚಿನ ಪದಕ**

ಸಿಡ್ನಿ, ಸೆಪ್ಟೆಂಬರ್ 19– ಸಹಸ್ರಮಾನದ ಮೊದಲ ಒಲಿಂಪಿಕ್ಸ್‌ನಲ್ಲಿ ಕಂಚಿನ ಪದಕ ಗೆದ್ದಿರುವ ಕರ್ಣಮ್ ಮಲ್ಲೇಶ್ವರಿ, ಭಾರತದ ಹೆಮ್ಮೆಯ ಪುತ್ರಿ ಎನಿಸಿಕೊಂಡರು.

ಇಂದು ರಾತ್ರಿ ನಡೆದ ವೇಟ್ ಲಿಫ್ಟಿಂಗ್ ಮಹಿಳಾ 69 ಕೆ.ಜಿ ವಿಭಾಗದ ಸ್ಪರ್ಧೆಗಳು ಮುಗಿಯುತ್ತಿದ್ದಂತೆ ಅಲ್ಲಿನ ಸ್ಕೋರ್‌ಬೋರ್ಡ್‌ನಲ್ಲಿ ಮಲ್ಲೇಶ್ವರಿ ಅವರ ಹೆಸರು ಹೊಳೆಯತೊಡಗಿತು.

• **ಕಂಪ್ಯೂಟರೀಕೃತ ವಿದ್ಯುತ್ ಬಿಲ್**

ಬೆಂಗಳೂರು, ಸೆಪ್ಟೆಂಬರ್ 19– ರಾಜ್ಯ ವಿದ್ಯುತ್ ಪ್ರಸರಣ ನಿಗಮದಲ್ಲಿ ಭರದಿಂದ ಸಾಗಿರುವ ಸುಮಾರು 21 ಕೋಟಿ ರೂಪಾಯಿ ಅಂದಾಜು ವೆಚ್ಚದ 'ಕಂಪ್ಯೂಟರೀಕೃತ ಬಿಲ್ಲಿಂಗ್' ವ್ಯವಸ್ಥೆ ಮುಂದಿನ ಆರು ತಿಂಗಳಿನಲ್ಲಿ ಪೂರ್ಣಗೊಳ್ಳಲಿದೆ.

75 ವರ್ಷಗಳ ಹಿಂದೆ

ಬುಧವಾರ, 20-9-1950

• **ಇಟಲಿ, ಈಜಿಪ್ಟ್‌ನಿಂದ ಅಕ್ಕಿ ಪೂರೈಕೆ**

ಮದರಾಸ್, ಸೆಪ್ಟೆಂಬರ್ 18– ಇಟಲಿ ಮತ್ತು ಈಜಿಪ್ಟ್‌ನಿಂದ ಶೀಘ್ರವೇ ಭಾರತಕ್ಕೆ ಅಕ್ಕಿ ಪೂರೈಕೆಯಾಗುವ ನಿರೀಕ್ಷೆಯಿದೆ.

ಈ ಕುರಿತು ಮಾಹಿತಿ ನೀಡಿದ ಆಹಾರ ಸಚಿವರಾದ ರೋಚೆ ವಿಕ್ಟೋರಿಯ ಅವರು, 'ಅಲೆಕ್ಸಾಂಡ್ರಿಯಾ ಬಂದರಿನಲ್ಲಿ ಹಡಗೊಂದು ಭಾರತಕ್ಕೆ ಪೂರೈಸಲಿರುವ ಅಕ್ಕಿ ತುಂಬಿಕೊಂಡು ಹೊರಡಲು ಸಜ್ಜಾಗಿದೆ' ಎಂದು ಹೇಳಿದರು.

'ಕ್ಯಾಂಟಬರಿ'ಯ ಹೊಸ ಕಥೆ–ವ್ಯಥೆ

ವಿಶ್ಲೇಷಣೆ

ಟಿ.ಎಸ್. ಚನ್ನೇಶ್

> ಇಂಗ್ಲೆಂಡ್‌ನ 'ಕ್ಯಾಂಟಬರಿ ಕ್ರೈಸ್ಟ್ ವಿಶ್ವವಿದ್ಯಾಲಯ' ಇಂಗ್ಲಿಷ್ ಸಾಹಿತ್ಯದ ಪದವಿ ತರಗತಿಗಳನ್ನು ನಿಲ್ಲಿಸಿದೆ. ಇಂಗ್ಲಿಷ್ ಸಾಹಿತ್ಯದ ಅಧ್ಯಯನಕ್ಕೆ ತವರು ನೆಲದ ವಿಶ್ವವಿದ್ಯಾಲಯದಲ್ಲಿಯೇ ಆಸ್ಪದ ಇಲ್ಲದಾಗಿರುವುದು, ವರ್ತಮಾನದಲ್ಲಿ ಸಾಹಿತ್ಯದ ಅಧ್ಯಯನಕ್ಕೆ ಇರುವ ಸ್ಥಿತಿಗತಿಯ ಸಂಕೇತದಂತಿದೆ. ಇಂಗ್ಲಿಷ್ ಸಾಹಿತ್ಯದ ಸ್ಥಿತಿಯೇ ಹೀಗಿರುವಾಗ, ಕನ್ನಡ ಸಾಹಿತ್ಯದ ಗತಿಯೇನು?

ಇಂಗ್ಲೆಂಡ್‌ನ ಕೆಂಟ್ ಕೌಂಟಿಯ ಕ್ಯಾಂಟಬರಿಯಲ್ಲಿ ಇರುವ 'ಕ್ಯಾಂಟಬರಿ ಕ್ರೈಸ್ಟ್ ವಿಶ್ವವಿದ್ಯಾಲಯ' ಎರಡು ವರ್ಷಗಳ ಹಿಂದೆ, 2025ರಿಂದ ಇಂಗ್ಲಿಷ್ ಸಾಹಿತ್ಯದ ಪದವಿ ತರಗತಿಗಳನ್ನು ಮುಚ್ಚುವುದಾಗಿ ಪ್ರಕಟಿಸಿತ್ತು. 2024ರ ನವೆಂಬರ್–ಡಿಸೆಂಬರ್‌ನಲ್ಲಿ ಲಂಡನ್ ವಿಶ್ವವಿದ್ಯಾಲಯದ 'ಇನ್‌ಸ್ಟಿಟ್ಯೂಟ್ ಆಫ್ ಇಂಗ್ಲಿಷ್ ಸ್ಟಡೀಸ್'ನ ವಿದ್ವಾಂಸರೂ ಸೇರಿದಂತೆ ಹಲವಾರು ವಿದ್ವಾಂಸರು, ಇಂಗ್ಲಿಷ್ ಸಾಹಿತ್ಯದ ಅಧ್ಯಯನ ತರಗತಿಗಳನ್ನು ಮುಚ್ಚದಂತೆ ಒತ್ತಾಯಿಸಿದ್ದರು.

ಆಂಗ್ಲ ಸಾಹಿತ್ಯದಲ್ಲಿ ಕ್ಯಾಂಟಬರಿ ಊರಿಗಿರುವ ಪಾರಂಪರಿಕ ಮಹತ್ವ ಗಮನಿಸಿ, ಅಲ್ಲಿ ಪದವಿ ತರಗತಿಗಳನ್ನು ನಿಲ್ಲಿಸುವುದು ಸರಿಯಲ್ಲ ಎನ್ನುವ ವಿದ್ವಾಂಸರ ಆಗ್ರಹ ಜಗತ್ತಿನಾದ್ಯಂತ ಸುದ್ದಿಯಾಗಿತ್ತು. ಆ ಒತ್ತಾಯ–ಚರ್ಚೆ, 'ಬಿಬಿಸಿ', 'ದಿ ಗಾರ್ಡಿಯನ್', 'ದಿ ಟೆಲಿಗ್ರಾಫ್' ಸೇರಿದಂತೆ ಜಾಗತಿಕ ಮಾಧ್ಯಮಗಳಲ್ಲೂ ಪ್ರತಿಫಲಿಸಿತು. ಆದಾಗ್ಯೂ ವಿದ್ಯಾರ್ಥಿಗಳ ಸಂಖ್ಯೆಯಲ್ಲಿ ಇಳಿಕೆ, ಸಾಹಿತ್ಯದ ಅಧ್ಯಯನಕ್ಕೆ ಕಡಿಮೆ ಆಗುತ್ತಿರುವ ಬೆಂಬಲ, ಮುಂತಾದ ಕಾರಣಗಳನ್ನು ನೀಡಿ 2025ರ ಸೆಪ್ಟೆಂಬರ್‌ನಿಂದ ಇಂಗ್ಲಿಷ್ ಸಾಹಿತ್ಯದ ಸ್ನಾತಕ ಪದವಿಗಳ ಪ್ರವೇಶವನ್ನು ಕ್ಯಾಂಟಬರಿ ಕ್ರೈಸ್ಟ್ ವಿಶ್ವವಿದ್ಯಾಲಯ ನಿಲ್ಲಿಸಿದೆ. ಸ್ನಾತಕೋತ್ತರ ಪದವಿ ಹಾಗೂ ಸಂಶೋಧನಾ ಪದವಿ ಮುಂದುವರಿಯಲಿವೆ. ಈ ವಿದ್ಯಮಾನ, ಕ್ಯಾಂಟಬರಿ ಸ್ಥಳಕ್ಕೆ ಆಂಗ್ಲ ಸಾಹಿತ್ಯದಲ್ಲಿ ಇರುವ ಮಹತ್ವವನ್ನು ಗಮನಿಸಿದರೆ ದೊಡ್ಡದೊಂದು ಆಘಾತವೇ ಸರಿ.

'ಕ್ಯಾಂಟಬರಿ ಟೇಲ್ಸ್' ಇಂಗ್ಲಿಷ್ ಸಾಹಿತ್ಯದ ಪಿತಾಮಹ ಜೆಫ್ರಿ ಚಾಸರ್ ಅವರ 24 ಕಥೆಗಳ ಸಂಕಲನ, ಆಂಗ್ಲ ಸಾಹಿತ್ಯದ ಅಧ್ಯಯನಕ್ಕೊಂದು ಪ್ರವೇಶವೂ ಹೌದು. ಯುನೆಸ್ಕೊ ಹೆರಿಟೇಜ್ ನಗರವಾದ ಕ್ಯಾಂಟಬರಿಗಾಗಿಯೇ ಸಂಕಲನದಲ್ಲಿನ ಕಥೆಗಳು ರೂಪುಗೊಂಡಿವೆ. ಲಂಡನ್‌ನಿಂದ ಕ್ಯಾಂಟಬರಿಯ ಕ್ಯಾಥೆಡ್ರಲ್‌ನ ಸೇಂಟ್ ಥಾಮಸ್ ಬೆಕೆಟ್ ದೇವಾಲಯದ ಸಂದರ್ಶನಕ್ಕೆಂದು ಹೋಗುವ ಮಾರ್ಗದಲ್ಲಿ ಯಾತ್ರಾರ್ಥಿಗಳು ಹೇಳುವ ಕಥೆಗಳ ಸ್ಪರ್ಧೆಯಲ್ಲಿ ರೂಪುಗೊಂಡ ಕಾವ್ಯಾತ್ಮಕವಾದ ಕಥನಗಳಿವು. ಸಾಹಿತ್ಯದಿಂದ ಸಾಧ್ಯ ಆಗುವ ದಣಿವಿನ ನಿವಾರಣೆ ಹಾಗೂ ಉಲ್ಲಾಸದ ಆನಂದವನ್ನು ಕೊಡುವ ಚಾಸರ್‌ನ ಈ ಅತ್ಯದ್ಭುತ ಕೃತಿ ಇಂದಿಗೂ ಆಂಗ್ಲ ಸಾಹಿತ್ಯದ ಪ್ರವೇಶಿಕೆಯೇ!

ವಿಶ್ವಪ್ರಸಿದ್ಧ ನಾಟಕಕಾರ ವಿಲಿಯಂ ಷೇಕ್ಸ್‌ಪಿಯರ್‌ಗೆ ಪ್ರೇರಣೆಯನ್ನು ಕೊಟ್ಟ ನಾಟಕಕಾರ, ಕವಿ ಕ್ರಿಸ್ಟೊಫರ್ ಮಾರ್ಲೊ ಜನ್ಮಸ್ಥಳ ಎನ್ನುವುದು ಕ್ಯಾಟಂಬರಿಯ ಮತ್ತೊಂದು ಅಗ್ಗಳಿಕೆ. ಕ್ರಿಸ್ಟೊಫರ್ ಮಾರ್ಲೊನ ನಂತರದ ಮತ್ತೋರ್ವ ನಾಟಕಕಾರ, ಕವಿ ಅಫ್ರಾ ಬೆನ್ ಹುಟ್ಟೂರು ಕೂಡ. ಈ ಸಾಹಿತ್ಯಿಕ, ಸಾಂಸ್ಕೃತಿಕ ಹಿನ್ನೆಲೆಯಿಂದಾಗಿ ಕ್ಯಾಂಟಬರಿಯನ್ನು 1988ರಲ್ಲಿ ಪಾರಂಪರಿಕ ನಗರವೆಂದು ಯುನೆಸ್ಕೊ ಘೋಷಿಸಿದೆ. ಇಂಥ ಕ್ಯಾಂಟಬರಿಯಲ್ಲಿ ಆಂಗ್ಲ ಸಾಹಿತ್ಯದ ಪದವಿಯ ಓದು ನಿಲ್ಲುವುದು, ಈಗಾಗಲೇ ಹಿಮ್ಮುಖವಾಗಿ ನಡೆದಿರುವ ಮೂಲ ವಿಜ್ಞಾನ, ಮಾನವಿಕ ಹಾಗೂ ಕಲೆಯ ಅಧ್ಯಯನಗಳ ಪ್ರಸ್ತುತ ಪರಿಸ್ಥಿತಿಯಲ್ಲಿ ಒಂದು ಎಚ್ಚರಿಕೆಯ ಗಂಟೆಯೇ ಸರಿ.

ಇತ್ತೀಚೆಗೆ ಹಲವಾರು ವಿಶ್ವವಿದ್ಯಾಲಯಗಳು ಬೋಧನಾಶುಲ್ಕ, ಆಡಳಿತಶುಲ್ಕ ಮುಂತಾದವುಗಳ ಸಂಗ್ರಹದಿಂದ ವಹಿವಾಟು ನಡೆಸುವ ಸ್ಥಾವರಗಳಾಗಿವೆ. ವಿದ್ಯಾರ್ಥಿಯು ವ್ಯಾಸಂಗಕ್ಕೆ ಖರ್ಚು ಮಾಡಿದ ಹಣದ ಮರುಗಳಿಕೆಯ ಲೆಕ್ಕಾಚಾರ ಪ್ರಸಕ್ತ ಸಂದರ್ಭದಲ್ಲಿ ಬಹುಚರ್ಚಿತ ಸಂಗತಿಯಾಗಿದೆ. ಇದನ್ನೇ ಒಂದು ಬಗೆಯಲ್ಲಿ ಜಾಹೀರಾತು ಮಾದರಿಯಲ್ಲಿ ಶೈಕ್ಷಣಿಕ ಸಂಸ್ಥೆಗಳು ಮಾಹಿತಿಯಾಗಿಸಿ ಹಂಚುವುದು ಕೂಡ ಅನೇಕ ಕೋರ್ಸ್‌ಗಳ ಹಿನ್ನಡೆಗೆ ಕಾರಣವಾಗಿದೆ. ಹಿಂದೊಮ್ಮೆ ಶೈಕ್ಷಣಿಕ ತಾಣಗಳೆಂದರೆ ಕಲಿಯುವ ಆಸಕ್ತಿಗೆ ಬೆಂಬಲವಾಗುವ ಸ್ಥಳಗಳೆಂಬ ಹೆಗ್ಗಳಿಕೆ ಇತ್ತು. ವಿಶ್ವವಿದ್ಯಾಲಯದ ಪ್ರಮುಖ ಗುರಿಯು, ಕಲಿಕೆಯ ಅಗತ್ಯದ ಎಲ್ಲಾ ವಿಭಾಗಗಳನ್ನೂ ತೆರೆಯುವುದಾಗಿತ್ತು. ಇತ್ತೀಚೆಗೆ, ಲಾಭ–ನಷ್ಟದ ಲೆಕ್ಕಾಚಾರ ಮುಂದೊಡ್ಡಿ, ಕೆಲವು ವಿಭಾಗಗಳನ್ನು ವ್ಯವಸ್ಥಿತವಾಗಿ ಮುಚ್ಚುವುದು ಬಹುತೇಕ ವಿಶ್ವವಿದ್ಯಾಲಯಗಳಲ್ಲಿ ಸಾಮಾನ್ಯವಾಗಿದೆ.

ಇಂಗ್ಲೆಂಡಿನಲ್ಲೇ ಇಂಗ್ಲಿಷ್ ಸಾಹಿತ್ಯದ ಅಧ್ಯಯನ ಕಷ್ಟಕರ ಎನ್ನುವುದಾದರೆ, ಇತರ ಭಾಷೆಗಳ ಸಾಹಿತ್ಯದ ಗತಿ ಏನು? ಕನ್ನಡದ ಸಂದರ್ಭದಲ್ಲೂ ಒಂದು ಭಾಷೆಯಾಗಿ ಅದರ ಅಧ್ಯಯನವು ಉಳಿದರೂ, ಸಾಹಿತ್ಯದ ಅಧ್ಯಯನವು ಮೊದಲಿನಂತೆ ಇಲ್ಲದ ಪರಿಸ್ಥಿತಿ ಖಂಡಿತಾ ಬಂದೀತು. ಇನ್ನು ಮುಂದಂತೂ ಕಲೆ, ಮಾನವಿಕ ಅಧ್ಯಯನಗಳಿಗೆ ಉಂಟಾಗಬಹುದಾದ ಹಿನ್ನಡೆಗಳನ್ನು ನಿಭಾಯಿಸಲು ಅನುಸರಿಸಬೇಕಾದ ಅಥವಾ ಬದಲಾವಣೆಯನ್ನು ಸಹಿಸಿಕೊಂಡೂ ಮಾಡಬಹುದಾದ ಚಟುವಟಿಕೆಗಳಿಗೆ ತೊಡಗುವುದು ಅನಿವಾರ್ಯವಾಗಲಿದೆ.

'ಕೃತಕ ಬುದ್ಧಿಮತ್ತೆ' (ಎ.ಐ.) ಪ್ರವೇಶದಿಂದ ಸಾಹಿತ್ಯ ಕ್ಷೇತ್ರದಲ್ಲಿ ಆಗಬಹುದಾದ ಪಲ್ಲಟಗಳ ಕುರಿತು ಬರಹಗಾರರ ಆತಂಕದ ಮಾತುಗಳನ್ನು ಈಗಾಗಲೇ ಕೇಳುತ್ತಿದ್ದೇವೆ. ಮಾನವರೇ ನಿರ್ವಹಿಸುವ ಅನೇಕ ಕೆಲಸಗಳು 'ಎ.ಐ.'ನಿಂದಾಗಿ ಬದಲಾಗಲಿವೆ ಅಥವಾ ಮನುಷ್ಯರ ಕೈತಪ್ಪುವ ಸುದ್ದಿಗಳೂ ಚಾಲ್ತಿಯಲ್ಲಿವೆ. 'ದ ಗೋಲ್ಡ್‌ಮನ್ ಸಾಚ್' ಕಂಪನಿಯ ವರದಿಯಂತೆ, ಜಗತ್ತಿನ ಶೇ 18ರಷ್ಟು, ಸುಮಾರು 300 ದಶಲಕ್ಷ ಪೂರ್ಣ ಪ್ರಮಾಣದ ಕೆಲಸಗಳು 'ಎ.ಐ.'ನಿಂದಾಗಿ ವ್ಯತ್ಯಯಗೊಳ್ಳಲಿವೆ. ಆದರೆ, ಮಸಾಚುಸೆಟ್ಸ್ ತಾಂತ್ರಿಕ ಸಂಸ್ಥೆಯ ಅಧ್ಯಯನದಲ್ಲಿ, 'ಅದೊಂದು ಸುಲಭವಲ್ಲದ ಹೆಚ್ಚು ಖರ್ಚಿನ ಬಾಬತ್ತು' ಎಂದು ಸಂಸ್ಥೆಯ 'ಬಿಯಾಂಡ್ ಎ.ಐ. ಎಕ್ಸ್‌ಪೋಷರ್' ಹೆಸರಿನ ಸಂಶೋಧಕರ ಗುಂಪೊಂದು ಅಭಿಪ್ರಾಯಪಟ್ಟಿದೆ.

ಶೈಕ್ಷಣಿಕ ಸಮಾಜಕ್ಕೆ ಬಹುದೊಡ್ಡ ಚಾರಿತ್ರಿಕ ಪಾಠವಾಗಿ ಮಹತ್ವದ್ದಾಗಿರುವ ಕ್ಯಾಂಟಬರಿ ವಿಶ್ವವಿದ್ಯಾಲಯದ ಪ್ರಸಕ್ತ ಬೆಳವಣಿಗೆಯನ್ನು ಗಮನಿಸಿದರೆ, ನಾವೀಗ ಬದಲಾಗಬೇಕಾದುದು ಅನಿವಾರ್ಯ ಹಾಗೂ ಬದಲಾವಣೆಗೆ ಬೇಕಾದ ತಯಾರಿಯನ್ನು ಮಾಡದೇ ವಿಧಿಯಿಲ್ಲ. ಇದು ಬರೀ ಸಾಹಿತ್ಯಕ್ಕೆ ಸೀಮಿತವಾದ ಸಂಗತಿಯಲ್ಲ. ಏಕೆಂದರೆ, ಈಗಾಗಲೇ ಮಾರುಕಟ್ಟೆ ಆಧಾರಿತ ಪದವಿಗಳನ್ನು ಜಾಹೀರಾತು ಮಾಡುವಲ್ಲಿ ಬಹುತೇಕ ವಿಶ್ವವಿದ್ಯಾಲಯಗಳು ತೊಡಗಿವೆ. ಖಾಸಗಿ ವಿಶ್ವವಿದ್ಯಾಲಯಗಳು ಹಾಗೂ ಶೈಕ್ಷಣಿಕ ಸಂಸ್ಥೆಗಳಿಂದ ಈ ಬೆಳವಣಿಗೆಗಳು ತೀವ್ರ ಗತಿಯಲ್ಲಿ ಸಾಗುತ್ತಿವೆ. ಹಾಗಾಗಿ, ಬಹುಪಾಲು ಕೃಷಿಯ ಕೆಲಸಗಳನ್ನು ಹೊರತುಪಡಿಸಿ ನ್ಯಾಯಾಂಗ, ವೈದ್ಯಕೀಯ, ಶಿಕ್ಷಣದಂತಹ ವೃತ್ತಿಗಳನ್ನೂ 'ಎ.ಐ.' ಪ್ರಭಾವಿಸಲಿದೆ ಎಂಬುದಂತೂ ಸತ್ಯ.

ಸಾಹಿತ್ಯದ ಅಧ್ಯಯನವನ್ನಷ್ಟೇ ಯೋಚಿಸುವುದಾದರೆ, ಸಾಹಿತ್ಯವು ಹೊಸ ಮಾರ್ಗಗಳನ್ನು ಹಿಡಿಯದೇ ಅನ್ಯದಾರಿಯಿಲ್ಲ. ವಿಜ್ಞಾನ–ಗಣಿತದಂತಹ ಮಾನವ ನಿರ್ಮಿತಿಯ ಅಭಿವ್ಯಕ್ತಿಯನ್ನು ಬರೀ ಮಾಹಿತಿಯೆಂಬಂತೆ ಅರ್ಥೈಸುವ ಸಾಹಿತ್ಯದ ತಿಳಿವಳಿಕೆ ಬದಲಾಗಲೇಬೇಕಿದೆ. ಕನ್ನಡ ಭಾಷೆಯನ್ನು ಕಂಪ್ಯೂಟರ್ ಕಲಿಕೆಗೆ ಅಳವಡಿಸುವ ಸಂಶೋಧನೆಯ ಅಧ್ಯಯನದಲ್ಲಿ ಆಸಕ್ತನಾಗಿರುವ ವಿದ್ಯಾರ್ಥಿ ಹೇಳಿದ್ದು ಹೀಗಿದೆ: 'ಕನ್ನಡ ಭಾಷೆಯ ಕಂಪ್ಯೂಟರ್ ಕಲಿಕೆಯಲ್ಲಿ ಅಳವಡಿಸಲು ಪಂಪ, ರನ್ನ, ಲಕ್ಷ್ಮೀಶ, ಹರಿಹರ, ರಾಘವಾಂಕ, ವಚನಕಾರರು, ಕೀರ್ತನಕಾರರ ಸಾಹಿತ್ಯ ಮಾರ್ಗವೇ ಸಾಕು. ಪ್ರಸ್ತುತ ರೂಪುಗೊಳ್ಳುತ್ತಿರುವ ಸಾಹಿತ್ಯದ ಉಪಯೋಗ ಏನೂ ಇಲ್ಲ'. ಈ ಮಾತು, ಕನ್ನಡದಲ್ಲಿ ಬರೆಯುತ್ತಿರುವ ನನಗೂ ಒಂದು ಎಚ್ಚರಿಕೆಯಂತೆ ಭಾಸವಾಗುತ್ತಿದೆ.

ಬದಲಾಗುತ್ತಿರುವ ಡಿಜಿಟಲ್ ಸಮಾಜದಲ್ಲಿ ಸಾಹಿತ್ಯದ ಸ್ಥಾನ, ಇತರ ಮಾನವಿಕ ಅವಶ್ಯಕತೆಗಳಲ್ಲಿ ಒಂದೆನ್ನುವ ರೂಪದಲ್ಲಿ ಇರಬೇಕಾಗಿದೆ. ಸಾಹಿತ್ಯದ ಅಧ್ಯಯನವು ವಿಶ್ವವಿದ್ಯಾಲಯಗಳಿಂದ ಹೊರ ಬಂದು ಹೊಸ ರೂಪವನ್ನೂ ತಳೆದು, ಸಾರ್ವಜನಿಕ ಸಾಂಗತ್ಯವನ್ನು ಪಡೆಯಬೇಕಿದೆ. ಇದಕ್ಕೆ ಅನುವಾಗುವಂತಹ ಕಲಿಕೆಯನ್ನು ಶೈಕ್ಷಣಿಕ ಸಂಸ್ಥೆಗಳು ನಡೆಸುವುದು ಅನಿವಾರ್ಯ. ಸಾಹಿತ್ಯ ಚರಿತ್ರೆಯನ್ನು ಗಮನಿಸಿದರೆ, ಪಾರಂಪರಿಕ ಸಾಹಿತ್ಯದ ಬೆಳವಣಿಗೆಯು ಹಿಮ್ಮುಖವಾಗಿ ಚಲಿಸುತ್ತಿರುವಂತೆ ಕಾಣಿಸುವುದು ಸಹಜ. ಬೆಳೆಯುತ್ತಿರುವ ತಾಂತ್ರಿಕ ಅನುಶೋಧಗಳನ್ನು ದೂರುತ್ತಾ, ವಿಜ್ಞಾನವನ್ನು ಖಳನಂತೆ ಗುರುತಿಸುತ್ತಲೇ ಅದರ ಬಳಕೆಯನ್ನು ಒಪ್ಪಿಕೊಂಡಿದ್ದೇವೆ. ತಂತ್ರಜ್ಞಾನದ ಬೆಳವಣಿಗೆಗಳು ಮನುಷ್ಯನ ಮನಸ್ಸಿನ ಆಲೋಚನೆಯ ನಿರಂತರತೆಯ ಆವಿಷ್ಕಾರ. ಆ ಆವಿಷ್ಕಾರ, ಮಾರುಕಟ್ಟೆಯ ಅಸ್ತ್ರಗಳಾಗುವುದು, ಲಾಭದ ಹುನ್ನಾರದ ಮನುಷ್ಯನ ಹಿತಾಸಕ್ತಿ ಆಗಿರುವುದೂ ದುರದೃಷ್ಟಕರ.

ಸದ್ಯದ ಸಂದಿಗ್ಧ ಪರಿಸ್ಥಿತಿಯಲ್ಲಿ, ಸಾಹಿತ್ಯದ ಕನಿಷ್ಠ ಹಿತಾಸಕ್ತಿಯನ್ನು ಉಳಿಸುವುದು ಎಂದರೆ, ಬದಲಾವಣೆ ಅಪ್ಪಿಕೊಂಡೇ ಮುಂದುವರಿಯುವುದು. ಡಿಜಿಟಲ್ ಹ್ಯುಮಾನಿಟಿ, ಡಿಜಿಟಲ್ ಕಥೆ ಹೇಳುವುದು, ಪರಿಸರಾತ್ಮಕ ಆಲೋಚನೆಯ ಸಾಹಿತ್ಯ ಸೃಷ್ಟಿ, ವಿಜ್ಞಾನ ಹಾಗೂ ತಂತ್ರಜ್ಞಾನದ ಮಾನವಿಕ ಬೆಸುಗೆಯ ಸಾಹಿತ್ಯ ಇಂದಿನ ತುರ್ತು. ಕೇವಲ ಮಾಹಿತಿ ಹಂಚಿಕೆಯಂತಹ ಶಿಕ್ಷಣದ ಕಲಿಕೆಯು ಬೇಕಿಲ್ಲ. ಮಾಹಿತಿಗಾಗಿ ವಿದ್ವಾಂಸ/ಶಿಕ್ಷಕರನ್ನು ಅವಲಂಬಿಸದಿರುವ ದಿನಗಳು ಈಗಾಗಲೇ ಆರಂಭವಾಗಿವೆ. ಆಲೋಚನೆಗಳನ್ನು ಉತ್ಪನ್ನಗಳಾಗಿಸುವ ವಿಧಾನಗಳಿಗೆ ಎಂದಿಗೂ ಬೇಡಿಕೆ ಕಡಿಮೆಯಾಗುವುದಿಲ್ಲ ಎಂಬುದು ಹಲವಾರು ಅಧ್ಯಯನಕಾರರ ಅಭಿಪ್ರಾಯ. ಬದಲಾವಣೆಯ ಪ್ರಕ್ರಿಯೆಯಲ್ಲಿ ಸಾಹಿತ್ಯಿಕ ಅಧ್ಯಯನವು ಸುಲಭದ ಗುರಿಯಾಗಿ ಕಾಣಿಸಬಹುದು. ಆದರೆ, ಅದನ್ನು ಬದಲಾವಣೆಗಳ ಬೆಸುಗೆಯಿಂದ ಆಕರ್ಷಕವಾಗಿ ಎರಕಹೊಯ್ದರೆ ಸೂಕ್ತ ಮಾರ್ಗಗಳನ್ನು ಹುಡುಕಲು ಸಾಧ್ಯವಿದೆ. ಇಂತಹ ಸಾಧ್ಯತೆಗಳಿಗೆ ವಿಶ್ವವಿದ್ಯಾಲಯಗಳು ಕೇವಲ ಪದವಿ ನೀಡುವ ಸಂಸ್ಥೆಗಳಷ್ಟೇ ಆಗದೆ, ಕಲಿಕೆಯನ್ನು ಹೊರ ಸಮಾಜದ ಸೃಷ್ಟಿಗಳಿಗೆ ಬೆಸೆಯುವುದು ಅಗತ್ಯವಾಗಿದೆ. ವಿಶ್ವವಿದ್ಯಾಲಯಗಳು ತಿಳಿವನ್ನು ಸೃಜಿಸುವ ಸಂಸ್ಥೆಗಳಾಗಲು ಹೆಚ್ಚು ಹೆಚ್ಚು ಶ್ರಮಿಸುವ ಅನಿವಾರ್ಯತೆಯಿದೆ.

ವಾಚಕರ ವಾಣಿ

ಪೋಪ್ ಬಗ್ಗೆ ಹಗುರ ಮಾತು ಸಲ್ಲ

ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯನ್ನು ಟೀಕಿಸುವ ಭರದಲ್ಲಿ ಶಾಸಕ ವಿ. ಸುನಿಲ್ ಕುಮಾರ್ ಅವರು, 'ಸಿದ್ದರಾಮಯ್ಯನವರು ಕರ್ನಾಟಕದ ಪೋಪ್ ಆಗಲು ಹೊರಟಿದ್ದಾರೆ' ಎಂದು ಹೇಳಿದ್ದಾರೆ (ಪ್ರ.ವಾ., ಸೆ. 19). ಪೋಪ್ ಆಯ್ಕೆ ಹೇಗೆ ನಡೆಯುತ್ತದೆ ಎಂಬ ಕನಿಷ್ಠ ಮಾಹಿತಿಯೂ ಶಾಸಕರಿಗೆ ಇದ್ದಂತಿಲ್ಲ. ಸಮುದಾಯವೊಂದರ ಅತ್ಯುನ್ನತ ಪವಿತ್ರ ಸ್ಥಾನದ ಬಗ್ಗೆ ಹಗುರವಾಗಿ ಮಾತನಾಡುವುದು ಅವರಿಗೆ ಶೋಭೆ ತರುವುದಿಲ್ಲ. ರಾಜಕೀಯ ನಿಲುವು, ಭಿನ್ನಮತವನ್ನು ಸೌಜನ್ಯ ಹಾಗೂ ಸಂವಾದದ ಚೌಕಟ್ಟಿನಲ್ಲಿಯೇ ವ್ಯಕ್ತಪಡಿಸುವುದು ಅತ್ಯಂತ ಸಮಂಜಸ.

ಪ್ರಶಾಂತ್ ಇಗ್ನೇಷಿಯಸ್, ಬೆಂಗಳೂರು

ಕಲ್ಯಾಣ: ಸಾಕಾರವಾಗುವುದು ಯಾವಾಗ?

ಪ್ರತಿವರ್ಷ ಸೆಪ್ಟೆಂಬರ್ 17 ಬಂದಾಗ 'ಕಲ್ಯಾಣ ಕರ್ನಾಟಕ ಉತ್ಸವ' ನೆನಪಾಗುತ್ತದೆ. ಕಲ್ಯಾಣ ಕರ್ನಾಟಕದ ಅಭಿವೃದ್ಧಿ ಕುರಿತು ಮಾತನಾಡಲು ಅಥವಾ ನೆನಪಿಸಿಕೊಳ್ಳಲು ವರ್ಷದಲ್ಲಿ ಒಂದೇ ದಿನ ಅನ್ನುವಂತಾಗಿದೆ. 'ಕಲ್ಯಾಣ' ಎನ್ನುವುದು ಕೇವಲ ಹೆಸರಿನಲ್ಲಿದೆಯೇ ವಿನಾ ಯಾವುದೇ ಅಭಿವೃದ್ಧಿಯಲ್ಲಿಲ್ಲ. ಯಾದಗಿರಿ, ರಾಯಚೂರು, ಕಲಬುರಗಿ, ಬೀದರ್, ಕೊಪ್ಪಳ ಜಿಲ್ಲೆಗಳ ಜನರು ಉದ್ಯೋಗ ಅರಸಿ ಮಹಾನಗರಗಳಿಗೆ ಗುಳೆ ಹೋಗುತ್ತಿದ್ದಾರೆ.

ಶಿಕ್ಷಕರ ಕೊರತೆಯಿಂದಾಗಿ ಎಸ್‌ಎಸ್‌ಎಲ್‌ಸಿ ಮತ್ತು ಪಿಯು ಫಲಿತಾಂಶ ಕುಸಿಯುತ್ತಿದೆ. ಶಾಲೆ ಬಿಡುವ ಮಕ್ಕಳ ಸಂಖ್ಯೆ ಹೆಚ್ಚಾಗುತ್ತಿದೆ. ಸ್ಥಳೀಯರಿಗೆ ಉದ್ಯೋಗಾವಕಾಶ ಕಲ್ಪಿಸಿ ಗುಣಮಟ್ಟದ ಶಿಕ್ಷಣ ದೊರೆತಾಗಷ್ಟೇ ಹೆಸರಿಗೆ ತಕ್ಕಂತೆ ಕಲ್ಯಾಣವಾಗುತ್ತದೆ.

ಭಾಗ್ಯ ಎಸ್. ಬುಳ್ಳಾ, ಕಲಬುರಗಿ

ಯುದ್ಧ ಮತ್ತು ಬದಲಾಗದ ಜಗತ್ತು

ಇಸ್ರೇಲ್ 'ಸಾಮೂಹಿಕ ಹತ್ಯೆ' ಮಾಡಲು ಏಕಸ್ವಾಮ್ಯ ಪಡೆದುಕೊಂಡಿರುವಂತೆ ತೋರುತ್ತಿದೆ. 2023ರ ಅಕ್ಟೋಬರ್ 7ರಂದು ಇಸ್ರೇಲ್ ಮೇಲೆ ಹಮಾಸ್ ಉಗ್ರರು ಪ್ಯಾರಾಚ್ಯೂಟ್ ಮೂಲಕ ನಡೆಸಿದ ದಾಳಿಯು ಅತ್ಯಂತ ಹೇಯವಾದುದು. ಇದನ್ನು ಗಂಭೀರವಾಗಿ ಪರಿಗಣಿಸಿದ ಇಸ್ರೇಲ್, ಗಾಜಾಪಟ್ಟಿಯನ್ನು ಕೇಂದ್ರವನ್ನಾಗಿಸಿಕೊಂಡು ಯುದ್ಧ ಆರಂಭಿಸಿತು. ಇದರಿಂದ ಮಕ್ಕಳು, ಮಹಿಳೆಯರು, ವೃದ್ಧರು ಪಡುತ್ತಿರುವ ಬವಣೆ ಕುರಿತು ವಿಶ್ವಸಂಸ್ಥೆಯ ಅಧ್ಯಯನ ಸಮಿತಿ ಬೆಳಕು ಚೆಲ್ಲಿದೆ. ಆದರೆ, ಬೆಂಜಮಿನ್ ನೆತನ್ಯಾಹು ಅವರ ಯುದ್ಧೋನ್ಮಾದ ತಗ್ಗಿಲ್ಲ.

ರಷ್ಯಾ ಮತ್ತು ಉಕ್ರೇನ್ ಯುದ್ಧವೂ ನಿಂತಿಲ್ಲ. ಇನ್ನೊಂದೆಡೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ದಿನಕ್ಕೊಂದು ಹೇಳಿಕೆ ನೀಡುತ್ತಿದ್ದಾರೆ. ಜಗತ್ತು ಎತ್ತ ಸಾಗಿದೆ ಎನ್ನುವುದೇ ತಿಳಿಯುತ್ತಿಲ್ಲ. ನೆರೆಮನೆಗೆ ಹೊತ್ತಿದ ಬೆಂಕಿ ನಮ್ಮ ಮನೆಗೆ ಪಸರಿಸದೆ ಇರದು. ವಿಶ್ವದ ನಾಯಕರು ಜಗತ್ತಿನಲ್ಲಿ ಶಾಂತಿ ನೆಲೆಸುವಂತೆ ಮಾಡಿಯಾರೇ?

ಸರೋಜಿನಿ, ಹೊಸನಗರ

ಮುಖ್ಯಮಂತ್ರಿಗಳೇ, ಮಾತು ಉಳಿಸಿಕೊಳ್ಳಿ

ಅಧಿಕಾರಕ್ಕೆ ಬಂದ ಒಂದು ವರ್ಷದೊಳಗೆ ಖಾಲಿ ಇರುವ ಎಲ್ಲಾ ಸರ್ಕಾರಿ ಹುದ್ದೆಗಳನ್ನು ತುಂಬುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಘೋಷಿಸಿತ್ತು. ಕಳೆದ ಮೂರು ವರ್ಷಗಳಿಂದ ಮೂವತ್ತು ಸಾವಿರಕ್ಕೂ ಹೆಚ್ಚು ಉದ್ಯೋಗಗಳು ಖಾಲಿಯಾಗಿದ್ದು, ಖಾಲಿ ಹುದ್ದೆಗಳ ಸಂಖ್ಯೆ 2.84 ಲಕ್ಷಕ್ಕೇರಿದೆ. ಸದ್ಯ ಪರಿಶಿಷ್ಟ ಜಾತಿಯ ಒಳಮೀಸಲಾತಿ ಸಮಸ್ಯೆಯೂ ಬಗೆಹರಿದಿದೆ. ಈ ಬಗೆಗಿನ ಕಾನೂನು ತೊಡಕು ನಿವಾರಿಸಿ ತ್ವರಿತವಾಗಿ ಹೊಸ ನೇಮಕಾತಿ ಪ್ರಕ್ರಿಯೆ ಆರಂಭಿಸಬೇಕಿದೆ.

ವಿಕಾಸಕುಮಾರ್ ಬಲಶೆಟ್ಟಿಹಾಳ, ಯಾದಗಿರಿ

ಬದುಕಿದ್ದಾಗಲೇ ಗೌರವಿಸೋಣ

ಚಿತ್ರನಟರಾದ ವಿಷ್ಣುವರ್ಧನ್ ಹಾಗೂ ಬಿ. ಸರೋಜಾದೇವಿ ಅವರಿಗೆ 'ಕರ್ನಾಟಕ ರತ್ನ' ಪ್ರಶಸ್ತಿ ಘೋಷಿಸಿರುವುದು ಸರಿಯಷ್ಟೆ. ವ್ಯಕ್ತಿಯೊಬ್ಬ ತನ್ನ ಕ್ಷೇತ್ರದಲ್ಲಿ ಕಠಿಣ ಪರಿಶ್ರಮ, ತ್ಯಾಗ ಮತ್ತು ನಿಷ್ಠೆಯಿಂದ ಸಾಧನೆ ಮಾಡಿದಾಗ ಸಮಾಜದಿಂದ ಗುರುತಿಸುವಿಕೆ ಮತ್ತು ಗೌರವ ದೊರಕಬೇಕು. ಆದರೆ, ಬಹುತೇಕ ವೇಳೆ ಸಾಧಕರಿಗೆ ಅವರ ಜೀವಿತಾವಧಿಯಲ್ಲಿ ಸೂಕ್ತ ಗೌರವ ಸಿಗುವುದಿಲ್ಲ. ಬದುಕಿರುವಾಗಲೇ ಅವರಿಗೆ ಗೌರವ – ಪುರಸ್ಕಾರ ದೊರೆತರೆ, ಅವರ ಆತ್ಮವಿಶ್ವಾಸ ಹೆಚ್ಚುತ್ತದೆ. ಇನ್ನಷ್ಟು ಉತ್ತಮ ಕಾರ್ಯ ಮಾಡಲು ಅವರಿಗೆ ಪ್ರೇರಣೆ ದೊರಕುತ್ತದೆ.

ಪ್ರಶಸ್ತಿ ಎನ್ನುವುದು ಕೇವಲ ಸಂಕೇತವಲ್ಲ, ಅದು ವ್ಯಕ್ತಿಯ ಜೀವನದ ಸಾಧನೆಗೆ ದೊರೆಯುವ ಮನ್ನಣೆ. ಸಮಾಜದಲ್ಲಿ ವಿಜ್ಞಾನ, ಕಲೆ, ಸಾಹಿತ್ಯ, ಶಿಕ್ಷಣ, ಕ್ರೀಡೆ ಮುಂತಾದ ಕ್ಷೇತ್ರಗಳಿಗೆ ಅಸಾಧಾರಣ ಕೊಡುಗೆ ನೀಡಿದವರಿದ್ದಾರೆ. ಬದುಕಿರುವಾಗಲೇ ಅವರ ಸೇವೆ ಗುರುತಿಸಿ ಪ್ರಶಸ್ತಿ, ಪುರಸ್ಕಾರ ನೀಡುವ ಪರಿಪಾಟಕ್ಕೆ ರಾಜ್ಯ ಸರ್ಕಾರ ಮುಂದಾಗಬೇಕಿದೆ.

ಮಂಜುನಾಥ ಜಿ. ಪಾಲವ್ವನಹಳ್ಳಿ, ಚಿತ್ರದುರ್ಗ

ಕಣ್ಣೀರು ಸುರಿಸುತ್ತಿರುವ ನದಿಗಳು!

ಕೈಗಾರಿಕೆಗಳ ತ್ಯಾಜ್ಯ ಸೇರ್ಪಡೆಯಾಗುವುದರಿಂದ ಕರ್ನಾಟಕದ 12 ನದಿಗಳು ಮಲಿನವಾಗಿವೆ. ಈ ಕುರಿತು ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಯು ಜಲಶಕ್ತಿ ಸಚಿವಾಲಯಕ್ಕೆ ವರದಿಯನ್ನೂ ನೀಡಿದೆ. ಆದರೆ, ಈ ಬಗ್ಗೆ ಸಮರ್ಪಕ ಕ್ರಮ ಕೈಗೊಳ್ಳದಿರುವ ಕಾರಣದಿಂದಾಗಿ, ರಾಷ್ಟ್ರೀಯ ಹಸಿರು ನ್ಯಾಯ ಮಂಡಳಿಯು ಸ್ವಯಂ ಪ್ರೇರಿತವಾಗಿ ಪ್ರಕರಣ ದಾಖಲಿಸಿಕೊಂಡು ವಿಚಾರಣೆ ನಡೆಸುತ್ತಿರುವುದು ಪರಿಸರಪ್ರಿಯರಿಗೆ ಖುಷಿ ತಂದಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರ, ನದಿಗಳ ನೀರು ಮಲಿನವಾಗದಂತೆ ತಡೆಯುವ ಬಗ್ಗೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಿ.

ಪ್ರೊ. ಬಸಪ್ಪ ಯ. ಬಂಗಾರಿ, ಬೆಂಗಳೂರು

ಚುರುಮುರಿ

ರೊಮ್ಯಾಂಟಿಕ್ ಪೇಯ್ನ್!

• ಚಂದ್ರಕಾಂತ ವಡ್ಡು

'ಧರ್ಮಸ್ಥಳದಲ್ಲಿ ಬುರುಡೆಗಳಾದರೂ ಸಿಕ್ಕಾವು... ನಮ್ಮ ಮನೆಯಲ್ಲಿ ಬೂಟುಗಳೇ ಸಿಗಲಾರವು...' ಬೆಳಗಿನ ವಿಹಾರಕ್ಕೆ ಹೊರಟಿದ್ದ ತಿಂಗಳೇಶ, ಹೆಂಡತಿಯೆದುರು ಗೊಣಗಿದ.

'ನಿಮ್ಮದು ಪ್ರತಿದಿನ ಇದ್ದದ್ದೇ ಗೋಳು. ನಿನ್ನೆ ವಾಕಿಂಗ್‌ನಿಂದ ಬಂದು ಎಲ್ಲಿ ಬಿಚ್ಚಿಟ್ಟಿದ್ದಿರಿ?'

'ಅದು ಗೊತ್ತಿದ್ರೆ ನಿನ್ನನ್ಯಾಕೆ ಕೇಳ್ತಿದ್ದೆ? ಆ ನಿನ್ನ ಮಗ ಎಲ್ಲಾದ್ರೂ ಬಚ್ಚಿಟ್ಟಿದ್ದಾನು ಕೇಳಿನೋಡು'.

'ನಾನೇನೋ ಷಡ್ಯಂತ್ರ ಮಾಡಿದಂತೆ ಆಡ್ತೀರಲ್ಲ, ಅಷ್ಟಕ್ಕೂ ಬಚ್ಚಿಡಲು ಅವೇನು ಕಡತಗಳಾ? ನಾನೇನು ಸರ್ಕಾರಿ ನೌಕರನಾ? ಲಕ್ಷಾಂತರ ಲಂಚ ಕೊಟ್ಟು ಹುದ್ದೆಗೆ ಬಂದಿದ್ದೀನಾ?' ಮಗನೂ ಬಿಸಿಯಾದ.

'ಹೋಗಲಿ ಬಿಡಿ, ನಮ್ಮಲ್ಲೇಕೆ ಒಳಜಗಳ? ಒಂದು ಎಸ್‌ಐಟಿ ರಚಿಸಿದರೆ ಆಯ್ತು, ಬೂಟು ಎಲ್ಲಿದ್ದರೂ ಹೊರಗೆ ಬರುತ್ತವೆ'.

'ಕಾಡಿನಲ್ಲಿ ಮೂಳೆ ಶೋಧನೆಯೇ ಮುಗಿದಿಲ್ಲ, ಕಾಡು ಪತ್ತೆಗೆ ಮತ್ತೊಂದು ಎಸ್‌ಐಟಿ ಮಾಡಿದ್ದಾರೆ. ಈಗ ಬೂಟು ಹುಡುಕಲು ಹೊಸ ಎಸ್‌ಐಟಿ. ಸರಿಹೋಯ್ತು... ವಾಹಿನಿಗಳಿಗೆ ಸುದ್ದಿಯೋ ಸುದ್ದಿ, ರಾಜಕಾರಣಿಗಳಿಗೆ ಸುಗ್ಗಿಯೋ ಸುಗ್ಗಿ!'.

'ಊರ ಉಸಾಬರಿಯಲ್ಲೇ ನಿಮ್ಮ ಆಯುಷ್ಯ ಮುಗಿಯಿತು. ಮನೆಯವರ ಬಗ್ಗೇನೂ ಯೋಚಿಸಿ'.

'ನಿನಗೇನಮ್ಮಾ ಕಡಿಮೆಯಾಗಿದೆ? ವರಮಹಾಲಕ್ಷ್ಮೀ ಹಬ್ಬಕ್ಕೆ ಹತ್ತು ಸಾವಿರದ ಸೀರೆ, ಅಕ್ಷಯ ತೃತೀಯಕ್ಕೆ ಚಿನ್ನ, ಗೌರಿಹಬ್ಬಕ್ಕೆ ಬಾಗಿನ, ಊರುಜಾತ್ರೆಗೆ ಕೈತುಂಬಾ ಬಳೆ... ಇನ್ನೇನು ಬೇಕು?'

'ಅದೆಲ್ಲಾ ಸರಿ, ನಮ್ಮ ರೊಮ್ಯಾಂಟಿಕ್ ಪೇಯ್ನ್ ಯಾರಿಗೆ ಹೇಳಿಕೊಳ್ಳೋಣ...?'

'ಅಯ್ಯಯ್ಯೋ... ನಿನಗ್ಯಾಕೇ ಈ ವಯಸ್ಸಿನಲ್ಲಿ ರೊಮ್ಯಾಂಟಿಕ್ ಪೇಯ್ನು...?' ಎನ್ನುತ್ತಲೇ ತಿಂಗಳೇಶ ಉತ್ತೇಜಿತನಾದ!

'ನಿನ್ನೆ ಮಂಡೆನೋವು ಅಂತ ಡಾಕ್ಟರ ಹತ್ತಿರ ಹೋಗಿದ್ದೆ, ಈ ಪೇಯ್ನು ವಯಸ್ಸಾದವರಿಗೇ ಬರೋದಂತೆ. ಅದೇನೇನೋ ವಿವರಿಸಿದರು, ನನಗೇನೂ ಅರ್ಥವಾಗಲಿಲ್ಲ'.

'ಅವನ್ಯಾರೋ ಪ್ರಣಯಾಂತಕ ಡಾಕ್ಟರು ಇರಬೇಕು'.

'ಅಪ್ಪಾ... ನೀನೇನೂ ಖುಷಿ ಪಡಬೇಡ. ಅಮ್ಮನಿಗೆ ಬಂದಿರೋದು ಕೀಲುಗಳ ರುಮ್ಯಾಟಿಕ್ ಪೇಯ್ನ್' ಎಂದು ಅಪ್ಪನ ಉತ್ಸಾಹ ಠುಸ್ಸೆನಿಸಿದ ಮಗ!

ಸಂಗತ

ನೋವಿಗೆ ವಿಮುಖ–ಭಾವುಕತೆಗೆ ಮನ್ನಣೆ

ಮಹಿಳೆಯರು ಕೇಳುವ ಬಹುತೇಕ ಪ್ರಶ್ನೆಗಳನ್ನು ಸಮಾಜ ಜಾಣ್ಮೆಯಿಂದ ಬದಿಗೆ ಸರಿಸಿ ಮೌನವಾಗಿರುವುದೇ ಹೆಚ್ಚು. ಆ ಧೋರಣೆ ಈಗಲೂ ಮುಂದುವರಿದಿದೆ.

• ನಾ. ದಿವಾಕರ

ಕರ್ನಾಟಕದ ವರ್ತಮಾನದ ಸಾರ್ವಜನಿಕ ಸಂಕಥನದಲ್ಲಿ ಎರಡು ಮುಖ್ಯ ಕವಲುಗಳು ಕಾಣುತ್ತಿವೆ. ಮೊದಲನೆಯದು, ರಾಜ್ಯದಾದ್ಯಂತ ನಿರಂತರವಾಗಿ, ಶಿಕ್ಷೆಯ ಆತಂಕವೂ ಇಲ್ಲದೆ ಮಹಿಳೆಯರ ಮೇಲೆ ನಡೆಯುತ್ತಿರುವ ದೌರ್ಜನ್ಯ, ಅತ್ಯಾಚಾರ ಮತ್ತು ಅಮಾಯಕರ ಕಗ್ಗೊಲೆಗಳು. ಸಾಮಾಜಿಕ ದೌರ್ಜನ್ಯ ಹಾಗೂ ಪಿಡುಗಿನ ರೂಪದಲ್ಲಿ ಕಾಣುತ್ತಿರುವುದು ಬಾಲ್ಯವಿವಾಹ ಮತ್ತು ಬಾಲಗರ್ಭಿಣಿಯರ ಹೆಚ್ಚಳ. ಮತ್ತೊಂದು ಸಂಕಥನ: ಮತೀಯತೆಯ ಪ್ರಹಸನಗಳು ಹಾಗೂ ದ್ವೇಷ ರಾಜಕಾರಣಕ್ಕೆ ಪೂರಕವಾದ ಸಾರ್ವಜನಿಕ ಚರ್ಚೆಗಳು. ಈ ಎರಡೂ ವಿದ್ಯಮಾನಗಳನ್ನು ತುಲನಾತ್ಮಕವಾಗಿ ನೋಡಿದಾಗ, ನಮ್ಮ ಸಾಮಾಜಿಕ ಪ್ರಜ್ಞೆ ಎಷ್ಟು ಪಾತಾಳಕ್ಕೆ ಕುಸಿದಿದೆ ಎನ್ನುವುದು ಅನುಮಾನಕ್ಕೆ ಆಸ್ಪದ ಇಲ್ಲದಂತೆ ಸ್ಪಷ್ಟವಾಗುತ್ತದೆ.

ಕರ್ನಾಟಕದ ಮಹಿಳಾ ಸಂಘಟನೆಗಳು ಮುಂದಿಟ್ಟಿರುವ ಒಂದು ಪ್ರಶ್ನೆ: 'ಕೊಂದವರು ಯಾರು?'. ಬಹುಶಃ, ವರ್ತಮಾನದ ಸಮಾಜ ಉತ್ತರಿಸಲಾಗದ, ಅರಗಿಸಿಕೊಳ್ಳಲಾಗದ ಒಂದು ಜಿಜ್ಞಾಸೆಯಿದು. ಏಕೆಂದರೆ, ಈ ಪ್ರಶ್ನೆಯ ಹಿಂದೆ ಅತ್ಯಾಚಾರಕ್ಕೆ ಒಳಗಾಗಿರುವ, ಹತ್ಯೆಗೀಡಾಗಿರುವ, ದೌರ್ಜನ್ಯಕ್ಕೀಡಾಗಿರುವ ನೂರಾರು ಮಹಿಳೆಯರ ನೋವಿನ ದನಿ ಅಡಗಿದೆ. ಈ ಪ್ರಶ್ನೆಗೆ ಉತ್ತರಿಸುವ ನೈತಿಕ ಜವಾಬ್ದಾರಿ ಇರುವುದು ಸರ್ಕಾರ, ಕಾನೂನು ವ್ಯವಸ್ಥೆ ಮತ್ತು ಜನಪ್ರತಿನಿಧಿಗಳಿಗೆ. ಇದನ್ನೂ ಮೀರಿ ನಮ್ಮ ಸುಶಿಕ್ಷಿತ–ನಾಗರಿಕ ಎಂದು ಗುರುತಿಸಿಕೊಳ್ಳುವ ಹಿತವಲಯದ ಸಮಾಜಕ್ಕೆ. ಕೊಂದವರು ಯಾರು ಎಂಬ ಪ್ರಶ್ನೆಯ ಹಿಂದೆ ಇರುವುದು ಮಾನವೀಯ ಅಂತಃಕರಣ, ಸಹಾನುಭೂತಿ ಮತ್ತು ಮನುಜ ಸೂಕ್ಷ್ಮತೆಯ ಭಾವನೆಗಳು. ಈ ಪ್ರಶ್ನೆ ಮುನ್ನೆಲೆಗೆ ಬಂದಿರುವುದೇ ನಮ್ಮ ಆಳ್ವಿಕೆ ಮತ್ತು ಕಾನೂನು ವ್ಯವಸ್ಥೆಯ ನಿರ್ಲಕ್ಷ್ಯ, ವೈಫಲ್ಯ ಮತ್ತು ನಿಷ್ಕ್ರಿಯತೆಯನ್ನು ಎತ್ತಿ ತೋರಿಸುತ್ತದೆ.



ಆಡಳಿತದ ಅಸೂಕ್ಷ್ಮತೆಯೇನೂ ಅಚ್ಚರಿ ಮೂಡಿಸುವುದಿಲ್ಲ. ಅದಕ್ಕೆ ಬದಲಾಗಿ ಸೋಜಿಗ ಎನಿಸುವುದು, ಅಧಿಕಾರ ರಾಜಕಾರಣದ ಮೂಲಕ, ಸಾಮಾಜಿಕ ಚಟುವಟಿಕೆಗಳ ಮೂಲಕ ಹಾಗೂ ಸಾಂಸ್ಕೃತಿಕ ಚಿಂತನೆಗಳ ಮುಖೇನ ಸಮಾಜದಲ್ಲಿ ನಡೆಯುವ ಎಲ್ಲ ರೀತಿಯ ಅಮಾನವೀಯ ಘಟನೆಗಳಿಗೂ ಸ್ಪಂದಿಸುವ ನೈತಿಕ ಜವಾಬ್ದಾರಿ ಇರುವ ಒಂದು ಸಾಮಾಜಿಕ ವರ್ಗದ ವರ್ತನೆ. ಜನಪ್ರತಿನಿಧಿಗಳಿಗೆ, 'ಜನತೆ' ಎನ್ನುವುದೇ ವಿಭಜಿಸಿ ನೋಡುವ ಒಂದು ಜಗತ್ತು ಆಗಿಹೋಗಿದೆ. ಆದರೆ, ಸಕ್ರಿಯವಾಗಿರುವ ವಿಭಜಿತ ರಾಜಕಾರಣದಾಚೆಗೆ, ಸಮಾಜದಲ್ಲಿ ಸದಾ ಸದ್ದು ಮಾಡುವ ಒಂದು ವರ್ಗ ಸಾಮಾಜಿಕವಾಗಿ ಯಾವಾಗಲೂ ಸಕ್ರಿಯವಾಗಿರುತ್ತದೆ. ಈ ವರ್ಗವೂ ದೌರ್ಜನ್ಯಗಳಿಗೆ ಕುರುಡಾಗುವುದು ಹಾಗೂ ಕಿವುಡಾಗುವುದು, ಅಸ್ಮಿತೆ ಆಧಾರಿತ ಸಾಂಸ್ಕೃತಿಕ ರಾಜಕಾರಣದ ಒಂದು ದುರಂತ ಆಯಾಮ.

ಹೆಣ್ಣುಮಕ್ಕಳು 'ಕೊಂದವರು ಯಾರು?' ಎಂದು ನೋವಿನಿಂದ ಕೇಳುತ್ತಿರುವ ಸಂದರ್ಭದಲ್ಲೇ, ವಿಶಾಲ ಸಮಾಜದ ಪ್ರತಿನಿಧಿಗಳು ಹಾಗೂ ಸಾಂಸ್ಕೃತಿಕ ದನಿಗಳು, ಯಾರೋ ಒಬ್ಬ ಮತಿಹೀನನ 'ಜಿಂದಾಬಾದ್' ಘೋಷಣೆಯನ್ನು ಮುನ್ನೆಲೆಗೆ ತರುತ್ತವೆ; ಹಾದಿ ತಪ್ಪಿದ ಯುವಕರ ಕಲ್ಲೆಸೆತ, ಬಾನು ಮುಷ್ತಾಕ್ ಅವರಿಂದ ದಸರಾ ಉದ್ಘಾಟನೆ ರೀತಿಯ ವಿಚಾರಗಳ ಸುತ್ತ ತಮ್ಮ ನಿರೂಪಣೆಗಳನ್ನು, ವೀರಾವೇಶದ ಘೋಷಣೆಗಳನ್ನು, ಸಮೀಪ ದೃಷ್ಟಿಯ ಅನಿಸಿಕೆಗಳನ್ನು ಸಾರ್ವಜನಿಕ ಸಂಕಥನದ ಮುಖ್ಯ ಭಾಗವನ್ನಾಗಿ ಮಾಡುತ್ತಿದ್ದಾರೆ. ಈ ಮೂಲಕ ಸಮಾಜ ಚರ್ಚಿಸಲೇಬೇಕಾದ ಸಂಗತಿಗಳನ್ನು ಹಿನ್ನೆಲೆಗೆ ಸರಿಸಲಾಗುತ್ತದೆ. ಸಮಾಜವನ್ನು ಕಾಡುತ್ತಿರುವ ಜೀವಹಾನಿಯ ಜಟಿಲ ಸಮಸ್ಯೆಗಳ ಬಗ್ಗೆ ಈ ಗುಂಪಿನಿಂದ ಒಂದೇ ಒಂದು ಕೀರಲು ಧ್ವನಿಯೂ ಕೇಳಿಬರುವುದಿಲ್ಲ.

ಕಣ್ಣೆದುರಿನ ದೌರ್ಜನ್ಯಗಳಿಗೆ, ಹಿಂಸೆ–ಅತ್ಯಾಚಾರಗಳಿಗೆ ಸಮಾಜದ ಒಂದು ದೊಡ್ಡ ವರ್ಗ ಕುರುಡಾಗಿರುವುದು ದುರದೃಷ್ಟಕರ. ಮಹಿಳೆಯರ ಪ್ರಶ್ನೆಗೆ ಉತ್ತರಿಸಬೇಕಾದ ನೈತಿಕಪ್ರಜ್ಞೆ ಇರುವ ಸಮಾಜವೊಂದು ಹೀಗೆ ವಾಸ್ತವಕ್ಕೆ ಕುರುಡಾಗಿ, ರೋಚಕತೆಗೆ, ಭಾವನಾತ್ಮಕತೆಗೆ, ಸ್ವಹಿತಾಸಕ್ತಿಯ ಭಾವಾವೇಶಗಳಿಗೆ ಕಣ್ತೆರೆಯುವುದು ಸಮಾಜದ ನೈತಿಕ ಅಧಃಪತನದ ಸಂಕೇತವಾಗಿಯೇ ಕಾಣುತ್ತದೆ.

'ಸಂಸ್ಕೃತಿ' ಎಂಬ ವಿಶಾಲ ಅರ್ಥದ ಪದವನ್ನು ಪ್ರಸ್ತುತ 'ಧರ್ಮ' ಎಂಬ ನಿರ್ದಿಷ್ಟ ಸಾಂಸ್ಥಿಕ ವಿದ್ಯಮಾನಕ್ಕೆ ಸಂವಾದಿಯಾಗಿ ಬಳಸಲಾಗುತ್ತಿದೆ. ಈ ಮೂಲಕ, ನಮ್ಮ ಸಮಾಜ, ಅದರೊಳಗಿನ ಒಂದು ಮುಂದುವರಿದ–ಸುಶಿಕ್ಷಿತ– ಹಿತವಲಯದ ವರ್ಗ, ಮನುಷ್ಯನಲ್ಲಿ ಇರಬೇಕಾದ ಮಾನವೀಯ ಸಂಸ್ಕೃತಿಯನ್ನೇ ನಗಣ್ಯಗೊಳಿಸುತ್ತಿದೆ.

ಈ ಜಟಿಲ ಪ್ರಶ್ನೆಗೆ ನಾವು ಉತ್ತರ ಶೋಧಿಸಬೇಕಿದೆ. ಸಾರ್ವಜನಿಕವಾಗಿ ಗುರುತಿಸಿಕೊಳ್ಳುವ ಅಥವಾ ಅಲ್ಲೊಂದು ಅವಕಾಶ/ಸ್ಥಾನ ಕಲ್ಪಿಸಿಕೊಳ್ಳುವ ಸಾಂಘಿಕ, ಸಾಂಸ್ಥಿಕ, ವೈಯಕ್ತಿಕ ಪ್ರಯತ್ನಗಳು ನಮ್ಮ ಯುವ ಸಮಾಜದ ಒಂದು ವರ್ಗವನ್ನು ದಿಕ್ಕುತಪ್ಪಿಸುತ್ತಿರುವುದು ಈ ಹೊತ್ತಿನ ದುರಂತ, ಆಧುನಿಕತೆ ಮತ್ತು ನಾಗರಿಕತೆಯ ಚೋದ್ಯ. ನೊಂದವರ ವೇದನೆಗಳಿಗೆ ವಿಮುಖವಾದ ಸಮಾಜವನ್ನು ನಾಗರಿಕ ಎನ್ನುವುದಾದರೂ ಹೇಗೆ?

'ಸ್ತ್ರೀಮತವನುತ್ತರಿಸಲಾಗದೆ ಧರ್ಮಶಾಸ್ತ್ರದೊಳು' ಎನ್ನುವ ಕುಮಾರವ್ಯಾಸನ ದ್ರೌಪದಿಯ ಪ್ರಶ್ನೆಗೆ, ಕುರುಸಭೆಯಲ್ಲಿ ಉತ್ತರ ಇರಲಿಲ್ಲ. ಆ ಪ್ರಶ್ನೆಯೇ ಈಗ ಬೇರೊಂದು ರೂಪದಲ್ಲಿ ಎದುರಾಗಿದೆ. ಆದರೆ, ಉತ್ತರಿಸಬೇಕಾದವರ ಜಾಣ ಮೌನ ಎಂದಿನಂತೆ ಮುಂದುವರಿದಿದೆ. ಉತ್ತರ ದೊರಕದ ಪ್ರಶ್ನೆಗಳು ಮುಂದುವರಿದಿವೆ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

22ರಿಂದ ರಾಜ್ಯದಾದ್ಯಂತ ಮಾಹಿತಿ ಸಂಗ್ರಹ

ಸಾಮಾಜಿಕ–ಶೈಕ್ಷಣಿಕ ಸಮೀಕ್ಷೆ
ಆಧಾರ್ ಆಧಾರ

• ಜಯಸಿಂಹ ಆರ್.

ರಾಜ್ಯ ಹಿಂದುಳಿದ ವರ್ಗಗಳ ಆಯೋಗವು ನಡೆಸಲಿರುವ 'ಸಾಮಾಜಿಕ–ಶೈಕ್ಷಣಿಕ ಸಮೀಕ್ಷೆ'ಗೆ ಆಧಾರ್ ಸಂಖ್ಯೆಯೇ ಆಧಾರ. ಸಮೀಕ್ಷೆಗೆ ಒಳಪಡುವವರು ತಮ್ಮ ಪಡಿತರ ಚೀಟಿ ವಿವರ ಅಥವಾ ಜಾತಿ ಪ್ರಮಾಣ ಪತ್ರವನ್ನು ನೀಡಬೇಕು. ಇವೆರಡೂ ಲಭ್ಯವಿಲ್ಲದೇ ಇದ್ದರೆ, ಆಧಾರ್ ನೀಡಬಹುದು.

ಪಡಿತರ ಚೀಟಿ ಇದ್ದೂ ಅದರಲ್ಲಿ ಕುಟುಂಬದ ಸದಸ್ಯರ ಹೆಸರು ನಮೂದಾಗದ ಸಂದರ್ಭದಲ್ಲಿ, ಅವರ ಆಧಾರ್ ಸಂಖ್ಯೆ ನೀಡಲೇಬೇಕಾಗುತ್ತದೆ. ಹೀಗೆ ಆಧಾರ್ ಸಂಖ್ಯೆಯನ್ನು ಬಳಸಿಕೊಂಡು, ನಿವಾಸಿಯೊಬ್ಬರ ವಿವರ ಹಲವು ಬಾರಿ ನಮೂದಾಗುವುದನ್ನು ತಡೆಯುವ ರೀತಿಯಲ್ಲಿ ಸಮೀಕ್ಷಾ ವ್ಯವಸ್ಥೆಯನ್ನು ರೂಪಿಸಲಾಗಿದೆ.

ಈ ಸಮೀಕ್ಷೆಗಾಗಿ ರೂಪಿಸಿರುವ ಆ್ಯಪ್‌ನಲ್ಲಿ ಕುಟುಂಬದ ಮುಖ್ಯಸ್ಥನ ಆಧಾರ್ ಕಾರ್ಡ್ ವಿವರವನ್ನು ನಮೂದಿಸಿದ ಕೂಡಲೇ, ಅದಕ್ಕೆ ಜೋಡಣೆಯಾಗಿರುವ ಪಡಿತರ ಚೀಟಿಯ ವಿವರ ಸ್ವಯಂಚಾಲಿತವಾಗಿ ಗೋಚರವಾಗುತ್ತದೆ. ಆ ಕುಟುಂಬದ ಸಂಪೂರ್ಣ ವಿವರವೂ ಭರ್ತಿಯಾಗುತ್ತದೆ. ಒಂದೊಮ್ಮೆ ಕುಟುಂಬದ ಮುಖ್ಯಸ್ಥ ಪಡಿತರ ಚೀಟಿಯ ವಿವರ ನೀಡಿದರೆ, ಅದರಲ್ಲಿ ನಮೂದಾಗಿರುವ ಕುಟುಂಬದ ಸದಸ್ಯರ ಎಲ್ಲ ವಿವರಗಳೂ ಭರ್ತಿಯಾಗುತ್ತವೆ. ಪಡಿತರ ಚೀಟಿ ವಿವರ ನೀಡಿದ್ದರೂ ಅದರ ವಿವರಗಳು ಭರ್ತಿಯಾಗದಿದ್ದರೆ, ಅಂತಹವರು ಆಧಾರ್ ವಿವರವನ್ನು ಕಡ್ಡಾಯವಾಗಿ ನೀಡಬೇಕು.

ಅಲೆಮಾರಿ ಸಮುದಾಯಗಳ ಜನರೂ ಆಧಾರ್/ಪಡಿತರ ಚೀಟಿ/ಜಾತಿ ಪ್ರಮಾಣ ಪತ್ರ ಹೊಂದಿದ್ದರಷ್ಟೇ ಅವರನ್ನು ಸಮೀಕ್ಷೆಗೆ ಒಳಪಡಿಸಲಾಗುತ್ತದೆ. ಸಮೀಕ್ಷೆ ಪೂರ್ಣಗೊಳಿಸಲು ಕುಟುಂಬದ ಮುಖ್ಯಸ್ಥನ ಫೋಟೊ ತೆಗೆಯಬೇಕು. ಆದರೆ ಫೋಟೊ ತೆಗೆಸಿಕೊಳ್ಳಲು ಆತ ನಿರಾಕರಿಸಲು ಅವಕಾಶವಿದೆ. ಹಾಗೆ ನಿರಾಕರಿಸುವುದಾದರೆ, ಆ ವ್ಯಕ್ತಿಯು ತನ್ನ ಆಧಾರ್/ಪಡಿತರ ಚೀಟಿ/ಜಾತಿ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಒದಗಿಸಲೇಬೇಕಾಗುತ್ತದೆ.

ಈ ಸಮೀಕ್ಷೆಯನ್ನು ರಾಜ್ಯದ ನಿವಾಸಿಗಳಿಗಷ್ಟೇ ಸೀಮಿತವಾಗಿ ನಡೆಸಲಾಗುತ್ತಿದೆ. ಹೀಗಾಗಿ ಹೊರರಾಜ್ಯದ ನಿವಾಸಿಗಳನ್ನು ಸಮೀಕ್ಷೆಗೆ ಒಳಪಡಿಸುವುದಿಲ್ಲ. ಸಮೀಕ್ಷೆಗೆ ವಿವರ ಸಂಗ್ರಹಿಸುವಾಗ ಆಧಾರ್ ಮತ್ತು ಪಡಿತರ ಚೀಟಿಯಲ್ಲಿ ಇರುವ ವಿಳಾಸಗಳನ್ನು ಪರಿಶೀಲಿಸಲಾಗುತ್ತದೆ. ಅದರಲ್ಲಿನ ವಿಳಾಸವು ಹೊರರಾಜ್ಯದ್ದಾಗಿದ್ದರೆ, ಅವರ ವಿವರಗಳನ್ನು ಸಂಗ್ರಹಿಸಲಾಗುತ್ತದೆ.

ಇನ್ನು ಪಡಿತರ ಚೀಟಿ ಮತ್ತು ಜಾತಿ ಪ್ರಮಾಣ ಪತ್ರ ಎರಡನ್ನೂ ಹೊಂದಿಲ್ಲದವರು ಆಧಾರ್ ವಿವರವನ್ನು ಕಡ್ಡಾಯವಾಗಿ ನೀಡಲೇಬೇಕು. ಇದರ ಬದಲಿಗೆ ಮತದಾರರ ಗುರುತಿನ ಚೀಟಿ, ಪಾಸ್‌ಪೋರ್ಟ್ ವಿವರ, ಪ್ಯಾನ್ ವಿವರಗಳನ್ನು ಬಳಸಲು ಅವಕಾಶವಿಲ್ಲ. ಆಧಾರ್ ಸಂಖ್ಯೆ ಇಲ್ಲದಿದ್ದರೂ ಆಧಾರ್ ನೋಂದಣಿ ಸಂಖ್ಯೆಯನ್ನಾದರೂ ನೀಡಲೇಬೇಕು. ಹೀಗಾಗಿ, ಸಮೀಕ್ಷೆ ಎದುರು ನೋಡುತ್ತಿರುವ ನಾಗರಿಕರು ತಮ್ಮ ಆಧಾರ್ ವಿವರಗಳನ್ನು ಸಿದ್ಧವಾಗಿ ಇರಿಸಿಕೊಳ್ಳುವುದು, ಸಮೀಕ್ಷೆಯನ್ನು ಸುಲಭವಾಗಿಸಲಿದೆ. ಪಡಿತರ ಚೀಟಿ ಅಥವಾ ಜಾತಿ ಪ್ರಮಾಣ ಪತ್ರ ನೀಡಿದರೂ, ಅದಕ್ಕೆ ಜೋಡಣೆಯಾಗಿರುವ ಕಾರಣಕ್ಕೆ ಆಧಾರ್‌ನ ವಿವರಗಳು ಆ್ಯಪ್‌ಗೆ ದತ್ತವಾಗುತ್ತದೆ. ಈ ಮೂರೂ ದಾಖಲೆ ಪತ್ರಗಳ ವಿವರಗಳು ಪರಸ್ಪರ ದೃಢೀಕರಣಕ್ಕೆ ಬಳಕೆಯಾಗುತ್ತವೆ. ಹೀಗಾಗಿಯೇ ಈ ಸಮೀಕ್ಷೆಗೆ ಆಧಾರ್ ಸಂಖ್ಯೆಯೇ ಆಧಾರವಾಗಿದೆ.

ರಾಜ್ಯದಲ್ಲಿ 2015ರಲ್ಲಿ ನಡೆಸಲಾದ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯಲ್ಲಿ ಸಮೀಕ್ಷಕರು ಜನರಿಂದ ಮಾಹಿತಿ ಪಡೆದರು

ನಾಸ್ತಿಕರಿಗೂ ಉಂಟು ಜಾಗ

ಸಮೀಕ್ಷೆಗೆ ಒಳಪಡುವವರು ಧರ್ಮದ ಕಾಲಂನಲ್ಲಿ ಹಿಂದೂ ಅಥವಾ ಇಸ್ಲಾಂ ಅಥವಾ ಕ್ರೈಸ್ತ ಅಥವಾ ಜೈನ ಅಥವಾ ಬೌದ್ಧ ಅಥವಾ ಪಾರ್ಸಿ ಅಥವಾ ಸಿಖ್ ಧರ್ಮೀಯರು ಎಂದು ಆಯ್ಕೆ ಮಾಡಿಕೊಳ್ಳಲು ಅವಕಾಶ ಮಾಡಿಕೊಡಲಾಗಿದೆ. ನಾಗರಿಕರು ತಾವು ನಾಸ್ತಿಕರೆಂದೂ ಅಥವಾ ಧರ್ಮ ಗೊತ್ತಿಲ್ಲವೆಂದೂ ಆಯ್ಕೆ ಮಾಡಿಕೊಳ್ಳಬಹುದಾಗಿದೆ. ಧರ್ಮದ ಹೆಸರು ಹೇಳದೇ ಇರಲೂ ಅವಕಾಶವಿದೆ.

ಇದರ ಜತೆಯಲ್ಲಿ 'ಇತರೆ' ಎಂದು ಆಯ್ಕೆ ಮಾಡಿ, ಆ ಇತರೆ ಧರ್ಮ ಯಾವುದು ಎಂಬುದನ್ನು ನಮೂದಿಸಲೂ ಅವಕಾಶವಿದೆ. ಇದು ರಾಜ್ಯದ ಕೆಲವು ಜಾತಿ ಸಮುದಾಯಗಳಲ್ಲಿ ಗೊಂದಲಕ್ಕೆ ಕಾರಣವಾಗಿದೆ.

ಎಲ್ಲ ಜಾತಿ ಸಮುದಾಯಗಳು ತಮ್ಮ ಸಂಖ್ಯೆ ಕಡಿಮೆಯಾಗಬಾರದು ಎಂದು, ಜಾತಿಯ ಕಾಲಂನಲ್ಲಿ ಉಪಜಾತಿಯ ಹೆಸರನ್ನು ಬರೆಯಿಸಬಾರದು ಎಂದು ಕರೆ ನೀಡುತ್ತಿವೆ.

ವೀರಶೈವರೋ, ಲಿಂಗಾಯತರೋ, ಹಿಂದೂಗಳೋ... ಗೊಂದಲದ ಗೂಡು

'ವೀರಶೈವ ಲಿಂಗಾಯತರು ಹಿಂದೂಗಳಲ್ಲ. ಹಿಂದೂ ಧರ್ಮಕ್ಕೂ ನಮಗೂ ಸಂಬಂಧವಿಲ್ಲ. ಹೀಗಾಗಿ ನಮ್ಮ ಸಮುದಾಯದ ಜನರು ಧರ್ಮದ ಕಾಲಂನಲ್ಲಿ 'ಇತರೆ' ಎಂಬುದನ್ನು ಆಯ್ಕೆ ಮಾಡಿಕೊಳ್ಳಬೇಕು. ಜತೆಗೆ 'ವೀರಶೈವ ಲಿಂಗಾಯತ ಧರ್ಮ' ಎಂದು ನಮೂದಿಸಬೇಕು. ಜಾತಿಯ ಕಾಲಂನಲ್ಲಿ 'ವೀರಶೈವ' ಅಥವಾ 'ಲಿಂಗಾಯತ' ಅಥವಾ 'ವೀರಶೈವ ಲಿಂಗಾಯತ' ಎಂದು ಬರೆಯಿಸಬೇಕು. ಉಪಜಾತಿಗಳಲ್ಲಿ, ಉಪಜಾತಿಗಳ ಹೆಸರನ್ನು ಬರೆಯಿಸಬೇಕು' ಎಂದು ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಕರೆ ನೀಡಿದೆ.

ಜಾಗತಿಕ ಲಿಂಗಾಯತ ಮಹಾಸಭಾವು, 'ಲಿಂಗಾಯತರು ಹಿಂದೂಗಳಲ್ಲ, ಜತೆಗೆ ವೀರಶೈವರೂ ಅಲ್ಲ. ವೀರಶೈವರು ಮತ್ತು ಪಂಚಾಚಾರ್ಯರು ಬಸವಣ್ಣನನ್ನು ಅನುಸರಿಸುವುದಿಲ್ಲ. ಹೀಗಾಗಿ ಲಿಂಗಾಯತರಿಗೂ ವೀರಶೈವರಿಗೂ ಸಂಬಂಧವಿಲ್ಲ. ಲಿಂಗಾಯತರು ಧರ್ಮದ ಕಾಲಂನಲ್ಲಿ 'ಇತರೆ' ಎಂಬುದನ್ನು ಆಯ್ಕೆ ಮಾಡಿ, 'ಲಿಂಗಾಯತ ಧರ್ಮ' ಎಂದು ಬರೆಯಿಸಬೇಕು. ಜಾತಿಯ ಕಾಲಂನಲ್ಲಿ ಲಿಂಗಾಯತ ಎಂದು ಬರೆಯಿಸಬೇಕು. ಉಪಜಾತಿಯ ಕಾಲಂನಲ್ಲಿ ಉಪಜಾತಿಗಳ ಹೆಸರನ್ನು ಬರೆಯಿಸಬೇಕು' ಎಂದು ಕರೆ ನೀಡಿದೆ.

ವೀರಶೈವ, ಲಿಂಗಾಯತ ಸಮುದಾಯದ ಕೆಲ ಸ್ವಾಮೀಜಿಗಳು ಮತ್ತು ರಾಜಕೀಯ ನಾಯಕರ ಮತ್ತೊಂದು ಗುಂಪು ಈಚೆಗೆ ಸಭೆ ನಡೆಸಿ, 'ನಾವು ಹಿಂದೂಗಳು. ಹೀಗಾಗಿ ಧರ್ಮದ ಕಾಲಂನಲ್ಲಿ ಹಿಂದೂ ಎಂದೇ ಬರೆಯಿಸಬೇಕು' ಎಂದು ಕರೆ ನೀಡಿದ್ದಾರೆ.

ಪುರುಷನಷ್ಟೇ ಕುಟುಂಬದ ಮುಖ್ಯಸ್ಥ

ಈ ಸಮೀಕ್ಷೆಯಲ್ಲಿ ಕುಟುಂಬದ ಮುಖ್ಯಸ್ಥನ ವಿವರ ಸಲ್ಲಿಸಿದ ನಂತರವೇ ಇತರರ ವಿವರ ಸಲ್ಲಿಸಲು ಸಾಧ್ಯ. ಪುರುಷನನ್ನು ಮಾತ್ರ ಕುಟುಂಬದ ಮುಖ್ಯಸ್ಥರನ್ನಾಗಿ ನಮೂದಿಸುವ ರೀತಿಯಲ್ಲಿ ಸಮೀಕ್ಷಾ ಆ್ಯಪ್ ಅನ್ನು ರೂಪಿಸಲಾಗಿದೆ. ಮಹಿಳೆಯೊಬ್ಬರು ತಾನು ಕುಟುಂಬದ ಮುಖ್ಯಸ್ಥೆ ಎಂದು ನಮೂದಿಸಲು ಅವಕಾಶವಿಲ್ಲ.

ಒಂದು ಕುಟುಂಬದಲ್ಲಿ ಅತ್ಯಂತ ಹಿರಿಯ ಪುರುಷ ಮೃತಪಟ್ಟಿದ್ದರಷ್ಟೇ, ಆತನ ಪತ್ನಿಯನ್ನು ಕುಟುಂಬದ ಮುಖ್ಯಸ್ಥೆ ಎಂದು ಪರಿಗಣಿಸಲು ಅವಕಾಶ ಮಾಡಿಕೊಡಲಾಗಿದೆ. ಮತ್ತು ಈ ನಿಯಮವನ್ನೇ ಪಾಲಿಸುವಂತೆ ಸಮೀಕ್ಷಾದಾರರಿಗೆ ತರಬೇತಿ ವೇಳೆ ತಿಳಿಸಲಾಗಿದೆ. ಮಾತ್ರ ಪ್ರಧಾನ ಕುಟುಂಬದಲ್ಲಿ ಯಾರನ್ನು ಕುಟುಂಬದ ಮುಖ್ಯಸ್ಥರನ್ನಾಗಿ ಪರಿಗಣಿಸಬೇಕು ಎಂಬುದರ ವಿವರ ಸಮೀಕ್ಷಾ ಕೈಪಿಡಿಯಲ್ಲಿ ಇಲ್ಲ.

111 ಸ್ವರೂಪದ ಸ್ವಯಂ ಉದ್ಯೋಗ, 80 ಕುಲ ಕಸುಬು

ರಾಜ್ಯದ ನಾಗರಿಕರ ಆರ್ಥಿಕ ಸ್ಥಿತಿಯ ವಿವರವನ್ನು ಕರಾರುವಾಕ್ಕಾಗಿ ಸಂಗ್ರಹಿಸುವ ಉದ್ದೇಶದಿಂದ ಉದ್ಯೋಗಕ್ಕೆ ಸಂಬಂಧಿಸಿದ ಅತ್ಯಂತ ಸೂಕ್ಷ್ಮ ಮಾಹಿತಿಯನ್ನೂ ಸಮೀಕ್ಷೆಯಲ್ಲಿ ದಾಖಲಿಸಲಾಗುತ್ತದೆ. ಕೇಂದ್ರ, ರಾಜ್ಯ ಸರ್ಕಾರದ ಉದ್ಯೋಗಗಳು, ಖಾಸಗಿ ಕಂಪನಿಗಳ ಉದ್ಯೋಗಗಳು ಒಂದೆಡೆಯಾದರೆ, 111 ಸ್ವರೂಪದ ಸ್ವಯಂ ಉದ್ಯೋಗಗಳನ್ನು ಸಮೀಕ್ಷಾ ಕೈಪಿಡಿಯಲ್ಲಿ ಉಲ್ಲೇಖಿಸಲಾಗಿದೆ. ಇದರ ಹೊರತಾಗಿಯೂ ಬೇರೆ ಸ್ವರೂಪದ ಸ್ವಯಂ ಉದ್ಯೋಗಗಳು ಇದ್ದರೆ, ಅವುಗಳ ವಿವರ ನಮೂದಿಸಲು ಅವಕಾಶವಿದೆ.

ಅಗರಬತ್ತಿ ಹೊಸೆಯುವವರು, ಬೀಡಿ ಕಟ್ಟುವವರು, ಇಸ್ತ್ರಿ ಮಾಡುವವರು, ಹಿಟ್ಟಿನ ಗಿರಣಿ ನಡೆಸುವವರು, ಸೂಲಗಿತ್ತಿಯರು, ಹಣ್ಣು ವ್ಯಾಪಾರ, ಬೀದಿಬದಿ ವ್ಯಾಪಾರ, ಹೂಕಟ್ಟುವವರು ಹೀಗೆ ವೈವಿಧ್ಯಮಯ ಸ್ವಯಂ ಉದ್ಯೋಗಗಳನ್ನು ಕೈಪಿಡಿಯಲ್ಲಿ ತೋರಿಸಲಾಗಿದೆ. ಈ ಎಲ್ಲ ಉದ್ಯೋಗಗಳಿಗೂ ಪ್ರತ್ಯೇಕ ಕೋಡ್ ಸಂಖ್ಯೆ ನೀಡಲಾಗಿದೆ. ಸಮೀಕ್ಷೆಗೆ ಒಳಪಡುವವರು ಸ್ವಯಂ ಉದ್ಯೋಗದ ವಿವರ ಮತ್ತು ಕೋಡ್‌ಗಳನ್ನು ಕೂಲಂಕಷವಾಗಿ ಪರಿಶೀಲಿಸಿ, ಆಯ್ಕೆ ಮಾಡಿಕೊಳ್ಳಬೇಕಿದೆ.

ಕುಲ ಕಸುಬುಗಳಿಗೆ ಸಂಬಂಧಿಸಿದ ವಿವರಗಳನ್ನು ಅತ್ಯಂತ ಜಾಗರೂಕತೆಯಿಂದ ಸಂಗ್ರಹಿಸಬೇಕು. ಕುಟುಂಬಗಳ ಸಾಂಪ್ರದಾಯಿಕ ವೃತ್ತಿಗಳು ಅವರ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಮತ್ತು ಆರೋಗ್ಯದ ಸ್ಥಿತಿಯನ್ನು ಅಳೆಯುವಲ್ಲಿ ಕುಲ ಕಸುಬಿನ ವಿವರ ಮಹತ್ವದ ಪಾತ್ರ ವಹಿಸುತ್ತದೆ. ಹೀಗಾಗಿ ನಾಗರಿಕರಿಗೆ ಈ ಬಗ್ಗೆ ವಿವರಿಸಿ, ಮಾಹಿತಿ ಸಂಗ್ರಹಿಸಬೇಕು ಎಂದು ಸಮೀಕ್ಷಾದಾರರಿಗೆ ಸೂಚಿಸಲಾಗಿದೆ.

ಸಫಾಯಿ ಕರ್ಮಚಾರಿಗಳು, ಸುಣ್ಣಗಾರರು, ಜಾತಗಾರರು (ಎಮ್ಮೆ ಕೂದಲು ಕತ್ತರಿಸುವವರು), ದೆವ್ವ ಭೂತ ಬಿಡಿಸುವವರು, ಸ್ಮಶಾನದಲ್ಲಿ ಗುಂಡಿ ತೆಗೆಯುವವರು, ಅರಗು ಕೆಲಸಗಾರರು, ಕಲ್ಲು ಕುಟಿಗರು, ಚರ್ಮ ಹದಗೊಳಿಸುವವರು ಹೀಗೆ ಒಟ್ಟು 80 ಸ್ವರೂಪದ ಕುಲ ಕಸುಬುಗಳನ್ನು ಕೈಪಿಡಿಯಲ್ಲಿ ನಮೂದಿಸಲಾಗಿದೆ. ಈ ಪಟ್ಟಿಯಲ್ಲಿ ಇಲ್ಲದ ಕುಲ ಕಸುಬು ಇದ್ದರೆ, ಅದನ್ನು ನಮೂದಿಸಲೂ ಅವಕಾಶವಿದೆ. ಇದರ ಜತೆಯಲ್ಲಿಯೇ ಕುಲ ಕಸುಬಿನ ಕಾರಣಕ್ಕೆ ಬಂದಿರುವ ಚರ್ಮರೋಗ, ಕರುಳು ಸಂಬಂಧಿ ಕಾಯಿಲೆ, ಮೂಳೆ ಸಂಬಂಧಿ ರೋಗ, ಕ್ಷಯ, ಅಸ್ತಮಾ, ಅಂಧತ್ವ ಸೇರಿ ಒಟ್ಟು 10 ಸ್ವರೂಪದ ಕಾಯಿಲೆಗಳ ವಿವರ ಸಂಗ್ರಹಿಸಲು ಆ್ಯಪ್‌ನಲ್ಲಿ ಅವಕಾಶ ಮಾಡಲಾಗಿದೆ.

ಆಸಕ್ತಿಕರ ಅಂಶಗಳು

- ಯಾವುದೇ ಕುಟುಂಬದ ಸದಸ್ಯ ವಿದೇಶದಲ್ಲಿ ವಾಸವಿದ್ದರೆ, ಅವರ ವಿವರಗಳನ್ನು ಸಂಗ್ರಹಿಸಲೂ ಅವಕಾಶವಿದೆ. ಅಂತಹವರು ಯಾವ ಕಾರಣದಿಂದ ವಿದೇಶದಲ್ಲಿದ್ದಾರೆ, ವಿದೇಶದಲ್ಲಿ ಉದ್ಯೋಗದಲ್ಲಿದ್ದಾರೆಯೇ ಅಥವಾ ವಿದ್ಯಾಭ್ಯಾಸ ಮಾಡುತ್ತಿದ್ದಾರೆಯೇ ಮೊದಲಾದ ವಿವರಗಳನ್ನು ಸಂಗ್ರಹಿಸಲಾಗುತ್ತದೆ
- ಸಮೀಕ್ಷೆಗೆ ಒಳಪಡುವವರು ಒಟ್ಟು 24 ಸ್ವರೂಪದ ಚರಾಸ್ತಿಗಳ ವಿವರ ಒದಗಿಸಲು ಅವಕಾಶವಿದೆ. ಸೈಕಲ್, ದ್ವಿಚಕ್ರ ವಾಹನ, ಕಾರುಗಳು, ರೆಫ್ರಿಜರೇಟರ್, ವಾಷಿಂಗ್ ಮಷೀನ್, ಅಡಿಕೆ–ತೆಂಗು ಸುಲಿಯುವ ಯಂತ್ರಗಳ ವಿವರ ನೀಡುವುದಲ್ಲದೆ, ತಮ್ಮಲ್ಲಿರುವ ಚಿನ್ನ–ಬೆಳ್ಳಿಯ ಆಭರಣಗಳ ವಿವರವನ್ನೂ ಒದಗಿಸಬೇಕು
- ಸಾಮಾಜಿಕ ಜಾಲತಾಣ ಇನ್‌ಫ್ಲುಯೆನ್ಸರ್‌ಗಳ ವಿವರಗಳನ್ನು ಸಂಗ್ರಹಿಸಲೂ ಸಮೀಕ್ಷೆಯ ಆ್ಯಪ್‌ನಲ್ಲಿ ಅವಕಾಶವಿದೆ. ಇವರನ್ನು ಅಸಂಘಟಿತ ವಲಯದ ಉದ್ಯೋಗಿಗಳು ಎಂದು ವರ್ಗೀಕರಿಸಲಾಗಿದೆ
- ಸ್ವಿಗ್ಗಿ, ಝೊಮ್ಯಾಟೊ, ಬ್ಲಿಂಕ್‌ಇಟ್‌ನಂತಹ ಡೆಲಿವರಿ ಸೇವೆಗಳಲ್ಲಿ ಇರುವವರು, ಓಲಾ–ಉಬರ್‌ನಂತಹ ಆ್ಯಪ್ ಆಧಾರಿತ ಚಾಲಕ ವೃತ್ತಿಯಲ್ಲಿ ಇರುವವರನ್ನು ಗಿಗ್ ವರ್ಕರ್‌ಗಳು ಎಂದು ವರ್ಗೀಕರಿಸಲಾಗಿದೆ
- ಸಮೀಕ್ಷೆಗೆ ಒಳಪಡುವವರು ಅಂಗವಿಕಲರಾಗಿದ್ದಲ್ಲಿ, ಅಂಗ ವೈಕಲ್ಯದ ಸ್ವರೂಪ, ದೈನಂದಿನ ಚಟುವಟಿಕೆಗಳಿಗಾಗಿ ಅವರು ಬಳಸುವ ವಸ್ತುಗಳು, ಚಿಕಿತ್ಸೆ ವಿವರಗಳನ್ನೂ ಸಂಗ್ರಹಿಸಲಾಗುತ್ತದೆ. ಸರ್ಕಾರವು ನೀಡಿರುವ ಯುಡಿಐಡಿ ಸಂಖ್ಯೆ ಮತ್ತು ವಿವರಗಳನ್ನು ಪಡೆಯಲಾಗುತ್ತದೆ
- ನಾಗರಿಕರ ಮತದಾರರ ಗುರುತಿನ ಚೀಟಿ (ಎಪಿಕ್) ವಿವರಗಳನ್ನೂ ಪಡೆಯಲಾಗುತ್ತದೆ. ಎಪಿಕ್ ಚೀಟಿ ಇಲ್ಲದಿದ್ದರೆ, ನೋಂದಣಿ ಏಕೆ ಮಾಡಿಸಿಲ್ಲ ಅಥವಾ ಮುಂದೆ ಮಾಡಿಸುತ್ತಾರಾ ಎಂಬ ಮಾಹಿತಿಯನ್ನು ಸಂಗ್ರಹಿಸಲಾಗುತ್ತದೆ
- ಗ್ಯಾರಂಟಿ ಯೋಜನೆಗಳ ಫಲಾನುಭವಿ ಆಗಿದ್ದರೆ, ಅದನ್ನು ಸಮೀಕ್ಷೆಯಲ್ಲಿ ಉಲ್ಲೇಖಿಸಬೇಕಿದೆ. ಗೃಹ ಲಕ್ಷ್ಮೀ ಯೋಜನೆ ಅಡಿ ಕುಟುಂಬದ ಯಜಮಾನಿ ಪಡೆಯುತ್ತಿರುವ ಮಾಸಿಕ ₹2,000ವನ್ನು, ಕುಟುಂಬದ ವಾರ್ಷಿಕ ಆದಾಯಕ್ಕೆ ಸೇರಿಸಬಾರದು ಎಂದು ಕಟ್ಟುನಿಟ್ಟಾಗಿ ಸೂಚಿಸಲಾಗಿದೆ
- ಆ್ಯಂಡ್ರಾಯ್ಡ್ ಫೋನ್‌ಗಳಲ್ಲಿ ಕಾರ್ಯನಿರ್ವಹಿಸುವ ಅಪ್ಲಿಕೇಷನ್ ಮೂಲಕ ದತ್ತಾಂಶ ಸಂಗ್ರಹ. ನೆಟ್‌ವರ್ಕ್ ಇಲ್ಲದಿದ್ದರೂ ಕಾರ್ಯನಿರ್ವಹಿಸುವ ರೀತಿಯಲ್ಲಿ ಅಪ್ಲಿಕೇಷನ್ ಅಭಿವೃದ್ಧಿ. ದತ್ತಾಂಶ ಮೊಬೈಲ್‌ನಲ್ಲಿ ಸಂಗ್ರಹವಾಗಿ, ನೆಟ್‌ವರ್ಕ್ ಲಭ್ಯವಾಗುತ್ತಿದ್ದಂತೆಯೇ ಅಪ್‌ಲೋಡ್ ಆಗುತ್ತದೆ
- ಕುಟುಂಬಗಳ ಸಾಲದ ವಿವರವನ್ನು ಸಮೀಕ್ಷೆ ವೇಳೆ ಕಲೆಹಾಕಲಾಗುತ್ತದೆ. ಸಾಲದ ಮೂಲ, ಯಾವ ಕಾರಣಕ್ಕಾಗಿ ಸಾಲ ಪಡೆಯಲಾಗಿದೆ, ಸಾಲದ ಸ್ವರೂಪದ ವಿವರ ಕೇಳಲಾಗುತ್ತದೆ. ಬ್ಯಾಂಕ್‌ಗಳಿಂದ ಸಾಲ ಪಡೆಯಲಾಗಿದೆಯೇ, ಕೈಸಾಲವೇ, ಮೈಕ್ರೊ ಫೈನಾನ್ಸ್‌ನಿಂದ ಪಡೆದ ಸಾಲವೇ ಅಥವಾ ಸಹಕಾರ ಸಂಘದ ಸಾಲವೇ ಎಂಬ ವಿವರಗಳನ್ನು ನೀಡಬೇಕಾಗುತ್ತದೆ
- ಸಮೀಕ್ಷೆಗೆ ಒಳಪಡುವವರು ತಮ್ಮ ಮತ್ತು ಕುಟುಂಬದ ವಾರ್ಷಿಕ ಆದಾಯದ ವಿವರವನ್ನು ನೀಡಬೇಕಾಗುತ್ತದೆ. ಆದಾಯ ತೆರಿಗೆ ಪಾವತಿದಾರರೇ ಎಂಬುದನ್ನೂ ತಿಳಿಸಬೇಕಾಗುತ್ತದೆ. ಆದರೆ ಆದಾಯಕ್ಕಾಗಲೀ, ಆದಾಯ ತೆರಿಗೆ ಪಾವತಿ ಸಂಬಂಧವಾಗಲೀ ಯಾವುದೇ ದಾಖಲೆ ನೀಡಬೇಕಿಲ್ಲ

ಕ್ರೈಸ್ತರಲ್ಲೂ ಹಿಂದೂ ಜಾತಿ

ಕ್ರೈಸ್ತ ಧರ್ಮಕ್ಕೆ ಮತಾಂತರವಾದ ಜಾತಿ ಸಮುದಾಯಗಳಿಗೆ, ಕೈಪಿಡಿಯಲ್ಲಿ ಪ್ರತ್ಯೇಕ ಹೆಸರು ನೀಡಿರುವುದಕ್ಕೆ ತೀವ್ರ ಆಕ್ಷೇಪ ವ್ಯಕ್ತವಾಗಿದೆ. ಬೆಸ್ತರು ಕ್ರಿಶ್ಚಿಯನ್, ಬ್ರಾಹ್ಮಣ ಕ್ರಿಶ್ಚಿಯನ್, ದೇವಾಂಗ ಕ್ರಿಶ್ಚಿಯನ್, ಈಡಿಗ ಕ್ರಿಶ್ಚಿಯನ್... ಹೀಗೆ ಮತಾಂತರವಾದ ಸಮುದಾಯಗಳನ್ನು ಗುರುತಿಸಲು ಪ್ರತ್ಯೇಕ ಹೆಸರು ಮತ್ತು ಕೋಡ್‌ಗಳನ್ನು ಸಮೀಕ್ಷೆಯ ಕೈಪಿಡಿಯಲ್ಲಿ ನೀಡಲಾಗಿದೆ.

ವಿರೋಧ ಪಕ್ಷ ಬಿಜೆಪಿಯು ಇದಕ್ಕೆ ತೀವ್ರ ಆಕ್ಷೇಪ ವ್ಯಕ್ತಪಡಿಸಿದೆ. ಹಿಂದೂ ಧರ್ಮವನ್ನು ಒಡೆಯುವ ಹುನ್ನಾರವಿದು ಎಂದು ಆರೋಪಿಸಿದೆ. ಗುರುವಾರ ನಡೆದ ಸಚಿವ ಸಂಪುಟ ಸಭೆಯಲ್ಲೂ, ಕೆಲ ಸಚಿವರಿಂದ ಇದಕ್ಕೆ ಆಕ್ಷೇಪ ವ್ಯಕ್ತವಾಗಿದೆ ಎನ್ನಲಾಗಿದೆ. ಹೀಗಾಗಿ ಇದನ್ನು ಕೈಬಿಡಲು ಮುಖ್ಯಮಂತ್ರಿ ಸೂಚಿಸಿದ್ದಾರೆ. ಮುಸ್ಲಿಮರ 100ಕ್ಕೂ ಹೆಚ್ಚು ಜಾತಿಗಳನ್ನು ಈ ಕೈಪಿಡಿಯಲ್ಲಿ ಪಟ್ಟಿ ಮಾಡಲಾಗಿದೆ. ಇದಕ್ಕೂ ಆಕ್ಷೇಪ ವ್ಯಕ್ತವಾಗಿದೆ.

ಒಕ್ಕಲಿಗರು, ಕುರುಬರ ವಾದ

ಒಕ್ಕಲಿಗ ಸಮುದಾಯದ ನಾಯಕರು ಸಭೆ ನಡೆಸಿ, ಜಾತಿಯ ಕಾಲಂನಲ್ಲಿ ಯಾರೂ ಉಪಜಾತಿಯ ಹೆಸರನ್ನು ಬರೆಯಿಸಬಾರದು. ಒಕ್ಕಲಿಗ ಎಂದೇ ಬರೆಯಿಸಿ, ಉಪಜಾತಿಯ ಕಾಲಂನಲ್ಲಿ ಮಾತ್ರವೇ ಉಪಜಾತಿಯ ಹೆಸರನ್ನು ಬರೆಯಿಸಬೇಕು ಎಂದು ತಮ್ಮ ಸಮುದಾಯದ ಜನರಿಗೆ ಸಂದೇಶ ರವಾನಿಸಿದ್ದಾರೆ. ಕುರುಬ ಸಮುದಾಯದ ಸ್ವಾಮೀಜಿ ಮತ್ತು ನಾಯಕರೂ ತಮ್ಮ ಸಮುದಾಯದ ಎಲ್ಲ ಉಪಜಾತಿ ಸಮುದಾಯಗಳಿಗೆ ಇದೇ ರೀತಿಯ ಕರೆ ನೀಡಿದ್ದಾರೆ.

ಈಡಿಗರ ವಾದವೇನು?

ಈಡಿಗ ಸಮುದಾಯದ ನಾಯಕರೂ, 'ಈಡಿಗರು, ಬಿಲ್ಲವರು, ದೀವರು, ಹಳೆಪೈಕದವರು ಜಾತಿಯ ಕಾಲಂನಲ್ಲಿ 'ಈಡಿಗ' ಎಂದೇ ಬರೆಯಿಸಬೇಕು. ದೀವರು ಉಪಜಾತಿಯ ಕಾಲಂನಲ್ಲಿ ಮಾತ್ರ 'ದೀವರು' ಎಂದು ಬರೆಯಿಸಬೇಕು' ಎಂದು ಕರೆ ನೀಡಿದ್ದಾರೆ.

ಸಹಾಯವಾಣಿ

ಸಮೀಕ್ಷೆಗೆ ಸಂಬಂಧಿಸಿದಂತೆ ರಾಜ್ಯ ಹಿಂದುಳಿದ ವರ್ಗಗಳ ಆಯೋಗವು ರಾಜ್ಯಮಟ್ಟದ ಸಹಾಯವಾಣಿಯನ್ನು ತೆರೆದಿದೆ.

8050770004

ಸಮೀಕ್ಷೆ ಸಂದರ್ಭದಲ್ಲಿ ಎದುರಾಗುವ ಸಮಸ್ಯೆಗಳ ಕುರಿತು ಸಮೀಕ್ಷಕರು/ಮೇಲ್ವಿಚಾರಕರು/ಸಾರ್ವಜನಿಕರು ಸಹಾಯವಾಣಿಯನ್ನು ಸಂಪರ್ಕಿಸಿ ಸ್ಪಷ್ಟೀಕರಣ/ಸಹಾಯ ಪಡೆದುಕೊಳ್ಳಬಹುದಾಗಿದೆ. ತಾಂತ್ರಿಕ (ಮೊಬೈಲ್ ಆ್ಯಪ್) ವಿಷಯಗಳಿಗಾಗಿ ಕೂಡ ಇದೇ ಸಹಾಯವಾಣಿಯನ್ನು ಸಂಪರ್ಕಿಸಬಹುದು.

ಗುಂಡಣ್ಣ

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

20 ಸೆಪ್ಟೆಂಬರ್ 2025 ಶನಿವಾರ ಶ್ರೀ ವಿಶ್ವಾವಸು ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಭಾದ್ರಪದ ಕೃಷ್ಣ ಚತುರ್ದಶಿ ಗಂ. 24-17 ನಕ್ಷತ್ರ: ಮಘ ಗಂ. 8-06 ಯೋಗ: ಸಾಧ್ಯ ಗಂ. 20-07 ಕರಣ: ವಿಷ್ಟಿ ಗಂ. 11-54 ಕನ್ಯಾ ಮಾಸದ 03 ನೇ ದಿನ. ಮಳೆ ನಕ್ಷತ್ರ : ಉತ್ತರಾ 2 ನೇ ಪಾದ. ರಾಹುಕಾಲ : ಬೆಳಿಗ್ಗೆ 09-00 10-30 ಸೂರ್ಯೋದಯ : 06-23 ಸೂರ್ಯಾಸ್ತ : 06-25 ಮುಸ್ಲಿಂ ದಿನಾಂಕ : 27 ರಬಿಉಲ್ಲಾವಲ್ ದಿನ ವಿಶೇಷ : ವಿಷಶಸ್ತ್ರ ಚತುರ್ದಶಿ ಅದೃಷ್ಟ ಸಂಖ್ಯೆ : 8, 10

ಮೇಷ: ರಾಜಕೀಯ ವ್ಯಕ್ತಿಗಳು ಪಕ್ಷದ ಸದಸ್ಯರಿಂದ ತೀವ್ರತರ ಮಾತು ಕೇಳಬೇಕಾಗುವುದು ಅನಿವಾರ್ಯ. ವ್ಯಾಪಾರದಲ್ಲಿ ತೃಪ್ತಿಕರ ವಾತಾವರಣ. ವೈಮಾನಿಕ ಕ್ಷೇತ್ರದಲ್ಲಿರುವವರಿಗೆ ಪ್ರಗತಿ ಮತ್ತು ಪುರಸ್ಕಾರಗಳು ಪ್ರಾಪ್ತಿ.

ವೃಷಭ: ನೂತನವಾಗಿ ನಿರ್ಮಿಸುತ್ತಿರುವ ಮನೆಗೆ ಅಲಂಕಾರ ಮಾಡಿಸುವ ಬದಲಾಗಿ ಅನಿವಾರ್ಯವಾಗಿ ಬೇಕಾದ ವಿಚಾರವನ್ನು ಅಳವಡಿಸುವ ಬಗ್ಗೆ ಗಮನವಹಿಸಿ. ಇಂದಿನ ನಿಮ್ಮ ಫಲಿತಾಂಶ ನಿಮ್ಮ ಮನಸ್ಸಿಗೆ ಸರಿಯಾಗಿರುತ್ತದೆ.

ಮಿಥುನ: ಅಡಿಗೆ ತಯಾರಕರಿಗೆ ಶುಭದಿನ. ನಿಮ್ಮ ರುಚಿಯಾದ ಅಡುಗೆಗೆ ಹೊಸ ಅಭಿಮಾನಿಗಳ ಸಂಪಾದನೆ ಆಗುತ್ತದೆ. ಲಂಚದ ಬಲೆಗೆ ಬೀಳದಿರಿ. ಮಾಸಿಕ ವೇತನ ಪಡೆಯುವ ಹೊಸದಾರಿ ಕಣ್ಣಿಗೆ ಬೀಳುವುದು.

ಕರ್ಕಾಟಕ: ಅಚ್ಚರಿಯ ಸಂಗತಿಯನ್ನು ಎದುರಿಸುವ ಸಾಮರ್ಥ್ಯ ಕೊಡಲು ದೇವರಲ್ಲಿ ಪ್ರಾರ್ಥಿಸಿ. ಸಣ್ಣ ಮಕ್ಕಳ ಶಿಕ್ಷಕರು ಮಕ್ಕಳ ಸಂತೋಷದಿಂದ ಖುಷಿ ಹೊಂದುವಿರಿ. ಬಿಸಿ ವಸ್ತು ಹಾಗು ವಿದ್ಯುತ್ ಸಂಬಂಧಿ ವಿಷಯಗಳಲ್ಲಿ ಎಚ್ಚರ.

ಸಿಂಹ: ಸಾಮಾಜಿಕ ಕಾರ್ಯಕ್ರಮಗಳಲ್ಲಿ ಅತಿಥಿಯಾಗಿ ಭಾಗವಹಿಸಲು ಆಹ್ವಾನ ಸಿಗುವುದು. ಕುಟುಂಬ ಮತ್ತು ಮಕ್ಕಳ ಬಗ್ಗೆ ಗಮನ ಹರಿಸುವುದು ಅಗತ್ಯ. ಸಕಾಲದಲ್ಲಿ ಆರಂಭಿಸಿದ್ದ ವ್ಯವಹಾರಗಳು, ಕೆಲಸ ಕಾರ್ಯ ಸಫಲತೆ ತರಲಿವೆ.

ಕನ್ಯಾ: ಮುಖ್ಯವಾಗಿ ಮಾತುಗಾರರು ಅವಕಾಶಗಳನ್ನು ಸದುಪಯೋಗಪಡಿಸಿಕೊಂಡಲ್ಲಿ ಉತ್ತಮ ಅಭಿವೃದ್ಧಿ ಹೊಂದುವಿರಿ. ಇಷ್ಟದೇವರ ದರ್ಶನದಿಂದ ಕಷ್ಟಗಳೆಲ್ಲಾ ಪರಿಹಾರವಾಗುತ್ತವೆ, ಮನಸ್ಸಿಗೆ ಶಾಂತಿ ದೊರೆಯಲಿದೆ.

ತುಲಾ: ಪಂಡಿತರ ಸಮಾಗಮದಿಂದ ಜ್ಞಾನವೃದ್ಧಿಯಾಗುವುದು. ನೂತನ ಕಾರ್ಯದಲ್ಲಿ ನಿರಾಸಕ್ತಿ ಇದ್ದರೂ, ದೈನಂದಿನ ಕೆಲಸಕ್ಕೆ ಯಾವುದೇ ತೊಂದರೆ ಇರುವುದಿಲ್ಲ. ಮೇಲಧಿಕಾರಿಗಳು ನಿಮ್ಮ ಕೆಲಸವನ್ನು ಪರೀಕ್ಷಿಸಬಹುದು.

ವೃಶ್ಚಿಕ: ಕ್ಯಾಟರಿಂಗ್ ಉದ್ಯಮದಾರಿಗೆ ಹೊಸ ಹೊಸ ಪರಿಚಯ, ಹೊಸ ಹೊಸ ಅವಕಾಶ ಅಭಿವೃದ್ಧಿಗೆ ಕಾರಣವಾಗುತ್ತದೆ. ಬಟ್ಟೆ ವ್ಯಾಪಾರಿಗಳು ಬಂಡವಾಳ ಹೂಡಿಕೆಯಲ್ಲಿ ಎಡಗುವಂತಾಗಲಿದೆ. ರೈತರಿಗೆ ಸಾಲ ತೀರಿಸುವ ಕಾಲ.

ಧನು: ಬಹಳ ದಿನಗಳಿಂದ ಯೋಚಿಸಿದ್ದ ವಾಹನ ಖರೀದಿ ವಿಚಾರಕ್ಕೆ ತೀರ್ಮಾನ ಸಿಗುತ್ತದೆ. ಡೈರಿ ಪದಾರ್ಥ ವ್ಯಾಪಾರಸ್ಥರಿಗೆ ಆಗುವ ಹೆಚ್ಚಿನ ಉತ್ಪಾದನೆಯಿಂದ ಲಾಭ. ಹಿತಶತ್ರುಗಳ ಬಗ್ಗೆ ಜಾಗರೂಕರಾಗಿರಿ.

ಮಕರ: ಕಾರ್ಯರಂಗದಲ್ಲಿ ಹೆಚ್ಚಿನ ಸ್ಪರ್ಧೆ, ಪೈಪೋಟಿಗಳಿರುವುದರಿಂದ ಪೂರ್ವ ತಯಾರಿ ಮಾಡಿಕೊಳ್ಳಿರಿ. ಕೇವಲ ಹಟಮಾರಿತನದಿಂದ ಹಿಡಿದ ಕೆಲಸ ಬಿಡುವುದಿಲ್ಲ ಎಂದು ತೀರ್ಮಾನಿಸಿದರೆ ಸಮಯ, ಹಣ ವ್ಯರ್ಥ.

ಕುಂಭ: ರೈತರಿಗೆ ಬೆಳೆದ ತರಕಾರಿ ಬೆಳೆಗೆ ಒಳ್ಳೆಯ ಮಾರುಕಟ್ಟೆ ಸಿಕ್ಕಿ ಸಂತೋಷ ಉಂಟಾಗುತ್ತದೆ. ನಿರೋದ್ಯೋಗಿಗಳಿಗೆ ನಿರೀಕ್ಷೆಗೂ ಮೀರಿದಂಥ ಕೆಲಸ ಸಿಗುವ ಸಾಧ್ಯತೆ ಇದೆ. ನಿಮ್ಮ ಕರ್ತವ್ಯಕ್ಕೆ ಇನ್ನೂ ಹೆಚ್ಚಿನ ಜವಾಬ್ದಾರಿ ಬೇಕಾಗುವುದು.

ಮೀನ: ರಾಜಕಾರಣಿಗಳಿಗೆ ನಾಯಕತ್ವದಲ್ಲಿ ಬದಲಾವಣೆಯಾಗುವ ಸಂಭವ. ಸಗಟು ವ್ಯಾಪಾರಿಗಳಿಗೆ ಖರ್ಚು-ವೆಚ್ಚ ಆದಾಯದ ಮಿತಿಯೊಳಗಿರುವುದು. ರಾಸಾಯನಿಕ ಕ್ಷೇತ್ರಗಳಿಗೆ ಸಂಬಂಧಿಸಿದವರಿಗೆ ಹರ್ಷದಾಯಕವಾಗಿರುತ್ತದೆ.

ಪದಬಂಧ 6170

ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಮಣ್ಣಿನ ಬಾನಿ (3)
4.ಬುನಾದಿಗೊಂದು ಪರ್ಯಾಯ ಪದ (2)
6.ಅರಸರಿಗೆ ಅರಸನಾದವನು (5)
8.ಗುಲಾಬಿ ಹೂ ನೀಡಿದ ಸೇವಕ (3)
10.ಮಾತು ಕೊಡುವುದು (3)
11.ರೇಷ್ಮೆ ನಗರ ಎಂದು ಪ್ರಸಿದ್ಧವಾಗಿರುವ ಜಿಲ್ಲೆ (5)
12.ಮೊದಲನೇ ವಿಭಕ್ತಿ! (3)
13.ವಾದ್ಯವನ್ನು ನುಡಿಸುವುದು (3)
15.ಹಳೆಯದನ್ನು ಹೊಸದು ಮಾಡುವಿಕೆ ಹಿಂದು ಮುಂದಾಗಿದೆಯಲ್ಲಾ! (5)
17.ಕಂಬನಿಯಲ್ಲಿರುವ ಸತ್ವ ಕಾಣುತ್ತಿದೆಯೆ? (2)
18.ದುರಸ್ತಿಯನ್ನು ಹೀಗೆನ್ನಿ (3)

ಮೇಲಿಂದ ಕೆಳಕ್ಕೆ
1.ನೌಕೆ ಇಲ್ಲಿಕಾಣುತ್ತಿದೆ (3)
2.ಬಿಡುವು ಅಥವಾ ವಿಶ್ರಾಂತಿ (3)
3.ಅಕ್ಷರಗಳು ಒಂದುಗೂಡುವುದು (2)
5.ಮಾನವುಳ್ಳ ಒಡೆಯ (4)
7.ಯಜ್ಞೋಪವೀತ ಇಲ್ಲಿದೆ (4)
9.ಅಧಿಕಾರ ಪತ್ರ (3)
11.ರಾಮನ ಚರಿತೆಯನ್ನು ಕುರಿತ ಕಾವ್ಯ (4)
12.ಪ್ರತಿಫಲಿತವಾದ ಬಿಂಬ (4)
13.ಹೆಣ್ಣು ಮಂಗ ಇಲ್ಲಿದೆ (3)
14.ನರಿ ಹಿಡಿದಿರುವ ಜೇನುತುಪ್ಪ (3)
16.ಕಕ್ಕಾಬಿಕ್ಕಿ ಯಾಗಿರುವ ಚಿಕ್ಕಪ್ಪನ ಹೆಂಡತಿ! (2)



6169ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಸಂಸ್ಥಾನ 3.ದೀನಭಾವ
6.ಶತಮಾನ 7.ರಜತ
10.ಮಡದಿ 12.ಹಸುಗೂಸು
15.ಮಲಯಜ 16.ಯಕೃತ್ತು

ಮೇಲಿಂದ ಕೆಳಕ್ಕೆ:
1.ಸಂಹಿತೆ 2.ನದೀತೀರ
4.ವಶ 5.ಅನಸೂಯೆ
8.ತತ್ಸಮ 9.ಮನೋಹರ
11.ದಿಗ್ವಿಜಯ 13.ಸುಮ
14.ಸಂಪತ್ತು

ಸುಡೊಕು 6554

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

	5	4		7			3	9
7			2		3	6		8
8				4			2	
4		3		1		8		6
			9		4		7	
9		8		3		4		1
1		9	3		5		8	7
	6			9				
5		7	4		1	9		3

6553 ಸುಡೊಕು

2	4	1	6	8	3	9	7	5
9	8	5	2	4	7	6	1	3
7	6	3	1	9	5	8	4	2
4	5	9	8	2	1	7	3	6
6	1	7	3	5	4	2	9	8
8	3	2	9	7	6	4	5	1
3	2	4	7	1	8	5	6	9
5	9	6	4	3	2	1	8	7
1	7	8	5	6	9	3	2	4

ಪ್ರಜಾವಾಣಿ

ಚಟಿಕೆ ಸುದ್ದಿ

ಸುಜುಕಿ ದ್ವಿಚಕ್ರ ವಾಹನ ಬೆಲೆ ₹18 ಸಾವಿರ ಇಳಿಕೆ

ನವದೆಹಲಿ (ಪಿಟಿಐ): ಸುಜುಕಿ ಮೋಟರ್‌ಸೈಕಲ್ ಇಂಡಿಯಾ, ಜಿಎಸ್‌ಟಿ ಪರಿಷ್ಕರಣೆ ನಂತರದ ತನ್ನ ವಾಹನಗಳ ಬೆಲೆಯನ್ನು ಪ್ರಕಟಿಸಿದೆ.

ಜಿಎಸ್‌ಟಿ ಪರಿಷ್ಕರಣೆಯ ಲಾಭವನ್ನು ಗ್ರಾಹಕರಿಗೆ ವರ್ಗಾಯಿಸಲು ಕಂಪನಿ ಮುಂದಾಗಿದೆ. ವಾಹನಗಳ ಬೆಲೆ ₹18,024ರವರೆಗೆ ಇಳಿಕೆ ಆಗಲಿದೆ. ವಾಹನದ ಮಾದರಿ ಆಧಾರದ ಮೇಲೆ ಬೆಲೆ ಇಳಿಕೆ ಇರಲಿದೆ.

ಪರಿಷ್ಕೃತ ದರವು ಸೆಪ್ಟೆಂಬರ್ 22ರಿಂದ ಜಾರಿಗೆ ಬರಲಿದೆ ಎಂದು ಸುಜುಕಿ ಮೋಟರ್‌ಸೈಕಲ್ ಇಂಡಿಯಾ ಪ್ರೈವೆಟ್ ಲಿಮಿಟೆಡ್ (ಎಸ್‌ಎಂಐಪಿಎಲ್) ಶುಕ್ರವಾರ ತಿಳಿಸಿದೆ.

ದ್ವಿಚಕ್ರ ವಾಹನಗಳ ಜೊತೆಗೆ, ಬಿಡಿಭಾಗಗಳು ಮತ್ತು ಪರಿಕರಗಳ ಮೇಲಿನ ಜಿಎಸ್‌ಟಿ ಇಳಿಕೆಯಿಂದ ನಿರ್ವಹಣಾ ವೆಚ್ಚ ಕಡಿಮೆ ಆಗಲಿದ್ದು, ಈ ಲಾಭವನ್ನು ಗ್ರಾಹಕರಿಗೆ ವರ್ಗಾಯಿಸ ಲಾಗುವುದು ಎಂದು ಹೇಳಿದೆ.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ	
ಹಿಂದಿನ ಅಂತ್ಯ:	25,423
ಇಂದಿನ ಅಂತ್ಯ:	25,327
ದಿನದ ಕನಿಷ್ಠ:	25,286
	96

ಮೊಟ್ಟೆ ಧಾರಣೆ (ಎನ್‌ಇಸಿಸಿ) ಬೆಂಗಳೂರು		
	100 ಕ್ಕೆ	₹580
	12 ಕ್ಕೆ	₹80
ಮೈಸೂರು:	100 ಕ್ಕೆ	₹585

ರಾಮನಗರ ರೇಷ್ಮೆಗೂಡು	
ಮಿಶ್ರತಳಿ(ಸಿ.ಬಿ)	₹250-644
ದ್ವಿತಳಿ (ಬಿ.ವಿ)	₹430-800

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)	
ಆರ್‌ಎಸ್‌ಎಸ್-4	₹183
ಆರ್‌ಎಸ್‌ಎಸ್-5	₹178
ಗುಡ್ ಲಾಟ್	₹163

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ)	(10 ಕೆ.ಜಿಗೆ)
ಶೇಂಗಾ (ರಿಫೈನ್ಡ್)	₹1330 (1340)
ಸೋಯಾ (ರಿಫೈನ್ಡ್)	₹1280 (1295)
ಸೂರ್ಯಕಾಂತಿ (ರಿಫೈನ್ಡ್)	₹1420 (1425)
ಪಾಮೋಲಿನ್	₹1280 (1295)

ಎಥೆನಾಲ್ ಕಂಪನಿಗಳಿಗೆ ನೋಟಿಸ್ ನೀಡಿ

ಮಾರುಕಟ್ಟೆ ಶುಲ್ಕ ವಂಚನೆ ಪ್ರಕರಣ • ಸಚಿವ ಶಿವಾನಂದ ಪಾಟೀಲ ನಿರ್ದೇಶನ

ಪ್ರಜಾವಾಣಿ ವಾರ್ತೆ



ಶಿವಾನಂದ ಪಾಟೀಲ

ಬೆಂಗಳೂರು: ಮಾರುಕಟ್ಟೆ ಶುಲ್ಕ ವಂಚಿಸುವ ಮೆಕ್ಕೆಜೋಳ, ಅಕ್ಕಿ ಆಧಾರಿತ ಎಥೆನಾಲ್ ಕಾರ್ಖಾನೆಗಳಿಗೆ ನೋಟಿಸ್ ಜಾರಿ ಮಾಡಿ ಕ್ರಿಮಿನಲ್ ಕೇಸು ದಾಖಲಿಸಿ ಎಂದು ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಪಾಟೀಲ ಅಧಿಕಾರಿಗಳಿಗೆ ಸೂಚಿಸಿದರು.

ವಿಕಾಸಸೌಧದಲ್ಲಿ ಕೃಷಿ ಮಾರುಕಟ್ಟೆ ಇಲಾಖೆ ರಾಜ್ಯಮಟ್ಟದ ಪ್ರಗತಿ ಪರಿಶೀಲನೆ ಸಭೆ ನಡೆಸಿ ಮಾತನಾಡಿದರು.

ಮೆಕ್ಕೆಜೋಳ, ಭತ್ತ, ಅಡಿಕೆ, ಮೆಣಸಿನಕಾಯಿ, ಹತ್ತಿ ಬೆಳೆಗಳು ಎಪಿಎಂಸಿಯ ಆದಾಯದ ಪ್ರಮುಖ ಮೂಲಗಳು. ಕೆಲವು ಎಥೆನಾಲ್ ಕಂಪನಿಗಳು ಮತ್ತು ರೈಸ್‌ಮಿಲ್‌ಗಳ ಮಾಲೀಕರು ಮಾರುಕಟ್ಟೆ ಶುಲ್ಕ ವಂಚಿಸುತ್ತಿರುವ ಮಾಹಿತಿ ಇದೆ. ಆದ್ದರಿಂದ, ಅಂತಹವರ ಮೇಲೆ ಗಮನ ಇಡಬೇಕು ಎಂದು ಹೇಳಿದರು.

ಮಾರುಕಟ್ಟೆ ಸೆಸ್ ವಂಚನೆ ಪ್ರಕರಣಗಳನ್ನು ತಡೆಗಟ್ಟುವ ಉದ್ದೇಶದಿಂದಲೇ ನಾಲ್ಕು ವಿಭಾಗಗಳಲ್ಲಿ ವಿಚಕ್ಷಣಾ ದಳ ರಚನೆ ಮಾಡಿ ವಾಹನ ಸೇರಿದಂತೆ ಎಲ್ಲ ರೀತಿಯ ಸೌಲಭ್ಯಗಳನ್ನು ನೀಡಲಾಗಿದೆ. ಆದರೆ, ಉದ್ದೇಶ ಸಫಲವಾಗಿಲ್ಲ. ಶುಲ್ಕ ವಂಚಿಸಿ ವಹಿವಾಟು ನಡೆಯುತ್ತಿರುವ ಪ್ರಕರಣಗಳಿಗೆ ಕಡಿವಾಣ ಬಿದ್ದಿಲ್ಲ. ಅಧಿಕಾರಿಗಳ ಸಹಕಾರ ಇಲ್ಲದೆ ನಂ.2 ವ್ಯವಹಾರ ನಡೆಯುವುದಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

‘ಬೆಳಗಾವಿ, ಕಲಬುರಗಿ ಗಡಿಭಾಗಗಳಲ್ಲಿ ನಂ.2 ವ್ಯವಹಾರ ಹೆಚ್ಚಾಗಿದೆ. ನೆರೆಯ ರಾಜ್ಯಗಳ ಮಾರುಕಟ್ಟೆಗೆ ಉತ್ಪನ್ನಗಳು ಹೋಗುತ್ತಿವೆ. ವಾಣಿಜ್ಯ ತೆರಿಗೆ ಇಲಾಖೆ ಮತ್ತು ನಮ್ಮ ವಿಚಕ್ಷಣಾ ತಂಡದ ಕೆಲವರು ಸೇರಿಕೊಂಡು ಈ ಅಕ್ರಮಗಳಿಗೆ ಸಹಕಾರ ನೀಡುತ್ತಿರುವ ಮಾಹಿತಿ ಬಂದಿದೆ. ಇದನ್ನು ಎಚ್ಚರಿಕೆ ಎಂದು ತಿಳಿದು ಕರ್ತವ್ಯ ನಿರ್ವಹಿಸಿ’ ಎಂದು ಶಿವಾನಂದ ಪಾಟೀಲ ಹೇಳಿದರು.

ಕ್ಯಾಂಪ್ಕೊ ನಡೆಸುವ ಅಡಿಕೆ ವಹಿವಾಟಿನ ಪ್ರತಿಶತ 50ರಷ್ಟು ಎಪಿಎಂಸಿಗಳಲ್ಲಿ ನಡೆಯುತ್ತಿಲ್ಲ. ಕ್ಯಾಂಪ್ಕೊ, ಮ್ಯಾಮ್ಕೋಸ್‌ಗಳ ವಹಿವಾಟು ಮತ್ತು ಎಪಿಎಂಸಿಗಳಲ್ಲಿ ಅಡಿಕೆ ವಹಿವಾಟು ಮಾಹಿತಿ ಸಂಗ್ರಹ ಮಾಡಿ, ಎಪಿಎಂಸಿಗಳಲ್ಲಿ ಕಡಿಮೆಯಾಗಲು ಏನು ಕಾರಣ ಎಂಬುದನ್ನು ಪತ್ತೆ ಮಾಡಬೇಕು ಎಂದು ಸೂಚನೆ ನೀಡಿದರು.

ಎಪಿಎಂಸಿಗಳ ಜಾಗವನ್ನು ಅನ್ಯ ಉದ್ದೇಶಗಳಿಗೆ ನೀಡಿರುವ ಪ್ರಕರಣಗಳನ್ನು ಪ್ರಸ್ತಾಪಿಸಿದ ಸಚಿವರು, ಯಾವುದೇ ಕಾರಣಕ್ಕೂ ಅನ್ಯ ಚಟುವಟಿಕೆಗಳಿಗೆ ಕೊಡಬಾರದು. ಆಸ್ತಿಗಳನ್ನು ರಕ್ಷಣೆ ಮಾಡಬೇಕು. ಅನೇಕ ಎಪಿಎಂಸಿಗಳಲ್ಲಿನ ಗೋದಾಮುಗಳು ಖಾಲಿ ಇವೆ ಎಂಬ ಕಾರಣಕ್ಕೆ ದರ ಪರಿಷ್ಕರಣೆ ಮಾಡಿದ್ದರೂ ಇನ್ನೂ ಹಂಚಿಕೆಯಾಗಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಯಾವುದೇ ಎಪಿಎಂಸಿಗಳಲ್ಲಿ ದರ ಕುಸಿತವಾದಾಗ ಅಧಿಕಾರಿಗಳು ನಿರ್ದೇಶಕರ ಗಮನಕ್ಕೆ ತರಬೇಕು. ಅಂತಹ ಸಂದರ್ಭದಲ್ಲಿ ಮಧ್ಯಪ್ರವೇಶ ಮಾಡಿ ಬೆಲೆ ಸ್ಥಿರತೆ ಕಾಯ್ದುಕೊಳ್ಳಲು ಸಾಧ್ಯವಾಗುತ್ತದೆ. ಕಾರ್ಯದರ್ಶಿಗಳು ಮಾಹಿತಿ ನೀಡದಿದ್ದರೆ, ಸಮಸ್ಯೆಯಾಗಲಿದೆ ಎಂದರು.

ಸಭೆಯಲ್ಲಿ ಸಹಕಾರ ಇಲಾಖೆ ಕಾರ್ಯದರ್ಶಿ ಎಚ್.ವಿ.ಶೆಟ್ಟಣ್ಣವರ್, ನಿರ್ದೇಶಕ ಶಿವಾನಂದ ಕಾಪಸೆ ಹಾಜರಿದ್ದರು.

ಮುಖ್ಯಾಂಶಗಳು

- ₹82 ಸಾವಿರ ಕೋಟಿ ವಹಿವಾಟು
- ₹498 ಕೋಟಿ ಮಾರುಕಟ್ಟೆ ಶುಲ್ಕ ಸಂಗ್ರಹ
- ಬೆಂಬಲ ಬೆಲೆಯಲ್ಲಿ 16 ಕೃಷಿ ಉತ್ಪನ್ನಗಳ ಖರೀದಿ

ವರ್ತಕರ ಲೈಸೆನ್ಸ್ ರದ್ದುಪಡಿಸಿ

ಐದು ವರ್ಷ ವಹಿವಾಟು ಮಾಡದ ವರ್ತಕರ ಲೈಸೆನ್ಸ್ ರದ್ದುಪಡಿಸಿ ಎಂದು ಶಿವಾನಂದ ಪಾಟೀಲ ಅವರು ಸೂಚಿಸಿದರು.

ವಿವಿಧ ಸೌಲಭ್ಯಗಳ ಕಾರಣದಿಂದ ಟ್ರೇಡ್ ಲೈಸೆನ್ಸ್ ಪಡೆದು ದುರ್ಬಳಕೆ ಮಾಡುತ್ತಿರುವ ಪ್ರಕರಣಗಳ ಸಂಖ್ಯೆ ಹೆಚ್ಚಿವೆ. ಟ್ರೇಡ್ ಲೈಸೆನ್ಸ್ ಉದ್ದೇಶವೇ ಬೇರೆ ಇರುತ್ತದೆ. ಅಂಥವರು ಯಾವುದೇ ವ್ಯಾಪಾರ–ವ್ಯವಹಾರ ಮಾಡುವುದಿಲ್ಲ. ಹೀಗಾಗಿ ಖರೀದಿ ಚಟುವಟಿಕೆ ಮಾಡದವರ ಲೈಸೆನ್ಸ್ ರದ್ದುಪಡಿಸಿ ಎಂದು ಹೇಳಿದರು.

ಕೆಲವು ಎಪಿಎಂಸಿ ಕಾರ್ಯದರ್ಶಿಗಳು ಲೈಸೆನ್ಸ್ ನೀಡುವುದನ್ನೇ ಕಾಯಕ ಮಾಡಿಕೊಂಡಿದ್ದಾರೆ. ಅದರ ಉದ್ದೇಶ ಅರ್ಥವಾಗುತ್ತದೆ ಎಂದರು.

ಸುದ್ದಿ 2 ನಿಮಿಷ

ಅದಾನಿ ಸಮೂಹದ ಎಂ–ಕ್ಯಾಪ್‌ಗೆ ₹69 ಸಾವಿರ ಕೋಟಿ ಸೇರ್ಪಡೆ

ನವದೆಹಲಿ / ಮುಂಬೈ (ಪಿಟಿಐ): ಅದಾನಿ ಸಮೂಹದ ಕಂಪನಿಗಳ ಮಾರುಕಟ್ಟೆ ಮೌಲ್ಯವು ಶುಕ್ರವಾರ ನಡೆದ ಒಂದೇ ದಿನದ ವಹಿವಾಟಿನಲ್ಲಿ ₹69 ಸಾವಿರ ಕೋಟಿಗೂ ಹೆಚ್ಚಳವಾಗಿದೆ.

ಸಮೂಹದ ಎಲ್ಲಾ ಕಂಪನಿಗಳ ಒಟ್ಟು ಮಾರುಕಟ್ಟೆ ಬಂಡವಾಳ ಮೌಲ್ಯ (ಎಂ–ಕ್ಯಾಪ್) ₹13.96 ಲಕ್ಷ ಕೋಟಿಗೆ ಏರಿಕೆಯಾಗಿದೆ.

ಅಮೆರಿಕದ ಹಿಂಡನ್‌ಬರ್ಗ್ ರಿಸರ್ಚ್ ಸಂಸ್ಥೆಯು, ಉದ್ಯಮಿ ಗೌತಮ್ ಅದಾನಿ ಹಾಗೂ ಅವರ ನೇತೃತ್ವದ ಉದ್ಯಮ ಸಮೂಹವು ಷೇರು ಮೌಲ್ಯದ ಮೇಲೆ ಕೃತಕವಾಗಿ ಪ್ರಭಾವ ಬೀರುವ ಕೆಲಸಗಳಲ್ಲಿ ತೊಡಗಿರುವುದಾಗಿ ಆರೋಪ ಮಾಡಿತ್ತು. ಈ ಕುರಿತಾಗಿ ಸೆಬಿ ತನಿಖೆ ನಡೆಸಿತ್ತು. ಆರೋಪಕ್ಕೆ ಯಾವುದೇ ಸಾಕ್ಷ್ಯಗಳು ಇಲ್ಲ ಎಂದು ಸೆಬಿ ಹೇಳಿದೆ. ಇದರಿಂದ ಶುಕ್ರವಾರ ಸಮೂಹದ ಎಲ್ಲ ಕಂಪನಿಗಳ ಷೇರಿನ ಮೌಲ್ಯ ಹೆಚ್ಚಳಗೊಂಡಿದೆ.

ಅದಾನಿ ಪವರ್ ಷೇರಿನ ಮೌಲ್ಯ ಶೇ 12ರಷ್ಟು ಹೆಚ್ಚಳಗೊಂಡಿದೆ.

ಸೂಚ್ಯಂಕ ಇಳಿಕೆ: ಲಾಭದ ಗಳಿಕೆಗಾಗಿ ಹೂಡಿಕೆದಾರರು ಎಚ್‌ಡಿಎಫ್‌ಸಿ ಬ್ಯಾಂಕ್, ಐಸಿಐಸಿಐ ಬ್ಯಾಂಕುಗಳ ಷೇರುಗಳ ಮಾರಾಟಕ್ಕೆ ಮುಂದಾಗಿದ್ದರಿಂದ ಶುಕ್ರವಾರದ ವಹಿವಾಟಿನಲ್ಲಿ ಷೇರುಪೇಟೆ ಸೂಚ್ಯಂಕಗಳು ಇಳಿಕೆ ಕಂಡಿವೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 387 ಅಂಶ ಇಳಿಕೆಯಾಗಿ, 82,626ಕ್ಕೆ ವಹಿವಾಟು ಅಂತ್ಯಗೊಂಡಿದೆ. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 96 ಅಂಶ ಕಡಿಮೆಯಾಗಿ, 25,327ಕ್ಕೆ ಕೊನೆಗೊಂಡಿದೆ.

ಜೋಯಾಲುಕ್ಕಾಸ್ ಕೊಡುಗೆ

ಬೆಂಗಳೂರು: ಜೋಯಾಲುಕ್ಕಾಸ್‌ನಿಂದ ವರ್ಷದ ಅತಿದೊಡ್ಡ ಆಭರಣ ಮಾರಾಟದ ಅಂಗವಾಗಿ ಗ್ರಾಹಕರಿಗೆ ವಿಶೇಷ ಕೊಡುಗೆ ಪ್ರಕಟಿಸಲಾಗಿದೆ. ಈ ಕೊಡುಗೆ ಅಕ್ಟೋಬರ್ 5ಕ್ಕೆ ಅಂತ್ಯಗೊಳ್ಳಲಿದೆ.

ಮಾರಾಟದ ಅಂಗವಾಗಿ ಆಭರಣಗಳ ಮಜೂರಿ ಮೇಲೆ ಶೇಕಡ 50ರಷ್ಟು ರಿಯಾಯಿತಿ ಇರಲಿದೆ. ಚಿನ್ನ, ಕತ್ತರಿಸಿದ ಮತ್ತು ಕತ್ತರಿಸದ ವಜ್ರ, ಪ್ಲಾಟಿನಂ, ಬೆಳ್ಳಿ ಮತ್ತು ಅಮೂಲ್ಯ ಹರಳುಗಳ ಶ್ರೇಣಿಯ ವಿನ್ಯಾಸಗಳಿಗೆ ರಿಯಾಯಿತಿ ಅನ್ವಯವಾಗಲಿದೆ. ಗ್ರಾಹಕರು ಹತ್ತಿರದ ನಮ್ಮ ಮಳಿಗೆಗೆ ಭೇಟಿ ನೀಡಿ ಕೊಡುಗೆಯನ್ನು ಪಡೆದುಕೊಳ್ಳಬೇಕು ಎಂದು ಜೋಯಾಲುಕ್ಕಾಸ್ ಪ್ರಕಟಣೆಯಲ್ಲಿ ತಿಳಿಸಿದೆ.

‘ಸೀಮಿತ ಅವಧಿಯ ರಿಯಾಯಿತಿಯ ಜೊತೆಗೆ, ಆಭರಣಗಳಿಗೆ ಉಚಿತ ಆಜೀವ ಪರ್ಯಂತ ನಿರ್ವಹಣೆ, ಒಂದು ವರ್ಷದ ಉಚಿತ ವಿಮೆ ಮತ್ತು ಪ್ರತಿ ಖರೀದಿಯ ಮೇಲೆ ಶೇಕಡ 100ರಷ್ಟು ಮರುಖರೀದಿ ಗ್ಯಾರಂಟಿ ಪ್ರಯೋಜನವನ್ನು ಗ್ರಾಹಕರು ಪಡೆಯುತ್ತಾರೆ’ ಎಂದು ಜೋಯಾಲುಕ್ಕಾಸ್ ಸಮೂಹದ ಅಧ್ಯಕ್ಷ ಜೋಯ್ ಅಲುಕ್ಕಾಸ್ ಹೇಳಿದ್ದಾರೆ.

ಪ್ರಜಾವಾಣಿ

ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com or Scan QR code to access booking form

ಜಿಎಸ್‌ಟಿ ಪರಿಷ್ಕರಣೆ: ಸರ್ಕಾರದ ಮೇಲೆ ಆರ್ಥಿಕ ಹೊರೆ ಬೀಳಲ್ಲ–ಕ್ರಿಸಿಲ್

ಕೋಲ್ಕತ್ತ (ಪಿಟಿಐ): ಜಿಎಸ್‌ಟಿ ಪರಿಷ್ಕರಣೆಯಿಂದಾಗಿ ಸರ್ಕಾರದ ಮೇಲೆ ಆರ್ಥಿಕ ಹೊರೆ ಬೀಳುವ ಸಾಧ್ಯತೆಯಿಲ್ಲ ಎಂದು ರೇಟಿಂಗ್ ಸಂಸ್ಥೆ ಕ್ರಿಸಿಲ್ ಶುಕ್ರವಾರ ತಿಳಿಸಿದೆ.

ಜಿಎಸ್‌ಟಿ ಪರಿಷ್ಕರಣೆಯಿಂದ ಅಲ್ಪಾವಧಿವರೆಗೆ ವಾರ್ಷಿಕ ₹48 ಸಾವಿರ ಕೋಟಿ ನಷ್ಟ ಉಂಟಾಗಲಿದೆ ಎಂದು ಸರ್ಕಾರ ಅಂದಾಜಿಸಿತ್ತು ಎಂದು ಕ್ರಿಸಿಲ್ ತನ್ನ ಇತ್ತೀಚಿನ ವರದಿಯಲ್ಲಿ ಹೇಳಿದೆ. ಕಳೆದ ಆರ್ಥಿಕ ವರ್ಷದಲ್ಲಿ ಜಿಎಸ್‌ಟಿ ಸಂಗ್ರಹವು ₹10.6 ಲಕ್ಷ ಕೋಟಿಯಾಗಿತ್ತು. ಆದ್ದರಿಂದ, ನಷ್ಟದ ಪ್ರಮಾಣ ಗಮನಾರ್ಹವಾಗಿ ಇಲ್ಲ ಎಂದು ಹೇಳಿದೆ.

ಜಿಎಸ್‌ಟಿ ಮಂಡಳಿಯು ದರ ಪರಿಷ್ಕರಣೆ ಮಾಡಿರುವುದರಿಂದ ನಾಲ್ಕು ಹಂತದ ತೆರಿಗೆ, ಎರಡು ಹಂತಕ್ಕೆ ಇಳಿಯಲಿದೆ. ಇದರಿಂದ ಸರಕು ಮತ್ತು ಸೇವೆಗಳ ದರ ಕಡಿಮೆಯಾಗಲಿದೆ ಎಂದು ಹೇಳಿದೆ.

ಜಿಎಸ್‌ಟಿ ಪರಿಷ್ಕರಣೆ ಮೊದಲು ಶೇ 18ರ ಹಂತದ ತೆರಿಗೆಯಿಂದ ಶೇ 75ರಷ್ಟು ವರಮಾನ ಬರುತ್ತಿತ್ತು. ಶೇ 6ರಷ್ಟು ವರಮಾನ ಶೇ 12ರ ಹಂತದ ತೆರಿಗೆಯಿಂದ ಮತ್ತು ಶೇ 15ರಷ್ಟು ವರಮಾನ ಶೇ 28 ಹಂತದಿಂದ ಬರುತ್ತಿತ್ತು.

ಸುದ್ದಿ ವೈವಿಧ್ಯಕ್ಕೆ prajavani.netಗೆ ಭೇಟಿ ಮಾಡಿ

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)	
ಅರಸೀಕೆರೆ	₹17000-17000
ಹಿರಿಯೂರು	₹16500-22500

ಐಫೋನ್ 17 ಖರೀದಿ ಜೋರು

ಬೆಂಗಳೂರು / ಮುಂಬೈ (ಪಿಟಿಐ): ದೇಶದ ಎಲ್ಲೆಡೆ ಹೊಸ ಐಫೋನ್ 17 ಸೀರೀಸ್‌ನ ಮಾರಾಟ ಶುಕ್ರವಾರದಿಂದ ಆರಂಭವಾಗಿದೆ. ದೆಹಲಿ, ಮುಂಬೈ ಮತ್ತು ಬೆಂಗಳೂರಿನ ಆ್ಯಪಲ್ ಮಳಿಗೆಗಳ ಮುಂದೆ ಜನರು ಬೆಳಿಗ್ಗೆಯಿಂದಲೇ ಸರತಿ ಸಾಲಿನಲ್ಲಿ ನಿಂತು ಫೋನ್ ಖರೀದಿಸಿದರು.

ಬೆಂಗಳೂರಿನ ಹೆಬ್ಬಾಳದಲ್ಲಿರುವ ಮಾಲ್ ಆಫ್ ಏಷ್ಯಾದಲ್ಲಿನ ಆ್ಯಪಲ್ ಮಳಿಗೆಯಲ್ಲಿ ಐಫೋನ್ 17, ಆ್ಯಪಲ್ ವಾಚ್ ಮತ್ತು ಏರ್‌ಪಾಡ್‌ಗಳನ್ನು ಗ್ರಾಹಕರು ಖರೀದಿಸಿದರು.

ಐಫೋನ್ 17 ಖರೀದಿಸಿದ ಗ್ರಾಹಕ ಮಹಮ್ಮದ್ ಸುಹೈಲ್ ಮಾತನಾಡಿ, ಕೆಲ ವರ್ಷಗಳಿಂದ ನಾನು ಐಫೋನ್ ಖರೀದಿಸುತ್ತಿದ್ದೇನೆ. ನಾಲ್ಕು ಫೋನ್ ಬುಕ್ ಮಾಡಿದ್ದೇನೆ. ಈ ಹೊಸ ಮಾದರಿಯ ಫೋನ್ ಕಳೆದ ಮೂರು ಮಾದರಿಗಿಂತಲೂ ಉತ್ತಮವಾಗಿದೆ ಎಂದು ಹೇಳಿದರು.

ಸೆಪ್ಟೆಂಬರ್ 2ರಂದು ಆ್ಯಪಲ್ ಕಂಪನಿಯು ತನ್ನ ಮೊದಲ ಮಳಿಗೆಯನ್ನು ಬೆಂಗಳೂರಿನ ಹೆಬ್ಬಾಳದಲ್ಲಿ ಆರಂಭಿಸಿದೆ.

ಬೆಂಗಳೂರಿನ ಹೆಬ್ಬಾಳದಲ್ಲಿರುವ ಆ್ಯಪಲ್ ಮಳಿಗೆಯಲ್ಲಿ ಗ್ರಾಹಕರು ಹೊಸ ಐಫೋನ್ 17 ಖರೀದಿಸಿದರು —ಎಎಫ್‌ಪಿ ಚಿತ್ರ

ಈ ಮಳಿಗೆಯಲ್ಲಿ ಆ್ಯಪಲ್ ಉತ್ಪನ್ನಗಳು, ಸೇವೆಗಳು, ನೆರವು ನೀಡಲಾಗುವುದು ಎಂದು ಕಂಪನಿ ತಿಳಿಸಿದೆ.

ಮುಂಬೈನಲ್ಲಿ ಗಲಾಟೆ: ಮುಂಬೈನ ಪ್ರಮುಖ ವಾಣಿಜ್ಯ ಕೇಂದ್ರವಾದ ಬಾಂದ್ರಾ ಕುರ್ಲಾ ಕಾಂಪ್ಲೆಕ್ಸ್‌ನ ಜಿಯೊ ವರ್ಲ್ಡ್ ಡ್ರೈವ್ ಮಾಲ್‌ನಲ್ಲಿ ಬೆಳಿಗ್ಗೆ ಆರು ಗಂಟೆಯಿಂದಲೇ ಐಫೋನ್ ಖರೀದಿಸಲು ಗ್ರಾಹಕರು ಮುಂದಾಗಿದ್ದರು.

ಈ ವೇಳೆ ಗ್ರಾಹಕನೊಬ್ಬ ಸರತಿ ಸಾಲು ತಪ್ಪಿಸಲು ಯತ್ನಿಸಿದ್ದರಿಂದ ಗಲಾಟೆ ನಡೆಯಿತು. ಭದ್ರತಾ ಸಿಬ್ಬಂದಿ ಮಧ್ಯ ಪ್ರವೇಶಿಸಿ, ಗಲಾಟೆ ತಡೆದರು.

ಐಫೋನ್ 17 ಸೀರೀಸ್ ಬೆಲೆಯು ₹82,900 ದಿಂದ ₹2,29,900 ಇದೆ.

ಉಡುಪಿ ಮಲ್ಲಿಗೆ ಚೆಂಡಿಗೆ ₹600

ಪ್ರಜಾವಾಣಿ ವಾರ್ತೆ

ಮಂಗಳೂರು: ಉಡುಪಿ ಮಲ್ಲಿಗೆ ಹೂವಿನ ದರ ಗಗನಕ್ಕೇರಿದ್ದು, ದರ ಒಂದು ಚೆಂಡಿಗೆ (3 ಅಡಿ) ₹600ಕ್ಕೆ ತಲುಪಿದೆ. ಮಾರುಕಟ್ಟೆಯಲ್ಲಿ ಬೇಡಿಕೆಗೆ ತಕ್ಕಷ್ಟು ಹೂ ಲಭ್ಯವಾಗುತ್ತಿಲ್ಲ.

ವಾರದ ಹಿಂದೆ ಒಂದು ಅಟ್ಟಿಗೆ (ನಾಲ್ಕು ಚೆಂಡು) ₹400ಕ್ಕೆ ದೊರೆಯುತ್ತಿದ್ದ ಉಡುಪಿ ಮಲ್ಲಿಗೆ ದರ 4–5 ದಿನಗಳಿಂದ ಏರುತ್ತಲೇ ಇದೆ. ‘ಮಳೆಗೆ ಮೊಗ್ಗುಗಳು ಹಾಳಾಗಿದ್ದು, ಇಳುವರಿ ಕಡಿಮೆ ಆಗಿರುವ ಕಾರಣ ಬೆಲೆ ಏರಿಕೆಯಾಗಿದೆ ಎನ್ನುತ್ತಾರೆ ವ್ಯಾಪಾರಸ್ಥರು.

‘ಉಡುಪಿ ಮಲ್ಲಿಗೆ, ಭಟ್ಕಳ ಮಲ್ಲಿಗೆ ಮಾರುಕಟ್ಟೆಗೆ ಜಾಸ್ತಿ ಬಂದಿಲ್ಲ. ವ್ಯಾಪಾರಸ್ಥರಿಗೂ ಸಿಗುತ್ತಿಲ್ಲ. ದರ ಏರಿಕೆಯಿಂದಾಗಿ ಗ್ರಾಹಕರೂ ಖರೀದಿಸಲು ಹಿಂದೇಟು ಹಾಕುತ್ತಾರೆ’ ಎನ್ನುತ್ತಾರೆ ಮಲ್ಲಿಕಟ್ಟೆ ಮಾರ್ಕೆಟ್‌ನ ಹೂ ವ್ಯಾಪಾರಿ ಶೋಭಾ.

ಉಡುಪಿ ಮಲ್ಲಿಗೆ ಚೆಂಡು

ಉಳಿದಂತೆ, ಜಾಜಿ ಹೂ ಚೆಂಡಿಗೆ ₹130, ಕಾಕಡಾ ಮಲ್ಲಿಗೆ ಮೊಳಕ್ಕೆ ₹50 ದರವಿದೆ.

ಶ್ರೀಮತಿ ನಾಗರತ್ನ ದೊಡ್ಡಮನಿ

೦೭-೦೬-೨೦೨೫

ನಮ್ಮ ನೆನಪಿನಲ್ಲಿ ಸದಾ ಜೀವಿತವಾಗಿರುವ. ನಮ್ಮ ಪ್ರೀತಿಯ ತಾಯಿ

ದೊಡ್ಡಮನಿ ಕುಟುಂಬ ವರ್ಗದವರು

SAD DEMISE

Sri. Seegichatla Jagannath

Attained the lotus feet on 19th Sep, 2025

Last rites at Kalahalli Crematorium at 12:15 pm on 20th September, 2025

From Rathna, Sanjay, Vani, Vijay, Pavithra & Family

+91 97400 90485

ನೇರ ತೆರಿಗೆ ಸಂಗ್ರಹ ಹೆಚ್ಚಳ

ಸೆ. 17ರ ವರೆಗೆ ₹10.82 ಲಕ್ಷ ಕೋಟಿ ಸಂಗ್ರಹ: ಕೇಂದ್ರ

ನವದೆಹಲಿ (ಪಿಟಿಐ): ಪ್ರಸಕ್ತ ಆರ್ಥಿಕ ವರ್ಷದ ಏಪ್ರಿಲ್ 1ರಿಂದ ಸೆಪ್ಟೆಂಬರ್ 17ರ ವರೆಗೆ ದೇಶದ ನಿವ್ವಳ ನೇರ ತೆರಿಗೆ ಸಂಗ್ರಹವು ₹10.82 ಲಕ್ಷ ಕೋಟಿ ಆಗಿದೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ.

2024–25ರ ಆರ್ಥಿಕ ವರ್ಷದ ಇದೇ ಅವಧಿಯಲ್ಲಿ ₹9.91 ಲಕ್ಷ ಕೋಟಿ ತೆರಿಗೆ ಸಂಗ್ರಹವಾಗಿತ್ತು. ಇದಕ್ಕೆ ಹೋಲಿಸಿದರೆ ಸಂಗ್ರಹವು ಶೇ 9ರಷ್ಟು ಹೆಚ್ಚಳವಾಗಿದೆ ಎಂದು ತಿಳಿಸಿದೆ. ಹೆಚ್ಚಿದ ಮುಂಗಡ ತೆರಿಗೆ ಮತ್ತು ಮರುಪಾವತಿಯಲ್ಲಿನ (ರೀಫಂಡ್) ಇಳಿಕೆಯು ಸಂಗ್ರಹ ಹೆಚ್ಚಲು ಕಾರಣವಾಗಿದೆ ಎಂದು ತಿಳಿಸಿದೆ.

ಏಪ್ರಿಲ್ 1ರಿಂದ ಸೆಪ್ಟೆಂಬರ್ 17ರ ವರೆಗೆ ಮರುಪಾವತಿ ಪ್ರಮಾಣ ಶೇ 24ರಷ್ಟು ಇಳಿಕೆಯಾಗಿದ್ದು, ₹1.61 ಲಕ್ಷ ಕೋಟಿಯಾಗಿದೆ. ಈ ಅವಧಿಯಲ್ಲಿ ಮುಂಗಡ ತೆರಿಗೆ ಸಂಗ್ರಹವು ಶೇ 6ರಷ್ಟು ಹೆಚ್ಚಳವಾಗಿದ್ದು, ₹3.52 ಲಕ್ಷ ಕೋಟಿ ದಾಟಿದೆ. ಆದರೆ, ಕಾರ್ಪೊರೇಟ್‌ಯೇತರ ತೆರಿಗೆ ಸಂಗ್ರಹವು ಶೇ 7ರಷ್ಟು ಇಳಿಕೆಯಾಗಿದ್ದು, ₹96,784 ಕೋಟಿಯಾಗಿದೆ.

ನಿವ್ವಳ ಕಾರ್ಪೊರೇಟ್ ತೆರಿಗೆ ಸಂಗ್ರಹವು ₹4.72 ಲಕ್ಷ ಕೋಟಿ ಮತ್ತು ವೈಯಕ್ತಿಕ ಆದಾಯ ತೆರಿಗೆಯನ್ನು ಒಳಗೊಂಡಿರುವ ಕಾರ್ಪೊರೇಟ್‌ಯೇತರ ತೆರಿಗೆ, ₹5.84 ಲಕ್ಷ ಕೋಟಿಯಷ್ಟಾಗಿದೆ.

ಷೇರು ವಹಿವಾಟು ತೆರಿಗೆ (ಎಸ್‌ಟಿಟಿ) ಸಂಗ್ರಹವು ₹26,306 ಕೋಟಿಗೆ ಹೆಚ್ಚಳವಾಗಿದೆ.

ಪ್ರಸಕ್ತ ಆರ್ಥಿಕ ವರ್ಷದಲ್ಲಿ ಕೇಂದ್ರ ಸರ್ಕಾರವು ನೇರ ತೆರಿಗೆ ಮೂಲಕ ₹25.20 ಲಕ್ಷ ಕೋಟಿ ಸಂಗ್ರಹದ ಗುರಿ ಹೊಂದಿದೆ. ಕಳೆದ ಆರ್ಥಿಕ ವರ್ಷಕ್ಕೆ ಹೋಲಿಸಿದರೆ ಶೇ 12ರಷ್ಟು ಹೆಚ್ಚಳವಿದು. ಎಸ್‌ಟಿಟಿ ಮೂಲಕ ₹78 ಸಾವಿರ ಕೋಟಿ ಸಂಗ್ರಹಿಸಲು ಯೋಜಿಸಿದೆ.

ಮುಂಬೈ ಧಾರಣೆ (ಶೇಂಗಾ) 19-09-2025	
ಜಾವಾ 70/80(ಹೊಸ)	10500-10600
ಜಾವಾ 80/90(ಹೊಸ)	9800-99000
ದಪ್ಪ ಮಧ್ಯಪ್ರದೇಶ (ಹೊಸ)	7500-7600
ದಪ್ಪ ಗುಜರಾತ್ (ಹೊಸ)	8500-8600
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1340 (1340)
ಒಂದು ವಾರದ ಡೆಲಿವರಿ	1335 (1335)
ಪಾಮ್ ವಾರದ ಡೆಲಿವರಿ	1278 (1283)
ಸೂರ್ಯಕಾಂತಿ ಎಣ್ಣೆ ಕಚ್ಚಾ	1350 (1350)
ಚಿನ್ನ - ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,09,500 (1,09,200)
ಬೆಳ್ಳಿ ಕೆ.ಜಿಗೆ	1,27,800 (1,26,900)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಅಡಿಕೆ ಧಾರಣೆ

ಕುಮಟಾ	
ಚಾಲಿ	38999-43699
ಚಿಪ್ಪು	25089-32999
ಕೋಕ	7589-26969
ಫ್ಯಾಕ್ಟರಿ	3999-26569
ಹೊಸಚಾಲಿ	36899-44033
ಪುತ್ತೂರು	
ಕೋಕ	20000-28000
ಹೊಸತು	26000-49000
ಶಿವಮೊಗ್ಗ	
ಬೆಟ್ಟೆ	47599-65899
ಗೊರಬಲು	21000-37669
ಹೊಸತು	55589-57399
ರಾಶಿ	44669-60689
ಸರಕು	56109-84440
ಸಿದ್ದಾಪುರ	
ಬಿಳಿಗೋಟು	25019-32389
ಚಾಲಿ	38299-43500
ಕೋಕ	18699-26599
ಕೆಂಪುಗೋಟು	26219-26219
ರಾಶಿ	42319-49599
ತಟ್ಟಿಬೆಟ್ಟೆ	27114-35159
ಶಿರಸಿ	
ಬೆಟ್ಟೆ	31599-42109
ಬಿಳಿಗೋಟು	26399-35980
ಚಾಲಿ	39698-44699
ಕೆಂಪುಗೋಟು	22018-32609
ರಾಶಿ	45699-51299
ಯಲ್ಲಾಪುರ	
ಆಪಿ	59999-63675
ಬಿಳಿಗೋಟು	16910-35315
ಚಾಲಿ	35569-44711
ಕೋಕ	10009-19510
ಕೆಂಪುಗೋಟು	22222-30099
ರಾಶಿ	40109-58221
ತಟ್ಟಿಬೆಟ್ಟೆ	35620-39699

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

ಉದ್ಯೋಗಾವಕಾಶ

General

ಕರ್ನಾಟಕದಾದ್ಯಂತ ಕಂಪನಿಗಳಿಗೆ Work from Home ಕೆಲಸಕ್ಕೆ ಯುವಕರು, ಯುವತಿಯರು ಬೇಕಾಗಿದ್ದಾರೆ. 18000/- 25000/- 7th, 10th, AnyDegree. 9019427194

ಮನೆಯಿಂದಲೇ ಕೆಲಸ. ಕಂಪನಿಗಳಿಗೆ ಬೇಕಾಗಿದ್ದಾರೆ. ವಿದ್ಯಾರ್ಥಿಗಳಿಗೆ, ಪುರುಷರಿಗೆ, ಮಹಿಳೆಯರಿಗೆ (ವಿದ್ಯಾರ್ಹತೆಯಿಲ್ಲದವರಿಗೂ) 18,200 ರಿಂದ 35,000. ಕೊರಿಯರ್ ಸೌಲಭ್ಯವಿದೆ. 9916065497

ಉದ್ಯೋಗಾವಕಾಶಗಳು TVS ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th,PUC, ITI, Degree. ಸಂಬಳ 16,000-86,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000.ರಿಂದ 20,000. ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

Receptionist/ Secretary

ಬೇಕಾಗಿದ್ದಾರೆ: ಕೆ.ಹೆಚ್.ಡಬಲ್ ರೋಡ್ ನಲ್ಲಿರುವ ಪ್ರತಿಷ್ಠಿತ ಹೋಟೆಲ್ ವೊಂದರಲ್ಲಿ ರಾತ್ರಿ ಕರ್ತವ್ಯಕ್ಕೆ ಪುರುಷ ರಿಸೆಪ್ಷನಿಸ್ಟ ಬೇಕಾಗಿದ್ದಾರೆ. ಸಂಬಳ: 13000/-ಸಂಪರ್ಕಿಸಿ: 9008488555

Teachers/ Professors

TEACHER REQUIRED for English, Science and Maths for High school contact Kenmore school Basavanagudi or whatsapp 9901501185

ಪ್ರವಾಸ

Travel

03.10.2025 ಗುರುವಾಯೂರು, ಕೊಚ್ಚಿನ್,ಅಲಪೇ, ತಿರುವನಂತಪುರ, ಕನ್ಯಾಕುಮಾರಿ, ರಾಮೇಶ್ವರಂ. 03.10.2025 ಬೈದ್ಯನಾಥ್, ಗಯಾ,ಕಾಶಿ, ಅಯೋಧ್ಯಾ, ಪ್ರಯಾಗ್‌ರಾಜ್. ಕರ್ನಾಟಕ ಹೆರಿಟೇಜ್ ಟೂರ್ಸ್ (ಹನುಮಂತನಗರ). 9845035349, 9482435755.

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಅದಾನಿ ಸಮೂಹದ ಹಗರಣ: ನಿರಂತರ ತನಿಖೆ ಅಗತ್ಯ– ಕಾಂಗ್ರೆಸ್

ಆರೋಪ ಮುಕ್ತಗೊಳಿಸಿದ ಬೆನ್ನಲ್ಲೇ ‘ಕೈ’ ಟೀಕೆ

ಜೈರಾಮ್ ರಮೇಶ್

ನವದೆಹಲಿ(ಪಿಟಿಐ): ಷೇರು ಮೌಲ್ಯದ ಮೇಲೆ ಕೃತಕವಾಗಿ ಪ್ರಭಾವ ಬೀರುವ ಕೆಲಸಗಳಲ್ಲಿ ತೊಡಗಿದ್ದ ಆರೋಪದಿಂದ ಅದಾನಿ ಸಮೂಹವನ್ನು ಮುಕ್ತಗೊಳಿಸಿ ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿ(ಸೆಬಿ) ಆದೇಶಿಸಿದ ಬೆನ್ನಲ್ಲೇ, ಈ ಉದ್ಯಮ ಸಮೂಹದ ‘ಹಗರಣ’ ಕುರಿತಂತೆ ಎಲ್ಲ ಆಯಾಮಗಳಲ್ಲಿ ನಿರಂತರ ತನಿಖೆ ಅಗತ್ಯ ಎಂದು ಕಾಂಗ್ರೆಸ್ ಶುಕ್ರವಾರ ಹೇಳಿದೆ.

‘ಈ ವಿಚಾರದಲ್ಲಿ ಸೆಬಿ ನಡೆಸಿದ ತನಿಖೆ ಸಾಕಾಗದು. ಸೆಬಿ ನಡೆಸುವ ತನಿಖೆ ವ್ಯಾಪ್ತಿಗೆ ಒಳಪಡದ ಅನೇಕ ಸಂಗತಿಗಳು ಇದ್ದು, ಅವು ಹೊರಬರಬೇಕಿದೆ. ಹೀಗಾಗಿ, ‘ಮೋದಾನಿ ಹಗರಣ’ ಕುರಿತು ನಿರಂತರ ತನಿಖೆಯ ಅಗತ್ಯ ಇದೆ’ ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಹೇಳಿದ್ದಾರೆ.

ಈ ಕುರಿತು ಅವರು ಪ್ರಕಟಣೆ ನೀಡಿದ್ದಾರೆ. ಅದಾನಿ ಸಮೂಹದಿಂದ ನಡೆದಿದೆ ಎನ್ನಲಾದ ಅಕ್ರಮ ಕುರಿತು ಈ ಹಿಂದೆ ಪಕ್ಷವು ಕೇಳಿದ್ದ 100 ಪ್ರಶ್ನೆಗಳನ್ನು ಹಂಚಿಕೊಂಡಿರುವ ಅವರು, ಈ ಪ್ರಶ್ನೆಗಳಿಗೆ ಇನ್ನೂ ಉತ್ತರ ದೊರೆತಿಲ್ಲ ಎಂದು ಚಾಟಿ ಬೀಸಿದ್ದಾರೆ.

ಅದಾನಿ ಸಮೂಹದ ವಿರುದ್ಧ ಹಿಂಡನ್‌ಬರ್ಗ್ ಸಂಸ್ಥೆ ಆರೋಪ ಹೊರಿಸಿದ್ದ ವೇಳೆ, ಕಾಂಗ್ರೆಸ್ ಪಕ್ಷವು ‘ಹಮ್ ಅದಾನಿ ಕೆ ಹೈ ಕೌನ್’ (ಎಚ್‌ಎಎಚ್‌ಕೆ) ಎಂಬ ಅಭಿಯಾನ ಆರಂಭಿಸಿತ್ತು. ಆರೋಪಗಳಿಗೆ ಸಂಬಂಧಿಸಿ ನಿತ್ಯವೂ ಹಲವು ಪ್ರಶ್ನೆಗಳನ್ನು ಕೇಳಲಾಗುತ್ತಿತ್ತು.

‘ಅದಾನಿ ಸಮೂಹ ವಿರುದ್ಧದ ಆರೋಪಗಳ ಕುರಿತು ಎರಡು ತಿಂಗಳ ಒಳಗಾಗಿ ತನಿಖೆ ಪೂರ್ಣಗೊಳಿಸಬೇಕು ಎಂದು 2023ರ ಮಾರ್ಚ್ 2ರಂದು ಸುಪ್ರೀಂ ಕೋರ್ಟ್ ಆದೇಶಿಸಿತ್ತು. ಆದರೆ, ಹಲವು ಬಾರಿ ತನಿಖೆಯ ಅವಧಿ ವಿಸ್ತರಣೆ ಹಾಗೂ ವಿಳಂಬದ ಬಳಿಕ ಎರಡು ವರ್ಷ ಏಳು ತಿಂಗಳ ನಂತರ ಸೆಬಿ ತನ್ನ ಆದೇಶ ಪ್ರಕಟಿಸಿದೆ’ ಎಂದು ಅವರು ಹೇಳಿಕೆಯಲ್ಲಿ ಟೀಕಿಸಿದ್ದಾರೆ.

‘10ಕ್ಕೂ ಅಧಿಕ ಆರೋಪಗಳ ಕುರಿತು ತನಿಖೆ’

ಮುಂಬೈ (ರಾಯಿಟರ್ಸ್): ಅದಾನಿ ಸಮೂಹ ಹಾಗೂ ಅದರ ಸಾಗರೋತ್ತರ ಸಂಸ್ಥೆಗಳು ಷೇರು ನಿಯಮಗಳನ್ನು ಉಲ್ಲಂಘಿಸಿರುವ ಕುರಿತ 10ಕ್ಕೂ ಹೆಚ್ಚು ಆರೋಪಗಳ ಬಗ್ಗೆ ಸೆಬಿ ಈಗಲೂ ತನಿಖೆ ನಡೆಸುತ್ತಿದೆ ಎಂದು ಮೂಲಗಳು ಶುಕ್ರವಾರ ಹೇಳಿವೆ.

ಅದರ ವಿರುದ್ಧ ಕೇಳಿಬಂದಿದ್ದ ಎರಡು ಆರೋಪಗಳಿಂದ ಅದಾನಿ ಸಮೂಹವನ್ನು ಮುಕ್ತಗೊಳಿಸಿ ಸೆಬಿ ಆದೇಶ ಹೊರಡಿಸಿದ ಮಾರನೇ ದಿನವೇ ಈ ಮೂಲಗಳು ಈ ಮಾಹಿತಿ ಬಹಿರಂಗಪಡಿಸಿವೆ.

ಸೆಬಿ ಈಗಲೂ ತನಿಖೆ ನಡೆಸುತ್ತಿದೆ ಎನ್ನಲಾದ ವಿಚಾರಗಳ ಕುರಿತಂತೆ ಕೆಲವು ಪ್ರಶ್ನೆಗಳನ್ನು ಕೇಳಿ ತಾನು ಕಳುಹಿಸಿದ್ದ ಇ-ಮೇಲ್‌ಗೆ ಅದಾನಿ ಸಮೂಹ ಉತ್ತರಿಸಿಲ್ಲ. ಸೆಬಿ ಕೂಡ ಈ ಕುರಿತು ಯಾವುದೇ ಪ್ರತಿಕ್ರಿಯೆ ನೀಡಿಲ್ಲ ಎಂದು ರಾಯಿಟರ್ಸ್ ವರದಿ ಮಾಡಿದೆ.

‘10ಕ್ಕೂ ಅಧಿಕ ಆರೋಪಗಳ ಕುರಿತು ಸೆಬಿ ಯಾವುದೇ ಅಂತಿಮ ಆದೇಶ ಹೊರಡಿಸಿಲ್ಲ. ಸಮೂಹದ ವಿರುದ್ಧ ಕೇಳಿಬಂದಿರುವ ಆರೋಪಗಳನ್ನು ತಳ್ಳಿಹಾಕಬೇಕೇ ಅಥವಾ ತನಿಖೆ ನಂತರ ಸಮೂಹಕ್ಕೆ ದಂಡ ವಿಧಿಸಬೇಕೆ ಎಂಬ ಬಗ್ಗೆ ಕೂಡ ನಿರ್ಧಾರ ಕೈಗೊಂಡಿಲ್ಲ ಎಂದು ಇವೇ ಮೂಲಗಳು ಹೇಳಿವೆ’ ಎಂದು ವರದಿ ಮಾಡಿದೆ.

ಗಾಜಾದಲ್ಲಿ ಕದನವಿರಾಮ: ನಿರ್ಣಯದ ವಿರುದ್ಧ ಅಮೆರಿಕ ಮತ

ವಿಶ್ವ ಸಂಸ್ಥೆ (ಎಪಿ): ‘ಗಾಜಾದಲ್ಲಿ ತಕ್ಷಣದಲ್ಲಿ ಕದನವಿರಾಮ ಘೋಷಿಸಬೇಕು ಮತ್ತು ಈ ಕದನವಿರಾಮವು ಶಾಶ್ವತವಾಗಿ ಇರಬೇಕು’ ಎಂಬ ವಿಶ್ವ ಸಂಸ್ಥೆಯ ಭದ್ರತಾ ಮಂಡಳಿಯ ನಿರ್ಣಯಕ್ಕೆ ವಿರುದ್ಧವಾಗಿ ಅಮೆರಿಕವು ಮತ್ತೊಮ್ಮೆ ತನ್ನ ಪರಮಾಧಿಕಾರವನ್ನು ಗುರುವಾರ ಚಲಾಯಿಸಿತು.

ನಿರ್ಣಯದಲ್ಲಿ ಹಮಾಸ್ ಬಂಡುಕೋರರನ್ನು ಸೂಕ್ತ ರೀತಿಯಲ್ಲಿ ಖಂಡಿಸಲಾಗಿಲ್ಲ ಎಂಬುದು ಅಮೆರಿಕದ ಆಕ್ಷೇಪ. ಆದರೆ, ಮಂಡಳಿಯ ಉಳಿದೆಲ್ಲ ಪ್ರಮುಖ 14 ದೇಶಗಳು ನಿರ್ಣಯದ ಪರವಾಗಿ ಮತ ಚಲಾಯಿಸಿವೆ. ‘ಗಾಜಾದಲ್ಲಿ ಮಾನವೀಯ ಪರಿಸ್ಥಿತಿಯು ದುರಂತಮಯವಾಗಿದೆ. ಮೂಲಭೂತ ಅಗತ್ಯಗಳನ್ನು ಪೂರೈಸಲು ವಿಧಿಸಿರುವ ಎಲ್ಲ ನಿರ್ಬಂಧವನ್ನು ಇಸ್ರೇಲ್ ತೆಗೆದುಹಾಕಬೇಕು’ ಎಂದು ಇವುಗಳು ಹೇಳಿವೆ.

‘ಹಮಾಸ್‌ನ ಕ್ರಿಯೆಗಳನ್ನು ಖಂಡಿಸಲಾಗಿಲ್ಲ ಅಥವಾ ತನ್ನನ್ನು ತಾನು ರಕ್ಷಿಸಿಕೊಳ್ಳಲು ಇಸ್ರೇಲ್‌ಗೆ ಹಕ್ಕಿದೆ ಎಂಬುದನ್ನೂ ಉಲ್ಲೇಖಿಸಲಾಗಿಲ್ಲ. ಹಮಾಸ್‌ಗೆ ಅನುಕೂಲವಾಗುವ ತಪ್ಪು ಸಂಕಥನಕ್ಕೆ ಈ ನಿರ್ಣಯವು ಅಂಕಿತ ಹಾಕಿದೆ. ಇದಕ್ಕೆ ಈ ಮಂಡಳಿಯ ಇತರ ಸದಸ್ಯರು ದನಿಗೂಡಿಸಿದ್ದಾರೆ’ ಎಂದು ಮತಚಲಾಯಿಸುವುದಕ್ಕೂ ಮುನ್ನ ಅಮೆರಿಕದ ನೀತಿ ಸಲಹೆಗಾರ ಮಾರ್ಗನ್ ಒರ್ಟಗಸ್ ಹೇಳಿದರು.

> ಭಯೋತ್ಪಾದನೆಯ ಕುರಿತು ಭದ್ರತಾ ಮಂಡಳಿಯು ಕಣ್ಣುಮುಚ್ಚಿ ಕುಳಿತರೂ ಇಸ್ರೇಲ್ ಮಾತ್ರ ಹಮಾಸ್ ವಿರುದ್ಧದ ತನ್ನ ಯುದ್ಧವನ್ನು ಮುಂದುವರಿಸುತ್ತದೆ
>
> **ಡ್ಯಾನಿ ಡ್ಯಾನನ್,** ವಿಶ್ವ ಸಂಸ್ಥೆಗೆ ಇಸ್ರೇಲ್ ರಾಯಭಾರಿ

ಇತರೆ ಅರಬ್ ರಾಷ್ಟ್ರಗಳಿಗೂ ಒಪ್ಪಂದದ ಬಾಗಿಲು ತೆರೆದಿದೆ: ಪಾಕ್ ರಕ್ಷಣಾ ಸಚಿವ

‘ನ್ಯಾಟೊ’ ಮಾದರಿಯ ರಕ್ಷಣಾ ವ್ಯವಸ್ಥೆ



ಖ್ವಾಜಾ ಆಸಿಫ್

ಇಸ್ಲಾಮಾಬಾದ್ (ಪಿಟಿಐ): ‘ಪಾಕಿಸ್ತಾನ ಮತ್ತು ಸೌದಿ ಅರೇಬಿಯಾ ನಡುವಿನ ಪರಸ್ಪರ ರಕ್ಷಣಾ ಒಪ್ಪಂದದಲ್ಲಿ ಇತರೆ ಅರಬ್ ರಾಷ್ಟ್ರಗಳ ಪ್ರವೇಶವನ್ನು ಅಲ್ಲಗಳೆಯುವಂತಿಲ್ಲ. ಇದಕ್ಕಾಗಿ ಬಾಗಿಲು ಇನ್ನೂ ತೆರೆದೇ ಇದೆ’ ಎಂದು ಪಾಕ್ ರಕ್ಷಣಾ ಸಚಿವ ಖ್ವಾಜಾ ಆಸಿಫ್ ಹೇಳಿದ್ದಾರೆ.

‘ಪರಸ್ಪರ ರಕ್ಷಣಾ ಕಾರ್ಯತಂತ್ರಕ್ಕೆ’ ಸೌದಿ ಮತ್ತು ಪಾಕಿಸ್ತಾನ ಬುಧವಾರ ಸಹಿ ಹಾಕಿತ್ತು. ಈ ಒಪ್ಪಂದದಲ್ಲಿ ಇನ್ನಷ್ಟು ಅರಬ್ ರಾಷ್ಟ್ರಗಳು ಸೇರ್ಪಡೆಯಾಗುವ ಸಾಧ್ಯತೆ ಇದೆಯೇ ಎಂಬ ಸುದ್ದಿಗಾರರ ಪ್ರಶ್ನೆಗೆ, ‘ಇಷ್ಟು ಬೇಗ ಈ ಪ್ರಶ್ನೆಗೆ ಉತ್ತರಿಸುವುದಿಲ್ಲ. ಆದರೆ, ಈ ಸಾಧ್ಯತೆಯ ಬಾಗಿಲು ಇನ್ನೂ ಮುಚ್ಚಿಲ್ಲ’ ಎಂದು ಅವರು ಹೇಳಿದರು.

‘ಇದೊಂದು ಆಕ್ರಮಣಕಾರಿ ಒಪ್ಪಂದವಲ್ಲ. ಬದಲಿಗೆ ‘ನ್ಯಾಟೊ’ ಮಾದರಿಯ ರಕ್ಷಣಾ ವ್ಯವಸ್ಥೆ ಎಂದ ಆಸಿಫ್, ವಿಶೇಷವಾಗಿ ಮುಸ್ಲಿಂ ರಾಷ್ಟ್ರಗಳಿಗೆ ತಮ್ಮ ದೇಶವನ್ನು ರಕ್ಷಿಸಿಕೊಳ್ಳಲು, ಒಟ್ಟಾಗಿ ಹೋರಾಡಲು ಇಂಥದೊಂದು ರಕ್ಷಣಾ ಒಪ್ಪಂದದ ಅಗತ್ಯವಿದೆ. ಇದು ಇಲ್ಲಿನ ಜನರ ಮೂಲಭೂತ ಹಕ್ಕು’ ಎಂದು ಪ್ರತಿಪಾದಿಸಿದರು.

ಕೊಲ್ಲಿ ರಾಷ್ಟ್ರಗಳಲ್ಲಿ ಅಮೆರಿಕದ ಪ್ರಮುಖ ಮಿತ್ರ ರಾಷ್ಟ್ರವಾದ ಕತಾರ್ ಮೇಲೆ, ಹಮಾಸ್ ಮುಖಂಡರನ್ನು ಗುರಿಯಾಗಿಸಿ ಇಸ್ರೇಲ್ ಸೇನೆ ದಾಳಿ ನಡೆಸಿದ ಬೆನ್ನಲ್ಲೇ, ಪಾಕ್–ಸೌದಿ ನಡುವೆ ಈ ರಕ್ಷಣಾ ಒಪ್ಪಂದ ಏರ್ಪಟ್ಟಿತ್ತು.

> ಭಯೋತ್ಪಾದನೆ ವಿಷಯದಲ್ಲಿ ಪಾಕಿಸ್ತಾನವನ್ನು ಏಕಾಂಗಿ ಮಾಡುವ ಬದಲು, ಮೋದಿ ಸರ್ಕಾರ ಪಾಕ್‌ಗೆ ಶಕ್ತಿಶಾಲಿ ರಕ್ಷಣಾ ಛತ್ರಿ ಪಡೆಯಲು ಅವಕಾಶ ಕಲ್ಪಿಸಿದೆ
>
> **ರಣದೀಪ್ ಸುರ್ಜೇವಾಲ** ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ

ಅಮೆರಿಕದ ಪಾತ್ರ ಅಲ್ಲಗಳೆದ ಆಸಿಫ್

ಪಾಕ್ –ಸೌದಿ ರಕ್ಷಣಾ ಒಪ್ಪಂದದ ವಿಚಾರದಲ್ಲಿ ಅಮೆರಿಕವನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಲಾಗಿದೆಯೇ ಎಂಬ ಪ್ರಶ್ನೆಗೆ, ಈ ವಿಷಯದಲ್ಲಿ ಮೂರನೆಯ ವ್ಯಕ್ತಿ/ ದೇಶ ಭಾಗಿಯಾಗಲು ಯಾವುದೇ ಆಧಾರ ಅಥವಾ ಸಮರ್ಥನೆ ಇಲ್ಲ’ ಎಂದು ಆಸಿಫ್ ಹೇಳಿದರು.

‘ಒಪ್ಪಂದದಲ್ಲಿ ಪಾಕಿಸ್ತಾನದ ಅಣ್ವಸ್ತ್ರ ಬಳಸುವ ವಿಚಾರವೂ ಸೇರಿದೆಯೇ ಎಂಬ ಪ್ರಶ್ನೆಗೆ, 'ಖಂಡಿತವಾಗಿಯೂ ನಮ್ಮ ಬಳಿ ಏನಿದೆಯೋ ಅಥವಾ ನಮ್ಮ ಸಾಮರ್ಥ್ಯ ಏನಿದೆಯೋ ಅದೆಲ್ಲವೂ ಈ ಒಪ್ಪಂದದಡಿ ಬರುತ್ತದೆ’ ಎಂದರು.

ಮೂರನೆಯ ದೇಶದ ವಿರುದ್ಧ ಅಲ್ಲ: ‘ಸೌದಿಯೊಂದಿಗೆ ನಾವು ರಕ್ಷಣಾ ಒಪ್ಪಂದ ಮಾಡಿಕೊಂಡಿರುವುದು ಮೂರನೆಯ ದೇಶದ ವಿರುದ್ಧವಾಗಿ ಅಲ್ಲ. ಪಾಕ್ ಮತ್ತು ಸೌದಿ ನಡುವಿನ ರಕ್ಷಣಾ ಸಹಕಾರದ ಜಂಟಿ ಸಹಭಾಗಿತ್ವವನ್ನು ಈ ಒಪ್ಪಂದ ಪ್ರತಿಬಿಂಬಿಸುತ್ತದೆ’ ಎಂದು ಪಾಕಿಸ್ತಾನದ ವಿದೇಶಾಂಗ ಕಚೇರಿಯ ವಕ್ತಾರ ಶಫಕ್ ಅಲಿ ಖಾನ್ ಹೇಳಿದ್ದಾರೆ.

ಭರವಸೆ ಇದೆ: ರಣಧೀರ್ ಜೈಸ್ವಾಲ್

ಮುಂಬೈ (ರಾಯಿಟರ್ಸ್): ಭಾರತವು ಸೌದಿ ಅರೇಬಿಯಾದೊಂದಿಗೆ ವಿಶಾಲ ಶ್ರೇಣಿಯ ವ್ಯವಹಾರ ಪಾಲುದಾರಿಕೆ ಹೊಂದಿದೆ. ಇತ್ತೀಚಿನ ವರ್ಷಗಳಲ್ಲಿ ಇದು ಗಮನಾರ್ಹ ಪ್ರಗತಿ ಕಂಡಿದೆ. ಹೀಗಾಗಿ ಪರಸ್ಪರ ಹಿತಾಸಕ್ತಿ ಮತ್ತು ಎರಡು ದೇಶಗಳ ನಡುವಿನ ಸೂಕ್ಷ್ಮತೆಗಳನ್ನು ಸೌದಿ ಗಮನದಲ್ಲಿ ಇಟ್ಟುಕೊಳ್ಳುತ್ತದೆ ಎಂಬ ಭರವಸೆ ಇದೆ’ ಎಂದು ಭಾರತದ ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ ಹೇಳಿದ್ದಾರೆ.

ಇದೇ 22ಕ್ಕೆ ಕಾಂತಾರ ಟ್ರೇಲರ್

ರಿಷಬ್ ಶೆಟ್ಟಿ ಅವರು ಕಥೆ, ಚಿತ್ರಕಥೆ ಬರೆದು ನಿರ್ದೇಶಿಸಿ, ನಟಿಸಿರುವ 'ಕಾಂತಾರ ಅಧ್ಯಾಯ 1' ಚಿತ್ರದ ಬಿಡುಗಡೆ ಹತ್ತಿರದಲ್ಲಿದ್ದರೂ ಚಿತ್ರದ ಪ್ರಚಾರ ತುಣುಕುಗಳು ಈತನಕ ಹೊರಬಂದಿರಲಿಲ್ಲ. 'ಕಾಂತಾರ'ದ ಜಗತ್ತು ಪರಿಚಯಿಸುವ ಮೇಕಿಂಗ್ ವಿಡಿಯೊವನ್ನು ಮಾತ್ರ ಚಿತ್ರತಂಡ ಈ ಹಿಂದೆ ಬಿಡುಗಡೆಗೊಳಿಸಿತ್ತು. ಹಾಡುಗಳು, ಟ್ರೇಲರ್ ಯಾವಾಗ ಎಂದು ಕೇಳುತ್ತಿದ್ದವರಿಗೆ ಚಿತ್ರತಂಡ ಉತ್ತರ ನೀಡಿದೆ. ಸೆ.22 ರಂದು ಚಿತ್ರದ ಟ್ರೇಲರ್ ಬಿಡುಗಡೆ ಮಾಡುವುದಾಗಿ ಚಿತ್ರತಂಡ ಘೋಷಿಸಿದೆ.

'ಕಾಂತಾರ ಅಧ್ಯಾಯ 1' ಚಿತ್ರದ ಟ್ರೇಲರ್ ಸೆಪ್ಟೆಂಬರ್ 22, 2025ರಂದು ಮಧ್ಯಾಹ್ನ 12:40ಕ್ಕೆ ಅಧಿಕೃತವಾಗಿ ಬಿಡುಗಡೆಯಾಗಲಿದೆ ಎಂದು ಹೊಂಬಾಳೆ ಫಿಲ್ಮ್ಸ್ ಘೋಷಿಸಿದೆ. ಈ ಚಿತ್ರವು ಅಕ್ಟೋಬರ್ 2ರಂದು ವಿಶ್ವದಾದ್ಯಂತ ತೆರೆ ಕಾಣಲಿದ್ದು, ಅಮೆರಿಕ ಸೇರಿದಂತೆ ವಿದೇಶಿ ಚಿತ್ರಮಂದಿರಗಳಲ್ಲಿ ಮುಂಗಡ ಟಿಕೆಟ್‌ಗಳು ಈಗಾಗಲೇ ಮಾರಾಟಗೊಂಡಿವೆ.

'ಕರಾವಳಿ ಕರ್ನಾಟಕದ ಅತೀಂದ್ರಿಯ ಲೋಕವನ್ನು ಅನಾವರಣಗೊಳಿಸುವ ಈ ಚಿತ್ರವು ಪುರಾಣ, ಭಕ್ತಿ ಮತ್ತು ಅದೃಷ್ಟದ ನಡುವಿನ ಪೌರಾಣಿಕ ಕಥೆಯನ್ನು ಹೇಳುತ್ತದೆ' ಎಂದಿದೆ ಚಿತ್ರತಂಡ. 'ರಿಷಬ್ ಅವರು ನಾಗಾಸಾಧು ಹಾಗೂ ದೈವವನ್ನು ತುಳುನಾಡಿಗೆ ಪರಿಚಯಿಸುವ ರಾಜನ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ' ಎನ್ನಲಾಗಿದೆ.

ರಿಷಬ್ ಶೆಟ್ಟಿ, ಜೊತೆಗೆ ರುಕ್ಮಿಣಿ ವಸಂತ್, ಗುಲ್ಶನ್ ದೇವಯ್ಯ ಅವರು ಚಿತ್ರದ ಪ್ರಮುಖ ಪಾತ್ರಗಳಲ್ಲಿ ಕಾಣಿಸಿಕೊಂಡಿದ್ದಾರೆ. ಬಿ.ಅಜನೀಶ್ ಲೋಕನಾಥ್ ಸಂಗೀತ, ಅರವಿಂದ್ ಎಸ್. ಕಶ್ಯಪ್ ಛಾಯಾಚಿತ್ರಗ್ರಹಣವಿದೆ.

ರಿಷಬ್ ಶೆಟ್ಟಿ

ಶ್ರೀದೇವಿಗೆ ಕಮಲ್ ಕಥೆಯೇ ಶತ್ರು!

ಚಿತ್ರ: ಕಮಲ್ ಶ್ರೀದೇವಿ
- ನಿರ್ಮಾಣ: ಬಿ.ಎ.ಧನಲಕ್ಷ್ಮಿ, ರಾಜವರ್ಧನ್
- ನಿರ್ದೇಶನ: ಸುನೀಲ್ ವಿ.ಎ
- ತಾರಾಗಣ: ಸಚಿನ್ ಚಲುವರಾಯಸ್ವಾಮಿ, ಸಂಗೀತಾ ಭಟ್, ಕಿಶೋರ್, ರಮೇಶ್ ಇಂದಿರಾ, ಮತ್ತಿತರರು

• ವಿನಾಯಕ ಕೆ.ಎಸ್.

ಆಕೆ ಶ್ರೀದೇವಿ. ಎಪ್ಪತ್ತು ಸಾವಿರ ರೂಪಾಯಿ ಸಂಪಾದನೆಗಾಗಿ ವೇಶ್ಯಾವಾಟಿಕೆಗೆ ಬರುತ್ತಾಳೆ. ಅಲ್ಲಿ ದಲ್ಲಾಳಿ 'ಮಾಮು' ಪರಿಚಯವಾಗುತ್ತದೆ. ಆತನಿಂದ ಗಿರಾಕಿಗಳನ್ನು ಪಡೆಯುವ ಶ್ರೀದೇವಿ ಅಂದೇ ಕೊಲೆಯಾಗುತ್ತಾಳೆ. ಶ್ರೀದೇವಿ ಕೊಲೆಯಿಂದಲೇ ಚಿತ್ರ ಪ್ರಾರಂಭವಾಗುತ್ತದೆ. ಕೊಲೆ ಮಾಡಿದ್ದು ಯಾರು ಎಂಬ ಹುಡುಕಾಟವೇ ಇಡೀ ಚಿತ್ರದ ಕಥೆ. ಇದರ ಜೊತೆಜೊತೆಗೆ ಶ್ರೀದೇವಿಯನ್ನು ಭೇಟಿಯಾಗಲು ಬರುವ ಕಮಲ್ ಕಥೆಯೂ ತೆರೆದುಕೊಳ್ಳುತ್ತದೆ. ಆದಾಗ್ಯೂ ಸಸ್ಪೆನ್ಸ್, ಥ್ರಿಲ್ಲರ್ ಅಥವಾ ಮರ್ಡರ್ ಮಿಸ್ಟ್ರಿ ಸಿನಿಮಾದಲ್ಲಿ ಇರಬೇಕಿದ್ದ ಕುತೂಹಲ ಇಲ್ಲಿ ಕಾಣುವುದಿಲ್ಲ.

ಕೊಲೆಯಾದ ದಿನ ಶ್ರೀದೇವಿಯನ್ನು ಭೇಟಿಯಾಗುವುದು ಆರು ಗಿರಾಕಿಗಳು. ಅವರಲ್ಲಿ ಯಾರೋ ಒಬ್ಬ ಕೊಲೆಗಾರ ಎಂಬ ಅನುಮಾನದೊಂದಿಗೆ ಪೊಲೀಸರು ಪ್ರಕರಣದ ತನಿಖೆ ಪ್ರಾರಂಭಿಸುತ್ತಾರೆ. ಇಲ್ಲಿ ಬರುವ ಆರು ಪಾತ್ರಗಳು ಭಿನ್ನವಾಗಿ, ಮಜವಾಗಿವೆ. ಪ್ರತಿ ಪಾತ್ರಕ್ಕೂ ಅದರದ್ದೇ ಆದ ವೈಶಿಷ್ಟ್ಯವಿದೆ. ಜೊತೆಗೆ ಈ ಪಾತ್ರಗಳು ನಮ್ಮ ಸಮಾಜದ ಪ್ರತಿಬಿಂಬಗಳಂತಿವೆ. ಸಿನಿಮಾ ನಿರ್ದೇಶಕನಾಗಿ ಅಲ್ಲಿಗೆ ಬರುವ ಮೊದಲ ಗಿರಾಕಿಯೇ ಕಮಲ್. ಆತನದ್ದು ಬೇರೆಯೇ ಕಥೆ. ಅದರ ಜೊತೆಗೆ ಶ್ರೀದೇವಿ ಬದುಕು-ಬವಣೆ ತೆರೆದುಕೊಳ್ಳುತ್ತ ಹೋಗುತ್ತದೆ.

ಕಮಲ್ ಪಾತ್ರದ ಮೂಲಕ ಸೋತ ಸಿನಿಮಾದ ನಿರ್ದೇಶಕನೊಬ್ಬನ ಕಥೆಯನ್ನು ಹೇಳುತ್ತ ಹೋಗುತ್ತಾರೆ. ಕಮಲ್ ಮತ್ತು ಶ್ರೀದೇವಿಯ ಸ್ನೇಹ ಗಟ್ಟಿಯಾಗುತ್ತ, ಸಣ್ಣ ಪ್ರೀತಿಯ ಪಯಣವೂ ಇಲ್ಲಿ ಆಗುತ್ತದೆ. ಚಿತ್ರದಲ್ಲಿ ಕಮಲ್

ಸಂಗೀತಾ ಭಟ್

ಕಥೆ ಇಲ್ಲದಿದ್ದರೆ ಶ್ರೀದೇವಿ ಕಥೆ ಅಪೂರ್ಣವಾಗುತ್ತಿತ್ತು ಎನ್ನುವಂಥ ಸನ್ನಿವೇಶ ಗಳಿಲ್ಲ. ಹೀಗಾಗಿ ಈ ಕಥೆ ಸಾಕಷ್ಟು ಕಡೆ ಮುಖ್ಯ ಕಥೆಗೆ ಅಪ್ರಸ್ತುತ ಎನ್ನಿಸುತ್ತದೆ. ಗಿರಾಕಿಯಾಗಿ ಬಂದ ಕಮಲ್ ಶ್ರೀದೇವಿಯನ್ನು ಕೊಲೆ ಮಾಡಿರಬಹುದಾ ಎಂಬ ಅನುಮಾನವನ್ನು ಮೂಡಿಸಲು ನಿರ್ದೇಶಕರು ಯತ್ನಿಸಿದ್ದಾರೆ. ಆದರೆ ಅದು ಇನ್ನಷ್ಟು ಗಟ್ಟಿಯಾಗಿ ದ್ದರೆ, ಕೊಲೆಯ ಸುತ್ತದ ತನಿಖೆ, ಸಾಕ್ಷ್ಯಗಳ ಮೇಲೆ ಇನ್ನಷ್ಟು ಗಮನ ನೀಡಿದ್ದರೆ ಚಿತ್ರ ಸ್ವಲ್ಪ ಕುತೂಹಲ ಮೂಡಿಸುತ್ತಿತ್ತು. ಕೊಲೆಗಿಂತ ಆರೋಪಿಗಳ ಕಥೆಯೇ ಹೆಚ್ಚಾಗಿ ಯಾರೋ ಒಬ್ಬರು ಕೊಲೆ ಮಾಡಿರುತ್ತಾರೆ ಎಂಬ ಭಾವನೆ ಮೂಡಿಸುತ್ತದೆ.

ಇಡೀ ಚಿತ್ರದ ಹೈಲೈಟ್ ರಮೇಶ ಇಂದಿರಾ. ನೀರನ್ನು ಯಾವ ಪಾತ್ರೆಗೆ ಹಾಕಿದರೂ ಪಾತ್ರೆಯ ಆಕಾರ ತಾಳಬಲ್ಲದು ಎಂಬಂತಿದೆ ಅವರ ನಟನೆ. ಮಾರುಕಟ್ಟೆಯಲ್ಲಿ ವೇಶ್ಯಾವಾಟಿಕೆಗೆ ಗಿರಾಕಿಗಳನ್ನು ಹುಡುಕಿಕೊಡುವ ದಲ್ಲಾಳಿಯಾಗಿ ಅದ್ಭುತವಾಗಿ ನಟಿಸಿದ್ದಾರೆ. ತಮ್ಮ ಹಾವಭಾವಗಳಿಂದ ಸಿನಿಮಾ ಮುಗಿದ ನಂತರವೂ ಅವರು ನೆನಪಿನಲ್ಲಿ ಉಳಿಯುತ್ತಾರೆ. ಶ್ರೀದೇವಿಯಾಗಿ ಸಂಗೀತಾ ಭಟ್ ಕೂಡ ತಮ್ಮ ಪಾತ್ರಕ್ಕೆ ನ್ಯಾಯ ಒದಗಿಸಿದ್ದಾರೆ. ಮಂತ್ರವಾದಿಯಾಗಿ, ಗಿರಾಕಿಗಳಲ್ಲಿ ಒಬ್ಬರಾಗಿ ಮಿತ್ರ ಕೂಡ ಗಮನ ಸೆಳೆಯುತ್ತಾರೆ. ಕಿಶೋರ್‌ಗೆ ಇಲ್ಲಿ ಪೊಲೀಸ್ ಪಾತ್ರ. ಅವರು ತಮ್ಮ ಕೆಲಸವನ್ನು ಅಚ್ಚುಕಟ್ಟಾಗಿ ನಿಭಾಯಿಸಿದ್ದಾರೆ. ಸಚಿನ್ ಚಲುವರಾಯಸ್ವಾಮಿ ನಟನೆಗೆ ಇನ್ನೂ ಸ್ವಲ್ಪ ಶ್ರಮ ಹಾಕುವ ಅಗತ್ಯವಿತ್ತು. ಕೆಲ ದ್ವಂದ್ವಾರ್ಥದ ಮಾತುಗಳನ್ನು ಹೊರತುಪಡಿಸಿ ಒಟ್ಟಾರೆ ಸಂಭಾಷಣೆ ಗಮನ ಸೆಳೆಯುವಂತಿದೆ.

ಬಹುತೇಕ ಕಥೆ ನಡೆಯುವುದು ಲಾಡ್ಜ್ ಮತ್ತು ಪೊಲೀಸ್ ಠಾಣೆಯಲ್ಲಿ. ಆದಾಗ್ಯೂ ಛಾಯಾಚಿತ್ರ ಗ್ರಹಣ ಸೊಗಸಾಗಿದೆ. ಛಾಯಾಚಿತ್ರಗ್ರಾಹಕ ನಾಗೇಶ್ ಆಚಾರ್ಯ ಪ್ರತಿ ದೃಶ್ಯವನ್ನೂ ವರ್ಣಮಯವಾಗಿಸಿದ್ದಾರೆ. ಹಾಡುಗಳು ನೆನಪಿನಲ್ಲಿ ಉಳಿಯುವುದಿಲ್ಲ. ಆದರೆ ಹಿನ್ನೆಲೆ ಸಂಗೀತ ನಡೆಯುವ ಕಥೆಗೆ ಪೂರಕವಾಗಿದೆ. ಭಿನ್ನಕಥೆಯನ್ನು ಇಷ್ಟಪಡುವವರಿಗೆ ಸೂಕ್ತವಾದ ಸಿನಿಮಾವಿದು. ವೇಶ್ಯೆಯ ಕುರಿತಾಗಿ ಸಮಾಜಕ್ಕೆ ಸಾಕಷ್ಟು ಕಲ್ಪನೆಗಳಿರುತ್ತವೆ. ಅವರಿಗೆ ಒಂದು ಗಟ್ಟಿಯಾದ ಹಿನ್ನೆಲೆ ಕಥೆ ಇರುತ್ತದೆ. ಚಿತ್ರಕಥೆಯಲ್ಲಿ ಶ್ರೀದೇವಿ ಹಿನ್ನೆಲೆಯನ್ನು ಇನ್ನಷ್ಟು ಗಟ್ಟಿಯಾಗಿ, ಕಾಡುವಂತೆ ಹೇಳುವ ಹಾಗೂ ಸಾಕಷ್ಟು ಕಡೆ ತರ್ಕವಿಲ್ಲದ ಕಮಲ್ ಕಥೆಯನ್ನು ಸಿನಿಮಾದ ಮುಖ್ಯ ಕಥೆಯೊಂದಿಗೆ ಪ್ರಭಾವಶಾಲಿಯಾಗಿ ಬೆಸೆಯುವ ಅವಕಾಶ ನಿರ್ದೇಶಕರಿಗಿತ್ತು.


ಯಶ್

ಅಂತಿಮ ಹಂತದಲ್ಲಿ 'ಟಾಕ್ಸಿಕ್'

ಯಶ್ ಅಭಿನಯದ 'ಟಾಕ್ಸಿಕ್' ಚಿತ್ರದ ಮುಂಬೈ ಭಾಗದ ಚಿತ್ರೀಕರಣ ಇತ್ತೀಚೆಗಷ್ಟೇ ಪೂರ್ಣಗೊಂಡಿದೆ. ಅಂತಿಮ ಹಂತದ ಚಿತ್ರೀಕರಣ ಬೆಂಗಳೂರಿನಲ್ಲಿ ನಡೆಯಲಿದೆ ಎಂದು ಚಿತ್ರತಂಡ ಹೇಳಿದೆ.

ಗೀತು ಮೋಹನ್‌ದಾಸ್ ನಿರ್ದೇಶನದ ಚಿತ್ರ ಕನ್ನಡ ಹಾಗೂ ಇಂಗ್ಲಿಷ್ ಭಾಷೆಗಳಲ್ಲಿ ಸಿದ್ಧಗೊಳ್ಳುತ್ತಿದೆ. 'ಮುಂಬೈ ನಗರದ ಅನೇಕ ಸ್ಥಳಗಳಲ್ಲಿ 45 ದಿನಗಳ ಕಾಲ ನಡೆದ ಚಿತ್ರೀಕರಣದಲ್ಲಿ ಸಾಹಸ ದೃಶ್ಯಗಳನ್ನು ಚಿತ್ರೀಕರಿಸಿದ್ದೇವೆ. ಇದರೊಂದಿಗೆ ಚಿತ್ರದ ಬಹುಪಾಲು ಚಿತ್ರೀಕರಣ ಮುಗಿದಂತಾಗಿದೆ. ಉಳಿದ ಭಾಗದ ಚಿತ್ರೀಕರಣ ಬೆಂಗಳೂರಿನಲ್ಲಿ ನಡೆಯಲಿದೆ. ಹಾಲಿವುಡ್ ಸಾಹಸ ನಿರ್ದೇಶಕ ಜೆಜೆ ಪೆರ್ರಿ ಸಾಹಸ ದೃಶ್ಯಗಳನ್ನು ನಿರ್ದೇಶಿಸಿದ್ದಾರೆ. ಇವರು 'ಫಾಸ್ಟ್ ಆ್ಯಂಡ್ ಫ್ಯೂರಿಯಸ್', 'ವಾರಿಯರ್' ಮುಂತಾದ ಸಿನಿಮಾಗಳಿಗೆ ಸಾಹಸ ನಿರ್ದೇಶಕರಾಗಿ ಕೆಲಸ ಮಾಡಿದ್ದರು' ಎಂದು ಚಿತ್ರತಂಡ ತಿಳಿಸಿದೆ.

ಕೆವಿಎನ್ ಪ್ರೊಡಕ್ಷನ್ ಬ್ಯಾನರ್‌ನಲ್ಲಿ ವೆಂಕಟ್ ಕೆ ನಾರಾಯಣ ಬಂಡವಾಳ ಹೂಡಿದ್ದಾರೆ. ಯಶ್ ಅವರ ಮಾನ್ಸ್ಟರ್ ಮೈಂಡ್ ಕ್ರಿಯೇಷನ್ಸ್ ಕೂಡ ಚಿತ್ರ ನಿರ್ಮಾಣದಲ್ಲಿ ಪಾಲು ಹೊಂದಿದೆ. 'ಗೋವಾದ ಡ್ರಗ್ಸ್ ಮಾಫಿಯಾ ಕಥೆ ಹೊಂದಿರುವ ಚಿತ್ರವಿದು' ಎಂದಿವೆ ಚಿತ್ರತಂಡದ ಮೂಲಗಳು. ಹಿಂದಿ, ತಮಿಳು, ತೆಲುಗು, ಮಲಯಾಳ ಸೇರಿದಂತೆ ಹಲವು ಭಾರತೀಯ ಹಾಗೂ ವಿದೇಶಿ ಭಾಷೆಗಳಲ್ಲಿ ಡಬ್ ಆಗಿ ಬಿಡುಗಡೆಗೊಳ್ಳಲಿದೆ.

ಬೃಹತ್ ಬಂಡವಾಳದಲ್ಲಿ ನಿರ್ಮಾಣಗೊಳ್ಳುತ್ತಿರುವ ಚಿತ್ರ 2026ರ ಮಾರ್ಚ್ 19ರಂದು ತೆರೆಕಾಣಲಿದೆ. ಕಿಯಾರಾ ಅಡ್ವಾಣಿ, ನಯನತಾರಾ, ಹುಮಾ ಖುರೇಷಿ, ತಾರಾ ಸುತಾರಿಯಾ ರುಕ್ಮಿಣಿ ವಸಂತ್ ಮುಂತಾದವರು ಚಿತ್ರದಲ್ಲಿದ್ದಾರೆ ಎನ್ನಲಾಗಿದೆ.

ಚಿಟಿಕೆ ಸುದ್ದಿ

ಎಚ್‌ಕೆಪಿ ಅಧ್ಯಕ್ಷತೆಯಲ್ಲಿ ಸಂಪುಟ ಉಪಸಮಿತಿ

ಬೆಂಗಳೂರು: ಜಿಲ್ಲಾ ಕಾರ್ಮಿಕರ ಸೇವೆಗಳ ವಿವಿಧೋದ್ದೇಶ ಸಹಕಾರ ಸಂಘ ಸ್ಥಾಪಿಸಲು ಮತ್ತು ಹೊರ ಗುತ್ತಿಗೆ ಸಿಬ್ಬಂದಿಗೆ ಸೇವಾ ಭದ್ರತೆ ಕಲ್ಪಿಸುವ ಉದ್ದೇಶದಿಂದ ಸೂಕ್ತ ಶಿಫಾರಸು ಮಾಡಲು ಕಾನೂನು ಸಚಿವ ಎಚ್‌.ಕೆ. ಪಾಟೀಲ ಅವರ ನೇತೃತ್ವದಲ್ಲಿ ಸಂಪುಟ ಉಪ ಸಮಿತಿ ರಚಿಸಲಾಗಿದೆ.

ಆರೋಗ್ಯ ಸಚಿವ ದಿನೇಶ್ ಗುಂಡೂರಾವ್, ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ, ಕಾರ್ಮಿಕ ಸಂತೋಷ್ ಲಾಡ್, ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ ಎಸ್. ತಂಗಡಗಿ ಮತ್ತು ನಗರಾಭಿವೃದ್ಧಿ ಸಚಿವ ಬಿ.ಎಸ್.ಸುರೇಶ್ ಅವರು ಉಪಸಮಿತಿ ಸದಸ್ಯರಾಗಿದ್ದಾರೆ.

10 ಯೋಗ–ಪ್ರಕೃತಿ ಚಿಕಿತ್ಸಾ ಕೇಂದ್ರಕ್ಕೆ ಅನುಮತಿ



ಬೆಂಗಳೂರು: ರಾಷ್ಟ್ರೀಯ ಆಯುಷ್ ಅಭಿಯಾನ ಯೋಜನೆಯಡಿ ರಾಜ್ಯದಲ್ಲಿ ಹತ್ತು ಯೋಗ ಮತ್ತು ಪ್ರಕೃತಿ ಚಿಕಿತ್ಸಾ ಕೇಂದ್ರಗಳನ್ನು ಪ್ರಾರಂಭಿಸಲು ಆರೋಗ್ಯ ಇಲಾಖೆ ಅನುಮತಿ ನೀಡಿ ಆದೇಶ ಹೊರಡಿಸಿದೆ.

ಸಾರ್ವಜನಿಕ–ಖಾಸಗಿ ಸಹಭಾಗಿತ್ವದಲ್ಲಿ (ಪಿಪಿಪಿ) ನಿಪ್ಪಾಣಿ, ಬೈಲಹೊಂಗಲ, ಬಾದಾಮಿ, ಮುಧೋಳ, ಗಜೇಂದ್ರಗಢ, ಕೊಪ್ಪಳ ಜಿಲ್ಲೆಯ ಕುಕನೂರು, ರಾಣೆಬೆನ್ನೂರು, ಬಸವನ ಬಾಗೇವಾಡಿ, ದೇವನಹಳ್ಳಿ ಹಾಗೂ ಎಚ್‌.ಡಿ. ಕೋಟೆಯಲ್ಲಿ ಯೋಗ ಮತ್ತು ಪ್ರಕೃತಿ ಚಿಕಿತ್ಸಾ ಕೇಂದ್ರ ಕಾರ್ಯನಿರ್ವಹಿಸಲಿದೆ ಎಂದು ತಿಳಿಸಲಾಗಿದೆ.

ಹೋರಾಟದ ಎಚ್ಚರಿಕೆ ನೀಡಿದ ಬಿಆರ್‌ಎಸ್

ರಾಮರಾವ್

ಹೈದರಾಬಾದ್: ಆಲಮಟ್ಟಿ ಅಣೆಕಟ್ಟೆಯ ಎತ್ತರ ಹೆಚ್ಚಿಸುವ ಕರ್ನಾಟಕದ ಯೋಜನೆಗೆ ಮಹಾರಾಷ್ಟ್ರ ವಿರೋಧ ವ್ಯಕ್ತಪಡಿಸುತ್ತಿರುವ ನಡುವೆಯೇ, ಈಗ ತೆಲಂಗಾಣ ಕೂಡ ತಕರಾರು ತೆಗೆದಿದೆ.

ಅಣೆಕಟ್ಟೆಯ ಎತ್ತರ ಹೆಚ್ಚಿಸುವ ಯೋಜನೆ ಅನುಷ್ಠಾನಕ್ಕೆ ಕರ್ನಾಟಕ ಮುಂದಾದಲ್ಲಿ ಉಗ್ರ ಹೋರಾಟ ನಡೆಸುವುದಾಗಿ ಬಿಆರ್‌ಎಸ್ ಪಕ್ಷ ಎಚ್ಚರಿಸಿದೆ.

'ಕರ್ನಾಟಕದ ಈ ನಡೆ ತೆಲಂಗಾಣ ರೈತರ ಪಾಲಿಗೆ ಮರಣಶಾಸನವಾಗಲಿದೆ' ಎಂದು ಬಿಆರ್‌ಎಸ್ ಕಾರ್ಯಾಧ್ಯಕ್ಷ ಕೆ.ಟಿ. ರಾಮರಾವ್ ಟೀಕಿಸಿದ್ದಾರೆ.

ಇದೇ ವಿಚಾರವಾಗಿ ತೆಲಂಗಾಣ ಮುಖ್ಯಮಂತ್ರಿ ಎ.ರೇವಂತ ರೆಡ್ಡಿ ವಿರುದ್ಧ ವಾಗ್ದಾಳಿ ನಡೆಸಿರುವ ಅವರು, 'ರಾಜ್ಯದ ರೈತರ ವಿರುದ್ಧ ಅಪಾಯಕಾರಿ ಸಂಚು ರೂಪಿಸಲಾಗುತ್ತಿರುವ ಸಂದರ್ಭದಲ್ಲಿ ರೇವಂತ ರೆಡ್ಡಿ ದೆಹಲಿಯಲ್ಲಿ ಐಷಾರಾಮಿ ಜೀವನ ಕಳೆಯುತ್ತಿದ್ದಾರೆ' ಎಂದು ಅವರು ಆರೋಪಿಸಿದ್ದಾರೆ.

ಈ ವಿಚಾರ ಕುರಿತು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಹಾಗೂ ರೇವಂತ ರೆಡ್ಡಿ ಅವರು ತೆಲಂಗಾಣ ರೈತರಿಗೆ ಉತ್ತರಿಸಬೇಕು ಎಂದೂ ಆಗ್ರಹಿಸಿದ್ದಾರೆ.

ಸ್ಥಳ ಪರಿಶೀಲನೆ ವರದಿಗೆ ನಿರ್ದೇಶನ

ಶರಾವತಿ ಪಂಪ್ಡ್ ಸ್ಟೋರೇಜ್ ಯೋಜನೆ ವನ್ಯಜೀವಿ ಮಂಡಳಿ ಸ್ಥಾಯಿ ಸಮಿತಿ ಸೂಚನೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಪ್ರಸ್ತಾವಿತ ಶರಾವತಿ ಪಂಪ್ಡ್ ಸ್ಟೋರೇಜ್ ಯೋಜನೆಯ ಸ್ಥಳಕ್ಕೆ ಭೇಟಿ ನೀಡಿ ವರದಿ ಸಲ್ಲಿಸುವಂತೆ ಮಂಡಳಿಯ ಸದಸ್ಯರಿಗೆ ರಾಷ್ಟ್ರೀಯ ವನ್ಯಜೀವಿ ಮಂಡಳಿಯ ಸ್ಥಾಯಿ ಸಮಿತಿ ನಿರ್ದೇಶನ ನೀಡಿದೆ.

ಮಂಡಳಿಯ ಸ್ಥಾಯಿ ಸಮಿತಿಯ 85ನೇ ಸಭೆಯಲ್ಲಿ ಈ ತೀರ್ಮಾನಕ್ಕೆ ಬರಲಾಗಿದೆ. ಯೋಜನೆಗೆ ತಾತ್ವಿಕ ಒಪ್ಪಿಗೆ ನೀಡಿರುವುದಕ್ಕೆ ಮಂಡಳಿಯ ಇಬ್ಬರು ಸದಸ್ಯರು ಜೂನ್‌ನಲ್ಲಿ ನಡೆದ ಸ್ಥಾಯಿ ಸಮಿತಿಯ ಸಭೆಯಲ್ಲಿ ಆಕ್ಷೇಪ ವ್ಯಕ್ತಪಡಿಸಿದ್ದರು. 'ಈ ಯೋಜನೆಯು ಪಶ್ಚಿಮ ಘಟ್ಟದ ಹೃದಯ ಭಾಗದಲ್ಲೇ ಅನುಷ್ಠಾನಗೊಳ್ಳಲಿದೆ. ಈ ಪ್ರದೇಶವನ್ನು

ಯುನೆಸ್ಕೊದ ಜೀವವೈವಿಧ್ಯ ತಾಣವೆಂದು ಗುರುತಿಸಲಾಗಿದೆ. ಒಂದು ವೇಳೆ, ಯೋಜನೆ ಅನುಷ್ಠಾನಗೊಂಡರೆ ಅಪಾರ ಹಾನಿ ಆಗಲಿದೆ' ಎಂದು ಎಚ್ಚರಿಸಿದ್ದರು.

'ಶರಾವತಿ ಪಂಪ್ಡ್ ಸ್ಟೋರೇಜ್‌ನಂತಹ ದೊಡ್ಡ ಯೋಜನೆಗಳನ್ನು ಪರಿಶೀಲಿಸಲು ಸಾಕಷ್ಟು ಸಮಯದ ಅಗತ್ಯ ಇದೆ. ತರಾತುರಿಯಲ್ಲಿ ಅನುಮೋದನೆ ನೀಡಿರುವುದು ಸರಿಯಲ್ಲ. ಪ್ರಸ್ತಾವನೆಯನ್ನು ಮರು ಪರಿಶೀಲಿಸುವ ಅಗತ್ಯ ಇದೆ' ಎಂದು ಸದಸ್ಯರಾದ ಎಚ್‌.ಎಸ್.ಸಿಂಗ್ ಹಾಗೂ ಆರ್‌.ಸುಕುಮಾರ್ ಸಭೆಯಲ್ಲಿ ಆಗ್ರಹಿಸಿದ್ದರು.

85ನೇ ಸಭೆಯಲ್ಲಿ ಈ ವಿಷಯ ಮತ್ತೆ ಪ್ರಸ್ತಾಪವಾಯಿತು. ಈ ಯೋಜನೆಗೆ ಈಗಾಗಲೇ ತಾತ್ವಿಕ ಒಪ್ಪಿಗೆ ನೀಡಲಾಗಿದೆ ಎಂಬ ವಿಷಯವೂ ಚರ್ಚೆಗೆ ಬಂತು. ಸ್ಥಳ ಪರಿಶೀಲನೆ ನಡೆಸಿ ವರದಿ ತರಿಸಿಕೊಳ್ಳಬೇಕು ಎಂಬ ಸದಸ್ಯರ ಸಭೆಗೆ ಸಮಿತಿಯ ಅಧ್ಯಕ್ಷರೂ ಆಗಿರುವ ಕೇಂದ್ರ ಅರಣ್ಯ ಹಾಗೂ ಪರಿಸರ ಸಚಿವ ಭೂಪೇಂದರ್ ಯಾದವ್ ಸಹಮತ ವ್ಯಕ್ತಪಡಿಸಿದರು. ಎಸ್‌.ಎಸ್.ಸಿಂಗ್, ಆರ್‌.ಸುಕುಮಾರ್ ಹಾಗೂ ಇಲಾಖೆಯ ನಾಮನಿರ್ದೇಶಿತ ಸದಸ್ಯರ ಸಮಿತಿಯು ಸ್ಥಳ ಪರಿಶೀಲನೆ ನಡೆಸಿ ಸ್ಥಾಯಿ ಸಮಿತಿಗೆ ವರದಿ ಸಲ್ಲಿಸಬೇಕು ಎಂದು ಸಭೆಯಲ್ಲಿ ತೀರ್ಮಾನಿಸಲಾಯಿತು.

ಯೋಜನೆಗೆ 352.77 ಎಕರೆ ಭೂಮಿ ಅಗತ್ಯ

ವಿದ್ಯುತ್ ಉತ್ಪಾದನೆಗೆ ಬಳಸಿದ ನೀರನ್ನು ಮತ್ತೆ ಮತ್ತೆ ಪಂಪ್‌ಗಳ ಮೂಲಕ ಹಿಂದಕ್ಕೆ ಕೊಂಡೊಯ್ದು, ತಲಾ 250 ಮೆಗಾವಾಟ್ ಸಾಮರ್ಥ್ಯದ ಎಂಟು ಜಲ ವಿದ್ಯುತ್ ಉತ್ಪಾದನಾ ಘಟಕಗಳಲ್ಲಿ ಬಳಸುವ ₹9,000 ಸಾವಿರ ಕೋಟಿ ಮೊತ್ತದ ಯೋಜನೆ ಇದು. ಒಟ್ಟು 2,000 ಮೆಗಾವಾಟ್ ವಿದ್ಯುತ್ ಉತ್ಪಾದನೆಗೆ ಯೋಜನೆ ರೂಪಿಸಲಾಗಿದೆ. ಡಿಪಿಆರ್‌ಗೆ ಕೇಂದ್ರ ವಿದ್ಯುತ್ ಪ್ರಾಧಿಕಾರವು 2024ರ ಆಗಸ್ಟ್‌ನಲ್ಲಿ ಅನುಮೋದನೆ ನೀಡಿತ್ತು. ಈ ಯೋಜನೆಗೆ 352.77 ಎಕರೆ ಅಗತ್ಯವಿದೆ. ಅದರಲ್ಲಿ 133.81 ಎಕರೆ ಅರಣ್ಯ ಭೂಮಿಯಾಗಿದೆ.

ಜಾತಿವಾರು ಸಮೀಕ್ಷೆ ನಿಶ್ಚಿತ: ಸಿ.ಎಂ

ಒಂದನೇ ಪುಟದಿಂದ...

'ಕಾಂಗ್ರೆಸ್ ಪಕ್ಷ ಹಾಗೂ ಸರ್ಕಾರವನ್ನು ಹಿಂದೂ ವಿರೋಧಿ ಎಂದು ಬಿಂಬಿಸುತ್ತಿದ್ದಾರೆ. ಪ್ರತಿಯೊಬ್ಬ ಸಚಿವರೂ ರಾಜಕೀಯವಾಗಿಯೇ ಉತ್ತರ ನೀಡಬೇಕು. ಅವರ ಹೇಳಿಕೆಗಳನ್ನು ಖಂಡಿಸಬೇಕು ಎಂದು ಸೂಚನೆ ನೀಡಲಾಗಿದೆ. ಅದನ್ನು ಬಿಟ್ಟರೆ ಸಂಪುಟದಲ್ಲಿ ಬೇರೆ ವಿಚಾರ ಚರ್ಚೆಯಾಗಿಲ್ಲ' ಎಂದು ಅವರು ಹೇಳಿದರು.

ಸಚಿವರ ತಂಡದ ವರದಿ: ಸಚಿವ ಸಂಪುಟ ಸಭೆಯಲ್ಲಿ ಕೆಲವು ಸಚಿವರು ತಮ್ಮ ಅಭಿಪ್ರಾಯ ಮಂಡಿಸಿದಾಗ ಮಧ್ಯ ಪ್ರವೇಶಿಸಿದ್ದ ಸಿದ್ದರಾಮಯ್ಯ ಅವರು, ಈಗ ವ್ಯಕ್ತವಾಗುತ್ತಿರುವ ಆಕ್ಷೇಪ, ತಕರಾರುಗಳ ಬಗ್ಗೆ ಸಮಗ್ರವಾಗಿ ಚರ್ಚಿಸಿ ಮಾಹಿತಿ ನೀಡುವ ಜವಾಬ್ದಾರಿಯನ್ನು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ನೇತೃತ್ವದ ಸಚಿವರ ತಂಡಕ್ಕೆ ವಹಿಸಿದ್ದರು.

ಈ ತಂಡದಲ್ಲಿ ಎಚ್‌.ಕೆ. ಪಾಟೀಲ, ಕೆ.ಎಚ್. ಮುನಿಯಪ್ಪ, ಶಿವರಾಜ ತಂಗಡಗಿ, ಈಶ್ವರ ಖಂಡ್ರೆ, ಜಮೀರ್ ಅಹಮದ್ ಖಾನ್, ಪ್ರಿಯಾಂಕ್ ಖರ್ಗೆ, ಸಂತೋಷ್ ಲಾಡ್ ಇದ್ದರು. ಹಲವು ಸುತ್ತಿನ ಸಭೆ ನಡೆಸಿದ ಈ ಸಚಿವರ ತಂಡ, ಸಿದ್ದರಾಮಯ್ಯ ಅವರನ್ನು ಶುಕ್ರವಾರ ಭೇಟಿ ಮಾಡಿ ವಿವರಿಸಿತು.

ಹಿಂದೂ ಜಾತಿಯ ಹೆಸರಿನ ಮುಂದೆ ಕ್ರಿಶ್ಚಿಯನ್ ಎಂದು ಉಲ್ಲೇಖಿಸಲು ನೀಡಿರುವ ಅವಕಾಶ ಕೈಬಿಡಬೇಕು; ಸಣ್ಣಪುಟ್ಟ ಗೊಂದಲಗಳನ್ನು ಬಗೆಹರಿಸಲು ಆಯೋಗಕ್ಕೆ ಸಲಹೆ ನೀಡಬೇಕು ಎಂದು ಪ್ರತಿಪಾದಿಸಿತು ಎಂದು ಗೊತ್ತಾಗಿದೆ.

ಮತ್ತೊಂದು ಅರ್ಜಿ

ಸಮೀಕ್ಷೆ ಪ್ರಶ್ನಿಸಿ ಹಾವೇರಿ ಜಿಲ್ಲೆಯ ಹಿರೇಕೆರೂರಿನ ಲಿಂಗರಾಜ ಚಪ್ಪರದಳ್ಳಿ ಸಲ್ಲಿಸಿರುವ ಮತ್ತೊಂದು ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಬಿ.ಎಂ.ಶ್ಯಾಮ್ ಪ್ರಸಾದ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಶುಕ್ರವಾರ ವಿಚಾರಣೆ ನಡೆಸಿತು.

ಅರ್ಜಿದಾರರ ಪರ ಹಿರಿಯ ವಕೀಲ ಗಂಗಾಧರ ಗುರುಮಠ ಅವರ ವಾದ ಆಲಿಸಿದ ನ್ಯಾಯಪೀಠವು ಕೇಂದ್ರ, ರಾಜ್ಯ ಸರ್ಕಾರ ಮತ್ತು ಹಿಂದುಳಿದ ವರ್ಗಗಳ ಆಯೋಗಕ್ಕೆ ನೋಟಿಸ್ ಜಾರಿಗೊಳಿಸಲು ಆದೇಶಿಸಿ ವಿಚಾರಣೆಯನ್ನು ನವೆಂಬರ್ 4ಕ್ಕೆ ಮುಂದೂಡಿತು.

ಸಮೀಕ್ಷೆ ಹೇಗೆ

- **15 ದಿನ** — ಇದೇ 22ರಿಂದ ಅಕ್ಟೋಬರ್ 7ರವರೆಗೆ ಸಮೀಕ್ಷೆ ನಡೆಯಲಿರುವ ಅವಧಿ
- **2 ಕೋಟಿ** — ಸಮೀಕ್ಷೆಗೆ ಒಳಪಡಲಿರುವ ಮನೆಗಳು
- **1.75 ಲಕ್ಷ** — ಸಮೀಕ್ಷೆಗೆ ನಿಯೋಜಿಸಲಾಗಿರುವ ಶಿಕ್ಷಕರು
- **150** — ಪ್ರತಿ ಸಮೀಕ್ಷಕರು ಸಮೀಕ್ಷೆ ನಡೆಸಬೇಕಿರುವ ಮನೆಗಳ ಸಂಖ್ಯೆ
- **10** — ಸಮೀಕ್ಷಕರಿಗೆ ಒಬ್ಬರು ಮೇಲ್ವಿಚಾರಕರು
- **10%** — ಎರಡನೇ ಹಂತದಲ್ಲಿ ಪರಿಶೀಲನೆ ನಡೆಸಲಾಗುವ ಮನೆಗಳ ಪ್ರಮಾಣ
- **₹425 ಕೋಟಿ** — ಸಮೀಕ್ಷೆಗೆ ತಗುಲಲಿರುವ ಅಂದಾಜು ವೆಚ್ಚ
- **86** — ಸಮೀಕ್ಷೆ ವೇಳೆ ವ್ಯಕ್ತಿಯೊಬ್ಬರಿಗೆ ಕೇಳಲಾಗುವ ಗರಿಷ್ಠ ಪ್ರಶ್ನೆಗಳು (ಜಾತಿ, ವೈವಾಹಿಕ, ಶೈಕ್ಷಣಿಕ, ಔದ್ಯೋಗಿಕ ವಿವರಗಳ ಆಧಾರದಲ್ಲಿ ಪ್ರಶ್ನೆಗಳ ಸಂಖ್ಯೆ ವ್ಯತ್ಯಾಸವಾಗಲಿದೆ)

ಗಂಗಾರತಿ

ಪ್ರಜಾವಾಣಿ ಚಿತ್ರ

ಗದಗ ಜಿಲ್ಲೆಯ ಲಕ್ಷ್ಮೇಶ್ವರ ಸೊಪ್ಪಿನಕೇರಿ ಯುವಕ ಮಂಡಳಿಯವರು ಸ್ಥಾಪಿಸಿದ್ದ ಗಣೇಶ ಮೂರ್ತಿಗೆ ಕಲಾವಿದರು ಗಂಗಾರತಿ ಮಾಡಿದರು

ಮದ್ದೂರು ಭೇಟಿ: ಮುತಾಲಿಕ್‌ಗೆ ನಿರ್ಬಂಧ

ಪ್ರಜಾವಾಣಿ ವಾರ್ತೆ

ಮದ್ದೂರು: ಪಟ್ಟಣದಲ್ಲಿ ನಡೆದಿದ್ದ ಗಲಭೆಯ ಗಾಯಾಳುಗಳ ಭೇಟಿಗೆ ಬರುತ್ತಿದ್ದ ಶ್ರೀರಾಮಸೇನೆ ಮುಖ್ಯಸ್ಥ ಪ್ರಮೋದ್ ಮುತಾಲಿಕ್ ಅವರನ್ನು ಬೆಂಗಳೂರು– ಮೈಸೂರು ಹೆದ್ದಾರಿ ಮಾರ್ಗದ ಗಡಿಭಾಗ ನಿಡಘಟ್ಟದ ಬಳಿ ಪೊಲೀಸರು ಶುಕ್ರವಾರ ತಡೆದರು.

ಈ ವೇಳೆ ಪೊಲೀಸರು ಹಾಗೂ ಮುತಾಲಿಕ್ ಬೆಂಬಲಿಗರ ನಡುವೆ ವಾಗ್ವಾದ ನಡೆಯಿತು. ಬಿಗುವಿನ ಪರಿಸ್ಥಿತಿ ಉಂಟಾಯಿತು. ನಂತರ, ಜಿಲ್ಲಾಧಿಕಾರಿ ಹೊರಡಿಸಿದ್ದ ನಿರ್ಬಂಧ ಪ್ರತಿಗೆ ಮುತಾಲಿಕ್ ಬಳಿ ಸಹಿ ಹಾಕಿಸಿಕೊಂಡು ವಾಪಸ್ ಬೆಂಗಳೂರಿಗೆ ಕಳುಹಿಸಿದರು.

ಶಾಂತಕುಮಾರಿಗೆ 'ಆದಿಕವಿ', ಅಣ್ಣಪ್ಪಗೆ 'ವಾಗ್ದೇವಿ' ಪುರಸ್ಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಖಿಲ ಭಾರತೀಯ ಸಾಹಿತ್ಯ ಪರಿಷದ್ ಕರ್ನಾಟಕ ನೀಡುವ 2025ನೇ ಸಾಲಿನ 'ಆದಿಕವಿ ಪುರಸ್ಕಾರ'ಕ್ಕೆ ಲೇಖಕಿ ಎಲ್‌.ವಿ. ಶಾಂತ ಕುಮಾರಿ ಹಾಗೂ 'ವಾಗ್ದೇವಿ ಪುರಸ್ಕಾರ'ಕ್ಕೆ ಲೇಖಕ ಅರಬಗಟ್ಟೆ ಅಣ್ಣಪ್ಪ ಆಯ್ಕೆಯಾಗಿದ್ದಾರೆ.

ಶುಕ್ರವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಪರಿಷದ್ ರಾಜ್ಯ ಪ್ರಧಾನ ಕಾರ್ಯದರ್ಶಿ ರಘುನಂದನ್ ಭಟ್, 'ಸಾಮಾಜಿಕ ಕಳಕಳಿ ಹಾಗೂ ರಾಷ್ಟ್ರೀಯ ದೃಷ್ಟಿಕೋನವುಳ್ಳ ಹಿರಿಯ ಸಾಹಿತ್ಯ ಸಾಧಕರಿಗೆ 'ಆದಿಕವಿ ಪುರಸ್ಕಾರ' ಮತ್ತು ಕಿರಿಯ ಸಾಹಿತ್ಯ ಸಾಧಕರಿಗೆ 'ವಾಗ್ದೇವಿ ಪುರಸ್ಕಾರ'ವನ್ನು ಪ್ರತಿ ವರ್ಷ ನೀಡಲಾಗುತ್ತಿದೆ. ಈ ಪ್ರಶಸ್ತಿಗಳು ತಲಾ ₹1 ಲಕ್ಷ ನಗದು ಹಾಗೂ ಫಲಕ ಒಳಗೊಂಡಿವೆ.

ಶಾಂತಕುಮಾರಿ ಅವರು ತಮ್ಮ ಅಧ್ಯಯನ, ಬೋಧನೆ ಮತ್ತು ಕೃತಿಗಳ ಮೂಲಕ ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ಅಮೂಲ್ಯ ಕೊಡುಗೆ ನೀಡಿದ್ದಾರೆ. ಅವರ ಪಾಂಡಿತ್ಯಪೂರ್ಣ ಸಾಹಿತ್ಯ ಸಾಧನೆಯು ಪ್ರೇರಣೆಯ ದಾರಿದೀಪವಾಗಿದೆ' ಎಂದು ಹೇಳಿದರು.

ಶಾಂತಕುಮಾರಿ

ಅಣ್ಣಪ್ಪ

'ದಾವಣಗೆರೆ ಜಿಲ್ಲೆಯ ಅರಬಗಟ್ಟೆ ಅಣ್ಣಪ್ಪ ಅವರು, ಸದ್ಯ ತೀರ್ಥಹಳ್ಳಿ ತಾಲ್ಲೂಕಿನ ಸರ್ಕಾರಿ ಶಾಲೆಯೊಂದರಲ್ಲಿ ಶಿಕ್ಷಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಅವರು ಬರವಣಿಗೆಯಲ್ಲಿಯೂ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಸಾವಿರಕ್ಕೂ ಹೆಚ್ಚು ಕವನಗಳನ್ನು ರಚಿಸಿದ್ದಾರೆ' ಎಂದು ತಿಳಿಸಿದರು. 'ಈ ಪುರಸ್ಕಾರವನ್ನು ಜಿ.ಕೆ. ಗ್ರೂಪ್ ಉದ್ಯಮಿ ಎಸ್. ಜಯರಾಮ್, ವಾಗ್ದೇವಿ ಶಿಕ್ಷಣ ಸಂಸ್ಥೆಗಳ ಮುಖ್ಯಸ್ಥ ಕೆ. ಹರೀಶ್ ಪ್ರಾಯೋಜಿಸಿದ್ದು, ಅ.12ರಂದು ಬೆಂಗಳೂರಿನಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ನಡೆಸಲಾಗುವುದು' ಎಂದರು.

ಮುಂಬರುವ ದಿನಗಳಲ್ಲಿ ಕೌಶಲ ನೀತಿ ರೂಪಿಸಲಾಗುತ್ತಿದೆ: ಶರಣಪ್ರಕಾಶ್ ಪಾಟೀಲ

ನ.4 ರಿಂದ ಬೆಂಗಳೂರು ಕೌಶಲ ಶೃಂಗಸಭೆ

ಪ್ರಜಾವಾಣಿ ವಾರ್ತೆ

ಶರಣಪ್ರಕಾಶ್

ಬೆಂಗಳೂರು: 'ಬೆಂಗಳೂರು ಕೌಶಲ ಶೃಂಗಸಭೆ 2025' ಅನ್ನು ನವೆಂಬರ್ 4 ರಿಂದ 6 ರವರೆಗೆ ಹಮ್ಮಿಕೊಳ್ಳಲಾಗಿದೆ ಎಂದು ವೈದ್ಯಕೀಯ ಶಿಕ್ಷಣ ಮತ್ತು ಕೌಶಲ್ಯಾಭಿವೃದ್ಧಿ ಸಚಿವ ಶರಣಪ್ರಕಾಶ್ ಪಾಟೀಲ ತಿಳಿಸಿದರು.

ಇದೇ ಮೊದಲ ಬಾರಿಗೆ ಈ ಶೃಂಗಸಭೆ ನಡೆಯುತ್ತಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಉದ್ಘಾಟಿಸಲಿದ್ದಾರೆ ಎಂದು ಅವರು ಸುದ್ದಿಗೋಷ್ಠಿಯಲ್ಲಿ ಹೇಳಿದರು.

'ಈ ಶೃಂಗಸಭೆಯ ಮೂಲಕ ಯುವ ಸಮುದಾಯಕ್ಕೆ ಮುಖ್ಯವಾಗಿ ಮಹಿಳೆಯರು, ಗ್ರಾಮೀಣ ಸಮುದಾಯಗಳು ಮತ್ತು ಅಂಗವಿಕಲರಿಗೆ ಹೆಚ್ಚು ಆದ್ಯತೆ ನೀಡಲು ಗಮನಹರಿಸಲಾಗಿದೆ. ಕೌಶಲದ ಮೂಲಕ ಉತ್ತಮ ಭವಿಷ್ಯವನ್ನು ರೂಪಿಸಲು ನಮ್ಮ ಸರ್ಕಾರ ಅವಕಾಶಗಳ ಬೃಹತ್ ವೇದಿಕೆ ಒದಗಿಸುತ್ತಿದೆ' ಎಂದು ಪಾಟೀಲ ವಿವರಿಸಿದರು.

ಕೈಗಾರಿಕೆ, ಶೈಕ್ಷಣಿಕ, ತರಬೇತಿ ಮತ್ತು ಜಾಗತಿಕ ಮಾನದಂಡಗಳಿಗೆ ಅನುಗುಣವಾಗಿ ಯುವ ಸಮೂಹವನ್ನು ಬೆಳೆಸಲು ಹಾಗೂ ಉದ್ಯೋಗವನ್ನು ಹೆಚ್ಚಿಸುವ ಗುರಿಯನ್ನು ಶೃಂಗಸಭೆ ಹೊಂದಿದೆ ಎಂದರು.

ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮ, ಕರ್ನಾಟಕ ಕೌಶಲ್ಯ ಅಭಿವೃದ್ಧಿ ಪ್ರಾಧಿಕಾರ ಹಾಗೂ ಕರ್ನಾಟಕ ಡಿಜಿಟಲ್ ಎಕಾನಮಿ ಮಿಷನ್ ಜಂಟಿ ಸಹಯೋಗದೊಂದಿಗೆ ಶೃಂಗಸಭೆಯನ್ನು ಆಯೋಜಿಸಲಾಗುವುದು ಎಂದು ಶರಣಪ್ರಕಾಶ್ ಪಾಟೀಲ ಹೇಳಿದರು.

'ಮುಂಬರುವ ದಿನಗಳಲ್ಲಿ ಕೌಶಲ ನೀತಿ ರೂಪಿಸಲಾಗುತ್ತದೆ. ಕರ್ನಾಟಕದಲ್ಲಿ ಮಾನವ ಸಂಪನ್ಮೂಲ ಅಗಾಧವಾಗಿದೆ. ಅದಕ್ಕೆ ಸ್ಪಷ್ಟ ರೂಪ, ಕೌಶಲ ತರಬೇತಿ ನೀಡಿದರೆ ನಮ್ಮ ರಾಜ್ಯ ಮತ್ತು ನಮ್ಮ ರಾಜಧಾನಿ ಅತ್ಯಂತ ವೇಗವಾಗಿ ಬೆಳೆಯುವ ವಿಶ್ವಾಸವಿದೆ' ಎಂದು ಹೇಳಿದರು.

'ಯುವನಿಧಿ ಫಲಾನುಭವಿಗಳು ಹಿಂದೇಟು'

ಯುವನಿಧಿ ಯೋಜನೆಯಲ್ಲಿ ನೋಂದಣಿ ಮಾಡಿಸಿಕೊಂಡಿರುವ ನಿರುದ್ಯೋಗಿ ಯುವ ಜನತೆ ಕೌಶಲ ತರಬೇತಿ ಪಡೆಯಲು ಬರುತ್ತಿಲ್ಲ. ಕೌಶಲ ತರಬೇತಿಯನ್ನು ಪಡೆಯುವುದರಿಂದ ಅವರಿಗೆ ಉದ್ಯೋಗ ಪಡೆಯಲು ಸಹಾಯವಾಗುತ್ತದೆ. ಆದರೆ, ಫಲಾನುಭವಿಗಳು ಈ ಬಗ್ಗೆ ಗಮನಹರಿಸುತ್ತಿಲ್ಲ ಎಂದು ಸಚಿವ ಶರಣಪ್ರಕಾಶ್ ಪಾಟೀಲ ಹೇಳಿದರು.

ಕೌಶಲ ತರಬೇತಿಗೆ ಹೆಸರು ನೋಂದಾಯಿಸಿದರೆ ಯುವನಿಧಿ ಯೋಜನೆಯ ಹಣ ಸಿಗುವುದಿಲ್ಲ ಎಂಬ ತಪ್ಪು ಕಲ್ಪನೆಯಿಂದ ಯಾರೂ ನೋಂದಣಿ ಮಾಡುತ್ತಿಲ್ಲ. ತರಬೇತಿಗೆ ಹೆಸರು ನೋಂದಣಿ ಮಾಡಿಕೊಂಡರೆ ಯುವನಿಧಿ ಯೋಜನೆ ಮುಂದುವರೆಯುತ್ತದೆ ಎಂದು ಅವರು ಸ್ಪಷ್ಟಪಡಿಸಿದರು. ನಿರುದ್ಯೋಗಿಗೆ ಉದ್ಯೋಗ ಸಿಕ್ಕಿದರೆ ಅಥವಾ ಉನ್ನತ ವ್ಯಾಸಂಗಕ್ಕೆ ಹೋದರೆ ಮಾತ್ರ ಯೋಜನೆ ಅಡಿ ಹಣ ಸಿಗುವುದಿಲ್ಲ ಎಂದು ಅವರು ಹೇಳಿದರು.

'ಸುಮಾರು 3 ಲಕ್ಷ ಪದವೀಧರರು ಮತ್ತು ಡಿಪ್ಲೊಮಾ ಪಡೆದವರು ಯುವ ನಿಧಿ ಯೋಜನೆಗೆ ಹೆಸರು ನೋಂದಾಯಿಸಿದ್ದಾರೆ. ಕೌಶಲ ತರಬೇತಿ ಮೂಲಕ ಅವರಿಗೆ ಉದ್ಯೋಗ ಕೊಡಿಸಬೇಕು ಎಂಬುದೇ ನಮ್ಮ ಉದ್ದೇಶ. ತರಬೇತಿ ಕಡ್ಡಾಯ ಮಾಡಲು ಉದ್ದೇಶಿಸಲಾಗಿದೆ' ಎಂದು ಅವರು ತಿಳಿಸಿದರು.

ಕರ್ನಾಟಕ ಸರ್ಕಾರ
ಪುರಸಭೆ ಕಾರ್ಯಾಲಯ, ಕಂಪ್ಲಿ. ಬಳ್ಳಾರಿ ಜಿಲ್ಲೆ.
Email : ka.kampli.tmc@gmail.com website : www.kamplitown.mrc.gov.in

ಕ್ರ.ಸಂ. ಪು.ಸ.ಕಂ/ನೈರ್ಮಲ್ಯ/ನೀ.ಸ./ಹೊಗು/01/2025-26 ದಿನಾಂಕ : 17.09.2025

ಟೆಂಡರ್ ಪ್ರಕಟಣೆ (ಇ–ಪೋರ್ಟಲ್ ಮೂಲಕ)

2026–26 ನೇ ಸಾಲಿನ ಪುರಸಭೆ ನಿಧಿಯಲ್ಲಿ ಮಂಜೂರಾದ ಹೊರಗುತ್ತಿಗೆ ಸಿಬ್ಬಂದಿಗಳನ್ನು ಸರಬರಾಜು ಮಾಡಲು ಈ ಕೆಳಕಂಡ ಇಂಡೆಂಟ್‌ಗಳಿಗೆ ಟೆಂಡರ್ ಕರೆಯಲಾಗಿದ್ದು, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 ತಿದ್ದುಪಡಿ ನಿಯಮಗಳು 2001 ರ ಅನ್ವಯ ಸ್ಟ್ಯಾಂಡರ್ಡ್ ಬಿಡ್ ಟೆಂಡರ್ ಡಾಕ್ಯುಮೆಂಟ್ ನಿಯಮಾವಳಿಗಳಂತೆ ನೋಂದಾಯಿತ ಮತ್ತು ಪರವಾನಿಗೆ ಪಡೆದ ಮ್ಯಾನ್ ಪವರ್ ಏಜೆನ್ಸಿಗಳು ಟೆಂಡರ್‌ನ್ನು https://kppp.karnataka.gov.in/kppp ಪೋರ್ಟಲ್ ಮೂಲಕ ಟೆಂಡರ್‌ಗಳನ್ನು ಸಲ್ಲಿಸಬಹುದಾಗಿರುತ್ತದೆ.

ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ: ದಿನಾಂಕ 26.09.2025 ಸಂಜೆ 5.00 ಗಂಟೆವರೆಗೆ
ಟೆಂಡರ್‌ಗಳನ್ನು ತೆರೆಯುವ ದಿನಾಂಕ ದಿನಾಂಕ 29.09.2025 ಬೆಳಿಗ್ಗೆ 11.00 ಗಂಟೆಗೆ

Sl No	Indent No & Name of Work	Estimate Cost (in Lakhs)	Cat
1	DMA/2025-26/SE5554/CALL-2	70.90	Others
2	DMA/2025-26/SE6180	6.50	Others

ಸಹಿ/– ಮುಖ್ಯಾಧಿಕಾರಿಗಳು, ಪುರಸಭೆ, ಕಂಪ್ಲಿ.
ಡಿಐಪಿಆರ್/ಬಳ್ಳಾರಿ/464/ಕೆಎಸ್‌ಎಂಸಿಎ/2025–26

ಪೊಲೀಸ್ ಇಲಾಖೆ
ಪೊಲೀಸ್ ಅಧೀಕ್ಷಕರ ಕಛೇರಿ, ಭಯೋತ್ಪಾದನೆ ನಿಗ್ರಹ ಕೇಂದ್ರ, ಕೂಡ್ಲು, ಬೆಂಗಳೂರು–560 102.

ಸಂ: 01/E-Tender/CCT/2025-26 ದಿನಾಂಕ: 19.09.2025

ಇ–ಟೆಂಡರ್ ನೋಟೀಸ್

ಭಯೋತ್ಪಾದನ ನಿಗ್ರಹ ಕೇಂದ್ರದಲ್ಲಿ KSPRPTI ಗೆ ಅವಶ್ಯವಿರುವ ಸಾಮಗ್ರಿಗಳನ್ನು ಕೆಟಿಪಿಪಿ ಕಾಯಿದೆ ಪ್ರಕಾರ ಕರ್ನಾಟಕ ಸರ್ಕಾರದ https://kppp.karnataka.gov.in ಇ–ಟೆಂಡರ್ ಪ್ರಕ್ರಿಯೆ ಮೂಲಕ ನೀಡಲು ಅರ್ಜಿಯನ್ನು ದ್ವಿ ಲಕೋಟೆ ಪದ್ಧತಿಯಲ್ಲಿ ಆಹ್ವಾನಿಸಲಾಗಿದೆ.

ಕ್ರ. ಸಂ.	ಟೆಂಡರ್ ಸಂಖ್ಯೆ	ಟೆಂಡರ್‌ನ ಸಂಕ್ಷಿಪ್ತ ವಿವರ	ಟೆಂಡರ್ ಬಿಡ್ ಸಲ್ಲಿಕೆಗೆ ಕೊನೆಯ ದಿನಾಂಕ
1	KSP/2025-26/ IND0336	Supply and Maintenance of Master and Slave Drones for Training with Accessories.	Dt.04/10/2025 17.00 hrs.
2	KSP/2025-26/ IND0333	Supply and Maintenance of Surveillance, Mapping and Payload Drones with Accessories.	Dt.04/10/2025 17.00 hrs.
3	KSP/2025-26/ IND0334	Supply and Maintenance of Main Pack Jammer Gun, GNSS and ISM Band Jammer (Counter Drones)	Dt.06/10/2025 17.00 hrs.
4	KSP/2025-26/ IND0335	Supply and Maintenance of RF Detection with 4 Quadrant Detection of Drones (Counter Drone)	Dt.06/10/2025 17.00 hrs.

KSPRPTI ಗೆ ಅವಶ್ಯವಿರುವ ಸಾಮಗ್ರಿಗಳನ್ನು ಪೂರೈಸಲು ಇಚ್ಛಿಸುವವರು ಇ–ಖರೀದಿ ಪೋರ್ಟಲ್‌ನಲ್ಲಿ ನೋಂದಾಯಿಸಿಕೊಳ್ಳಬೇಕು ಹಾಗೂ ಇ–ಖರೀದಿ ಪ್ರಕ್ರಿಯೆಯಲ್ಲಿ ಭಾಗವಹಿಸುವ ಸರಬರಾಜುದಾರರು ಇ–ಖರೀದಿ ಪ್ಲಾಟ್‌ಫಾರಂನಲ್ಲಿ ನೋಂದಾಯಿಸಿಕೊಳ್ಳುವುದು ಕಡ್ಡಾಯವಾಗಿರುತ್ತದೆ.

ಹೆಚ್ಚಿನ ವಿವರಗಳಿಗೆ https://kppp.karnataka.gov.in ಅಥವಾ ಸಹಾಯವಾಣಿ: +91–8046010000/ +91–8068948777 ಗೆ ಸಂಪರ್ಕಿಸತಕ್ಕದ್ದು.

ಸಹಿ/– ಪೊಲೀಸ್ ಅಧೀಕ್ಷಕರು ಭಯೋತ್ಪಾದನ ನಿಗ್ರಹ ಕೇಂದ್ರ, ಕೂಡ್ಲು, ಬೆಂಗಳೂರು
ವಾಸಾಸಂಇ/ವಾ.ಪ್ರ/2885/ಎಂಎಎ/2025–26

ಪ್ರಜಾವಾಣಿ

'ನಮ್ಮ ದೂರಿನ ಬಗ್ಗೆ ಕ್ರಮ ಕೈಗೊಳ್ಳಲೇ ಇಲ್ಲ'

ಪ್ರಜಾವಾಣಿ ವಾರ್ತೆ

ನವದೆಹಲಿ: 'ದೆಹಲಿ ವಿಧಾನಸಭೆ ಚುನಾವಣೆಗೆ ಮುನ್ನ ನವದೆಹಲಿ ಕ್ಷೇತ್ರದಲ್ಲಿ 42 ಸಾವಿರ ಹೆಸರನ್ನು ಮತದಾರರ ಪಟ್ಟಿಯಿಂದ ಅಳಿಸಿ ಹಾಕಿರುವ ಬಗ್ಗೆ ಮುಖ್ಯಸ್ಥ ಅರವಿಂದ ಕೇಜ್ರಿವಾಲ್ ಅವರು ಇದೇ ಜನವರಿಯಲ್ಲಿ ನೀಡಿದ ದೂರಿನ ಬಗ್ಗೆ ಚುನಾವಣಾ ಆಯೋಗವು ಇನ್ನುವರೆಗೂ ಯಾವುದೇ ಕ್ರಮ ಕೈಗೊಂಡಿಲ್ಲ' ಎಂದು ಆಮ್ ಆದ್ಮಿ ಪಕ್ಷವು (ಎಎಪಿ) ಶುಕ್ರವಾರ ದೂರಿದೆ.

ಈ ಬಗ್ಗೆ ಎಎಪಿ ದೆಹಲಿ ಘಟಕದ ಅಧ್ಯಕ್ಷ ಸೌರಬ್ ಭಾರಧ್ವಾಜ್ ಮಾಧ್ಯಮ ಗೋಷ್ಠಿ ನಡೆಸಿದರು. 'ಆಯೋಗದ ಮುಖ್ಯಸ್ಥರಾಗಿದ್ದ ರಾಜೀವ್ ಕುಮಾರ್ ಅವರ ಕಾರ್ಯವೈಖರಿ 'ಅನುಮಾನಾಸ್ಪದ'ವಾಗಿತ್ತು ಮತ್ತು ಈಗಿನ ಮುಖ್ಯಸ್ಥ ಜ್ಞಾನೇಶ್ ಕುಮಾರ್ ಅವರ ಕಾರ್ಯವೈಖರಿಯೂ ಹಾಗೆಯೇ ಇದೆ. ದೂರಿನ ಬಗ್ಗೆ ಯಾವುದೇ ಕ್ರಮ ಕೈಗೊಳ್ಳದೆ, ಪ್ರಕರಣವನ್ನು ಮುಚ್ಚಿ ಹಾಕಲಾಗಿದೆ' ಎಂದರು.

'ಕ್ರಮವನ್ನೇ ಕೈಗೊಳ್ಳದೆ ಪ್ರಕರಣವನ್ನೇ ಮುಚ್ಚಿ ಹಾಕಿರುವುದು ಒಂದು ಸಂಘಟಿತ ಅಪರಾಧ ಕೃತ್ಯ. ನಮ್ಮ ಪ್ರಜಾಪ್ರಭುತ್ವವನ್ನು ಲೂಟಿ ಹೊಡೆಯಲಾಗುತ್ತಿದೆ. ರಾಹುಲ್ ಗಾಂಧಿ ಅವರು ಏನೆಲ್ಲಾ ಹೇಳಿದ್ದಾರೋ ಆ ಎಲ್ಲವನ್ನೂ ಕೇಜ್ರಿವಾಲ್ ಅವರು 2024ರ ಡಿಸೆಂಬರ್ ನಲ್ಲಿಯೇ ಸಾಕ್ಷಿಗಳ ಸಮೇತ ಹೇಳಿದ್ದರು' ಎಂದರು.

ಆಯೋಗದಿಂದ 'ಮತ ಕಳ್ಳ'ರ ರಕ್ಷಣೆ

ಎಚ್ಚರವಿದ್ದರೂ ಕ್ರಮ ಕೈಗೊಳ್ಳದ 'ಚುನಾವ್ ಕಾ ಚೌಕಿದಾರ್': ರಾಹುಲ್ ಟೀಕೆ

ನವದೆಹಲಿ(ಪಿಟಿಐ): 'ಮತ ಕಳ್ಳತನ' ಆರೋಪಗಳನ್ನು ಪುನರುಚ್ಚರಿಸಿರುವ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ, ಚುನಾವಣಾ ಆಯೋಗದ ವಿರುದ್ಧದ ಟೀಕೆಯನ್ನು ಶುಕ್ರವಾರ ಮತ್ತಷ್ಟು ಹರಿತಗೊಳಿಸಿದರು.

ಆಯೋಗವನ್ನು 'ಚುನಾವ್ ಕಾ ಚೌಕಿದಾರ್'(ಚುನಾವಣೆಯ ಕಾವಲುಗಾರ) ಎಂದು ಕರೆದಿರುವ ರಾಹುಲ್ ಗಾಂಧಿ, 'ಚುನಾವಣೆಯ ಕಾವಲುಗಾರ ಎಚ್ಚರದಿಂದ ಇದ್ದ, (ಮತ) ಕಳ್ಳತನವನ್ನೂ ನೋಡುತ್ತಿದ್ದ ಹಾಗೂ ಕಳ್ಳರನ್ನು ರಕ್ಷಿಸಿದ' ಎಂದು ಕುಟುಕಿದ್ದಾರೆ.

ಮತ ಕಳ್ಳತನ ವಿಚಾರವಾಗಿ ಗುರುವಾರ ಮಾತನಾಡಿದ್ದ ರಾಹುಲ್ ಗಾಂಧಿ, ಆಯೋಗದ ವಿರುದ್ಧ ಟೀಕಾಪ್ರಹಾರ ತೀವ್ರಗೊಳಿಸಿದ್ದರು. 'ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ನಾಶ ಮಾಡಿದವರನ್ನು ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ ಕುಮಾರ್ ರಕ್ಷಿಸುತ್ತಿದ್ದಾರೆ' ಎಂದೂ ಟೀಕಿಸಿದ್ದರು. ಇದರ ಬೆನ್ನಲ್ಲೇ, ಈಗ ಆಯೋಗದ ವಿರುದ್ಧ ಮತ್ತಷ್ಟು ಆರೋಪಗಳನ್ನು ಮಾಡಿದ್ದಾರೆ.

ರಾಹುಲ್ ಗಾಂಧಿ

ಈ ಕುರಿತು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿರುವ ಅವರು,'ನಸುಕಿನ 4ಕ್ಕೆ ಏಳುವುದು. 36 ಸೆಕೆಂಡುಗಳಲ್ಲಿ ಇಬ್ಬರು ಮತದಾರರ ಹೆಸರುಗಳನ್ನು ತೆಗೆದುಹಾಕುವುದು, ಮತ್ತೆ ಹೋಗಿ ಮಲಗುವುದು– ಮತ ಕಳ್ಳತನ ನಡೆಯುವ ವಿಧಾನವಿದು' ಎಂದು ಹಿಂದಿಯಲ್ಲಿ ಬರೆದುಕೊಂಡಿದ್ದಾರೆ.

'ಜೆನ್–ಝಿ' ಪ್ರಸ್ತಾಪ: ಬಿಜೆಪಿ ಕಿಡಿ

ರಾಹುಲ್ ಗಾಂಧಿ ಅವರು ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡಿದ್ದ ಪೋಸ್ಟ್‌ಗೆ ಬಿಜೆಪಿ ನಾಯಕರು ಶುಕ್ರವಾರ ತಿರುಗೇಟು ನೀಡಿದ್ದಾರೆ.

'ಈ ದೇಶದ ಯುವಕರು, ವಿದ್ಯಾರ್ಥಿಗಳು ಹಾಗೂ ಜೆನ್–ಝಿ, ಸಂವಿಧಾನ ಮತ್ತು ಪ್ರಜಾಪ್ರಭುತ್ವವನ್ನು ರಕ್ಷಣೆ ಮಾಡುತ್ತಾರೆ. ಮತ ಕಳ್ಳತನ ನಿಲ್ಲಿಸುತ್ತಾರೆ. ನಾನು ಯಾವಾಗಲೂ ಅವರೊಂದಿಗೆ ನಿಲ್ಲುತ್ತೇನೆ. ಜೈಹಿಂದ್' ಎಂದು ಗುರುವಾರ ಪೋಸ್ಟ್ ಮಾಡಿದ್ದರು.

ರವಿಶಂಕರ್ ಪ್ರಸಾದ್

ಇದಕ್ಕೆ ಪ್ರತಿಕ್ರಿಯಿಸಿರುವ ಬಿಜೆಪಿಯ ಹಿರಿಯ ನಾಯಕ ರವಿಶಂಕರ್ ಪ್ರಸಾದ್, 'ಜೆನ್–ಝಿ, ವಿದ್ಯಾರ್ಥಿಗಳು ಹಾಗೂ ಯುವಕರು ಸಂವಿಧಾನ ರಕ್ಷಿಸುತ್ತಾರೆ ಎಂದು ರಾಹುಲ್ ಗಾಂಧಿ ಹೇಳಿದ್ದಾರೆ. ಇದರರ್ಥ ಏನು? ಅವರು ದೇಶದಲ್ಲಿ ಹಿಂಸಾಚಾರಕ್ಕೆ ಕುಮ್ಮಕ್ಕು ನೀಡಲು ಯತ್ನಿಸುತ್ತಿದ್ದಾರೆ. ಇದು ಖಂಡನಾರ್ಹ' ಎಂದು ಹೇಳಿದ್ದಾರೆ.

ಪ್ರಲ್ಹಾದ ಜೋಶಿ

'ರಾಹುಲ್ ಗಾಂಧಿ ಹೈಡ್ರೋಜನ್ ಬಾಂಬ್, ಜೆನ್–ಝಿ ತರಹದ ಪದಗಳನ್ನು ಬಳಸಿರುವುದು ಅವರಲ್ಲಿನ ಹತಾಶೆ ತೋರಿಸುತ್ತದೆ. ಪ್ರಜಾಪ್ರಭುತ್ವಕ್ಕೆ ವಿರುದ್ಧವಾದ ಮಾರ್ಗಗಳ ಮೂಲಕ ಪಡೆದ ಅಧಿಕಾರವನ್ನು ಭಾರತ ಎಂದಿಗೂ ಒಪ್ಪುವುದಿಲ್ಲ' ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ತಿರುಗೇಟು ನೀಡಿದ್ದಾರೆ.

'ಹೊರಗಿನವರ ಕೃತ್ಯ'

ಆಳಂದ ವಿಧಾನಸಭಾ ಚುನಾವಣೆ ವೇಳೆ ತಂತ್ರಜ್ಞಾನದ ಮೂಲಕ ಮತ ಕಳವು ಯತ್ನ ನಡೆದಿತ್ತು. ಮತದಾರರ ಪಟ್ಟಿಯಿಂದ ಹಲವರ ಹೆಸರು ಕೈಬಿಡಲು ಸಲ್ಲಿಕೆಯಾಗಿದ್ದ ಅರ್ಜಿಗಳ ಹಲವು ಮೊಬೈಲ್ ನಂಬರ್‌ಗಳು ಉತ್ತರ ಪ್ರದೇಶ, ಬಿಹಾರ, ಒಡಿಶಾ ಮೂಲದವು ಎಂದು ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ ದೂರಿದರು.

ಮತ ಕಳವಿಗೆ ಯತ್ನಿಸಿದ ಪ್ರಕರಣದಲ್ಲಿ ಹೊರ ರಾಜ್ಯದವರು ಭಾಗಿಯಾಗಿದ್ದು, ಈ ಕುರಿತು ಹೆಚ್ಚಿನ ತನಿಖೆಯ ಅಗತ್ಯವಿದೆ. ಒಟಿಪಿ, ಐಪಿ ವಿಳಾಸ ಸೇರಿದಂತೆ ಚುನಾವಣಾ ಆಯೋಗ ತಾಂತ್ರಿಕ ನೆರವು ನೀಡಿದರೆ ತನಿಖೆ ಸುಲಭವಾಗುತ್ತದೆ. ಆದರೆ, ಆಯೋಗ ಮಾಹಿತಿ ನೀಡಿರುವುದಾಗಿ ಸುಳ್ಳು ಹೇಳುತ್ತಿದೆ ಎಂದು ಆರೋಪಿಸಿದರು.

'ಮತ ಕಳವಿಗೆ ಬಿಜೆಪಿ– ಆಯೋಗ ಸಂಚು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಆಳಂದ ವಿಧಾನಸಭಾ ಕ್ಷೇತ್ರದಲ್ಲಿ 2023ರ ವಿಧಾನ ಸಭಾ ಚುನಾವಣೆಗೂ ಮೊದಲು ಮತ ಕಳವು ಪ್ರಯತ್ನ ನಡೆದಿತ್ತು. ಮೊದಲೇ ಎಚ್ಚೆತ್ತುಕೊಳ್ಳದೇ ಹೋಗಿದ್ದರೆ ನಾನು ಸೋಲುತ್ತಿದ್ದೆ. ಬಿಜೆಪಿ ಹಾಗೂ ಚುನಾವಣಾ ಆಯೋಗ ಸೇರಿ ಸಂಚು ರೂಪಿಸಿರುವ ಶಂಕೆ ಇದೆ' ಎಂದು ಶಾಸಕ ಬಿ.ಆರ್. ಪಾಟೀಲ ಆರೋಪ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ಶುಕ್ರವಾರ ಮಾತನಾಡಿದ ಅವರು, 'ಕಾಂಗ್ರೆಸ್ ಪಕ್ಷದ ಪರವಾಗಿರುವ ಅರ್ಹ 6,018 ಮತದಾರರನ್ನು ಪಟ್ಟಿಯಿಂದ ತೆಗೆದು ಹಾಕುವ ಪ್ರಯತ್ನ ನಡೆದಿತ್ತು. ನಕಲಿ ಐಡಿಗಳನ್ನು ಬಳಸಿ, ಅರ್ಹ ಮತದಾರರನ್ನು ಕೈಬಿಡಲು ಚುನಾವಣಾ ಆಯೋಗಕ್ಕೆ ಕೋರಿಕೆ ಸಲ್ಲಿಸಲಾಗಿತ್ತು. ಷಡ್ಯಂತ್ರವನ್ನು ಮನಗಂಡು ಆಯೋಗದ ಗಮನಕ್ಕೆ ತಂದೆವು. ನಾವು ನೀಡಿದ ದೂರಿನ ಆಧಾರದಲ್ಲಿ ಅಂದಿನ ಉಪ ವಿಭಾಗಾಧಿಕಾರಿ ಪ್ರಕರಣ ಕುರಿತು ಎಫ್‌ಐಆರ್ ದಾಖಲು ಮಾಡಿದ್ದರು. ಮಾಧ್ಯಮಗಳಲ್ಲಿ ವರದಿ ಪ್ರಸಾರಗೊಂಡ ನಂತರ ಎಚ್ಚೆತ್ತುಕೊಂಡ ಚುನಾವಣಾ ಆಯೋಗ ಹೆಸರುಗಳನ್ನು ಪಟ್ಟಿಯಿಂದ ಕೈಬಿಡದಂತೆ ಆದೇಶ ನೀಡಿತ್ತು. ಆದರೆ, ಮತ ಕಳವಿಗೆ ಯತ್ನಿಸಿದವರನ್ನು ಪತ್ತೆ ಹಚ್ಚುವ ಕಾರ್ಯಕ್ಕೆ ಸ್ಪಂದಿಸಲಿಲ್ಲ' ಎಂದು ದೂರಿದರು.

ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದ ನಂತರ ಗೃಹ ಸಚಿವ ಡಾ.ಜಿ.ಪರಮೇಶ್ವರ ಅವರು ಪ್ರಕರಣವನ್ನು ಸಿಐಡಿಗೆ ವಹಿಸಿದರು. ಸಿಐಡಿ ಹಲವು ಬಾರಿ ಪತ್ರ ಬರೆದರೂ ಚುನಾವಣಾ ಆಯೋಗ ಉತ್ತರ ನೀಡಿಲ್ಲ. ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಆರೋಪ ಮಾಡಿದ ನಂತರ ರಾಜ್ಯ ಚುನಾವಣಾಧಿಕಾರಿ ಪ್ರತಿಕ್ರಿಯೆ ನೀಡಿ, ಸಿಐಡಿಗೆ ಉತ್ತರ ನೀಡಿರುವುದಾಗಿ ಸುಳ್ಳು ಹೇಳಿಕೆ ಬಿಡುಗಡೆ ಮಾಡಿದ್ದಾರೆ. ಸಿಐಡಿ ಬರೆದ 18 ಪತ್ರಗಳಿಗೆ ಒಂದೂ ಉತ್ತರ ನೀಡಿಲ್ಲ ಎಂದು ಆರೋಪಿಸಿದರು.

ಬಿ.ಆರ್. ಪಾಟೀಲ

'6,018 ಮತಗಳನ್ನು ತೆಗೆಯಲು ಮನವಿ ಮಾಡಿದ್ದ ಗುರುತಿನ ಪತ್ರ ಹೊಂದಿದವರಿಗೂ ಈ ಬಗ್ಗೆ ಮಾಹಿತಿ ಇರಲಿಲ್ಲ. ಇಂತಹ ಷಡ್ಯಂತ್ರದ ಮೂಲಕ ಸೋಲಿಸಲು ಯೋಜನೆ ರೂಪಿಸಲಾಗಿತ್ತು. ಚುನಾವಣಾ ಆಯೋಗ ಮತದಾರರ ಹೆಸರನ್ನು ತೆಗೆದು ಹಾಕಿಲ್ಲ ಎಂದು ಈಗ ಸಮಜಾಯಿಷಿ ನೀಡುತ್ತಿದೆ. ಅದು ನಿಜ. ಸಕಾಲಕ್ಕೆ ಮಾಹಿತಿ ಸಿಗದಿದ್ದರೆ ಕಾಂಗ್ರೆಸ್ ಪರವಾಗಿರುವ ಅಷ್ಟೂ ಮತದಾರರನ್ನು ಕಳೆದುಕೊಳ್ಳಬೇಕಿತ್ತು. ಈ ಕುರಿತು ಆಂತರಿಕ ತನಿಖೆಗಾಗಿ ಸೈಬರ್ ಅಪರಾಧ ವಿಭಾಗದ ನೆರವು ಪಡೆಯಲು ಸಿಐಡಿ ಚಿಂತನೆ ನಡೆಸಿದೆ' ಎಂದರು.

ಪ್ರಜಾಪ್ರಭುತ್ವ ವ್ಯವಸ್ಥೆಯನ್ನೇ ಹೈಜಾಕ್ ಮಾಡುವ ಕೆಲಸವನ್ನು ಚುನಾವಣಾ ಆಯೋಗ ಮಾಡುತ್ತಿದೆ. ಈ ವಿಚಾರವಾಗಿ ರಾಹುಲ್ ಗಾಂಧಿ ಅವರು ರಾಷ್ಟ್ರ ಮಟ್ಟದಲ್ಲಿ ಹೋರಾಟ ಮಾಡುತ್ತಿದ್ದಾರೆ. ದೊಡ್ಡ ಮಟ್ಟದ ದಾಖಲೆ ಶೀಘ್ರ ಬಿಡುಗಡೆ ಮಾಡಲಿದ್ದಾರೆ. ಮತ ಕಳವು ಪ್ರಕರಣದ ನಿಷ್ಪಕ್ಷಪಾತ ತನಿಖೆಗೆ ಅಗತ್ಯವಿರುವ ಎಲ್ಲ ಮಾಹಿತಿಯನ್ನು ಆಯೋಗ ಒದಗಿಸಬೇಕು ಎಂದು ಒತ್ತಾಯಿಸಿದರು.

ಸುದ್ದಿ 2 ನಿಮಿಷ

'ಸಿಂಧೂ ಜಲ ಒಪ್ಪಂದದ ನೀರು ಶೀಘ್ರವೇ ದೆಹಲಿ, ರಾಜಸ್ಥಾನಕ್ಕೆ'

ನವದೆಹಲಿ (ಪಿಟಿಐ): ಸಿಂಧೂ ಜಲ ಒಪ್ಪಂದವು ಅಮಾನತಿನಲ್ಲಿ ಇರುವ ಕಾರಣ ಉಳಿತಾಯವಾಗುವ ನೀರನ್ನು ಮುಂದಿನ ಒಂದೂವರೆ ವರ್ಷದ ಒಳಗಾಗಿ ದೆಹಲಿ, ಹರಿಯಾಣ ಮತ್ತು ರಾಜಸ್ಥಾನಕ್ಕೆ ಹರಿಸಲಾಗುವುದು ಎಂದು ಕೇಂದ್ರ ಸಚಿವ ಮನೋಹರ ಲಾಲ್ ಖಟ್ಟರ್ ಅವರು ಶುಕ್ರವಾರ ಘೋಷಿಸಿದರು.

'ಪಹಲ್ಗಾಮ್ ದಾಳಿಯ ನಂತರ ಪಾಕಿಸ್ತಾನದೊಂದಿಗಿನ ಸಿಂಧೂ ನದಿ ಜಲ ಒಪ್ಪಂದವು ಅಮಾನತಿನಲ್ಲಿದೆ. ಕೆಟ್ಟ ಸಂದರ್ಭದಲ್ಲಿಯೂ ಕೆಲವೊಮ್ಮೆ ಒಳ್ಳೆಯದಾಗುತ್ತದೆ' ಎಂದು ಅವರು ಅಭಿಪ್ರಾಯಪಟ್ಟರು.



'ಪಾಕಿಸ್ತಾನಕ್ಕೆ ಹರಿದುಹೋಗುತ್ತಿದ್ದ ದೊಡ್ಡ ಪ್ರಮಾಣದ ನೀರು ಇನ್ಮುಂದೆ ದೆಹಲಿ, ರಾಜಸ್ಥಾನ, ಹರಿಯಾಣಕ್ಕೆ ಸರಬರಾಜಾಗಲಿದೆ' ಎಂದರು.

ಎಸ್‌ಪಿ ತಾಯಿ ಪರೀಕ್ಷಿಸಲು ವೈದ್ಯನ ಎಳೆದೊಯ್ದ ಪೊಲೀಸರು

ಲಖನೌ: ಉತ್ತರ ಪ್ರದೇಶದ ಇಟವಾ ಜಿಲ್ಲೆಯ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಯ ಅನಾರೋಗ್ಯ ಪೀಡಿತ ತಾಯಿಯನ್ನು ಪರೀಕ್ಷಿಸಲು ಜಿಲ್ಲಾ ಆಸ್ಪತ್ರೆಯ ತುರ್ತು ನಿಗಾ ಘಟಕದಲ್ಲಿ ರಾತ್ರಿ ಪಾಳಿಯಲ್ಲಿ ಕೆಲಸ ಮಾಡುತ್ತಿದ್ದ ವೈದ್ಯರೊಬ್ಬರನ್ನು ಪೊಲೀಸರು ಒತ್ತಾಯದಿಂದ ಕಾರಿನಲ್ಲಿ ಎಳೆದೊಯ್ದ ಘಟನೆ ನಡೆದಿದೆ.

ಗುರುವಾರ ರಾತ್ರಿ ಈ ಘಟನೆ ನಡೆದಿದೆ. ಡಾ. ರಾಹುಲ್ ಬಾಬು ರಾಜ್‌ಪುತ್ ಅವರನ್ನು ಒತ್ತಾಯದಿಂದ ಕರೆದೊಯ್ದ ಪೊಲೀಸರನ್ನು ಅಮಾನತು ಮಾಡಲಾಗಿದೆ ಎಂದು ವರದಿಯಾಗಿದೆ. 'ಇಲ್ಲಿನ ಕೆಲಸ ಬಿಟ್ಟು ಬರುವುದಕ್ಕೆ ಸಾಧ್ಯವಿಲ್ಲ. ತುರ್ತು ಚಿಕಿತ್ಸೆಗಾಗಿ ರೋಗಿಗಳು ಬರುತ್ತಲೇ ಇರುತ್ತಾರೆ. ಅವರ ತಾಯಿಯನ್ನು ಪರೀಕ್ಷಿಸಲು ಇತರೆ ವೈದ್ಯರನ್ನು ಕಳುಹಿಸುವುದಾಗಿ ರಾಹುಲ್ ಅವರು ತಿಳಿಸಿದರೂ ಅವರನ್ನು ಬರುವಂತೆ ಒತ್ತಾಯಪಡಿಸಲಾಗಿದೆ.

'ಖಾಸಗಿ ಆಸ್ಪತ್ರೆಯ ವೈದ್ಯನನ್ನು ಕರೆದುಕೊಂಡು ಬರುವಂತೆ ಹೇಳಿದ್ದೆ. ಆದರೆ, ಅವರು ಜಿಲ್ಲಾ ಆಸ್ಪತ್ರೆಗೆ ಹೋದರು' ಎಂದು ಎಸ್‌ಪಿ ಹೇಳಿದ್ದಾರೆ. ಘಟನೆ ಖಂಡಿಸಿ ಆಸ್ಪತ್ರೆಯ ವೈದ್ಯರು, ಸಿಬ್ಬಂದಿ ಪ್ರತಿಭಟಿಸಿದ್ದಾರೆ. ಕೃತ್ಯ ಎಸಗಿದವರ ವಿರುದ್ಧ ಕ್ರಮ ತೆಗೆದುಕೊಳ್ಳುವುದಾಗಿ ಅಧಿಕಾರಿಗಳು ಭರವಸೆ ನೀಡಿದ ಬಳಿಕ ಪ್ರತಿಭಟನೆ ಹಿಂಪಡೆಯಲಾಗಿದೆ.

ಬದುಕು... ಬವಣೆ

ಪಿಟಿಐ ಚಿತ್ರ

ಉತ್ತರಾಖಂಡದಲ್ಲಿ ಮಳೆ ಮುಂದುವರಿದಿದ್ದು, ಹೃಷಿಕೇಶ ಬಳಿಯ ಚಿಲ್ಲಾ ರೇಂಜ್‌ನಲ್ಲಿ ಜನರು ಉಕ್ಕಿ ಹರಿಯುತ್ತಿದ್ದ ಬೀನ್ ನದಿಯನ್ನು ಟ್ರ್ಯಾಕ್ಟರ್–ಟ್ರಾಲಿಗಳ ಮೂಲಕವೇ ದಾಟುತ್ತಿದ್ದುದು ಶುಕ್ರವಾರ ಕಂಡುಬಂತು

'ಆನ್‌ಲೈನ್‌ನಲ್ಲಿ ಮತ ಅಳಿಸಲು ಅಸಾಧ್ಯ'

ಆಳಂದ ವಿಧಾನಸಭಾ ಕ್ಷೇತ್ರದಲ್ಲಿ 6,018 ಮತ ಅಳಿಸಲು ಯತ್ನಿಸಿದ ಪ್ರಕರಣ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಸಾಕ್ಷ್ಯ ಒದಗಿಸಲು ಗಡವು ನೀಡಿದ್ದ ರಾಹುಲ್ ಗಾಂಧಿ
- ಸಿಐಡಿಗೆ ಕರ್ನಾಟಕ ಸಿಇಒಯಿಂದ ಇನ್ನಷ್ಟು ಮಾಹಿತಿ: ಆಯೋಗ

ನವದೆಹಲಿ: ಆಳಂದ ವಿಧಾನಸಭಾ ಕ್ಷೇತ್ರದಲ್ಲಿ 6,018 ಮತಗಳನ್ನು ಅಳಿಸಲು ಯತ್ನಿಸಿದ ಪ್ರಕರಣದ ಬಗ್ಗೆ ತನಿಖೆ ನಡೆಸುತ್ತಿರುವ ಸಿಐಡಿಗೆ ಕರ್ನಾಟಕ ಮುಖ್ಯ ಚುನಾವಣಾ ಅಧಿಕಾರಿ (ಸಿಇಒ) ಇನ್ನಷ್ಟು ಮಾಹಿತಿ ಹಾಗೂ ದಾಖಲೆಗಳನ್ನು ಒದಗಿಸಲಿದ್ದಾರೆ ಎಂದು ಕೇಂದ್ರ ಚುನಾವಣಾ ಆಯೋಗ ಶುಕ್ರವಾರ ತಿಳಿಸಿದೆ. ಆದರೆ, ಲಭ್ಯವಿರುವ ಮಾಹಿತಿಯನ್ನು ತನಿಖಾಧಿಕಾರಿಗೆ ಈಗಾಗಲೇ ಹಸ್ತಾಂತರಿಸಲಾಗಿದೆ ಎಂದು ಆಯೋಗ ಒತ್ತಿ ಹೇಳಿದೆ.

ಆಳಂದ ಮತ ಅಕ್ರಮ ಯತ್ನದ ಬಗ್ಗೆ ತನಿಖೆ ನಡೆಸುತ್ತಿರುವ ಸಿಐಡಿಗೆ ಕೇಂದ್ರ ಚುನಾವಣಾ ಆಯೋಗವು ಒಂದು ವಾರದೊಳಗೆ ಎಲ್ಲ ಸಾಕ್ಷ್ಯಗಳನ್ನು ಒದಗಿಸಬೇಕು ಎಂದು ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಗುರುವಾರ ಗಡುವು ವಿಧಿಸಿದ್ದರು. ಮತಕಳವು ಮಾಡುವವರನ್ನು ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ರಕ್ಷಿಸುತ್ತಿದ್ದಾರೆ ಎಂದೂ ಆಪಾದಿಸಿದ್ದರು.

ಆಳಂದದಲ್ಲಿ ಮತದಾರರ ಪಟ್ಟಿಯಿಂದ ಹೆಸರುಗಳನ್ನು ಅಳಿಸಲು 6,018 ಅರ್ಜಿಗಳು ಸಲ್ಲಿಕೆಯಾಗಿದ್ದವು. ಪರಿಶೀಲನೆ ನಡೆಸಿದ ಸಮಯದಲ್ಲಿ 24 ಮಾತ್ರ ನಿಜವಾದವು ಎಂದು ಕಂಡುಬಂದಿದ್ದು, 5,994 ಅರ್ಜಿಗಳನ್ನು ತಿರಸ್ಕರಿಸಲಾಗಿತ್ತು ಎಂದು ಚುನಾವಣಾ ಆಯೋಗ ತಿಳಿಸಿದೆ. 'ತಿರಸ್ಕರಿಸಿದ ಅರ್ಜಿಗಳ ನೈಜತೆ ಅನುಮಾನಿಸಿ ಆಳಂದದ ಚುನಾವಣಾ ಅಧಿಕಾರಿ ಎಫ್‌ಐಆರ್ ದಾಖಲಿಸಿದ್ದರು.

ಚುನಾವಣಾ ಆಯೋಗದ ಸೂಚನೆಗಳ ಮೇರೆಗೆ ಸಿಇಒ ಅವರು ಕಲಬುರ್ಗಿ ಎಸ್‌ಪಿ ಅವರಿಗೆ 2023ರ ಸೆಪ್ಟೆಂಬರ್ 6ರಂದು ಲಭ್ಯವಿರುವ ಎಲ್ಲ ಮಾಹಿತಿಗಳನ್ನು ಹಸ್ತಾಂತರಿಸಿದ್ದರು' ಎಂದು ಆಯೋಗ ಸ್ಪಷ್ಟಪಡಿಸಿದೆ.

'ಫಾರ್ಮ್ ಉಲ್ಲೇಖ ಸಂಖ್ಯೆ, ಆಕ್ಷೇಪಣೆ ಸಲ್ಲಿಸಿದವರ ಹೆಸರು, ಎಪಿಕ್ ಸಂಖ್ಯೆ, ಲಾಗಿನ್‌ಗೆ ಬಳಸಿದ ಮೊಬೈಲ್ ಸಂಖ್ಯೆ, ಪ್ರಕ್ರಿಯೆಗೆ ಒದಗಿಸಲಾದ ಮೊಬೈಲ್ ಸಂಖ್ಯೆ, ಐಪಿ ವಿಳಾಸ, ಅರ್ಜಿದಾರರ ಸ್ಥಳ, ಫಾರ್ಮ್ ಸಲ್ಲಿಕೆ ದಿನಾಂಕ ಮತ್ತು ಸಮಯ ಮತ್ತಿತರ ಮಾಹಿತಿಗಳನ್ನು ಒದಗಿಸಲಾಗಿತ್ತು ಎಂದೂ ಆಯೋಗ ತಿಳಿಸಿದೆ.

'ಮುಂದಿನ ದಿನಗಳಲ್ಲೂ ತನಿಖಾ ಸಂಸ್ಥೆಗೆ ಕರ್ನಾಟಕದ ಸಿಇಒ ಅವರು ಯಾವುದೇ ಹೆಚ್ಚಿನ ಮಾಹಿತಿ ಮತ್ತು ದಾಖಲೆಗಳನ್ನು ಒದಗಿಸಲಿದ್ದಾರೆ. ಅವರು ನಿರಂತರ ಸಹಾಯ ನೀಡುತ್ತಿದ್ದಾರೆ' ಎಂದು ಆಯೋಗ ಹೇಳಿದೆ. ಯಾವುದೇ ಸಾರ್ವಜನಿಕರು ಆನ್‌ಲೈನ್‌ನಲ್ಲಿ ಯಾವುದೇ ಮತವನ್ನು ಅಳಿಸಲು ಸಾಧ್ಯವಿಲ್ಲ ಎಂದೂ ಸ್ಪಷ್ಟಪಡಿಸಿದೆ.

474 ಪಕ್ಷಗಳನ್ನು ಪಟ್ಟಿಯಿಂದ ಕೈಬಿಟ್ಟ ಆಯೋಗ

ನವದೆಹಲಿ (ಪಿಟಿಐ): ನೋಂದಾಯಿತ ಮತ್ತು ಮಾನ್ಯತೆ ಪಡೆಯದ 474 ರಾಜಕೀಯ ಪಕ್ಷಗಳನ್ನು ಪಟ್ಟಿಯಿಂದ ತೆಗೆದು ಹಾಕಲಾಗಿದೆ ಎಂದು ಚುನಾವಣಾ ಆಯೋಗ ಶುಕ್ರವಾರ ತಿಳಿಸಿದೆ.

ಈ ಪಕ್ಷಗಳು ಕಳೆದ ಆರು ವರ್ಷಗಳಲ್ಲಿ ಯಾವುದೇ ಚುನಾವಣೆ ಯಲ್ಲಿ ಭಾಗವಹಿಸಿಲ್ಲ ಹಾಗೂ ಮಾನದಂಡಗಳನ್ನು ಪಾಲಿಸದ ಕಾರಣ ಈ ಕ್ರಮ ಕೈಗೊಳ್ಳಲಾಗಿದೆ ಎಂದು ಅದು ಹೇಳಿದೆ. ಇದರೊಂದಿಗೆ ಕಳೆದ 2 ತಿಂಗಳಲ್ಲಿ ಒಟ್ಟು 808 ಪಕ್ಷಗಳನ್ನು ಪಟ್ಟಿಯಿಂದ ಕೈಬಿಡಲಾಗಿದೆ. ಆ.9 ರಂದು ಮೊದಲ ಹಂತದಲ್ಲಿ 334 ಪಕ್ಷಗಳನ್ನು ಕೈಬಿಡಲಾಯಿತು.

ಸ್ಕೂಬಾ ಡೈವಿಂಗ್ ವೇಳೆ ಖ್ಯಾತ ಗಾಯಕ ಸಾವು

ಗುವಾಹಟಿ (ಪಿಟಿಐ): ಅಸ್ಸಾಂನ ಜನಪ್ರಿಯ ಗಾಯಕ ಜುಬೀನ್ ಗರ್ಗ್ (52) ಅವರು ಸಿಂಗಪುರದಲ್ಲಿ ಸ್ಕೂಬಾ ಡೈವಿಂಗ್ ಮಾಡುತ್ತಿದ್ದ ವೇಳೆ ಶುಕ್ರವಾರ ಸಾವಿಗೀಡಾಗಿದ್ದಾರೆ.

ಶುಕ್ರವಾರ ಆರಂಭವಾಗಲಿದ್ದ, ಮೂರು ದಿನಗಳ 'ನಾರ್ತ್ ಈಸ್ಟ್ ಫೆಸ್ಟಿವಲ್' ಕಾರ್ಯಕ್ರಮದ ನಾಲ್ಕನೇ ಆವೃತ್ತಿಯಲ್ಲಿ ಭಾಗವಹಿಸಲು ಜುಬೀನ್ ಸಿಂಗಪುರಕ್ಕೆ ತೆರಳಿದ್ದರು.

ಸಮುದ್ರದಲ್ಲಿ ಸ್ಕೂಡಾ ಡೈವಿಂಗ್ ಮಾಡುತ್ತಿದ್ದ ವೇಳೆ ಜುಬೀನ್ ಅವರಿಗೆ ಉಸಿರಾಟದ ಸಮಸ್ಯೆ ಉಂಟಾಯಿತು. ಬಳಿಕ ಅವರನ್ನು ಆಸ್ಪತ್ರೆಗೆ ದಾಖಲಿಸಿ ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ನೀಡಲಾಯಿತು. ಚಿಕಿತ್ಸೆಗೆ ಸ್ಪಂದಿಸದೆ ಅವರು ಸಾವಿಗೀಡಾದರು ಎಂದು ಕಾರ್ಯಕ್ರಮದ ಆಯೋಜಕ ಸಂಸ್ಥೆ ತಿಳಿಸಿದೆ.

ಗೀತ ರಚನಕಾರ, ನಟ ಹಾಗೂ ಚಿತ್ರ ನಿರ್ಮಾಪಕರಾಗಿಯೂ ಗುರುತಿಸಿಕೊಂಡಿದ್ದ ಜುಬೀನ್ ಅವರು ಬಾಲಿವುಡ್‌ನಲ್ಲೂ ಜನಪ್ರಿಯರಾಗಿದ್ದರು. ಅಸ್ಸಾಮಿ, ಹಿಂದಿ ಹಾಗೂ ಬಂಗಾಳಿ ಸೇರಿದಂತೆ ವಿವಿಧ ಭಾಷೆಗಳಲ್ಲಿ ಒಟ್ಟು 38 ಸಾವಿರಕ್ಕೂ ಅಧಿಕ ಹಾಡುಗಳನ್ನು ಹಾಡಿದ್ದಾರೆ.

ಜುಬೀನ್ ಅವರಿಗೆ ಪತ್ನಿ ಇದ್ದಾರೆ.

ಮೇಘಸ್ಫೋಟ: ಮೃತರ ಸಂಖ್ಯೆ 7ಕ್ಕೆ

ಗೋಪೇಶ್ವರ (ಪಿಟಿಐ): ಉತ್ತರಾಖಂಡದ ಚಮೋಲಿ ಜಿಲ್ಲೆಯಲ್ಲಿ ಮೇಘಸ್ಫೋಟ ಸಂಭವಿಸಿದ ಗ್ರಾಮಗಳಲ್ಲಿ ಐದು ಮೃತದೇಹಗಳು ಶುಕ್ರವಾರ ಪತ್ತೆಯಾಗಿವೆ.

ಇದರೊಂದಿಗೆ ಘಟನೆಯಲ್ಲಿ ಮೃತಪಟ್ಟವರ ಸಂಖ್ಯೆ 7ಕ್ಕೆ ಏರಿಕೆಯಾಗಿದೆ. ಎರಡು ಮೃತದೇಹಗಳು ಗುರುವಾರ ಪತ್ತೆಯಾಗಿದ್ದವು.

ಯುಪಿಎಸ್‌ಸಿ: ಮುಖಚಹರೆ ಪರಿಶೀಲನೆಗೆ ಎಐ

ಮುಖ್ಯಾಂಶಗಳು

- ಯುಪಿಎಸ್‌ಸಿ ಪರೀಕ್ಷೆಗಳಲ್ಲಿ ಎಐ ಬಳಕೆ
- ಪ್ರಾಯೋಗಿಕ ಬಳಕೆ ಯಶಸ್ವಿ

ನವದೆಹಲಿ (ಪಿಟಿಐ): ಕೇಂದ್ರ ಲೋಕ ಸೇವಾ ಆಯೋಗ (ಯುಪಿಎಸ್‌ಸಿ) ನಡೆಸುವ ಎಲ್ಲ ಪರೀಕ್ಷೆಗಳಲ್ಲೂ ಅಭ್ಯರ್ಥಿಗಳ ತ್ವರಿತ ಮತ್ತು ಸುರಕ್ಷಿತ ಪರಿಶೀಲನೆಗೆ ಕೃತಕ ಬುದ್ಧಿಮತ್ತೆ (ಎ.ಐ) ತಂತ್ರಜ್ಞಾನ ಆಧಾರಿತ ಮುಖಚಹರೆ ಗುರುತು ದೃಢೀಕರಣ ಪದ್ಧತಿ ಜಾರಿಗೊಳಿಸಲಿದೆ.

'ಎಐ ಬಳಕೆಯ ಪ್ರಾಯೋಗಿಕ ಪದ್ಧತಿಯನ್ನು ಯಶಸ್ವಿಯಾಗಿ ಈಗಾಗಲೇ ಕೈಗೊಳ್ಳಲಾಗಿದೆ' ಎಂದು ಯುಪಿಎಸ್‌ಸಿ ಮುಖ್ಯಸ್ಥ ಅಜಯ್‌ಕುಮಾರ್ ಶುಕ್ರವಾರ ತಿಳಿಸಿದರು.

ಪರೀಕ್ಷಾ ಪ್ರಕ್ರಿಯೆಯ ವಿಶ್ವಾಸಾರ್ಹತೆ ಹೆಚ್ಚಿಸಲು ಮತ್ತು ಅಭ್ಯರ್ಥಿಗಳು ಪರೀಕ್ಷಾ ಕೇಂದ್ರಗಳ ಪ್ರವೇಶದ ವೇಳೆ ಎದುರಿಸುವ ಅಡೆತಡೆಗಳನ್ನು ನಿವಾರಿಸಲು ರಾಷ್ಟ್ರೀಯ ಇ–ಆಡಳಿತ ವಿಭಾಗದ (ಎನ್‌ಇಜಿಡಿ) ಸಹಯೋಗದಲ್ಲಿ ಈ ವ್ಯವಸ್ಥೆಯನ್ನು ರೂಪಿಸಲಾಗಿದೆ ಎಂದು ಅವರು ಹೇಳಿದರು.

ಐಎಎಸ್, ಐಎಫ್‌ಎಸ್ ಮತ್ತು ಐಪಿಎಸ್ ಸೇರಿದಂತೆ ಹಲವು ಸರ್ಕಾರಿ ಹುದ್ದೆಗಳಿಗೆ ಆಯೋಗವು ವಿವಿಧ ನೇಮಕಾತಿ ಪರೀಕ್ಷೆಗಳನ್ನು ನಡೆಸುತ್ತದೆ.

ವೈ–ಫೈ ಸೌಲಭ್ಯ ಮತ್ತು ಮುಖಚಹರೆ ಖಾತ್ರಿ ಪಡಿಸಿಕೊಳ್ಳುವ ಕಾರ್ಯಕ್ಕೆ ಬಳಸುವ ಸಿಬ್ಬಂದಿಗೆ ತರಬೇತಿ ನೀಡುವುದು ಮಹತ್ವದ್ದಾಗಿದೆ. ಇದಕ್ಕಾಗಿ ಅಗತ್ಯ ಗುಣಮಟ್ಟ ಆಧಾರಿತ ಕಾರ್ಯಾಚರಣೆ ಪ್ರಕ್ರಿಯೆಗಳನ್ನು (ಎಸ್‌ಒಪಿ) ಅಭಿವೃದ್ಧಿ ಪಡಿಸಲಾಗುತ್ತಿದೆ ಎಂದು ಅವರು ತಿಳಿಸಿದರು.

ಇತ್ತೀಚೆಗೆ ನಡೆಸಿದ್ದ ರಾಷ್ಟ್ರೀಯ ರಕ್ಷಣಾ ಅಕಾಡೆಮಿ (ಎನ್‌ಡಿಎ), ನೌಕಾ ಅಕಾಡೆಮಿ (ಎನ್‌ಎ) ಮತ್ತು ಸಿಡಿಎಸ್ (ಸಂಯುಕ್ತ ರಕ್ಷಣಾ ಸೇವೆಗಳು) ಪರೀಕ್ಷೆಗಳಲ್ಲಿ ಎಐ ಆಧಾರಿತ ಮುಖಚಹರೆ ದೃಢೀಕರಣ ಪದ್ಧತಿಯನ್ನು ಪ್ರಾಯೋಗಿಕವಾಗಿ ಜಾರಿಗೊಳಿಸಲಾಗಿತ್ತು. ಅರ್ಜಿಗಳಲ್ಲಿ ಅಭ್ಯರ್ಥಿಗಳು ಲಗತ್ತಿಸಿರುವ ಭಾವಚಿತ್ರಗಳೊಂದಿಗೆ ಡಿಜಿಟಲ್ ಮಾದರಿಯಲ್ಲಿ ಹೋಲಿಕೆ ಮಾಡಲಾಗಿತ್ತು. ಗುರುಗ್ರಾಮದ ಪರೀಕ್ಷಾ ಕೇಂದ್ರಗಳಲ್ಲಿ ಮುಖ ಚಹರೆಗಳ ಗುರುತಿಸುವಿಕೆ ನಡೆದಿತ್ತು ಎಂದು ಅವರು ತಿಳಿಸಿದರು.

ಹೊಸ ಪದ್ಧತಿಯು ಪ್ರತಿ ಅಭ್ಯರ್ಥಿಯ ಪರಿಶೀಲನಾ ಸಮಯವನ್ನು 8ರಿಂದ 10 ಸೆಕೆಂಡ್‌ಗಳಷ್ಟು ಉಳಿಸಿದೆ. ಅಲ್ಲದೇ ಪರೀಕ್ಷಾ ಕೇಂದ್ರದ ಪ್ರವೇಶ ಪ್ರಕ್ರಿಯೆ ಇನ್ನಷ್ಟು ಸುಲಭವಾಗಲಿದೆ ಎಂದು ಅವರು ಹೇಳಿದರು.

ಪರೀಕ್ಷಾ ಕೇಂದ್ರಗಳಿಗೆ ಹೆಚ್ಚುವರಿ ಭದ್ರತೆಯನ್ನು ನಿಯೋಜಿಸುವುದನ್ನೂ ಈ ಪದ್ಧತಿ ತಪ್ಪಿಸಲಿದೆ. ಚುರುಕಾದ, ಸುರಕ್ಷಿತ ಮತ್ತು ದಕ್ಷತೆಯಿಂದ ಪರೀಕ್ಷೆ ನಡೆಸುವತ್ತ ಎಐ ಆಧಾರಿತ ಮುಖ ಚಹರೆ ಗುರುತಿಸುವಿಕೆ ಮಹತ್ವದ ಹೆಜ್ಜೆಯಾಗಿದೆ.

ಪ್ರಾಯೋಗಿಕವಾಗಿ ಆಯ್ಕೆ ಮಾಡಿದ್ದ ಸ್ಥಳಗಳಲ್ಲಿ 1129 ಅಭ್ಯರ್ಥಿಗಳಿಗೆ 2,700 ಸ್ಕ್ಯಾನ್‌ಗಳನ್ನು ನಡೆಸಲಾಗಿದೆ. ಪರೀಕ್ಷಾ ಪ್ರಕ್ರಿಯೆಯಲ್ಲಿ ಪಾರದರ್ಶಕತೆಯನ್ನು ಕಾಯ್ದುಕೊಳ್ಳಲು ಮತ್ತಷ್ಟು ಆಧುನಿಕ ತಂತ್ರಜ್ಞಾನ ಅಳವಡಿಕೆಗೆ ಆಯೋಗ ಬದ್ಧವಾಗಿದೆ ಎಂದು ತಿಳಿಸಿದರು.

ಭಾರತದ ಟೆಕಿ ಕೊಂದ ಅಮೆರಿಕ ಪೊಲೀಸರು

ಜನಾಂಗೀಯ ತಾರತಮ್ಯದ ಪ್ರಕರಣ: ಸಹವಾಸಿಗೆ ಚೂರಿಯಿಂದ ಇರಿದ ಆರೋಪಿ

ಹೈದರಾಬಾದ್ (ಪಿಟಿಐ): ತನ್ನ ಕೊಠಡಿಯ ಸಹವಾಸಿಯನ್ನು ಚೂರಿಯಿಂದ ಇರಿದ ಭಾರತದ ಟೆಕಿಯನ್ನು ಅಮೆರಿಕದ ಪೊಲೀಸರು ಕ್ಯಾಲಿಫೋರ್ನಿಯಾದಲ್ಲಿ ಗುಂಡಿಕ್ಕಿ ಸಾಯಿಸಿದ್ದಾರೆ.

ತೆಲಂಗಾಣದ ಮೆಹಬೂಬನಗರ ಜಿಲ್ಲೆಯ ಮಹಮ್ಮದ್ ನಿಜಾಮುದ್ದೀನ್ (32) ಮೃತ ವ್ಯಕ್ತಿ. ಅಮೆರಿಕದಲ್ಲಿ ಎಂ.ಎಸ್. ಮುಗಿಸಿದ್ದ ಈತ ಅಲ್ಲಿ ಸಾಫ್ಟ್‌ವೇರ್ ಉದ್ಯೋಗಿಯಾಗಿದ್ದ. ಕ್ಯಾಲಿಫೋರ್ನಿಯಾದ ಸಾಂತಾ ಕ್ಲಾರಾದ ವಸತಿ ಗೃಹದಲ್ಲಿ ನೆಲೆಸಿದ್ದ.

ಸೆ.3ರಂದು ನಿಜಾಮುದ್ದೀನ್ ತನ್ನ ಸಹವಾಸಿಯೊಂದಿಗೆ ಮಾತಿನ ಚಕಮಕಿ ನಡೆಸಿದ್ದ. ಜಗಳ ವಿಕೋಪಕ್ಕೆ ಹೋದಾಗ ಚಾಕುವಿನಿಂದ ಆತನಿಗೆ ಇರಿದಿದ್ದ. ಆ ವ್ಯಕ್ತಿ ಸಹಾಯಕ್ಕಾಗಿ 911ಕ್ಕೆ ತುರ್ತು ಕರೆ ಮಾಡಿದ್ದರು. ಸ್ಥಳಕ್ಕೆ ಬಂದ ಪೊಲೀಸರು ನಿಜಾಮುದ್ದೀನ್‌ನನ್ನು ಬಂಧಿಸಲು ಕೊಠಡಿಗೆ ನುಗ್ಗಿದಾಗ, ಆತ ಚಾಕುವಿನಿಂದ ಸಹವಾಸಿ ಮೇಲೆ ಮತ್ತೆ ಹಲ್ಲೆ ನಡೆಸಲು ಯತ್ನಿಸಿದ್ದ. ಶರಣಾಗುವಂತೆ ಹಲವು ಬಾರಿ ಮನವಿ ಮಾಡಿದರೂ, ಮಣಿಯದಿದ್ದಾಗ ಪೊಲೀಸರು ಗುಂಡು ಹಾರಿಸಿದ್ದರು.

ಮುಖ್ಯಾಂಶಗಳು

- ತೆಲಂಗಾಣ ಮೂಲದ ನಿಜಾಮುದ್ದೀನ್ ಕೊಲೆಯಾದ ಟೆಕಿ
- ಶರಣಾಗದ ಕಾರಣ ಹತ್ಯೆ



ಮಹಮ್ಮದ್ ನಿಜಾಮುದ್ದೀನ್ ಪಾಸ್‌ಪೋರ್ಟ್ ಚಿತ್ರ

ಜನಾಂಗೀಯ ದ್ವೇಷ: 'ನಾನು ಜನಾಂಗೀಯ ದ್ವೇಷಕ್ಕೆ ಬಲಿಪಶು ಆಗಿದ್ದೇನೆ. ವೇತನ ತಾರತಮ್ಯ ಮಾಡಲಾಗಿದೆ. ನನ್ನನ್ನು ಅನ್ಯಾಯವಾಗಿ ಕೆಲಸದಿಂದ ತೆಗೆದು ಹಾಕಲಾಗಿದೆ. ಅನ್ಯಾಯದ ವಿರುದ್ಧ ಹೋರಾಡಿದ್ದರಿಂದ ಈಗ ಕೊಠಡಿಯಿಂದಲೂ ನನ್ನನ್ನು ಹೊರಗೆ ಹಾಕುವ ಪ್ರಯತ್ನ ನಡೆಯುತ್ತಿದೆ. ಇವೆಲ್ಲವುಗಳಿಂದ ಅಪಾರ ನೋವು ಅನುಭವಿಸುತ್ತಿದ್ದೇವೆ. ಇದಕ್ಕೆ ಮುಕ್ತಿ ಹಾಡಬೇಕೆಂದು ನಿರ್ಧರಿಸಿದ್ದೇನೆ. ಕಾರ್ಪೊರೇಟ್ ದಬ್ಬಾಳಿಕೆ ಕೊನೆಗೊಳ್ಳಬೇಕು, ಇದರಲ್ಲಿ ಭಾಗಿಯಾಗಿರುವ ಎಲ್ಲರಿಗೂ ಕಠಿಣ ಶಿಕ್ಷೆಯಾಗಬೇಕು' ಎಂದು ಮಹಮ್ಮದ್ ನಿಜಾಮುದ್ದೀನ್ ಇತ್ತೀಚೆಗೆ ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿದ್ದರು.

ಈ ಪೋಸ್ಟ್‌ನ ವಿಚಾರವು ಆತನ ಸ್ನೇಹಿತನಿಂದ ನಮಗೆ ತಿಳಿಯಿತು. 'ನನ್ನ ಮಗ ಜನಾಂಗೀಯ ತಾರತಮ್ಯಕ್ಕೆ ಒಳಗಾಗಿದ್ದ. ಆತ ಇದ್ದ ಕೊಠಡಿಗೆ ಎ.ಸಿ ಸಂಪರ್ಕ ಕಡಿತಗೊಳಿಸಲಾಗಿತ್ತು. ಒಮ್ಮೆ ಆಹಾರದಲ್ಲಿ ವಿಷ ಬೆರೆಸಿ ನೀಡಲಾಗಿತ್ತು. ಈಗ ಅಮೆರಿಕ ಪೊಲೀಸರು ಈ ಪ್ರಕರಣವನ್ನು ಮುಚ್ಚಿ ಹಾಕಲು ಪ್ರಯತ್ನಿಸುತ್ತಿದ್ದಾರೆ.ಈ ಘಟನೆ ಸೆ.3ರಂದು ನಡೆದಿದ್ದರೂ ನಮ್ಮ ಗಮನಕ್ಕೆ ತಂದಿಲ್ಲ. ಮಗನ ಸಾವಿಗೆ ನ್ಯಾಯ ಲಭಿಸಬೇಕು' ಎಂದು ನಿಜಾಮುದ್ದೀನ್ ತಂದೆ ಹಸನುದ್ದೀನ್ ಮನವಿ ಮಾಡಿದ್ದಾರೆ.

ಘಟನೆಗೆ ಸಂಬಂಧಿಸಿದ ವಿಡಿಯೊ ತುಣುಕನ್ನು ಸಾಂತಾ ಕ್ಲಾರಾ ಪೊಲೀಸರು ಬಿಡುಗಡೆ ಮಾಡಿದ್ದು, ಇದು ಜನಾಂಗೀಯ ತಾರತಮ್ಯಕ್ಕೆ ಸಂಬಂಧಿಸಿದ ಪ್ರಕರಣ ಎಂದು ಹೇಳಿದ್ದಾರೆ.

ಮೃತದೇಹ ಭಾರತಕ್ಕೆ ತರಲು ಮನವಿ

'ನಿಜಾಮುದ್ದೀನ್ ಮೃತದೇಹವನ್ನು ಸ್ವದೇಶಕ್ಕೆ ತರಲು, ವಾಷಿಂಗ್ಟನ್‌ನಲ್ಲಿರುವ ಭಾರತದ ರಾಯಭಾರ ಕಚೇರಿ ಮತ್ತು ಸ್ಯಾನ್‌ಫ್ರಾನ್ಸಿಸ್ಕೊದಲ್ಲಿರುವ ಭಾರತದ ಕಾನ್ಸುಲೇಟ್ ಜನರಲ್ ಅವರಿಗೆ ಮನವಿ ಮಾಡುವಂತೆ, ನಿಜಾಮುದ್ದೀನ್ ಅವರ ತಂದೆ ಮಹಮ್ಮದ್ ಹಸನುದ್ದೀನ್ ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿದ್ದಾರೆ.

'ಈ ಕುಟುಂಬದ ನೆರವಿಗೆ ಧಾವಿಸುವಂತೆ ವಿದೇಶಾಂಗ ವ್ಯವಹಾರಗಳ ಸಚಿವ ಜೈಶಂಕರ್ ಅವರಿಗೂ ಮನವಿ ಸಲ್ಲಿಸಲಾಗಿದೆ' ಎಂದು ಮಜ್ಲಿಸ್ ಬಚಾವೊ ತೆಹ್ರೀಕ್ (ಎಂಬಿಟಿ) ವಕ್ತಾರ ಅಮ್ಜದ್ ಉಲ್ಲಾಖಾನ್ ತಿಳಿಸಿದ್ದಾರೆ.

ಐಎಸ್‌ಎಸ್‌ನಲ್ಲಿನ ಅನುಭವ ಹಂಚಿಕೊಂಡ ಗಗನಯಾನಿ ಶುಕ್ಲಾ

'ಹೃದಯ ಬಡಿತ ನಿಧಾನವಾಗುತ್ತಿತ್ತು...'

ನವದೆಹಲಿ(ಪಿಟಿಐ): 'ಮುಖ ಊದಿಕೊಂಡಿತ್ತು.. ಹೃದಯದ ಬಡಿತ ನಿಧಾನಗೊಂಡಿತ್ತು. ಬೆನ್ನುನೋವಿನ ಬಾಧೆ, ಹಸಿವು ಆಗುತ್ತಿರಲಿಲ್ಲ...'

– ಗಗನಯಾನ ಕೈಗೊಂಡಿದ್ದ ಗಗನಯಾತ್ರಿ ಶುಭಾಂಶು ಶುಕ್ಲಾ ಅವರು, ಕಕ್ಷೆಯಲ್ಲಿ ಕಳೆದ ದಿನಗಳಲ್ಲಿ ತಾವು ಎದುರಿಸಿದ ಸಮಸ್ಯೆಗಳನ್ನು ವಿವರಿಸಿದ್ದು ಹೀಗೆ.

'ಅಂತರಿಕ್ಷ ಹಾಗೂ ಅಂತರಿಕ್ಷ ಯಾನ ಕುರಿತು ಸಾಮಾನ್ಯವಾಗಿ ಎಲ್ಲರಲ್ಲೂ ಕುತೂಹಲ, ರಮ್ಯ ಕಲ್ಪನೆಗಳು ಇರುತ್ತವೆ. ಆದರೆ, ಕಕ್ಷೆಯಲ್ಲಿ ನಾವು ಅನೇಕ ಸಮಸ್ಯೆ ಎದುರಿಸಿದೆವು' ಎಂದೂ ಹೇಳಿದ್ದಾರೆ.

ಫಿಕ್ಕಿ ಸಿಎಲ್‌ಒ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣಕ್ಕೆ (ಐಎಸ್‌ಎಸ್) ತೆರಳಿದ ವೇಳೆ ಎದುರಿಸಿದ ಸಮಸ್ಯೆಗಳ ಕುರಿತು ವಿವರಿಸಿದ್ದಾರೆ.

> ಅಂತರಿಕ್ಷದ ಅನ್ವೇಷಣೆ ಎಂಬುದು ರಾಕೆಟ್‌ಗಳನ್ನು ಉಡ್ಡಯನ ಮಾಡುವುದು ಮಾತ್ರವಲ್ಲ, ನಮ್ಮಲ್ಲಿನ ಉತ್ಸಾಹ ಪುಟಿದೇಳುವಂತೆ ಮಾಡುವುದೂ ಆಗಿದೆ
>
> **ಶುಭಾಂಶು ಶುಕ್ಲಾ,** ಗಗನಯಾನಿ

'ಐಎಸ್‌ಎಸ್‌ನಲ್ಲಿ ಕಳೆದ ದಿನಗಳು ನಮ್ಮ ಪಾಲಿಗೆ ತಾಳ್ಮೆಗೆ ಸಂಬಂಧಿಸಿದ ಕಠಿಣ ಪರೀಕ್ಷೆ ಒಡ್ಡಿದ್ದವು. ಕಷ್ಟಗಳನ್ನು ಎದುರಿಸಿ ಪುಟಿದೇಳುವುದು, ತಂಡವಾಗಿ ಕಾರ್ಯ ನಿರ್ವಹಣೆ ಹಾಗೂ ಸತತ ಪ್ರಯತ್ನದಂತಹ ಪಾಠಗಳನ್ನು ಕಲಿತೆವು' ಎಂದು ಶುಕ್ಲಾ ಹೇಳಿದ್ದಾರೆ.

'ಆರಂಭದಲ್ಲಿ ಅಂತರಿಕ್ಷ ಕಾರ್ಯಕ್ರಮಗಳು ರೋಮಾಂಚನಕಾರಿ ಎನಿಸುತ್ತವೆ. ಇದು ನಿಜವೂ ಕೂಡ. ಆದರೆ, ಐಎಸ್‌ಎಸ್‌ನಂತಹ ಕಡಿಮೆ ಗುರುತ್ವಾಕರ್ಷಣೆ ಇರುವ ಪರಿಸರವನ್ನು ಪ್ರವೇಶಿಸಿದಾಗ, ನಮ್ಮ ದೇಹ ತನ್ನ ಪ್ರತಿರೋಧ ಹೊರಹಾಕುತ್ತದೆ. ಅಂತಹ ಪರಿಸರವನ್ನು ದೇಹ ಮೊದಲು ಕಂಡಿರುವುದಿಲ್ಲ ಎಂಬುದೇ ಇದಕ್ಕೆ ಕಾರಣ' ಎಂದು ವಿವರಿಸಿದ್ದಾರೆ.

'ರಕ್ತದ ಪರಿಚಲನೆಯಲ್ಲಿ ವ್ಯತ್ಯಾಸವಾಗುತ್ತದೆ. ತಲೆ ಗಾಳಿತುಂಬಿಕೊಂಡ ರೀತಿ ಉಬ್ಬಿದಂತಾಗುತ್ತದೆ, ಹೃದಯದ ಬಡಿತ ನಿಧಾನವಾಗುತ್ತದೆ. ಬೆನ್ನುಹುರಿ ಹಿಗ್ಗಿದಂತಾಗುವ ಕಾರಣ ಬೆನ್ನುನೋವು ಬಾಧಿಸುತ್ತದೆ' ಎಂದು ಹೇಳಿದ್ದಾರೆ.

'ಇಷ್ಟೆಲ್ಲಾ ಸಮಸ್ಯೆಗಳನ್ನು ಎದುರಿಸುವಾಗ ನಿಮಗೆ ಯಾವುದೇ ಮಾತ್ರೆಗಳನ್ನು ತೆಗೆದುಕೊಳ್ಳಲು ಆಗುವುದಿಲ್ಲ. ಉಬ್ಬಳಿಕೆ, ವಾಂತಿ ನಿವಾರಿಸುವ ಮಾತ್ರೆ ತೆಗೆದುಕೊಂಡರೆ ನಿದ್ರೆ ಬರುತ್ತದೆ' ಎಂದೂ ಹೇಳಿದ್ದಾರೆ.

ದಸರಾ: ಅರ್ಜಿದಾರರಿಗೆ 'ಸುಪ್ರೀಂ'ತರಾಟೆ

ಒಂದನೇ ಪುಟದಿಂದ...

ಈ ಕಾರ್ಯಕ್ರಮದಲ್ಲಿ ಎರಡು ಅಂಶಗಳಿವೆ. ಒಂದು ದಸರಾ ಉದ್ಘಾಟನೆ ಕಾರ್ಯಕ್ರಮ ಹಾಗೂ ಮತ್ತೊಂದು ಪೂಜಾ ಕಾರ್ಯಕ್ರಮ ಎಂದು ವಕೀಲರು ಪೀಠದ ಗಮನ ಸೆಳೆದರು.

'ನೀವು ಅರ್ಜಿ ಸಲ್ಲಿಸಿದ್ದು ಏಕೆ? ಯಾವ ಆಧಾರದಲ್ಲಿ ಅರ್ಜಿ ಸಲ್ಲಿಸಿದ್ದೀರಿ' ಎಂದು ಪೀಠ ಪ್ರಶ್ನಿಸಿತು. 'ರಾಜ್ಯ ಸರ್ಕಾರದ ಈ ನಿರ್ಧಾರ ಸಂವಿಧಾನದ 25ನೇ ವಿಧಿಯಲ್ಲಿನ ಅರ್ಜಿದಾರರ ಹಕ್ಕುಗಳ ಮೇಲೆ ಪರಿಣಾಮ ಬೀರುತ್ತದೆ' ಎಂದು ವಕೀಲರು ಹೇಳಿದರು.

2017ರಲ್ಲಿ ಅರ್ಜಿದಾರರ ಹಕ್ಕಿನ ಮೇಲೆ ಪರಿಣಾಮ ಬೀರಿಲ್ಲವೇ ಎಂದು ಪೀಠ ಪ್ರಶ್ನಿಸಿತು.

ಸುಪ್ರೀಂ ಕೋರ್ಟ್‌ನ ಕೆಲವು ತೀರ್ಪುಗಳನ್ನು ಉಲ್ಲೇಖಿಸಿದ ವಕೀಲರು, 'ಅವರು ನನ್ನ ಧಾರ್ಮಿಕ ಚಟುವಟಿಕೆಗಳಲ್ಲಿ ಹಸ್ತಕ್ಷೇಪ ಮಾಡಲು ಸಾಧ್ಯವಿಲ್ಲ' ಎಂದು ಪ್ರತಿಪಾದಿಸಿದರು. ದೇವಸ್ಥಾನದ ಆವರಣ ದೊಳಗಿನ ಚಟುವಟಿಕೆಗಳನ್ನು ಉಲ್ಲೇಖಿಸಿದರು. ಅರ್ಜಿಯನ್ನು ವಜಾಗೊಳಿಸಲಾಗಿದೆ ಎಂದು ನ್ಯಾಯಮೂರ್ತಿ ವಿಕ್ರಮ್‌ನಾಥ್ ಒತ್ತಿ ಹೇಳಿದರು.

ಮಾಜಿ ಸಂಸದ ಪ್ರತಾಪ್‌ಸಿಂಹ ಮತ್ತಿತರರು ಸಲ್ಲಿಸಿದ್ದ ಅರ್ಜಿಯನ್ನು ಹೈಕೋರ್ಟ್ ಸೆಪ್ಟೆಂಬರ್ 15ರಂದು ವಜಾಗೊಳಿಸಿತ್ತು.

'ಪಾಕಿಸ್ತಾನ ಮನೆಯಂತೆ ಭಾವನೆ'

ನವದೆಹಲಿ (ಪಿಟಿಐ): 'ಪಾಕಿಸ್ತಾನ, ಬಾಂಗ್ಲಾದೇಶಕ್ಕೆ ಹೋದರೆ, ಮನೆಯಲ್ಲಿರುವಂತಹ ಭಾವನೆ ಉಂಟಾಯಿತು' ಎಂದು ಭಾರತೀಯ ಸಾಗರೋತ್ತರ ಕಾಂಗ್ರೆಸ್ ಅಧ್ಯಕ್ಷ ಸ್ಯಾಮ್ ಪಿತ್ರೊಡಾ ಹೇಳಿಕೆಗೆ ಬಿಜೆಪಿ ಆಕ್ರೋಶ ವ್ಯಕ್ತಪಡಿಸಿದೆ. ಈ ಕುರಿತು ಕಾಂಗ್ರೆಸ್ ನಾಯಕರಾದ ರಾಹುಲ್ ಗಾಂಧಿ, ಸೋನಿಯಾ ಗಾಂಧಿ ಅವರು ತಕ್ಷಣವೇ ಕ್ಷಮೆಯಾಚಿಸಬೇಕು ಎಂದು ಒತ್ತಾಯಿಸಿದೆ.



ಸ್ಯಾಮ್ ಪಿತ್ರೊಡಾ

'ನೆರೆ ರಾಷ್ಟ್ರಗಳ ಜೊತೆಗೆ ಭಾರತದ ಸಂಬಂಧವು ಗಣನೀಯವಾಗಿ ಸುಧಾರಿಸಬೇಕು ಎಂದು ಸಲಹೆ ನೀಡಿರುವ ಪಿತ್ರೊಡಾ, ಈ ಹಿಂದೆ ಪಾಕಿಸ್ತಾನಕ್ಕೆ ಭೇಟಿ ನೀಡಿದ ವೇಳೆ ಮನೆಯಲ್ಲಿ ಇರುವ ಭಾವನೆ ಉಂಟಾಯಿತು' ಎಂದು ಹೇಳಿದ್ದಾರೆ.

ಈ ಕುರಿತು ಪ್ರತಿಕ್ರಿಯಿಸಿರುವ ಬಿಜೆಪಿ ರಾಷ್ಟ್ರೀಯ ವಕ್ತಾರ ಪ್ರದೀಪ್ ಭಂಡಾರಿ, 'ಪಿತ್ರೊಡಾ ಹೇಳಿಕೆಯು ದೇಶದ ಸೈನಿಕರು ಹಾಗೂ ಜನರನ್ನು ಅವಮಾನಿಸಿದೆ. ರಾಹುಲ್ ಗಾಂಧಿ ಅವರ ಆದೇಶದ ಮೇರೆಗೆ ಕಾಂಗ್ರೆಸ್ ನಾಯಕರು ಪಾಕಿಸ್ತಾನವನ್ನು ವೈಭವೀಕರಿಸಿ ಮಾತನಾಡುತ್ತಿದ್ದಾರೆ' ಎಂದು ತಿಳಿಸಿದ್ದಾರೆ.

ಭಾರತಕ್ಕೆ ಸುಲಭದ ತುತ್ತಾಗದ ಒಮಾನ್

ಅರ್ಧಶತಕ ಗಳಿಸಿದ ಸಂಜು ಸ್ಯಾಮ್ಸನ್
• ಬ್ಯಾಟಿಂಗ್‌ಗೆ ಇಳಿಯದ ಸೂರ್ಯ

ಆಮಿರ್ ಕಲೀಂ

ಭಾರತ ತಂಡದ ವಿಕೆಟ್ ಕೀಪರ್ ಸಂಜು ಸ್ಯಾಮ್ಸನ್ ಅವರ ಆಟದ ವೈಖರಿ ಎಎಫ್‌ಪಿ ಚಿತ್ರಗಳು

ಅಬುಧಾಬಿ (ಪಿಟಿಐ): ಏಕಪಕ್ಷೀಯ ಗೆಲುವಿನ ನಿರೀಕ್ಷೆಯಲ್ಲಿದ್ದ ಭಾರತ ತಂಡಕ್ಕೆ ‘ಅನನುಭವಿ’ ಒಮಾನ್ ಸುಲಭವಾಗಿ ಮಣಿಯಲಿಲ್ಲ. ಶುಕ್ರವಾರ ನಡೆದ ಏಷ್ಯಾ ಕಪ್ ಕ್ರಿಕೆಟ್ ಟೂರ್ನಿಯ ‘ಎ’ ಗುಂಪಿನ ಕೊನೆಯ ಪಂದ್ಯದಲ್ಲಿ ಸೂರ್ಯಕುಮಾರ್ ಯಾದವ್ ಪಡೆ 21 ರನ್‌ಗಳ ಪ್ರಯಾಸದ ಜಯ ಗಳಿಸಿತು.

ಭಾರತಕ್ಕೆ ನಿರ್ಣಾಯಕವಲ್ಲದ ಈ ಪಂದ್ಯದಲ್ಲಿ ಒಮಾನ್ ಸುಲಭದ ಸುತ್ತಾಗ ಬಹುದೆಂಬ ನಿರೀಕ್ಷೆಯಿತ್ತು. ಆದರೆ, ಗುಂಪಿನಲ್ಲಿ ಕೊನೆಯ ಸ್ಥಾನದಲ್ಲಿದ್ದ ಒಮಾನ್ ತಂಡವು ನಿರೀಕ್ಷೆಗೂ ಮೀರಿ ಪ್ರತಿರೋಧ ತೋರಿ ಗಮನ ಸೆಳೆಯಿತು. ಪ್ರಬಲ ಭಾರತ ತಂಡವನ್ನು 200ರೊಳಗೆ ನಿಯಂತ್ರಿಸಿದ್ದ ಒಮಾನ್, ಬ್ಯಾಟಿಂಗ್‌ನಲ್ಲೂ ಉತ್ತಮ ನಿರ್ವಹಣೆ ತೋರಿತು.

ಭಾರತ ತಂಡವು ಈ ಮೊದಲೇ ಸೂಪರ್ ಫೋರ್ ಹಂತಕ್ಕೆ ಸ್ಥಾನ ಕಾಯ್ದಿರಿಸಿತ್ತು. ಹೀಗಾಗಿ ಸೂರ್ಯಕುಮಾರ್ ಅವರು ಬ್ಯಾಟಿಂಗ್‌ಗೆ ಇಳಿಯದೆ ಉಳಿದ ಆಟಗಾರರಿಗೆ ‘ಅಭ್ಯಾಸ’ಕ್ಕೆ ಅವಕಾಶ ಮಾಡಿಕೊಟ್ಟರು. ವೇಗಿ ಜಸ್‌ಪ್ರೀತ್ ಬೂಮ್ರಾ ಮತ್ತು ಸ್ಪಿನ್ನರ್ ವರುಣ್ ಚಕ್ರವರ್ತಿ ಅವರಿಗೆ ವಿಶ್ರಾಂತಿ ನೀಡಿ ಅರ್ಷದೀಪ್ ಸಿಂಗ್ ಮತ್ತು ಹರ್ಷಿತ್ ರಾಣಾಗೆ ಅವಕಾಶ ನೀಡಲಾಗಿತ್ತು.

ಭಾರತ ನೀಡಿದ್ದ 189 ರನ್‌ಗಳ ಗುರಿಯನ್ನು ಬೆನ್ನಟ್ಟಿದ ಒಮಾನ್ 4 ವಿಕೆಟ್‌ಗೆ 167 ರನ್ ಗಳಿಸಿ ಹೋರಾಟವನ್ನು ಮುಗಿಸಿತು. ಮೊದಲ ವಿಕೆಟ್‌ಗೆ ನಾಯಕ ಜತೀಂದರ್ ಸಿಂಗ್ (32) ಮತ್ತು ಆಮಿರ್ ಕಲೀಂ(64;46ಎ) ಅವರು 56 ರನ್ ಸೇರಿಸಿ ಉತ್ತಮ ಅಡಿಪಾಯ ಹಾಕಿದರು.

ಏಷ್ಯಾ ಕಪ್ 2025

ಜತೀಂದರ್ ಔಟಾದ ಬಳಿಕ ಕಲೀಂ ಅವರನ್ನು ಸೇರಿಕೊಂಡ ಹಮ್ಮದ್ ಮಿರ್ಜಾ (51;33ಎ) ಅವರು ವೇಗದ ಮತ್ತು ಸ್ಪಿನ್ ದಾಳಿಯನ್ನು ಸಮರ್ಥವಾಗಿ ಎದುರಿಸಿ, ಎರಡನೇ ವಿಕೆಟ್‌ಗೆ 93 (55ಎ) ಸೇರಿಸಿ ಭಾರತದ ಪಾಳಯದಲ್ಲಿ ಆತಂಕ ಮೂಡಿಸಿದರು. ಆದರೆ, ಬೀಸಾಟವಾಡುತ್ತಿದ್ದ ಕಲೀಂ 18ನೇ ಓವರಿನಲ್ಲಿ ಔಟಾದ ಬಳಿಕ ಪಂದ್ಯದ ಮೇಲೆ ಭಾರತ ಮರಳಿ ಹಿಡಿತ ಸಾಧಿಸಿತು.

ಅರ್ಷದೀಪ್ ಸಿಂಗ್ ಅವರು ಟಿ20 ಮಾದರಿಯಲ್ಲಿ 100 ವಿಕೆಟ್‌ಗಳ (64 ಪಂದ್ಯ) ಮೈಲಿಗಲ್ಲು ತಲುಪಿದರು.

ಇದಕ್ಕೂ ಮೊದಲು ಟಾಸ್ ಗೆದ್ದ ಭಾರತ ಬ್ಯಾಟಿಂಗ್ ಆಯ್ದುಕೊಂಡಿತು. ವಿಕೆಟ್ ಕೀಪರ್ ಸಂಜು ಸ್ಯಾಮ್ಸನ್ (56, 45ಎ) ತಮಗೆ ದೊರೆತ ಅವಕಾಶವನ್ನು ಚೆನ್ನಾಗಿಯೇ ಉಪಯೋಗಿಸಿಕೊಂಡು ಅರ್ಧ ಶತಕ ಬಾರಿಸಿದರು. ಹೀಗಾಗಿ, ಭಾರತ 8 ವಿಕೆಟ್‌ಗೆ 188 ರನ್ ಗಳಿಸಿತು.

ಉಪನಾಯಕ ಶುಭಮನ್ ಗಿಲ್ (5) ಬೇಗನೇ ನಿರ್ಗಮಿಸಿದರು. ಈ ಟೂರ್ನಿಯಲ್ಲಿ ಮೊದಲ ಬಾರಿ ಮೂರನೇ ಕ್ರಮಾಂಕದಲ್ಲಿ ಆಡುವ ಅವಕಾಶ ಪಡೆದ ಸಂಜು ತಮ್ಮ ಎಂದಿನ ಲಹರಿಯಲ್ಲಿ ಆಡದಿದ್ದರೂ ಉಪಯುಕ್ತ ಕಾಣಿಕೆ ನೀಡಿದರು. ಕೊಂಚ ಮಂದಗತಿಯ ಪಿಚ್‌ನಲ್ಲಿ ವಿಶ್ವಾಸದಿಂದ ಆಡಿ ತಲಾ ಮೂರು ಬೌಂಡರಿ, ಸಿಕ್ಸರ್‌ಗಳನ್ನು ಬಾರಿಸಿದರು.

ಅಭಿಷೇಕ್ ಶರ್ಮಾ (38, 15ಎ, 4x5, 6x2) ಎಂದಿನ ರೀತಿಯಲ್ಲಿ ಬೀಸಾಟವಾಡಿದರು. ಎಂಟನೇ ಓವರ್‌ನಲ್ಲಿ ರಾಮನಂದಿ ಬೌಲಿಂಗ್‌ನಲ್ಲಿ ಆಫ್‌ಸೈಡ್ ಆಚೆ ಹೋಗುತ್ತಿದ್ದ ಚೆಂಡನ್ನು ಹೊಡೆಯಲು ಹೋಗಿ ವಿಕೆಟ್ ಕೀಪರ್ ವಿನಾಯಕ ಶುಕ್ಲಾಗೆ ಕ್ಯಾಚಿತ್ತರು. ಅಭಿಷೇಕ್–ಸಂಜು ಎರಡನೇ ವಿಕೆಟ್‌ಗೆ 66 ರನ್ ಜತೆಯಾಟ ಆಡಿದರು.

ಏಳನೇ ಕ್ರಮಾಂಕದಲ್ಲಿ ಆಡಿದ ತಿಲಕ್ ವರ್ಮಾ (29, 18ಎ) ಕೂಡ ವೇಗವಾಗಿ ರನ್ ಗಳಿಸಿದರು. ಟಾಸ್ ಗೆದ್ದು ಬ್ಯಾಟಿಂಗಿಗೆ ಇಳಿಯುವಾಗಲೇ ಭಾರತ, ಪಾಕ್ ವಿರುದ್ಧದ ಪಂದ್ಯಕ್ಕೆ ಅಭ್ಯಾಸವಾಗಿ ಪೂರ್ಣ 20 ಓವರುಗಳನ್ನು ಆಡುವ ಗುರಿಹೊಂದಿದಂತೆ ಕಂಡಿತ್ತು.

ಒಮಾನ್ ವೇಗಿಗಳಾದ ಶಾ ಫೈಸಲ್, ಜಿತೆನ್ ರಾಮನಂದಿ, ಎಡಗೈ ಸ್ಪಿನ್ನರ್ ಅಮೀರ್ ಕಲೀಮ್ ಅವರು ತಲಾ ಎರಡು ವಿಕೆಟ್‌ಗಳನ್ನು ಪಡೆದು ಭಾರತ ನಾಗಾಲೋಟದಲ್ಲಿ ಸಾಗದಂತೆ ಕಡಿವಾಣ ಹಾಕಿದರು.

ಸ್ಕೋರುಗಳು: ಭಾರತ: 20 ಓವರುಗಳಲ್ಲಿ 8 ವಿಕೆಟ್‌ಗೆ 188 (ಅಭಿಷೇಕ್ ಶರ್ಮಾ 38, ಸಂಜು ಸ್ಯಾಮ್ಸನ್ 56, ತಿಲಕ್ ವರ್ಮಾ 29; ಶಾ ಫೈಸಲ್ 23ಕ್ಕೆ2, ಜಿತೆನ್ ರಾಮನಂದಿ 33ಕ್ಕೆ2, ಆಮಿರ್ ಕಲೀಂ 31ಕ್ಕೆ2) ಒಮಾನ್: 20 ಓವರುಗಳಲ್ಲಿ 4 ವಿಕೆಟ್‌ಗೆ 167 (ಜತೀಂದರ್ ಸಿಂಗ್ 32, ಆಮಿರ್ ಕಲೀಂ 64, ಹಮ್ಮದ್ ಮಿರ್ಜಾ 51; ಹಾರ್ದಿಕ್ ಪಾಂಡ್ಯ 26ಕ್ಕೆ2)
ಫಲಿತಾಂಶ: ಭಾರತಕ್ಕೆ 21 ರನ್‌ಗಳ ಜಯ
ಪಂದ್ಯದ ಆಟಗಾರ: ಸಂಜು ಸ್ಯಾಮ್ಸನ್

ಏಷ್ಯಾ ಕಪ್ ಕ್ರಿಕೆಟ್: ಸೂಪರ್ ಫೋರ್ ಹಂತ ಇಂದಿನಿಂದ
ಅಜೇಯ ಲಂಕಾಕ್ಕೆ ಬಾಂಗ್ಲಾ ಸವಾಲು

ದುಬೈ (ಪಿಟಿಐ): ಗುಂಪು ಹಂತದಲ್ಲಿ ಅಜೇಯವಾಗುಳಿದಿರುವ ಶ್ರೀಲಂಕಾ ತಂಡ, ಶನಿವಾರ ನಡೆಯುವ ಏಷ್ಯಾ ಕಪ್ ಟಿ20 ಟೂರ್ನಿಯ ಸೂಪರ್ ಫೋರ್ ಹಂತದ ಮೊದಲ ಪಂದ್ಯದಲ್ಲಿ ಬಾಂಗ್ಲಾದೇಶ ತಂಡವನ್ನು ಎದುರಿಸಲಿದೆ.

ಚರಿತ್ ಅಸಲಂಕ ಸಾರಥ್ಯದ ಲಂಕಾ ತಂಡ ‘ಬಿ’ ಗುಂಪಿನಲ್ಲಿ ಆಡಿದ ಮೂರೂ ಪಂದ್ಯಗಳಲ್ಲಿ ಜಯಗಳಿಸಿದೆ. ಬಾಂಗ್ಲಾದೇಶ, ಟಿ20 ವಿಶ್ವಕಪ್ ಸೆಮಿಫೈನಲ್ ತಲುಪಿದ್ದ ಅಫ್ಗಾನಿಸ್ತಾನ ತಂಡವನ್ನು ಗುಂಪು ಹಂತದ ಕೊನೆಯ ಪಂದ್ಯದಲ್ಲಿ ಸೋಲಿಸಿತ್ತು.

ಆದರೆ ಮಧ್ಯಮ ಕ್ರಮಾಂಕ ಅಸ್ಥಿರವಾಗಿರುವುದು ಶ್ರೀಲಂಕಾಕ್ಕೆ ಚಿಂತೆ ಮೂಡಿಸಿದೆ. ದುರ್ಬಲ ಹಾಂಗ್‌ಕಾಂಗ್ ವಿರುದ್ಧವೂ ಮಧ್ಯಮ ಕ್ರಮಾಂಕದಲ್ಲಿ ವೈಫಲ್ಯ ಅನುಭವಿಸಿತ್ತು.

ಪಥುಮ್ ನಿಸಾಂಕ 3 ಪಂದ್ಯಗಳಲ್ಲಿ 124 ರನ್ ಸೇರಿಸಿ ಲಂಕಾ ಪರ ಮಿಂಚಿದ್ದಾರೆ. ಕುಸಲ್ ಮೆಂಡಿಸ್ ಅವರು ಅಫ್ಗಾನಿಸ್ತಾನ ವಿರುದ್ಧ ಅರ್ಧಶತಕ ಬಾರಿಸಿದ್ದಾರೆ. ಆದರೆ ನಾಯಕ ಅಸಲಂಕ, ಸೀನಿಯರ್ ಬ್ಯಾಟರ್‌ಗಳಾದ ಕುಸಲ್ ಪೆರೀರಾ, ದಸುನ ಶನಕ ಅವರಿಂದ ತಂಡ ಉಪಯುಕ್ತ ಕಾಣಿಕೆಯ ನಿರೀಕ್ಷೆಯಲ್ಲಿದೆ.

ತಂಡದ ಬೌಲಿಂಗ್ ಮತ್ತು ಫೀಲ್ಡಿಂಗ್ ಉತ್ತಮವಾಗಿದೆ. ನುವಾನ್ ತುಷಾರ ಐದು ವಿಕೆಟ್ ಗಳಿಸಿದ್ದಾರೆ. ದುಷ್ಮಂತ ಚಮೀರ ಸಹ ಯಶಸ್ಸು ಗಳಿಸಿದ್ದಾರೆ. ಗುರುವಾರ ರಾತ್ರಿ ತಂದೆ ನಿಧನರಾದ ಸುದ್ದಿ ತಿಳಿದು ಸ್ಪಿನ್ ಆಲ್‌ರೌಂಡರ್, 22 ವರ್ಷ ವಯಸ್ಸಿನ ದುನಿತ್ ವೆಲ್ಲಾಳಗೆ ತವರಿಗೆ ಮರಳಿದ್ದಾರೆ.

ಲಂಕಾದ ದಯೆಯಿಂದ ಬಾಂಗ್ಲಾ ಈ ಹಂತಕ್ಕೆ ತಲುಪಿದೆ. ಲಂಕಾ ಗುರುವಾರ ಅಫ್ಗಾನ್ ಪಡೆಗೆ ಸೋತಿದ್ದಲ್ಲಿ ಬಾಂಗ್ಲಾ ಹೊರಬೀಳುತಿತ್ತು. ಬಾಂಗ್ಲಾ ತಂಡದ ಬ್ಯಾಟರ್‌ಗಳು ಸ್ಥಿರ ಪ್ರದರ್ಶನ ನೀಡಿಲ್ಲ. ಲಿಟನ್ ದಾಸ್, ಸೈಫ್ ಹಸನ್, ತಂಜಿದ್ ಹಸನ್, ತೌಹಿಕ್ ಹೃದಯ್ ಪರದಾಡುತ್ತಿದ್ದಾರೆ.

ಕ್ಯಾಚಿಂಗ್ ಸಹ ಕಳಪೆಯಾಗಿದೆ. ಬೌಲರ್‌ಗಳೂ ಪರಿಣಾಮಕಾರಿಯಾಗಿಲ್ಲ. ನಸುಮ್ ಅಹ್ಮದ್ ಮತ್ತು ಮುಸ್ತಫಿಜುರ್ ರಹಮಾನ್ ಅವರಿಂದ ತಂಡ ಉತ್ತಮ ಬೌಲಿಂಗ್ ನಿರೀಕ್ಷಿಸುತ್ತಿದೆ.
ಪಂದ್ಯ ಆರಂಭ: ರಾತ್ರಿ 8.

ಲಂಕಾ ತಂಡದ ನಾಯಕ ಅಸಲಂಕ ಎಎಫ್‌ಪಿ ಸಂಗ್ರಹ ಚಿತ್ರ

ಸೂಪರ್ ಫೋರ್ ಹಂತದ ಪಂದ್ಯಗಳು

ದಿನಾಂಕ	ತಂಡಗಳು	ತಾಣ	ಸಮಯ
ಸೆ.20	ಶ್ರೀಲಂಕಾ–ಬಾಂಗ್ಲಾದೇಶ	ದುಬೈ	ರಾತ್ರಿ 8
ಸೆ.21	ಭಾರತ–ಪಾಕಿಸ್ತಾನ	ದುಬೈ	ರಾತ್ರಿ 8
ಸೆ.23	ಪಾಕಿಸ್ತಾನ–ಶ್ರೀಲಂಕಾ	ಅಬುಧಾಬಿ	ರಾತ್ರಿ 8
ಸೆ.24	ಭಾರತ–ಬಾಂಗ್ಲಾದೇಶ	ದುಬೈ	ರಾತ್ರಿ 8
ಸೆ.25	ಪಾಕಿಸ್ತಾನ–ಬಾಂಗ್ಲಾದೇಶ	ದುಬೈ	ರಾತ್ರಿ 8
ಸೆ.26	ಭಾರತ–ಶ್ರೀಲಂಕಾ	ದುಬೈ	ರಾತ್ರಿ 8

* ಸೆ.28ರಂದು ದುಬೈನಲ್ಲಿ ಫೈನಲ್ ಪಂದ್ಯ ನಡೆಯಲಿದೆ

ಚಾರಿತ್ರಿಕ ಸರಣಿ ಗೆಲುವಿನ ಮೇಲೆ ಭಾರತ ಮಹಿಳಾ ತಂಡದ ಕಣ್ಣು

ನವದೆಹಲಿ (ಪಿಟಿಐ): ವಿಶ್ವ ಚಾಂಪಿಯನ್ ಆಸ್ಟ್ರೇಲಿಯಾ ವಿರುದ್ಧ ಭಾರತದ ವನಿತೆಯರು ಈ ಹಿಂದೆ ಎಂದೂ ದ್ವಿಪಕ್ಷೀಯ ಏಕದಿನ ಸರಣಿ ಗೆದ್ದಿಲ್ಲ. ಆದರೆ ಈ ಹಿಂದಿನ ಪಂದ್ಯದಲ್ಲಿ ದಾಖಲೆಯ ಜಯ ಸಾಧಿಸಿದ ಭಾರತ ತಂಡವು ಶನಿವಾರ ನಡೆಯಲಿರುವ ಮೂರನೇ ಹಾಗೂ ಅಂತಿಮ ಏಕದಿನ ಪಂದ್ಯ ಗೆದ್ದು, ಚಾರಿತ್ರಿಕ ಸಾಧನೆ ಮಾಡುವತ್ತ ಕಣ್ಣಿಟ್ಟಿದೆ.

ಸರಣಿ ಸದ್ಯ 1–1 ಆಗಿದೆ. ಆದರೆ ಈ ಗುರಿ ಅಂದುಕೊಂಡಷ್ಟು ಸುಲಭವಲ್ಲ. ಮೊದಲ ಪಂದ್ಯದಲ್ಲಿ ದುರ್ಬಲ ಫೀಲ್ಡಿಂಗ್‌ನಿಂದ ಸೋತ ಭಾರತ ತಂಡ ಎರಡನೇ ಪಂದ್ಯದಲ್ಲಿ 102 ರನ್‌ಗಳ ಭಾರಿ ಅಂತರದ ಜಯಗಳಿಸಿತು. ಇದು ಆಸ್ಟ್ರೇಲಿಯಾ ವಿರುದ್ಧ ಭಾರತ ಮಹಿಳೆಯರು ರನ್ ಆಧಾರದಲ್ಲಿ ಸಾಧಿಸಿದ ಅತಿ ದೊಡ್ಡ ಗೆಲುವು. 12 ಪಂದ್ಯ ಗಳಲ್ಲಿ ಗಳಿಸಿದ ಮೊದಲ ಜಯವೂ ಸಹ.

ಸ್ಮೃತಿ ಮಂದಾನ

ಆದರೆ ಮೊದಲ ಪಂದ್ಯದಂತೆ ಎರಡನೇಯದರಲ್ಲೂ ಆತಿಥೇಯ ತಂಡದ ಕ್ಷೇತ್ರರಕ್ಷಣೆ ಉತ್ತಮವಾಗಿರಲಿಲ್ಲ. ಆರು ಕ್ಯಾಚ್‌ಗಳನ್ನು ಕೈಬಿಟ್ಟಿದ್ದರು.

ಸ್ಮೃತಿ ಮಂದಾನ ಮತ್ತು ಪ್ರತಿಕಾ ಎರಡೂ ಪಂದ್ಯಗಳಲ್ಲಿ ಭಾರತಕ್ಕೆ ಉತ್ತಮ ಆರಂಭ ಒದಗಿಸಿದ್ದಾರೆ. ಆದರೆ ಮಧ್ಯಮ ಕ್ರಮಾಂಕ ಪರದಾಡಿದೆ. ಶಫಾಲಿ ವರ್ಮಾ ಗೈರಿನಲ್ಲಿ ಉಪನಾಯಕಿ ಸ್ಮೃತಿ ಅವರೇ ಆಕ್ರಮಣಕಾರಿ ಆಟಗಾರ್ತಿಯ ಪಾತ್ರ ನಿಭಾಯಿಸಿದ್ದಾರೆ. ಎರಡನೇ ಪಂದ್ಯದ ಶತಕ ಅವರ ಪಾಲಿಗೆ ಏಕದಿನ ಪಂದ್ಯಗಳಲ್ಲಿ 12ನೆಯದು.

ಹರ್ಮನ್‌ಪ್ರೀತ್ ಕೌರ್, ಹರ್ಲೀನ್ ಡಿಯೊಲ್, ರಿಚಾ ಘೋಷ್ ಅವರಿಂದ ಉಪಯುಕ್ತ ಆಟ ಬರಬೇಕಿದೆ.

ಆಸ್ಟ್ರೇಲಿಯಾ ತಂಡವೂ ತಿರುಗೇಟು ನೀಡಲು ಶಕ್ತಿಮೀರಿ ಪ್ರಯತ್ನಿಸಲಿದೆ. 2024ರ ಫೆಬ್ರುವರಿ ನಂತರ ಆಡಿದ 13 ಪಂದ್ಯಗಳಲ್ಲೂ ಅಲಿಸಾ ಹೀಲಿ ಪಡೆ ಸೋತಿರಲಿಲ್ಲ. ಆದರೆ ಭಾರಿ ಸೋಲು ಅದರ ಪ್ರತಿಷ್ಠೆಗೆ ಪೆಟ್ಟು ನೀಡಿದೆ. ಗಾಯಾಳಾಗಿದ್ದ ಆರಂಭ ಆಟಗಾರ್ತಿ ಫೋಬಿ ಲಿಚ್‌ಫೀಲ್ಡ್ ಅವರು ತಂಡಕ್ಕೆ ಮರಳುವುದು ಖಚಿತವಾಗಿದೆ.
ಪಂದ್ಯ ಆರಂಭ: ಮಧ್ಯಾಹ್ನ 1.30.

ನಿಧಾನಗತಿ ಓವರ್: ಆಸ್ಟ್ರೇಲಿಯಾಕ್ಕೆ ದಂಡ

ನವದೆಹಲಿ (ಪಿಟಿಐ): ಮುಲ್ಲನಪುರದಲ್ಲಿ ಬುಧವಾರ ನಡೆದ ಎರಡನೇ ಏಕದಿನ ಪಂದ್ಯದಲ್ಲಿ ನಿಗದಿ ಅವಧಿಯಲ್ಲಿ ಓವರುಗಳನ್ನು ಪೂರೈಸದ ಕಾರಣ ಆಸ್ಟ್ರೇಲಿಯಾ ಮಹಿಳಾ ತಂಡಕ್ಕೆ ಪಂದ್ಯ ಸಂಭಾವನೆಯ ಶೇ 10ರಷ್ಟು ದಂಡವನ್ನು ಶುಕ್ರವಾರ ವಿಧಿಸಲಾಗಿದೆ.

ಐಸಿಸಿ ರೆಫ್ರಿ ಜಿ.ಎಸ್.ಲಕ್ಷ್ಮಿ ಅವರು ಸಮಯ ಮತ್ತು ಓವರುಗಳನ್ನು ಪರಿಗಣಿಸಿ ದಂಡ ವಿಧಿಸಿದರು.

150 ರನ್ ಹೊಡೆದ ದೇವದತ್ತ ಪಡಿಕ್ಕಲ್



ಲಖನೌ (ಪಿಟಿಐ): ಭಾರತ ಎ ತಂಡದ ಬ್ಯಾಟರ್ ದೇವದತ್ತ ಪಡಿಕ್ಕಲ್ ಅವರು ಆಸ್ಟ್ರೇಲಿಯಾ ‘ಎ’ ತಂಡದ ವಿರುದ್ಧ ಮೊದಲ ‘ಟೆಸ್ಟ್’ ಪಂದ್ಯದಲ್ಲಿ ಶುಕ್ರವಾರ ಸೊಗಸಾದ ಶತಕ ಗಳಿಸಿದರು. ಆದರೆ ನಾಲ್ಕು ದಿನಗಳ ಪಂದ್ಯ ನಿರೀಕ್ಷೆಯಂತೆ ನೀರಸ ಡ್ರಾ ಆಯಿತು.

ಇದು ಪಡಿಕ್ಕಲ್‌ಗೆ ಪ್ರಥಮ ದರ್ಜೆ ಕ್ರಿಕೆಟ್‌ನಲ್ಲಿ ಏಳನೇ ಶತಕ. ಗುರುವಾರ ಅಜೇಯ 86 ರನ್ ಗಳಿಸಿ ಔಟಾಗದೇ ಉಳಿದಿದ್ದ ಪಡಿಕ್ಕಲ್ ಅಂತಿಮ ದಿನ ಮೊತ್ತವನ್ನು ಬರೋಬರಿ 150 ರನ್‌ಗಳಿಗೆ ಬೆಳೆಸಿ ನಿರ್ಗಮಿಸಿದರು. 281 ಎಸೆತಗಳನ್ನು ಎದುರಿಸಿ ಒಂದು ಸಿಕ್ಸರ್, 14 ಬೌಂಡರಿಗಳನ್ನು ಹೊಡೆದರು.

ಆಸ್ಟ್ರೇಲಿಯಾ ಎ ತಂಡ 6 ವಿಕೆಟ್‌ಗೆ 532 ರನ್ ಗಳಿಸಿ ಮೊದಲ ಇನಿಂಗ್ಸ್ ಡಿಕ್ಲೇರ್ಡ್ ಮಾಡಿಕೊಂಡಿತ್ತು. ಉತ್ತರವಾಗಿ ಭಾರತ ಎ 7 ವಿಕೆಟ್‌ಗೆ 531 ರನ್ ಗಳಿಸಿ ಇನಿಂಗ್ಸ್ ಡಿಕ್ಲೇರ್ ಮಾಡಿಕೊಂಡಿತು. ಪ್ರವಾಸಿ ತಂಡ 2ನೇ ಇನಿಂಗ್ಸ್‌ನಲ್ಲಿ ವಿಕೆಟ್ ನಷ್ಟವಿಲ್ಲದೇ 56 ರನ್ ಗಳಿಸಿ ಪಂದ್ಯ ಪೂರೈಸಿತು.

ಪಡಿಕ್ಕಲ್ ಜೊತೆ ಆಟ ಮುಂದುವರಿಸಿದ್ದ ಧ್ರುವ್ ಜುರೇಲ್ (140) ಜೊತೆ ಐದನೇ ವಿಕೆಟ್‌ಗೆ 228 ರನ್ ಸೇರಿಸಿದರು.

ಸ್ಕೋರುಗಳು: ಮೊದಲ ಇನಿಂಗ್ಸ್: ಆಸ್ಟ್ರೇಲಿಯಾ ಎ: 6ಕ್ಕೆ532 ಡಿ; ಭಾರತ ಎ: 141.1 ಓವರುಗಳಲ್ಲಿ 7ಕ್ಕೆ 531 (ದೇವದತ್ತ ಪಡಿಕ್ಕಲ್ 150, ಧ್ರುವ್ ಜುರೇಲ್ 140; ಕ್ಯಾರಿ ರೊಕಿಸಿಯೊಲಿ 150ಕ್ಕೆ3); ಎರಡನೇ ಇನಿಂಗ್ಸ್: ಆಸ್ಟ್ರೇಲಿಯಾ ಎ: 16 ಓವರುಗಳಲ್ಲಿ ವಿಕೆಟ್ ನಷ್ಟವಿಲ್ಲದೇ 56

ವಿಶ್ವ ಅಥ್ಲೆಟಿಕ್ಸ್: ಅಮೆರಿಕದ ಮೆಲಿಸ್ಸಾ ವೂಡೆನ್‌ಗೆ ‘ಸ್ಪ್ರಿಂಟ್ ಡಬಲ್’
ಬೋಲ್ಟ್ ಸಾಧನೆ ಸರಿಗಟ್ಟಿದ ಲೈಲ್ಸ್

ಅಮೆರಿಕದ ನೋವಾ ಲೈಲ್ಸ್ (ಎಡ) ಡಚ್ ಓಟಗಾರ್ತಿ ಫೆಮ್ಕೆ ಬೋಲ್ ಎಎಫ್‌ಪಿ ಚಿತ್ರಗಳು

ಟೋಕಿಯೊ (ಎಎಫ್‌ಪಿ): ಅಮೆರಿಕದ ಓಟಗಾರ ನೋವಾ ಲೈಲ್ಸ್ ಅವರು ಸತತ ನಾಲ್ಕನೇ ಬಾರಿ ವಿಶ್ವ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ನ 200 ಮೀ. ಓಟದಲ್ಲಿ ಚಿನ್ನ ಗೆಲ್ಲುವ ಮೂಲಕ ದಿಗ್ಗಜ ಅಥ್ಲೀಟ್ ಉಸೇನ್ ಬೋಲ್ಟ್ ಅವರ ದಾಖಲೆಯನ್ನು ಸರಿಗಟ್ಟಿದರು. ನ್ಯಾಷನಲ್ ಸ್ಟೇಡಿಯಮ್‌ನಲ್ಲಿ ಶುಕ್ರವಾರ ನಡೆದ ಈ ಸ್ಪರ್ಧೆಯಲ್ಲಿ ಲೈಲ್ಸ್ 19.52 ಸೆ.ಗಳಲ್ಲಿ ಗುರಿಮುಟ್ಟಿದರು.

ಜಮೈಕದ ದಂತಕಥೆ ಉಸೇನ್ ಬೋಲ್ಟ್ 200 ಮೀ. ಓಟದಲ್ಲಿ ಸತತ ನಾಲ್ಕು ಬಾರಿ ಚಿನ್ನ ಗೆದ್ದಿದ್ದರು. 2009 ರಿಂದ 2015ರ ಅವಧಿಯಲ್ಲಿ ಅವರು ವಿಶ್ವ ಕೂಟದಲ್ಲಿ 100 ಮೀ ಮತ್ತು 200 ಮೀ. ಓಟದಲ್ಲಿ ಪಾರಮ್ಯ ಮೆರೆದಿದ್ದರು. ವಿಶ್ವ ಕೂಟದಲ್ಲಿ 11 ಚಿನ್ನ ಮತ್ತು ಒಲಿಂಪಿಕ್ಸ್‌ನಲ್ಲಿ ಎಂಟು ಚಿನ್ನ ಬಾಚಿದ್ದರು.

ಈ ಕೂಟದ 100 ಮೀ. ಓಟದಲ್ಲಿ ಲೈಲ್ಸ್ ಕಂಚಿನ ಪದಕ ಗೆದ್ದುಕೊಂಡಿದ್ದು, 200 ಮೀ. ಓಟವನ್ನು ನಿರೀಕ್ಷೆಯಂತೆ ಗೆದ್ದರು. ಸ್ವದೇಶದ ಕೆನ್ನಿ ಬೆಡ್ನಾರೆಕ್ 19.58 ಸೆ.ಗಳಲ್ಲಿ ಗುರಿತಲುಪಿ ಬೆಳ್ಳಿ ಗೆದ್ದರೆ, ಜಮೈಕಾದ ಬ್ರಯಾನ್ ಲೆವೆಲ್ (19.64 ಸೆ.) ಕಂಚಿನ ಪದಕ ಗೆದ್ದುಕೊಂಡರು.

ಒಲಿಂಪಿಕ್ ಚಾಂಪಿಯನ್, ಬೋಟ್ಸ್‌ವಾನಾದ ಲೆಟ್ಸಿಲಿ ಟೆಬಾಗೊ ಸೆಕೆಂಡಿನ ನೂರನೇ ಒಂದು ಭಾಗದಿಂದ ಪದಕ ಕಳೆದುಕೊಂಡರು. ಕಣದಲ್ಲಿದ್ದ 20 ವರ್ಷದೊಳಗಿನ ಏಕೈಕ ಅಥ್ಲೀಟ್ ಅಂಗಿಲ್ಲಾ (ಪೂರ್ವ ಕೆರಿಬಿಯನ್ ಭಾಗ) ಸಂಜಾತ ಬ್ರಿಟನ್‌ನ ಝರ್ನೆಲ್ ಹ್ಯೂಸ್ (19.78 ಸೆ.) ಐದನೇ ಸ್ಥಾನ ಪಡೆದರು.

28 ವರ್ಷ ವಯಸ್ಸಿನ ‘ಷೋ ಮ್ಯಾನ್’ ಲೈಲ್ಸ್, ಸೆಮಿಫೈನಲ್‌ನಲ್ಲಿ ದಾಖಲೆಯ 19.51 ಸೆ.ಗಳಲ್ಲಿ ಓಡಿದ್ದರು. ಫೈನಲ್‌ನಲ್ಲಿ ಆರನೇ ಲೇನ್‌ನಲ್ಲಿ ಓಡಿ, ಗುರಿಮುಟ್ಟಿದ ತಕ್ಷಣ, ಕೈಗಳನ್ನು ಮೇಲೆತ್ತಿ ಅರೆಕ್ಷಣ ಮುಗಿಲಿನತ್ತ ದಿಟ್ಟಿಸಿದರು.

ಮೆಲಿಸಾಗೆ ಸ್ಪ್ರಿಂಟ್ ಡಬಲ್: ಅಮೆರಿಕದ ಮೆಲಿಸ್ಸಾ ಜೆಫರ್ಸನ್–ವೂಡೆನ್ ಅವರು ಮಹಿಳೆಯರ 200 ಮೀ. ಓಟವನ್ನು 21.68 ಸೆ.ಗಳಲ್ಲಿ ಪೂರೈಸಿ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಸ್ಪ್ರಿಂಟ್ ಡಬಲ್ (100 ಮತ್ತು 200 ಮೀ. ಓಟ) ಸಾಧಿಸಿದರು. ಅವರು ಕೂಟದ ಮೂರನೇ ದಿನ 100 ಮೀ. ಓಟದಲ್ಲಿ ವಿಜೇತರಾಗಿದ್ದರು.

ಶೆಲ್ಲಿ–ಆ್ಯನ್ ಫ್ರೇಸರ್–ಪ್ರೈಸ್ 2013ರಲ್ಲಿ ಸ್ಪ್ರಿಂಟ್ ಡಬಲ್ ಸಾಧಿಸಿದ್ದರು. ನಂತರ ಮೆಲಿಸ್ಸಾ ಈ ಸಾಧನೆಗೆ ಪಾತ್ರರಾಗಿದ್ದಾರೆ.

ಬೋಲ್‌ಗೆ ಚಿನ್ನ: ಡಚ್ ಓಟಗಾರ್ತಿ ಫೆಮ್ಕೆ ಬೋಲ್ ಅವರು ಮಹಿಳೆಯರ 400 ಮೀ. ಹರ್ಡಲ್ಸ್ ಓಟದ ಸ್ಪರ್ಧೆಯನ್ನು 51.54 ಸೆ.ಗಳಲ್ಲಿ ಓಡಿ ಗೆಲ್ಲುವ ಮೂಲಕ ಚಿನ್ನದ ಪದಕವನ್ನು ತಮ್ಮಲ್ಲೇ ಉಳಿಸಿಕೊಂಡರು.

ಎರಡು ಬಾರಿಯ ಒಲಿಂಪಿಕ್ ಚಾಂಪಿಯನ್ ಹಾಗೂ ವಿಶ್ವದಾಖಲೆ ಹೊಂದಿರುವ ಸಿಡ್ನಿ ಮೆಕ್‌ಲಾಫ್ಲಿನ್ ಲೆವ್ರೊನ್ ಸ್ಪರ್ಧೆಯಿಂದ ಹಿಂದೆಸರಿದರು. ಅವರು 400 ಮೀ.ಫೈನಲ್ ಓಟದ ಕಡೆ ಗಮನ ಕೇಂದ್ರೀಕರಿಸುವ ಸಲುವಾಗಿ ಹರ್ಡಲ್ಸ್‌ನಿಂದ ಹಿಂದೆಸರಿದಿದ್ದರು.

ಬೋಲ್‌ಗೆ ತೀವ್ರ ಪೈಪೋಟಿ ನೀಡಿದ ಅಮೆರಿಕದ ಜಾಸ್ಮಿನ್ ಜೋನ್ಸ್ (52.03 ಸೆ.) ಬೆಳ್ಳಿ ಪದಕ ಗೆದ್ದರು. ಸ್ಲೊವಾಕಿಯಾದ ಎಮ್ಮಾ ಝುಪ್ಲೆಟಲೊವಾ (53.00 ಸೆ.) ಮೂರನೇ ಸ್ಥಾನ ಗಳಿಸಿದರು.

ಪುರುಷರ ವಿಭಾಗದಲ್ಲಿ ಒಲಿಂಪಿಕ್ ಚಾಂಪಿಯನ್ ರಾಯ್ ಬೆಂಜಮಿನ್ 46.52 ಸೆ.ಗಳಲ್ಲಿ ಗುರಿತಲುಪಿ ಚಿನ್ನ ಗೆದ್ದುಕೊಂಡರು. ಜೊತೆಗೆ ಅನರ್ಹತೆ ಆತಂಕದಿಂದ ಬಚಾವಾದರು.

ಅಮೆರಿಕದ 28 ವರ್ಷ ವಯಸ್ಸಿನ ಓಟಗಾರ, ಅಂತಿಮ ತಡೆ ದಾಟುವಾಗ ಹರ್ಡಲ್ಸ್ ಬಿದ್ದು, ಇತರ ಅಥ್ಲೀಟುಗಳ ಓಟದ ಮೇಲೆ ಪರಿಣಾಮವಾಯಿತು. ಆದರೆ ಅಂತಿಮವಾಗಿ ಫಲಿತಾಂಶ ಪ್ರಕಟವಾದಾಗ ಅವರು ಹೆಸರು ಅಗ್ರಸ್ಥಾನದಲ್ಲೇ ಉಳಿಯಿತು.

ಬ್ರೆಜಿಲ್‌ನ ಅಲಿಸನ್ ಡಾಸ್ ಸಂಟೋಸ್ (46.84 ಸೆ.) ಎರಡನೇ ಸ್ಥಾನ ಪಡೆದರೆ, ಕತಾರಿನ ಅಬ್ದರೆಹಮಾನ್ ಸಂಬಾ (47.06 ಸೆ.) ಕಂಚಿನ ಪದಕ ತಮ್ಮದಾಗಿಸಿಕೊಂಡರು.

ಚೀನಾ ಮಾಸ್ಟರ್ಸ್ ಬ್ಯಾಡ್ಮಿಂಟನ್: ಪಿ.ವಿ. ಸಿಂಧುಗೆ ನಿರಾಸೆ
ಸಾತ್ವಿಕ್–ಚಿರಾಗ್ ಜೋಡಿ ಸೆಮಿಗೆ

ಭಾರತದ ಅಗ್ರಮಾನ್ಯ ಡಬಲ್ಸ್ ಜೋಡಿ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಬಿಎಐ ಚಿತ್ರ

ಶೆಂಜೆನ್ (ಚೀನಾ), (ಪಿಟಿಐ): ಭಾರತದ ಅಗ್ರಮಾನ್ಯ ಡಬಲ್ಸ್ ಜೋಡಿ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಅವರು ಚೀನಾ ಮಾಸ್ಟರ್ಸ್ ಸೂಪರ್ 750 ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಸೆಮಿಫೈನಲ್ ಪ್ರವೇಶಿಸಿದರು. ಆದರೆ, ಪಿ. ವಿ. ಸಿಂಧು ಕ್ವಾರ್ಟರ್ ಫೈನಲ್‌ನಲ್ಲಿ ಶುಕ್ರವಾರ ಅಭಿಯಾನ ಮುಗಿಸಿದರು.

ಕಳೆದ ವಾರ ಹಾಂಗ್‌ಕಾಂಗ್ ಓಪನ್‌ನಲ್ಲಿ ರನ್ನರ್ಸ್ ಅಪ್ ಆಗಿದ್ದ ಚಿರಾಗ್ ಮತ್ತು ಸಾತ್ವಿಕ್ ಜೋಡಿಯು ಎಂಟರ ಘಟ್ಟದ ಹಣಾಹಣಿಯಲ್ಲಿ 21-14, 21-14ರಿಂದ ಚೀನಾ ತೈಪೆಯ ರೆನ್ ಕ್ಸಿಯಾಂಗ್ ಯು ಮತ್ತು ಕ್ಸಿ ಹಾನಾನ್ ಅವರನ್ನು ಮಣಿಸಿದರು.

ವಿಶ್ವದ ಒಂಬತ್ತನೇ ಕ್ರಮಾಂಕದಲ್ಲಿರುವ ಸಾತ್ವಿಕ್ ಮತ್ತು ಚಿರಾಗ್ ಅವರು ಶನಿವಾರ ನಡೆಯಲಿರುವ ಸೆಮಿಫೈನಲ್‌ನಲ್ಲಿ ತಮ್ಮ ಸಾಂಪ್ರದಾಯಿಕ ಎದುರಾಳಿಗಳಾದ ಎರಡನೇ ಶ್ರೇಯಾಂಕಿತ ಮಲೇಷ್ಯಾದ ಆರನ್ ಚಿಯಾ ಮತ್ತು ಸೋಹ್ ವೂಯಿ ಯಿಕ್ ಅವರನ್ನು ಎದುರಿಸಲಿದ್ದಾರೆ.

ಪಿ.ವಿ. ಸಿಂಧು

ಸಿಂಧುಗೆ ನಿರಾಸೆ: ಎರಡು ಬಾರಿಯ ಒಲಿಂಪಿಕ್ ಪದಕ ವಿಜೇತೆ ಸಿಂಧು 14-21, 13-21 ರಲ್ಲಿ ನೇರ ಗೇಮ್‌ಗಳಿಂದ ಪ್ಯಾರಿಸ್ ಒಲಿಂಪಿಕ್ಸ್ ಚಾಂಪಿಯನ್ ಆ್ಯನ್ ಸೆ ಯಂಗ್ ಅವರಿಗೆ ಮಣಿದರು. ಅಗ್ರ ಶ್ರೇಯಾಂಕದ 23 ವರ್ಷದ ಆ್ಯನ್ ಕೇವಲ 38 ನಿಮಿಷದಲ್ಲಿ ಗೆದ್ದು, ನಾಲ್ಕರ ಘಟ್ಟಕ್ಕೆ ಮುನ್ನಡೆದರು.

ಉತ್ತಮ ಲಯದಲ್ಲಿರುವ ಆ್ಯನ್ ಮೊದಲ ಗೇಮ್‌ನಿಂದಲೇ ಮುನ್ನಡೆ ಕಾಯ್ದುಕೊಂಡು, ಸಿಂಧು ಅವರನ್ನು ಒತ್ತಡಕ್ಕೆ ಸಿಲುಕಿಸಿದರು. ಕೊರಿಯಾ ಆಟಗಾರ್ತಿ ತಮ್ಮ ಟ್ರೇಡ್ ಮಾರ್ಕ್ ಸ್ಮ್ಯಾಷ್ ಪ್ರಯೋಗಿಸಿ, ಮೇಲುಗೈ ಸಾಧಿಸಿದರು. ಎರಡನೇ ಗೇಮ್‌ನ ಆರಂಭದಲ್ಲಿ ಉಭಯ ಆಟಗಾರ್ತಿಯರಿಂದ ಸಮಬಲದ ಪೈಪೋಟಿ ಕಂಡು ಬಂತು. ಆದರೆ, ನಂತರದಲ್ಲಿ ಹಿಡಿತ ಸಾಧಿಸಿದ ಆ್ಯನ್ ನಿರೀಕ್ಷಿತ ಗೆಲುವು ಪಡೆದರು.

ದಕ್ಷಿಣ ಕೊರಿಯಾದ ಆ್ಯನ್ ವಿರುದ್ಧ ಭಾರತದ ಆಟಗಾರ್ತಿಗೆ ಇದು ಸತತ ಎಂಟನೇ ಸೋಲಾಗಿದೆ. ಸಿಂಧು ಅವರಿಗೆ ಆ್ಯನ್ ವಿರುದ್ಧ ಈತನಕ ಒಂದೂ ಗೆಲುವು ಸಾಧಿಸಲು ಆಗಿಲ್ಲ.

‘ಐಎಸ್‌ಎಲ್ ಆಯೋಜಿಸಲು ಬದ್ಧ’
ಅಖಿಲ ಭಾರತ ಫುಟ್‌ಬಾಲ್ ಫೆಡರೇಷನ್ ಅಧ್ಯಕ್ಷ ಚೌಬೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಲ ಮಾರ್ಪಾಡುಗಳೊಂದಿಗೆ ಅಖಿಲ ಭಾರತ ಫುಟ್‌ಬಾಲ್ ಫೆಡರೇಷನ್ (ಎಐಎಫ್‌ಎಫ್)ನ ಕರಡು ನಿಯಮಾವಳಿಗಳಿಗೆ ಸುಪ್ರೀಂ ಕೋರ್ಟ್ ಶುಕ್ರವಾರ ಅನುಮೋದನೆ ನೀಡಿರುವ ಬೆನ್ನಲ್ಲೇ, ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಆಯೋಜಿಸಲು ಬದ್ಧವಿರುವುದಾಗಿ ಎಐಎಫ್‌ಎಫ್ ಅಧ್ಯಕ್ಷ ಕಲ್ಯಾಣ್ ಚೌಬೆ ಹೇಳಿದ್ದಾರೆ.

ಐಎಸ್‌ಎಲ್ ಅನಿಶ್ಚಿತತೆಯ ಬಗ್ಗೆ ಸುದ್ದಿಗೋಷ್ಠಿಯಲ್ಲಿ ಶುಕ್ರವಾರ ಮಾತನಾಡಿದ ಅವರು, ‘2026 ಮೇ 31ರ ಒಳಗೆ ಲೀಗ್ ಮುಗಿಯಲೇಬೇಕು. ಹಾಗಾಗಿ, ಅದಕ್ಕೆ ತಕ್ಕಂತೆ ಟೂರ್ನಿ ಆಯೋಜಿಸಲು ದೃಢ ನಿರ್ಧಾರದಿಂದ ಹಾಗೂ ಕೇಂದ್ರೀಕೃತವಾಗಿ ಕೆಲಸ ಮಾಡುತ್ತಿದ್ದೇವೆ. ಐಎಸ್‌ಎಲ್ ಬಿಕ್ಕಟ್ಟಿನ ಕುರಿತಾದ ಸುಪ್ರೀಂ ಕೋರ್ಟ್ ತೀರ್ಪಿಗಾಗಿ ಎದುರು ನೋಡುತ್ತಿದ್ದೇವೆ’ ಎಂದು ಹೇಳಿದರು.

‘ಏಷ್ಯನ್ ಟೂರ್ನಿಗಳಲ್ಲಿ ಆಡಲು ಐಎಸ್‌ಎಲ್ ಟೂರ್ನಿಯಲ್ಲಿ ತಂಡಗಳು ಕನಿಷ್ಠ 24 ಪಂದ್ಯ ಆಡಬೇಕು. ಹಾಗಾಗಿ, ಹೊಸ ಸ್ವರೂಪದಲ್ಲಿ ಟೂರ್ನಿ ಆಯೋಜಿಸುವ ಬಗ್ಗೆ ಹಾಗೂ ಪ್ರಾಯೋಜಕರನ್ನು ಹುಡುಕುವ ಬಗ್ಗೆ ಕಾರ್ಯೋನ್ಮುಖರಾಗಿದ್ದೇವೆ’ ಎಂದು ಅವರು ಹೇಳಿದರು.

ಸಿಎಎಫ್‌ಎ ನೇಷನ್ಸ್ ಕಪ್ ಟೂರ್ನಿಯಲ್ಲಿ ಭಾರತ ತಂಡ ಕಂಚು ಗೆದ್ದ ಬಗ್ಗೆ ಪ್ರಶಂಸೆ ವ್ಯಕ್ತಪಡಿಸಿದ ಮುಖ್ಯ ಕೋಚ್ ಖಾಲಿದ್ ಜಮೀಲ್ ಅವರು ಆಟಗಾರರ ಪ್ರದರ್ಶನದ ಬಗ್ಗೆ ಮೆಚ್ಚುಗೆಯ ಮಾತುಗಳನ್ನಾಡಿದರು. ಗೋಲ್‌ಕೀಪರ್ ಗುರ್‌ಪ್ರೀತ್ ಸಿಂಗ್ ಅವರು ತಂಡಕ್ಕೆ ಮರಳಿರುವುದು ಬಲ ಹೆಚ್ಚಿಸಿದೆ ಎಂದರು.


ಖಾಲಿದ್ ಜಮೀಲ್

ಕಲ್ಯಾಣ್ ಚೌಬೆ

‘ಸಿಂಗಪುರ ಎದುರಿನ ಎಎಫ್‌ಸಿ ಏಷ್ಯಾ ಕಪ್ ಕ್ವಾಲಿಫೈಯರ್ಸ್ ಪಂದ್ಯಗಳನ್ನು ಗೆಲ್ಲುವುದಷ್ಟೇ ನಮ್ಮ ಮುಂದಿರುವ ಗುರಿ. ಅದಕ್ಕಾಗಿ ಶನಿವಾರದಿಂದ (ಸೆಪ್ಟೆಂಬರ್ 20) ತರಬೇತಿ ಶಿಬಿರವನ್ನು ಆರಂಭಿಸುತ್ತಿದ್ದೇವೆ. ಗಾಯದಿಂದ ಚೇತರಿಸಿಕೊಳ್ಳುತ್ತಿರುವ ಸಂದೇಶ್ ಜಿಂಗನ್ ಅವರು ಎರಡೂ ಪಂದ್ಯಗಳಲ್ಲಿ ಕಣಕ್ಕಿಳಿಯಲಿದ್ದಾರೆ’ ಎಂದು ಜಮೀಲ್ ಹೇಳಿದರು.

ಸುನಿಲ್ ಚೆಟ್ರಿ ಅವರು ಕಳೆದ ವರ್ಷ ಉತ್ತಮ ಪ್ರದರ್ಶನ ನೀಡಿದ್ದರು. ಅದಕ್ಕಾಗಿಯೇ ಅವರಿಗೆ ಮತ್ತೊಮ್ಮೆ ಅವಕಾಶ ನೀಡಲಾಯಿತು. ಯಾರು ಚೆನ್ನಾಗಿ ಆಡುತ್ತಾರೋ ಅವರಿಗೆ ಅವಕಾಶ ನೀಡಲಾಗುವುದು ಎಂದರು.

ಎಎಫ್‌ಸಿ ಮಹಿಳಾ ಏಷ್ಯಾ ಕಪ್‌ಗೆ ಭಾರತದ ವನಿತೆಯರು ಅರ್ಹತೆ ಗಿಟ್ಟಿಸಿಕೊಂಡಿರುವ ಬಗ್ಗೆ ಮಾತನಾಡಿದ ಮಹಿಳಾ ತಂಡದ ಮುಖ್ಯ ಕೋಚ್ ಕ್ರಿಸ್ಪಿನ್ ಚೆಟ್ರಿ, ‘ಅಕ್ಟೋಬರ್ ತಿಂಗಳ ನಂತರ ಪ್ರತಿ ತಿಂಗಳು 15 ದಿನಗಳ ತರಬೇತಿ ಶಿಬಿರ ಆಯೋಜಿಸಲು ಸಿದ್ಧತೆ ನಡೆಸುತ್ತಿದ್ದೇವೆ. ಜೊತೆಗೆ, ವಿವಿಧ ರಾಷ್ಟ್ರಗಳೊಂದಿಗೆ ‘ಸ್ನೇಹಪರ’ ಪಂದ್ಯಗಳನ್ನೂ ಆಡಲಿದ್ದೇವೆ’ ಎಂದು ಹೇಳಿದರು.

ಲೀಗ್ ಮಾಲೀಕತ್ವ ಎಐಎಫ್‌ಎಫ್‌ಗೆ

ನವದೆಹಲಿ (ಪಿಟಿಐ): ಭಾರತದ ಫುಟ್‌ಬಾಲ್‌ನಲ್ಲಿ ಅಗ್ರಸ್ತರದ ಲೀಗ್‌ಅನ್ನು ಇನ್ನು ಮುಂದೆ ಖಾಸಗಿಯವರು ವಹಿಸುವಂತಿಲ್ಲ. ಸುಪ್ರೀಂ ಕೋರ್ಟ್ ಸಮ್ಮತಿಸಿರುವ ಅಖಿಲ ಭಾರತ ಫುಟ್‌ಬಾಲ್ ಫೆಡರೇಷನ್‌ನ (ಎಐಎಫ್‌ಎಫ್) ಹೊಸ ನಿಯಮಾವಳಿಯ ಪ್ರಕಾರ ಈ ಲೀಗ್‌ನ ಮಾಲೀಕತ್ವ ಫೆಡರೇಷನ್ ಕೈಯ್ಯಲೇ ಇರಲಿದೆ.

ರಿಲಯನ್ಸ್‌ನ ಅಧೀನಸಂಸ್ಥೆಯಾದ ಫುಟ್‌ಬಾಲ್ ಸ್ಪೋರ್ಟ್ಸ್ ಡೆವಲಪ್‌ಮೆಂಟ್ ಲಿಮಿಟೆಡ್ (ಎಫ್‌ಎಸ್‌ಡಿಎಲ್) 2014ರಿಂದ ದೇಶಿ ಫುಟ್‌ಬಾಲ್‌ನ ಅಗ್ರಸ್ತರದ ಲೀಗ್ ಆಗಿರುವ ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಮಾಲೀಕತ್ವ ಮತ್ತು ನಿರ್ವಹಣೆ ಹೊಂದಿತ್ತು.

ಲೀಗ್‌ನ ಮಾಲೀಕತ್ವ ಮತ್ತು ನಿರ್ವಹಣೆಯನ್ನು ಇನ್ನು ಎಐಎಫ್‌ಎಫ್ ವಹಿಸಿಕೊಳ್ಳಲಿದೆ. ಹೊಸ ನಿಯಮಾವಳಿಗೆ ಸುಪ್ರೀಂ ಕೋರ್ಟ್ ಶುಕ್ರವಾರ ಅಂಗೀಕಾರದ ಮುದ್ರೆ ಒತ್ತಿದೆ.

ಪರಿಷ್ಕೃತ ನಿಯಮಾವಳಿಯ ಪ್ರಕಾರ ಅಗ್ರಸ್ತರದ ಲೀಗ್‌ನಲ್ಲಿ ಬಡ್ತಿ ಮತ್ತು ಹಿಂಬಡ್ತಿ (ಪ್ರಮೋಷನ್– ರೆಲಿಗೇಷನ್) ಇರಲಿದೆ.

ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಎಲ್.ನಾಗೇಶ್ವರ ರಾವ್ ಅವರು ಸಿದ್ಧಪಡಿಸಿರುವ ಎಐಎಫ್‌ಎಫ್‌ನ ಹೊಸ ಕರಡಿಗೆ ಕೆಲವು ಮಾರ್ಪಾಡುಗಳೊಂದಿಗೆ ಸಮ್ಮತಿ ನೀಡಿರುವ ನ್ಯಾಯಾಲಯವು, ನಾಲ್ಕು ವಾರಗಳ ಒಳಗಾಗಿ ಸರ್ವಸದಸ್ಯರ ಸಭೆಯಲ್ಲಿ ಇದನ್ನು ಅಂಗೀಕರಿಸುವಂತೆ ನಿರ್ದೇಶನ ನೀಡಿದೆ.

ಪ್ರೊ ಕಬಡ್ಡಿ: ಸ್ಟೀಲರ್ಸ್‌ಗೆ ಜಯ

ಜೈಪುರ (ಪಿಟಿಐ): ವಿನಯ್ ಅವರ ಅಮೋಘ ರೇಡಿಂಗ್ ಬಲದಿಂದ ಹಾಲಿ ಚಾಂಪಿಯನ್ ಹರಿಯಾಣ ಸ್ಟೀಲರ್ಸ್ ತಂಡವು ಶುಕ್ರವಾರ ಪ್ರೊ ಕಬಡ್ಡಿ ಲೀಗ್‌ನ ಪಂದ್ಯದಲ್ಲಿ 34–30ರಿಂದ ಪುಣೇರಿ ಪಲ್ಟನ್ ತಂಡವನ್ನು ಮಣಿಸಿ, ಹ್ಯಾಟ್ರಿಕ್ ಜಯ ಸಾಧಿಸಿತು.

ಸವಾಯಿ ಮಾನಸಿಂಗ್ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ‘ಸಾಂಪ್ರದಾಯಿಕ ಎದುರಾಳಿಗಳ ಸಪ್ತಾಹ’ದ (ರೈವಲರಿ ವೀಕ್) ಹಣಾಹಣಿಯ ಮೊದಲಾರ್ಧದಲ್ಲಿ ಸ್ಟೀಲರ್ಸ್ ತಂಡವು 9 ಅಂಕಗಳಿಂದ (19–10)ರಿಂದ ಮುನ್ನಡೆಯಲ್ಲಿತ್ತು. ದ್ವಿತೀಯಾರ್ಧದಲ್ಲಿ ಮರು ಹೋರಾಟ ಸಂಘಟಿಸಿದ ಪಲ್ಟನ್ ತಂಡವು ಸಾಂಘಿಕ ಆಟ ಪ್ರದರ್ಶಿಸಿ, ಕೇವಲ ನಾಲ್ಕು ಅಂಕಗಳಿಂದ ಸೋಲೊಪ್ಪಿಕೊಂಡಿತು.

ಸ್ಟೀಲರ್ಸ್ ತಂಡದ ವಿನಯ್ 13 ಅಂಕ ಕಲೆಹಾಕಿದರೆ, ಶಿವಂ ಪತಾರೆ (8) ಅವರಿಗೆ ಸಾಥ್ ನೀಡಿದರು. ಪಲ್ಟನ್ ಪರ ಪಂಕಜ್ ಮೊಹಿತೆ (14) ಏಕಾಂಗಿ ಹೋರಾಟ ನಡೆಸಿದರು. .

ದಿನದ ಮತ್ತೊಂದು ಪಂದ್ಯದಲ್ಲಿ ತೆಲುಗು ಟೈಟನ್ಸ್ ತಂಡವು 43–29 ತಮಿಳು ತಲೈವಾಸ್ ತಂಡವನ್ನು ಮಣಿಸಿತು.

ಬೆಂಗಳೂರು ಬುಲ್ಸ್ ತಂಡದ ಮುಖ್ಯ ಕೋಚ್ ಬಿ.ಸಿ.ರಮೇಶ್ ವಿಶ್ವಾಸ
‘ನೈಜ ಆಟ ಪ್ರದರ್ಶಿಸಿದರೆ ಈ ಬಾರಿ ಕಪ್ ನಮ್ದೆ’

• ಪ್ರದೀಶ್ ಎಚ್.ಮರೋಡಿ

ಬೆಂಗಳೂರು: ‘ಯುವಕರನ್ನು ಒಳಗೊಂಡ ಬೆಂಗಳೂರು ಬುಲ್ಸ್ ತಂಡವು ಸಮತೋಲನದಿಂದ ಕೂಡಿದೆ. ಆಟಗಾರರು ತಮ್ಮ ಸಾಮರ್ಥ್ಯಕ್ಕೆ ತಕ್ಕ ಆಟ ಪ್ರದರ್ಶಿಸಿದರೆ ಈ ಬಾರಿ ಪ್ರೊ ಕಬಡ್ಡಿ ಲೀಗ್‌ನಲ್ಲಿ ಚಾಂಪಿಯನ್ ಪಟ್ಟಕ್ಕೇರುವುದು ಕಷ್ಟವಲ್ಲ. ಅವರಿಂದ ನೈಜ ಆಟ ಹೊರ ತೆಗೆಯುವುದೇ ನನ್ನ ಮುಂದಿರುವ ಸವಾಲು...’

ಇದು ಬುಲ್ಸ್ ತಂಡದ ಮುಖ್ಯ ಕೋಚ್, ಕನ್ನಡಿಗ ಬಿ.ಸಿ. ರಮೇಶ್ ಅವರು ವಿಶ್ವಾಸದ ಮಾತು. ತಮ್ಮ ಗರಡಿಯಲ್ಲಿ ಪಳಗುತ್ತಿರುವ ಆಟಗಾರರು ಈ ಆವೃತ್ತಿಯಲ್ಲಿ ಸುಧಾರಿತ ಪ್ರದರ್ಶನ ನೀಡುತ್ತಿರುವುದು ‘ಚಾಂಪಿಯನ್’ ಕೋಚ್ ಎಂದೇ ಹೆಸರಾಗಿರುವ ರಮೇಶ್ ಅವರ ಆತ್ಮವಿಶ್ವಾಸವನ್ನು ಇಮ್ಮಡಿಗೊಳಿಸಿದೆ.

ಬುಲ್ಸ್ ತಂಡವು ಲೀಗ್ ಹಂತದಲ್ಲಿ ಈತನಕ ಒಟ್ಟು 8 ಪಂದ್ಯಗಳನ್ನು ಆಡಿದೆ. ಮೊದಲ ಮೂರು ಪಂದ್ಯಗಳನ್ನು ಸೋತ ಬಳಿಕ ಸತತ ನಾಲ್ಕು ಪಂದ್ಯಗಳನ್ನು ಗೆದ್ದುಕೊಂಡಿದೆ. ತಲಾ ನಾಲ್ಕು ಗೆಲುವು ಮತ್ತು ಸೋಲಿನೊಂದಿಗೆ ಎಂಟು ಅಂಕ ಗಳಿಸಿ ಲೀಗ್ ಪಟ್ಟಿಯಲ್ಲಿ ಆರನೇ ಸ್ಥಾನದಲ್ಲಿದೆ. ಜೈಪುರದಲ್ಲಿ ನಡೆಯುತ್ತಿರುವ ‘ಸಾಂಪ್ರದಾಯಿಕ ಎದುರಾಳಿಗಳ ಸಪ್ತಾಹ’ದ (ರೈವಲರಿ ವೀಕ್) ಹಣಾಹಣಿಯ ಮಧ್ಯೆ ‘ಪ್ರಜಾವಾಣಿ’ ಜೊತೆ ರಮೇಶ್ ಮಾತನಾಡಿದರು.


ಬಿ.ಸಿ. ರಮೇಶ್

‘ಮೊದಲ ಮೂರು ಪಂದ್ಯಗಳ ಸೋಲು ಅನಿರೀಕ್ಷಿತ. ಅದನ್ನು ನನಗೆ ಇನ್ನೂ ಜೀರ್ಣಿಸಿಕೊಳ್ಳಲು ಆಗುತ್ತಿಲ್ಲ. ತಂಡದ ಕೆಲವು ಆಟಗಾರರ ಮೇಲೆ ಅತಿಯಾದ ವಿಶ್ವಾಸ ಇಟ್ಟಿದ್ದರಿಂದ ಈ ಮೂರು ಪಂದ್ಯಗಳಲ್ಲಿ ಸೋಲು ಅನುಭವಿಸಬೇಕಾಯಿತು. ಅದರ ಬೆನ್ನಲ್ಲೇ ಪ್ರಧಾನ ರೇಡರ್ ಆಶು ಮಲಿಕ್ ಗಾಯಾಳಾದರು. ಇದರಿಂದ ಒತ್ತಡಕ್ಕೆ ಒಳಗಾದೆ. ಆದರೆ, ಆತ್ಮವಿಶ್ವಾಸ ಕಳೆದುಕೊಳ್ಳಲಿಲ್ಲ. ಆ ಸೋಲುಗಳ ಹಿಂದೆ ‘ಕಾಣದ ಕೈಗಳು’ ಕೆಲಸ ಮಾಡಿರುವ ಅನುಮಾನವಿದೆ’ ಎಂದು ಹೇಳಿದರು.

‘ನಮ್ಮದು ಹೊಸ ಆಟಗಾರರ ತಂಡ. ಅನುಭವಿಗಳು ಯಾರೂ ತಂಡದಲ್ಲಿಲ್ಲ. ಸೋಲುಗಳ ಬಳಿಕ ತಂಡದ ಸಂಯೋಜನೆ ಬದಲಾಯಿಸಿದ್ದು ಫಲ ನೀಡಿತು. ಯುವ ಆಟಗಾರರು ಅಗತ್ಯಕ್ಕೆ ತಕ್ಕಂತೆ ಹೊಂದಿಕೊಳ್ಳುತ್ತಿದ್ದಾರೆ. ತಂಡವು ಪಂದ್ಯಗಳನ್ನು ಗೆಲ್ಲುವ ಜೊತೆಗೆ ನಮ್ಮ ಆಟಗಾರರು ದೇಶದ ಜನರ ಹೃದಯ ಗೆಲ್ಲುವಂತಾಗಬೇಕು’ ಎಂದು ಅಭಿಪ್ರಾಯಪಟ್ಟರು.

‘ದೊಡ್ಡ ಕನಸು ನನಸಾಗಿದೆ’

ಗಣೇಶ್

ಸತ್ಯಪ್ಪ ಮಟ್ಟಿ

‘ಕನ್ನಡಿಗರಾಗಿ ಬುಲ್ಸ್ ತಂಡಕ್ಕೆ ಆಡುವುದು ನಮ್ಮ ದೊಡ್ಡ ಕನಸಾಗಿತ್ತು. ರಮೇಶ್ ಅವರು ಕೋಚ್ ಆಗಿರುವಾಗಲೇ ಅದು ಈಡೇರಿರುವುದು ಮರೆಯಲಾಗದ ಅನುಭವ’ ಎಂದು ತಂಡದ ರೇಡರ್ ಗಣೇಶ್ ಬಿ. ಹಣಮಂತಗೋಳ ಮತ್ತು ಡಿಫೆಂಡರ್ ಸತ್ಯಪ್ಪ ಮಟ್ಟಿ ಹೇಳಿದರು.

‘ನಮ್ಮದು ಕೃಷಿ ಕುಟುಂಬ. ಶಾಲೆಯಲ್ಲಿ ಸ್ನೇಹಿತರೊಂದಿಗೆ ಕಬಡ್ಡಿ ಆಡುತ್ತಿದ್ದೆವು. ಆದರೆ, ಮುಂದೊಂದು ದಿನ ಪ್ರೊ ಕಬಡ್ಡಿ ಲೀಗ್ ಆಡುತ್ತೇವೆ ಎಂದು ನಿರೀಕ್ಷೆ ಮಾಡಿರಲಿಲ್ಲ. ಲೀಗ್‌ನಲ್ಲಿ ಮೊದಲ ಬಾರಿ ಆಡುತ್ತಿದ್ದೇನೆ. ಕಠಿಣ ಪರಿಶ್ರಮದಿಂದ ಅದು ಸಾಧ್ಯವಾಗಿದೆ. ರಾಷ್ಟ್ರೀಯ ತಂಡವನ್ನು ಪ್ರತಿನಿಧಿಸುವ ಗುರಿಯನ್ನು ಹೊಂದಿದ್ದೇನೆ’ ಎಂದು ವಿಜಯಪುರದ ಗಣೇಶ್ ಪ್ರತಿಕ್ರಿಯಿಸಿದರು.

‘ಕಳೆದ ಆವೃತ್ತಿಯಲ್ಲಿ ಮೊದಲ ಬಾರಿ ಪುಣೇರಿ ಪಲ್ಟನ್ ತಂಡಕ್ಕೆ ಆಡಿದ್ದೆ. ರಮೇಶ್ ಅವರು ನನ್ನ ಮೇಲೆ ವಿಶ್ವಾಸವಿಟ್ಟು ಬುಲ್ಸ್ ತಂಡಕ್ಕೆ ಕರೆತಂದಿದ್ದಾರೆ. ಅವರಂಥ ದಿಗ್ಗಜರ ಮಾರ್ಗದರ್ಶನ ಸಿಕ್ಕಿರುವುದು ನನ್ನ ಅದೃಷ್ಟ. ಟ್ಯಾಕಲ್‌ನಲ್ಲಿ ಹೊಸ ಹೊಸ ತಂತ್ರಗಾರಿಕೆಯನ್ನು ಕಲಿಯುತ್ತಿದ್ದೇನೆ. ಇನ್ನಷ್ಟು ಸಾಧನೆಯ ಗುರಿ ನನ್ನದು’ ಎಂದು ಬಾಗಲಕೋಟೆಯ ಸತ್ಯಪ್ಪ ತಿಳಿಸಿದರು.

MARUTI SUZUKI
NEXA

CELEBRATIONS JUST GOT BIGGER.

WITH GST BENEFITS + LIMITED PERIOD FESTIVE OFFERS*

	PRICE REDUCTION OF UP TO*	NOW STARTING AT*	ADDITIONAL FESTIVE OFFERS OF UP TO**
FRONX	₹1 12 600	₹6 84 900	₹1 17 500
GRAND VITARA	₹1 07 000	₹10 76 500	₹1 54 100 + 5 Year Extended Warranty
BALENO	₹86 100	₹5 98 900	₹1 02 500
IGNIS	₹71 300	₹5 35 100	₹67 500
INVICTO	₹61 700	₹24 97 400	₹1 40 000
XL6	₹52 000	₹11 52 300	₹25 000
JIMNY	₹51 900	₹12 31 500	₹1 00 000

Prices applicable from 22nd September onwards.

SCAN TO CONNECT TO A SHOWROOM NEAR YOU

*FESTIVE OFFERS VALID TILL 30TH SEP ONLY

NEXA SAFETY SHIELD

UP TO 100% WAIVER ON CAR LOAN PROCESSING FEE (ONLY TILL 30TH SEP)##

E-BOOK TODAY @ WWW.NEXAEXPERIENCE.COM

Contact us at 1800-200-6392 1800-102-6392

For detailed T&C kindly visit your nearest dealership. Features and accessories shown may not be a part of the standard fitment. Black glass shade on the vehicle is due to the lighting effect. Images used are for illustration purposes only. All offers are brought to you by NEXA dealers only. Offers and features may vary subject to the model and variant purchased. **The mentioned offers include "Consumer Offer + Booking offer + Exchange Bonus + Rural offer", and may vary from city to city. Please contact nearby dealership for more details. Maruti Suzuki reserves the right to withdraw offers at any point in time without any advance notice. All offers are applicable till 30th September '25 or till stocks last. Maruti Suzuki Smart Finance is now available pan India. Maruti Suzuki Subscribe is available only in selected cities. ##Offers include consumer offer, exchange bonus and institutional or rural offers (wherever applicable) on select models/variants. Finance is at the sole discretion of the financer by selected finance partners.

LOVED IN 100 COUNTRIES

BAJAJ THE WORLD'S FAVOURITE INDIAN

ಜಗ ನೋಡುತ್ತೆ ನೀನು ತೋರ್ಸು.

CELEBRATING LANDMARK GST REFORMS

HAT-TRICK SAVINGS

SAVE ₹23 000/-

100% GST BENEFIT + NO PROCESSING FEE + INSURANCE SAVINGS

ಎಲ್ಲಾ ಪಲ್ಸರ್‌ಗಳ ಮೇಲೆ 1.5 ಪಟ್ಟು GST ಪ್ರಯೋಜನಗಳು

MODEL	125 CF	NS 125	150	NS 160	NS 200	RS200
100% GST ಪ್ರಯೋಜನ	₹8 488/-*	₹16 597/-*	₹11 348/-*	₹13 087/-*	₹13 985/-*	₹17 367/-*
PF + ಇನ್‌ಶ್ಯೂರೆನ್ಸ್ ಉಳಿತಾಯ	₹3 000/-*	₹3 400/-*	₹4 000/-*	₹4 600/-*	₹4 900/-*	₹6 100/-*
ಹ್ಯಾಟ್-ಟ್ರಿಕ್ ಉಳಿತಾಯ	₹11 488/-*	₹19 997/-*	₹15 348/-*	₹17 687/-*	₹18 885/-*	₹23 467/-*

Flipkart ಮತ್ತು amazon.in ನಲ್ಲಿ ಲಭ್ಯವಿದೆ

pulsar DEFINITELY DARING

ನಿಮ್ಮ ಹತ್ತಿರದ ಡೀಲರ್‌ರನ್ನು ಸಂಪರ್ಕಿಸಿ

72198 21111

BAJAJ SECURE · SHRIRAM Finance · IDFC FIRST Bank · BAJAJ AUTO CREDIT · L&T Finance · TATA CAPITAL Two Wheeler Loans

*ನಿಯಮಗಳು ಮತ್ತು ಷರತ್ತುಗಳು ಅನ್ವಯಿಸುತ್ತವೆ. 22 ಸೆಪ್ಟೆಂಬರ್ 2025 ರಿಂದ ಅನ್ವಯವಾಗುವ ಹ್ಯಾಟ್-ಟ್ರಿಕ್ ಉಳಿತಾಯಗಳು. ಉಲ್ಲೇಖಿಸಲಾದ ಒಟ್ಟು ಉಳಿತಾಯಗಳು 100% GST ಪ್ರಯೋಜನ (ಎಕ್ಸ್ ಶೋ ರೂಂ ಬೆಲೆ ಮತ್ತು ಅದರಿಂದಾಗುವ ಆರ್‌ಟಿಒ ತೆರಿಗೆಯ ಮೇಲೆ, ಅನ್ವಯವಾಗುವಂತೆ), ಶೂನ್ಯ ಪ್ರೊಸೆಸಿಂಗ್ ಶುಲ್ಕ ಮತ್ತು 1 ವರ್ಷದ ಸ್ವಂತ ಹಾನಿ ಇನ್‌ಶ್ಯೂರೆನ್ಸ್ (OD) ನಿಂದ ಉಳಿತಾಯದ ಒಟ್ಟು ಮೊತ್ತವಾಗಿದೆ. ಶೂನ್ಯ PF ಮತ್ತು OD ಮೇಲಿನ ಉಳಿತಾಯಗಳು ಹಣಕಾಸುದಾರ/ವಿಮಾದಾರರನ್ನು ಅವಲಂಬಿಸಿ ಲೋಕೇಶನ್‌ಗಳಲ್ಲಿ ಬದಲಾಗಬಹುದು. ಹಣಕಾಸುದಾರರ ಸ್ವಂತ ವಿವೇಚನೆಯಿಂದ ಹಣಕಾಸು. ಸಾಹಸಗಳನ್ನು ತಜ್ಞರು ವೃತ್ತಿಪರ ಮೇಲ್ವಿಚಾರಣೆಯಲ್ಲಿ, ನಿಯಂತ್ರಿತ ಮತ್ತು ಸುರಕ್ಷಿತ ವಾತಾವರಣದಲ್ಲಿ, ಸಾರ್ವಜನಿಕ ಅಥವಾ ಸಾರ್ವಜನಿಕ ರಸ್ತೆಗಳಿಂದ ಪ್ರತ್ಯೇಕವಾಗಿ ನಿರ್ವಹಿಸಿದ್ದಾರೆ. ಈ ಸಾಹಸಗಳನ್ನು ಯಾರೂ ಪ್ರಯತ್ನಿಸಬಾರದಾಗಿ ಮತ್ತು ಯಾವಾಗಲೂ ಸಂಚಾರ ಮತ್ತು ಸುರಕ್ಷತಾ ನಿಯಮಗಳನ್ನು ಅನುಸರಿಸಬೇಕಾಗಿ ವಿನಂತಿ.

ಪ್ರಜಾವಾಣಿ
ಪ್ರಜಾಪ್ಲಸ್
ಮನರಂಜನೆ | ಜಾಹೀರಾತು
ಪ್ರೋತ್ಸಾಹ | ಉದ್ಯಮ ಅಭಿವೃದ್ಧಿ

ಮಡಕೆ ತಯಾರಿ

ನಗರದ ರಂಗೋಲಿ ಮೆಟ್ರೊ ಕಲಾ ಕೇಂದ್ರದಲ್ಲಿ ನಡೆಯುತ್ತಿರುವ 'ಕೆನರಾ ಉತ್ಸವ – 2025'ರಲ್ಲಿ ಮಣ್ಣಿನ ಮಡಕೆ ತಯಾರಿಸುವ ತರಬೇತಿ ನೀಡುತ್ತಿರುವ ಕಲಾವಿದ

ORCHIDS®
The International School
Indian Education, International Approach

FOR EVERY KIND OF
CHAMPION

Admissions Open 2026-27
9999-412-999

30+ Schools Across Bengaluru

Bengaluru

Bannerghatta | BTM Layout | CV Raman Nagar | Haralur | Hennur Road | Horamavu
Jalahalli | Jakkur | JP Nagar | Kadugodi | Kanakapura Road | Mahalakshmi Layout
Magadi Road | Majestic | Mysore Road | Nagarbhavi | Panathur | Pragathi Whitefield
Rajajinagar | Sahakar Nagar | Sarjapur Road | Vijayanagar | Makali | Kengeri
Yelahanka (ICSE) | Yelahanka (CBSE)

www.orchidsinternationalschool.com | 110+ Schools | 2 Boarding Schools | 75K+ Students | 7K+ Teachers | 20+ Cities

ANNOUNCING
NOST
National Orchids Scholarship Test
✦ EXAM CENTER: NEAREST ORCHIDS BRANCH ACROSS 20+ CITIES ✦

300 Students are just one test away from a
100%* SCHOLARSHIP!
✦ Grades 5–10: 2 hrs test | Grade 11: 3 hrs test
✦ Test Format: OMR Based Test
✦ Subjects: Maths, Science & General Aptitude

Scan for Registration
Register Now
www.mynost.com
761-942-4100
T&C Apply*

ORCHIDS IS EXPANDING ITS SCHOOL NETWORK

If you own land, a building, or run a school and are open to a tie-up:
Vivek Kumar +91 7625040334 | Astha Prawar +91 98807 70901
Vivek.kumar@orchids.edu.in | Astha.prawar@orchids.edu.in

‘ವಿರೋಚನ ಕಾಳಗ’ ಯಕ್ಷಗಾನ

ಬೆಂಗಳೂರು: ಕಲಾ ಕದಂಬ ಆರ್ಟ್ ಸೆಂಟರ್ ಇದೇ ಶನಿವಾರ ಸಂಜೆ 6 ಗಂಟೆಗೆ ಚಿಕ್ಕಲಸಂದ್ರದ ಕೆಎಸ್‌ಆರ್‌ಟಿಸಿ ಲೇಔಟ್‌ನಲ್ಲಿರುವ ಸಿದ್ಧಿಗಣಪತಿ ದೇವಾಲಯದ ಮನೋರಂಜನಿ ಸಭಾಂಗಣದಲ್ಲಿ ‘ವಿರೋಚನ ಕಾಳಗ’ ಯಕ್ಷಗಾನ ಪ್ರದರ್ಶನ ಹಮ್ಮಿಕೊಂಡಿದೆ.

ಭರತ್ ಪರ್ಕಳ ಅವರ ನಿರ್ದೇಶನದಲ್ಲಿ ಈ ಯಕ್ಷಗಾನ ಪ್ರದರ್ಶನ ಕಾಣಲಿದೆ. ಹಿಮ್ಮೇಳದಲ್ಲಿ ಸುಬ್ರಾಯ್ ಹೆಬ್ಬಾರ್, ಅಕ್ಷಯ್ ಆಚಾರ್, ಶ್ರೀನಿವಾಸ ಪ್ರಭು ಪಾಲ್ಗೊಳ್ಳಲಿದ್ದಾರೆ. ಮುಮ್ಮೇಳದಲ್ಲಿ ಭರತ್ ರಾಜ್ ಪರ್ಕಳ, ದೇವರಾಜ ಕರಬ, ಪೂಜಾ ಆಚಾರ್ಯ, ಅದಿತಿ ಉರಾಳ, ನಿತ್ಯಾ ಗೌಡ, ಅನಿಶ್ ಸೋಮಯಾಜಿ ಪ್ರದರ್ಶನ ನೀಡುತ್ತಾರೆ ಎಂದು ಪ್ರಕಟಣೆ ತಿಳಿಸಿದೆ.



‘ಸೀರೆ ಟಾಕ್ಸ್’ ಮಾಸ್ಟರ್ ಕ್ಲಾಸ್

ಬೆಂಗಳೂರು: ಸೀರೆ ಇ ಕಾಮರ್ಸ್ ವೇದಿಕೆಯು ಇದೇ 20ರಂದು ಬಸವನಗುಡಿಯಲ್ಲಿ ಇರುವ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್‌ನಲ್ಲಿ ‘ಸೀರೆ ಟಾಕ್ಸ್’ ಮಾಸ್ಟರ್ ಕ್ಲಾಸ್ ಮತ್ತು ‘ಭಾರತದ 9 ಗಜಗಳ ಕಥೆ’ ವಿಚಾರಸಂಕಿರಣ ಹಮ್ಮಿಕೊಂಡಿದೆ.

ಈ ಮಾಸ್ಟರ್ ಕ್ಲಾಸ್ ಮತ್ತು ವಿಚಾರಸಂಕಿರಣದಲ್ಲಿ ಸಾಂಪ್ರದಾಯಿಕ ಹಾಗೂ ಆಧುನಿಕ ಸೀರೆಯ ಪ್ರಯಾಣ ತಿಳಿಸಲಾಗುತ್ತದೆ. ಸೀರೆಗಳ ಬಣ್ಣಗಳು ಮತ್ತು ಅದರ ಲಕ್ಷಣಗಳಲ್ಲಿ ಅಡಗಿರುವ ಸಾಂಸ್ಕೃತಿಕ ಕಥೆಗಳು ಹಾಗೂ ಭಾರತದ ಪ್ರಸಿದ್ಧ ನೇಯ್ಗೆಗಳ ಒಳನೋಟಗಳನ್ನು ತಿಳಿಸಲಾಗುತ್ತದೆ.

ಸೀರೆಯ ಕಲಾತ್ಮಕತೆ ಮತ್ತು ಸಾಂಸ್ಕೃತಿಕ ಮಹತ್ವ ತಿಳಿಯಲೂ ಈ ಮಾಸ್ಟರ್ ಕ್ಲಾಸ್ ಸಹಕಾರಿಯಾಗಲಿದೆ. ಆಸನ ಕಾಯ್ದಿರಿಸಲು ಮೊ.8310868579ಕ್ಕೆ ಸಂಪರ್ಕಿಸಿ ಎಂದು ‘ಸೀರೆ’ ಸಂಸ್ಥಾಪಕಿ ಸ್ನೇಹ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

‘6 ಟು 6’ ಯಕ್ಷಗಾನ ಮಹೋತ್ಸವ

ಬೆಂಗಳೂರು: ರೀಗಲ್ ಜ್ಯುವೆಲ್ಲರ್ ಪ್ರಸ್ತುತಿಯಲ್ಲಿ ನಾಗರಾಜ್ ಶೆಟ್ಟಿ ನೈಕಂಬ್ಳಿ ಸಂಯೋಜನೆಯ ಯಕ್ಷಸಂಕ್ರಾಂತಿ ‘6 ಟು 6 ಯಕ್ಷಗಾನ’ವನ್ನು ನಗರದ ರವೀಂದ್ರ ಕಲಾಕ್ಷೇತ್ರದಲ್ಲಿ ಸೆ.20 ರಂದು ಸಂಜೆ 6ರಿಂದ ಮರುದಿನ ಬೆಳಿಗ್ಗೆ 6ರವರೆಗೆ ಹಮ್ಮಿಕೊಳ್ಳಲಾಗಿದೆ.

ತೆಂಕು–ಬಡಗಿನ ಕಲಾವಿದರ ಸಮಾಗಮದ ಈ ಮಹೋತ್ಸವದಲ್ಲಿ ರಾಮ ನಿರ್ಯಾಣ, ಗಿರಿಪೂಜೆ, ಕಾಲಯವನ ಹಾಗೂ ಚಿತ್ರಸೇನ ಎಂಬ ನಾಲ್ಕು ಪ್ರಸಂಗಗಳು ಪ್ರಸ್ತುತಿಗೊಳ್ಳಲಿವೆ.

ಸಂಪರ್ಕಕ್ಕೆ: 9741474255

‘ಚೌಕಟ್ಟಿನಾಚೆಯ ಚಿತ್ರ’ ನಾಟಕ

ಬೆಂಗಳೂರು: ಕರ್ನಾಟಕ ನಾಟಕ ಅಕಾಡೆಮಿಯ ತಿಂಗಳ ನಾಟಕ ಸಂಭ್ರಮದಲ್ಲಿ ಮುಂಬೈನ ಕನ್ನಡ ಕಲಾ ಕೇಂದ್ರದ ಕಲಾವಿದರಿಂದ ‘ಚೌಕಟ್ಟಿನಾಚೆಯ ಚಿತ್ರ’ ನಾಟಕ ಪ್ರದರ್ಶನ ಸೆ.20ರಂದು ಸಂಜೆ 6.30ಕ್ಕೆ ಮಲ್ಲತ್ತಹಳ್ಳಿ ಕಲಾಗ್ರಾಮದಲ್ಲಿ ನಡೆಯಲಿದೆ.

ಲಿಂಗತ್ವ ಅಲ್ಪಸಂಖ್ಯಾತರ ಕುರಿತ ವಿಭಿನ್ನ ರೀತಿಯ ನಾಟಕ ಇದಾಗಿದ್ದು, ವಿದ್ದು ಉಚ್ಚಿಲ್ ರಂಗ ವಿನ್ಯಾಸ ಮಾಡಿದ್ದಾರೆ. ದಿವಾಕರ ಕಟೀಲ್ ಸಂಗೀತ ನೀಡಿದ್ದಾರೆ. ರಂಗ ಸಂಘಟಕ ವಿ.ಎಂ. ನಾಗೇಶ್ ತಿಂಗಳ ಅತಿಥಿಯಾಗಿರುವರು. ನಾಟಕ ಅಕಾಡೆಮಿ ಅಧ್ಯಕ್ಷ ಕೆ.ವಿ. ನಾಗರಾಜಮೂರ್ತಿ ಅಧ್ಯಕ್ಷತೆ ವಹಿಸುವರು ಎಂದು ಕಾರ್ಯಕ್ರಮದ ಸಂಚಾಲಕರಾದ ಜಿಪಿಓ ಚಂದ್ರು ಮತ್ತು ಜಗದೀಶ್ ಜಾಲ ತಿಳಿಸಿದ್ದಾರೆ.

‘ಕಚ ದೇವಯಾನಿ’ ತಾಳಮದ್ದಳೆ 21ಕ್ಕೆ

ಬೆಂಗಳೂರು: ನಿರ್ಮಾಣ್ ಯಕ್ಷ ಬಳಗದಿಂದ ತಿಂಗಳ ತಿರುಳು ಸರಣಿಯ 35ನೇ ತಾಳಮದ್ದಳೆ ‘ಕಚ ದೇವಯಾನಿ’ ಸೆ.21ರಂದು ಮಧ್ಯಾಹ್ನ 3ಕ್ಕೆ ಗಿರಿನಗರ ಶ್ರೀರಾಮಾಶ್ರಮದಲ್ಲಿ ನಡೆಯಲಿದೆ.

ಅರ್ಥಧಾರಿ ಜಬ್ಬಾರ್ ಸಮೊ ಅವರು ಬೆಂಗಳೂರಿನ ಹವ್ಯಾಸಿ ಕಲಾವಿದರೊಂದಿಗೆ ಭಾಗವಹಿಸಲಿದ್ದಾರೆ. ಶುಕ್ರಾಚಾರ್ಯನಾಗಿ ಅರ್ಥ ಹೇಳಲಿದ್ದಾರೆ ಎಂದು ಸಂಘಟಕರು ತಿಳಿಸಿದ್ದಾರೆ.

ಜಲಯೋಗ: ಆರೋಗ್ಯ ಯೋಗ

ಬೆಂಗಳೂರಿನ ಯಲಹಂಕದಲ್ಲಿ ಇರುವ ‘ಎಂವಿಎಂ ಕಾಲೇಜ್ ಆಫ್ ನ್ಯಾಚುರೋಪಥಿ ಮತ್ತು ಯೋಗಿಕ್ ಸೈನ್ಸ್’ ಕಾಲೇಜಿನಲ್ಲಿ ರುಮಾ ಹೇಮ್ನಾನಿ ಅವರು ಈಚೆಗೆ ಜಲಯೋಗ ಕಾರ್ಯಾಗಾರವೊಂದನ್ನು ನಡೆಸಿದ್ದರು. ಈ ಹಿನ್ನೆಲೆಯಲ್ಲಿ ಅವರೊಂದಿಗೆ ನಡೆಸಿದ ಪುಟ್ಟ ಮಾತುಕತೆಯ ಭಾಗ ಇಲ್ಲಿದೆ:

ರುಮಾ ಅವರು ಜಲ ಯೋಗ ಪ್ರದರ್ಶಿಸಿದರು

ರುಮಾ ಹೇಮ್ನಾನಿ

• ಸುಕೃತ ಎಸ್.

‘ಯೋಗ ಎನ್ನುವುದು ಕಾಯಿಲೆಗಳನ್ನು ಗುಣಪಡಿಸುವ ಸಾಧನ ಮಾತ್ರವಲ್ಲ. ಅದು, ಜೀವನ ನಡೆಸುವ ವಿಧಾನ. ಯೋಗ ಅಲ್ಲದಿದ್ದರೆ ಇನ್ನೊಂದು ಎನ್ನುವವಳು ನಾನಲ್ಲ. ಯೋಗವು ನನ್ನ ಆಯ್ಕೆ’ ಎನ್ನುತ್ತಾರೆ ಉತ್ತರಪ್ರದೇಶದ ಲಖನೌನ ರುಮಾ ಹೇಮ್ನಾನಿ.

58 ವರ್ಷದ ರುಮಾ ಅವರು ಜಲಯೋಗದಲ್ಲಿ ವಿಶ್ವ ದಾಖಲೆ ಬರೆದವರು. ನೀರಿನಲ್ಲಿ 1 ತಾಸು 24 ನಿಮಿಷಗಳವರೆಗೆ ಒಂದೇ ಮುದ್ರೆಯಲ್ಲಿ ಇದ್ದು ಈ ದಾಖಲೆ ಬರೆದಿದ್ದಾರೆ. ಯೋಗಾಸನಾ ಬುಕ್ ಆಫ್ ವರ್ಲ್ಡ್ ರೆಕಾರ್ಡ್ ಕೌನ್ಸಿಲ್‌ನಲ್ಲಿ 2024ರಲ್ಲಿ ಈ ದಾಖಲೆ ಬರೆದ ಅವರು, ಹತ್ತು ಹಲವು ಸಮ್ಮಾನಗಳನ್ನು ಗಳಿಸಿದ್ದಾರೆ.

‘ನನ್ನೊಳಗಿನ ಜಲಯೋಗವನ್ನು ನಾನು ನನಗೆ 30 ವರ್ಷ ಇರುವಾಗ ಕಂಡುಕೊಂಡೆ. ತರಬೇತಿ ಮೂಲಕ ನನಗೆ ಈ ವಿದ್ಯೆ ಒಲಿಯಲಿಲ್ಲ. ಇದು ನನಗೆ ದೇವರು ಕೊಟ್ಟ ವರ ಎಂದೇ ಭಾವಿಸಿದ್ದೇನೆ. ದೇವರು ನನಗೆ ನೀಡಿದ ಈ ಕೊಡುಗೆಯನ್ನು ದೇಶದ ಪ್ರತಿಯೊಬ್ಬರಿಗೂ ಹಂಚುವುದು ನನ್ನ ಗುರಿ’ ಎನ್ನುತ್ತಾರೆ ರುಮಾ.

ನೀರಿನಲ್ಲಿ ಧ್ಯಾನ ಮಾಡುವುದು, ಪ್ಲಾವಿನಿ ಪ್ರಾಣಾಯಾಮದಲ್ಲಿಯೂ ರುಮಾ ಪರಿಣತಿ ಗಳಿಸಿದ್ದಾರೆ. ಕೇಂದ್ರ ಸರ್ಕಾರದ ಆಯುಷ್ ಸಚಿವಾಲಯದ ಸಹಯೋಗದಲ್ಲಿ ದೇಶದ ವಿವಿಧೆಡೆ ಜಲಯೋಗದ ಕುರಿತು ಕಾರ್ಯಕ್ರಮಗಳನ್ನೂ ನೀಡುತ್ತಾರೆ. ಈ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸುವ ಕೆಲಸವನ್ನು ಮಾಡುತ್ತಿದ್ದಾರೆ. ವಿವಿಧೆಡೆ ಕಾರ್ಯಾಗಾರಗಳನ್ನು ನಡೆಸುವ ಇವರು, ಮುಂದಿನ ಪೀಳಿಗೆಗೆ ಜಲಯೋಗ ಹಾಗೂ ಪ್ಲಾವಿನಿ ಪ್ರಾಣಾಯಾಮವನ್ನು ದಾಟಿಸುವ ಗುರಿ ಹೊಂದಿದ್ದಾರೆ.

‘ಮಹಿಳೆ ಅದರಲ್ಲೂ ಮನೆವಾರ್ತೆ ನಡೆಸುವಾಕೆಯು ಸಮಾಜದ ಮೂಲಾಧಾರ. ದೇಶದ ವಿವಿಧ ಭಾಗಗಳಿಗೆ ತೆರಳಿ, ಸಮಾಜದ ಸೇವೆ ಮಾಡುವುದು ನಮಗೆ ದೊರೆತ ಕೊಡುಗೆ ಎಂದೇ ಭಾವಿಸಬೇಕು. ಕುಟುಂಬವನ್ನೂ ಕೆಲಸವನ್ನೂ ನಿಭಾಯಿಸುವ ದೈವಿಕ ಶಕ್ತಿ ಮಹಿಳೆಗೆ ಇದೆ. ವೈಯಕ್ತಿಕವಾಗಿ ನನಗೆ ಈ ಕೆಲಸ ಕಷ್ಟ ಎನ್ನಿಸಲೇ ಇಲ್ಲ. ನನ್ನ ಕುಟುಂಬ, ಸಹೋದರಿ ಎಲ್ಲರೂ ನನಗೆ ಬೆನ್ನೆಲುಬಾಗಿ ನಿಂತಿದ್ದಾರೆ’ ಎಂದು ಹೆಮ್ಮೆಯಿಂದ ಹೇಳಿಕೊಂಡರು.

ಬೆಡಗಿಯರ ಬಿನ್ನಾಣಕ್ಕೆ ಹೀಲ್ಸ್ ಸ್ಪರ್ಶ

ಹೀಲ್ಸ್ ಯಾರಿಗೆ ಸೂಕ್ತ? ಹೀಲ್ಸ್ ಹಾಕಿಕೊಳ್ಳುವುದರಿಂದ ಹೇಗೆಲ್ಲ ಕಾಣಿಸಬಹುದು? ಸದ್ಯಕ್ಕೆ ಟ್ರೆಂಡಿಂಗ್‌ನಲ್ಲಿರುವ ಹೀಲ್ಸ್‌ಗಳ ಬಗೆಗಿನ ಮಾಹಿತಿ ಇಲ್ಲಿದೆ:

• ವಿದ್ಯಾ ಹಂಚಿನಮನಿ

ಸೌಂದರ್ಯವನ್ನು ಹೆಚ್ಚಿಸಿ, ಇನ್ನಷ್ಟು ಆಕರ್ಷಕವಾಗಿ ಕಾಣಲು ಸದಾ ಹಂಬಲಿಸುವ ಹೆಂಗಳೆಯರು ಒಂದಿಲ್ಲೊಂದು ನೂತನ ಫ್ಯಾಷನ್ ಮೊರೆ ಹೋಗುವುದು ಸಾಮಾನ್ಯ. ಅವುಗಳಲ್ಲಿ ಹೀಲ್ಸ್‌ಗಳೀಗ ಮುಂದಿವೆ.

ಹೀಲ್ಸ್‌ಗಳು ಆಧುನಿಕ ಫ್ಯಾಷನ್‌ನ ಭಾಗವೆಂದು ಭಾವಿಸಲಾಗಿದೆ. ಆದರೆ ಇವು ಪುರಾತನ ಕಾಲದಿಂದಲೂ ಬಳಕೆಯಲ್ಲಿದ್ದು, ಇದೀಗ ಇವುಗಳಲ್ಲಿ ಹೆಚ್ಚಿನ ವಿನ್ಯಾಸ ಹಾಗೂ ವಿಧಗಳನ್ನು ಕಂಡುಕೊಳ್ಳಲಾಗಿದೆ.

ಎತ್ತರ ಹಾಗೂ ಆಕರ್ಷಕವಾದ ನಿಲುವು ಪಡೆಯುವ ಮತ್ತು ಉಡುಗೆಗೆ ತಕ್ಕಂತೆ ಪಾದರಕ್ಷೆ ಧರಿಸುವ ಬಯಕೆಯಿಂದಾಗಿ ಹೈ ಹೀಲ್ಸ್ ಬಳಕೆ ಸಾಮಾನ್ಯ.

ಕಚೇರಿ, ಪಾರ್ಟಿ, ಶಾಪಿಂಗ್ ಹಾಗೂ ಇತರ ಯಾವುದೇ ಸಂದರ್ಭಗಳಲ್ಲಿ ಹೀಲ್ಸ್‌ಗಳನ್ನು ಧರಿಸಬಹುದು. ಆದರೆ ತಮ್ಮ ಪಾದದ ಆಕಾರ ಮತ್ತು ಎತ್ತರಕ್ಕೆ ತಕ್ಕಂತೆ ಅವುಗಳನ್ನು ಆಯ್ಕೆ ಮಾಡಿಕೊಳ್ಳಬೇಕು. ತಪ್ಪಾದ ಆಯ್ಕೆ ಹಲವು ಸಮಸ್ಯೆಗೆ ಕಾರಣವಾಗುತ್ತದೆ. ಹೀಲ್ಸ್ ಎಷ್ಟು ಆಕರ್ಷಕ ಮತ್ತು ಸುಂದರವಾಗಿ ಕಾಣುತ್ತದೋ ಅದನ್ನು ಧರಿಸಿ ದಿನವಿಡೀ ಹ್ಯಾಂಡಲ್ ಮಾಡುವುದು ಕೆಲವೊಮ್ಮೆ ಅಷ್ಟೇ ಪ್ರಯಾಸದಾಯಕವೂ ಹೌದು.

ಹೀಗಿದೆ ಹೈ ಹೀಲ್ಸ್ ಬಳಕೆಯ ಇತಿಹಾಸ

ಕ್ರಿ.ಪೂ. 3500ರ ಸಮಯದಲ್ಲಿ ಈಜಿಪ್ಟ್ ನಾಗರಿಕತೆಯಲ್ಲಿ ಪುರುಷರು ಹೀಲ್ಸ್ ಬಳಸುತ್ತಿದ್ದರು ಎಂಬುದಕ್ಕೆ ಕುರುಹುಗಳಿವೆ.

9ನೇ ಶತಮಾನದಲ್ಲಿ ಪರ್ಷಿಯಾದಲ್ಲಿ ಮೊದಲಿಗೆ ಹೀಲ್ಸ್ ಬಳಕೆ ಆರಂಭವಾಯಿತು. ಹಾಗಂತ ಸ್ತ್ರೀಯರಲ್ಲ, ಬದಲಾಗಿ ಪುರುಷರು ಇವುಗಳನ್ನು ಧರಿಸುತ್ತಿದ್ದರು. ಅಶ್ವದಳ ಸೈನಿಕರು ತಮ್ಮ ಸುರಕ್ಷತೆಗೆ ‘ಗಲೇಶ್’ ಎಂಬ ಹೀಲ್ಡ್ ಶೂಗಳನ್ನು ಬಳಕೆಗೆ ತಂದರು. ತರುವಾಯ 17ನೇ ಶತಮಾನದಲ್ಲಿ ಯುರೋಪ್‌ನಾದ್ಯಂತ ಹೀಲ್ಸ್ ಬಳಕೆ ಸಾಮಾನ್ಯವಾಯಿತು. ಈ ಸಮಯದಲ್ಲಿ ಪುರುಷರು ಮತ್ತು ಸ್ತ್ರೀಯರು ಇಬ್ಬರೂ ಧರಿಸುತ್ತಿದ್ದರು.

18ನೇ ಶತಮಾನದ ಆದಿಯಲ್ಲಿ ಹೀಲ್ಸ್‌ಗಳು ಮಹಿಳೆಯರ ಫ್ಯಾಷನ್‌ನ ಸಂಕೇತವಾಗಿ ಬದಲಾದವು. ಆಗಿನಿಂದ ಈವರೆಗೆ ಮಹಿಳೆಯರಿಗಾಗಿ ತರಹೇವಾರಿ ಹೀಲ್ಸ್‌ಗಳ ವಿನ್ಯಾಸ ಹುಟ್ಟಿಕೊಂಡು, ಅವುಗಳ ಮಾರುಕಟ್ಟೆಯೂ ವಿಸ್ತರಿಸಿತು.

ಯಾರಿಗೆ ಸೂಕ್ತ?

ವೈಯಕ್ತಿಕ ಆದ್ಯತೆ ಮತ್ತು ಸಂದರ್ಭಗಳನುಸಾರ ಹೀಲ್ಸ್ ಬಳಕೆ ಎಲ್ಲಾ ಸ್ತ್ರೀಯರಿಗೂ ಸೂಕ್ತವೇ. ಆದರೆ ಅವುಗಳ ಆಯ್ಕೆಯಲ್ಲಿ ಕೊಂಚ ಜಾಗ್ರತೆ ವಹಿಸಲೇಬೇಕು. 1.2 ರಿಂದ 1.4 ಇಂಚು ಎತ್ತರದ ಹೀಲ್ಸ್ ಬಳಕೆ ಉತ್ತಮ ಹಾಗೂ ಆರಾಮದಾಯಕವಾಗಿರುತ್ತದೆ. ನಿಮ್ಮ ಪಾದದ ಆಕಾರ, ಬೆರಳುಗಳ ಆರಾಮದಾಯಕತೆಯನ್ನು ಗಮನದಲ್ಲಿಟ್ಟುಕೊಂಡು ಹೀಲ್ಸ್‌ಗಳನ್ನು ಆಯ್ಕೆ ಮಾಡಿ.

- ಕಿಟನ್ ಹೀಲ್ಸ್ (1.5-2 ಇಂಚು) ದೈನಂದಿನ ಬಳಕೆಗೆ ಉತ್ತಮ ಹಾಗೂ ಸೀರೆ ಸೇರಿದಂತೆ ಎಲ್ಲ ಬಟ್ಟೆಗಳಿಗೂ ಸೂಕ್ತ. ನೀವು ಎತ್ತರವಾಗಿದ್ದರೆ ಹಾಗೂ ಎತ್ತರವಾಗಿ ಕಾಣುವ ಯೋಚನೆ ಇಲ್ಲದಿದ್ದರೆ ಈ ಹೀಲ್ಸ್ ಉತ್ತಮ.
- ಮಿಡ್-ಹೀಲ್ಸ್ (3-4 ಇಂಚು) ಕಚೇರಿ ಅಥವಾ ಇತರ ಯಾವುದೇ ಕಾರ್ಯಕ್ರಮಗಳಿಗೆ ಇವುಗಳನ್ನು ಧರಿಸಬಹುದು. ನಿಮ್ಮ ಎತ್ತರ ಕಡಿಮೆ ಇದ್ದರೆ ಇವುಗಳನ್ನು ಧರಿಸಿ. ಆದರೆ ಜಾಗರೂಕರಾಗಿ ನಡೆಯುವ ಕೌಶಲವೂ ಇರಬೇಕಾಗುತ್ತದೆ.
- ಹೈಯರ್ ಹೀಲ್ಸ್ (4 ಇಂಚಿಗಿಂತ ಹೆಚ್ಚು) ವಿಶೇಷ ಸಂದರ್ಭಗಳಲ್ಲಿ ಬಳಸಬಹುದು. ಇವುಗಳನ್ನು ಧರಿಸಿ ಹೆಚ್ಚು ನಡೆಯುವುದು ಕಷ್ಟಕರ. ಹಾಗೆ ನಡೆಯಬೇಕಾದ ಅನಿವಾರ್ಯ ಇಲ್ಲದಿದ್ದರೆ ಹಾಗೂ ನಿಮಗೆ ಹೀಲ್ಸ್ ಧರಿಸುವ ಅಭ್ಯಾಸ ಇದ್ದರೆ ಉತ್ತಮ.

ಟ್ರೆಂಡಿಂಗ್‌ನಲ್ಲಿರುವ ಹೀಲ್ಸ್‌ಗಳಿವು

ಹೀಲ್ಸ್‌ಗಳ ವಿನ್ಯಾಸವೂ ಮಾರ್ಪಾಡಾಗುತ್ತಲೇ ಇದೆ. ಸ್ತ್ರೀಯರ ಅಭಿರುಚಿ, ಉಡುಗೆ ಹಾಗೂ ರೆಟ್ರೊ ಪ್ರಭಾವ ಸೇರಿದಂತೆ ಅನೇಕ ಅಂಶಗಳ ಆಧಾರದ ಮೇಲೆ ಹೊಸ ಮಾದರಿಯ ಹೀಲ್ಸ್ ಹುಟ್ಟಿಕೊಳ್ಳುತ್ತದೆ. ಸದ್ಯ ಟ್ರೆಂಡಿಂಗ್‌ನಲ್ಲಿರುವ ನೂರಾರು ಶೈಲಿಯ ಹೀಲ್ಸ್‌ಗಳಲ್ಲಿ ಪ್ರಮುಖವಾದವುಗಳು ಇಂತಿವೆ.

ಫ್ಲಾರೆಡ್ ಹೀಲ್ಸ್, ಬ್ಲಾಕ್ ಹೀಲ್ಸ್, ಬೋಲ್ಡ್ ಆ್ಯಕ್ಸೆಂಟ್ಸ್, ಕ್ಲಿಯರ್ ಹೀಲ್ಸ್, ಬೇರ್‌ಫೂಟ್ ಶೂಸ್, ಕಿಟನ್ ಹೀಲ್ಸ್, ಫ್ಲ್ಯಾಟ್ಸ್ ಸೇರಿದಂತೆ ಹಲವಾರು ಬಗೆಯ ಹೀಲ್ಸ್‌ಗಳೀಗ ಟ್ರೆಂಡಿಂಗ್‌ನಲ್ಲಿವೆ.

ಆಕರ್ಷಕ ಲುಕ್, ನೂತನ ವಿನ್ಯಾಸವೇ ಇವುಗಳನ್ನೀಗ ಹೆಂಗಳೆಯರು ಹೆಚ್ಚು ಇಷ್ಟಪಟ್ಟು ಧರಿಸುತ್ತಿರುವುದಕ್ಕೆ ಕಾರಣ.

ಸ್ನೇಕ್‌ಸ್ಕಿನ್ ಹೀಲ್ಸ್— ಹಾವಿನ ಚರ್ಮದ ಆಕಾರದ ವಿನ್ಯಾಸದಲ್ಲಿರುವ ಈ ಹೀಲ್ಸ್‌ಗಳು ಇದೀಗ ಟ್ರೆಂಡಿಂಗ್‌ನಲ್ಲಿವೆ. ಹಾವು, ಚಿರತೆ ಹಾಗೂ ಚೀತಾಗಳ ವಿಶಿಷ್ಟ ಮೈಬಣ್ಣ ಹಾಗೂ ಅದರ ಆಕಾರವನ್ನು ಆಧಾರವಾಗಿರಿಸಿ ಈ ಹೀಲ್ಸ್‌ಗಳನ್ನು ತಯಾರಿಸಲಾಗಿದೆ.

ಅಭ್ಯಾಸ ಇಲ್ಲದೆ ಹೀಲ್ಸ್ ಧರಿಸುವುದರಿಂದ ಪಾದದ ಮೇಲೆ ಅಸ್ವಾಭಾವಿಕ ಒತ್ತಡ ಉಂಟಾಗುತ್ತದೆ. ಇದರಿಂದ ಹಿಮ್ಮಡಿ ನೋವು, ಕಾಲುನೋವು, ಬೆನ್ನುನೋವು ಹಾಗೂ ಸ್ನಾಯು ಸೆಳೆತವನ್ನು ಅನುಭವಿಸಬೇಕಾಗಬಹುದು. ಹೀಗಾಗಿ, ಹೀಲ್ಸ್ ಧರಿಸಿ ನಡೆಯುವಾಗ ಎಚ್ಚರ ವಹಿಸುವುದು ಅಗತ್ಯ.

ಅರಿಯಿರಿ ನವರಾತ್ರಿಯ ನವರೂಪ

ಮಹಾಗೌರಿ



ಶೈಲಪುತ್ರಿ

• ಆಶಾ ನಾಗರಾಜ್

ಇನ್ನೇನು ನವರಾತ್ರಿ ಹೊಸ್ತಿಲಲ್ಲಿದೆ. ತಾಯಿ ಪಾರ್ವತಿ ತನ್ನ ಒಂಬತ್ತು ಅವತಾರಗಳನ್ನು ಹೊತ್ತು ಬರುತ್ತಿದ್ದಾಳೆ. ಅವಳ ಸ್ವಾಗತಕ್ಕಾಗಿ ಮನೆಯ ಹೆಣ್ಣುಮಕ್ಕಳು ಅಣಿಯಾಗುತ್ತಿದ್ದಾರೆ. ಇಂದಿನ ಪೀಳಿಗೆಯ ಹೆಣ್ಣುಮಕ್ಕಳಿಗೆ ತಾಯಿಯ ನವ ಅವತಾರಗಳ ಪುಟ್ಟ ಪರಿಚಯ ಮತ್ತು ಸಂಕ್ಷಿಪ್ತ ಮಾಹಿತಿ ಇಲ್ಲಿದೆ:

ತಾಯಿಯ ಆರಾಧನೆ, ನಮ್ಮ ಸಂಸ್ಕೃತಿ, ನವರೂಪಗಳ ಸಾಂಕೇತಿಕ ಪರಿಚಯ ಮತ್ತು ಅವುಗಳನ್ನು ಈ ಆಧುನಿಕ ಯುಗದಲ್ಲಿ ಹೇಗೆ ಮತ್ತು ಏಕೆ ಅವಶ್ಯವಾಗಿ ನಮ್ಮ ಜೀವನಶೈಲಿಯಲ್ಲಿ ಅಳವಡಿಸಿಕೊಳ್ಳಬೇಕಿದೆ ಎಂಬುದನ್ನು ತಿಳಿಯೋಣ.

ಮೊದಲ ದಿನ: ನವದುರ್ಗೆಯರಲ್ಲಿ ಮೊದಲನೆಯವಳು ‘ಶೈಲಪುತ್ರಿ’. ಯಾವುದೇ ಜೀವ ಜನಿಸಿದಾಗ ಮೊದಲ ಸಂಬಂಧ ಏರ್ಪಡುವುದೇ ಹಡೆದವರೊಂದಿಗೆ. ಮನೆಯಲ್ಲಿ ಮಕ್ಕಳ ಮುಗ್ಧತೆಗೆ ಧಕ್ಕೆ ಬಾರದ ರೀತಿ ಅವರ ಲಾಲನೆ ಪಾಲನೆ ಮತ್ತು ಮೂಲ ಶಿಕ್ಷಣಕ್ಕೆ ಅಡಿಪಾಯ ಹಾಕುವುದು ಹೆತ್ತವರ ಕರ್ತವ್ಯ. ಶೈಲಪುತ್ರಿ ದೇವಿಯು ಪರ್ವತರಾಜನ ಮಗಳಾಗಿದ್ದು, ಗೂಳಿಯ ಮೇಲೆ ಸವಾರಿ ಮಾಡುತ್ತಾ ಕೈಯಲ್ಲಿ ತ್ರಿಶೂಲ ಹಿಡಿದಿರುತ್ತಾಳೆ. ಅಂದು ಮಗಳು ಜನಿಸಿದಾಗ ಆ ತಾಯಿಯ ರೂಪವೆಂದು ತಿಳಿದು ಅವಳನ್ನು ಸ್ವಾಗತಿಸೋಣ.

ಎರಡನೇ ದಿನ: ಭಕ್ತರು ನವದುರ್ಗೆಯರ ಎರಡನೇ ರೂಪವಾದ ಬ್ರಹ್ಮಚಾರಿಣಿಯನ್ನು ಪೂಜಿಸುತ್ತಾರೆ. ಅವಳು ತಪಸ್ಸು, ಭಕ್ತಿ ಮತ್ತು ಆಧ್ಯಾತ್ಮಿಕ ಶಕ್ತಿಯನ್ನು ಪ್ರತಿನಿಧಿಸುತ್ತಾಳೆ. ಬ್ರಹ್ಮಚಾರಿಣಿಯನ್ನು ಪೂಜಿಸುವುದರಿಂದ ಜೀವನದಲ್ಲಿ ಬುದ್ಧಿವಂತಿಕೆ, ದೃಢಸಂಕಲ್ಪ ಮತ್ತು ಶಾಂತಿ ದೊರೆಯುತ್ತದೆ. ಈ ರೂಪದಲ್ಲಿ ತಾಯಿ ಯಾವುದೇ ಅಸ್ತ್ರವನ್ನು ಹಿಡಿದಿರುವುದಿಲ್ಲ ಹಾಗೂ ಯಾವುದೇ ವಾಹನದಲ್ಲಿ ಸವಾರಿ ಮಾಡುತ್ತಿರುವುದಿಲ್ಲ. ಅವಳು ವಿದ್ಯಾರ್ಥಿನಿಯಾಗಿ ವಿದ್ಯಾಕಾಂಕ್ಷಿ ಆಗಿರುತ್ತಾಳೆ. ಕಲಿಯುವ ಮತ್ತು ಬೆಳೆಯುವ ಮನೋಭಾವ ಹೊಂದಿರುತ್ತಾಳೆ. ಮನೆಯ ಮಕ್ಕಳಿಗೆ ಉತ್ತಮ ಶಿಕ್ಷಣ ಮತ್ತು ಜೀವನ ಮೌಲ್ಯಗಳನ್ನು ಕಲಿಸುವ ಹೊಣೆ ಪೋಷಕರ ಮೇಲಿರುತ್ತದೆ.

ಮೂರನೇ ದಿನ: ಚಂದ್ರಘಂಟಾ ದೇವಿಯ ರೂಪದಲ್ಲಿ ಕಾಣಿಸಿಕೊಳ್ಳುವ ತಾಯಿ, ಬಾಲಚಂದ್ರನನ್ನು ಕೈಯಲ್ಲಿ ಹಿಡಿದು ಮುತ್ತೈದೆಯ ಲಕ್ಷಣದಲ್ಲಿ ಕಾಣಿಸಿಕೊಳ್ಳುತ್ತಾಳೆ. ಸ್ವರ್ಣದ ಬಣ್ಣವನ್ನು ಹೊಂದಿದ ಮೈಬಣ್ಣದಲ್ಲಿ ಶೋಭಾಯಮಾನವಾಗಿ ಕಂಗೊಳಿಸುತ್ತಿರುತ್ತಾಳೆ. ತಾಯಿ ಈ ಅವತಾರದಲ್ಲಿ ಶಿವನೊಂದಿಗೆ ಸಂಸಾರ ಹೂಡುತ್ತಾಳೆ ಎಂಬ ನಂಬಿಕೆ ಇದೆ.

ಹೆಣ್ಣುಮಕ್ಕಳು ಪ್ರಪಂಚದಲ್ಲಿ ಯಾವುದೇ ರೀತಿಯ ಸವಾಲುಗಳಿಗೆ ಹೆದರಬೇಕಿಲ್ಲ, ಚಂದ್ರಘಂಟಾ ದೇವಿಯ ಕೃಪೆಯಿಂದ ಸಮಸ್ಯೆಗಳಿಗೆ ಪರಿಹಾರ ಹುಡುಕಲು ಸಹಾಯವಾಗುತ್ತದೆ ಎಂಬುದು ಪ್ರತೀತಿ. ಮಕ್ಕಳು ಇದನ್ನರಿತು ಹಿರಿಯರ ಸಲಹೆಗಳು ಮತ್ತು ಮಾರ್ಗದರ್ಶನವನ್ನು ಸದಾ ಪಾಲಿಸಬೇಕು.

ನಾಲ್ಕನೇ ದಿನ: ಕೂಷ್ಮಾಂಡ ದೇವಿಯು ನಾಲ್ಕನೇ ಅವತಾರವಾಗಿದ್ದು, ತನ್ನ ನಗುವಿನಿಂದ ಪ್ರಪಂಚವನ್ನೇ ಸೃಷ್ಟಿಸಿದಳೆಂದು ನಂಬಲಾಗಿದೆ. ಎಂಟು ತೋಳುಗಳಿಂದ ದೈತ್ಯ ರೂಪವನ್ನು ತೋರುವ ಕೂಷ್ಮಾಂಡ ದೇವಿಯನ್ನು ಪೂಜಿಸುವುದರಿಂದ ಎಲ್ಲಾ ತೊಂದರೆಗಳು ದೂರವಾಗುತ್ತವೆ ಮತ್ತು ಸಂತೋಷ, ಸಂಪತ್ತು ದೊರೆಯುತ್ತವೆ ಎನ್ನುವ ನಂಬಿಕೆಯಿದೆ. ದುರ್ಗಾದೇವಿಯ ಕೂಷ್ಮಾಂಡ ರೂಪವು ವಿಶಿಷ್ಟವಾಗಿದ್ದು, ಅವಳು 8 ತೋಳುಗಳನ್ನು ಹೊಂದಿದ್ದಾಳೆ ಮತ್ತು ಆಕೆ ತನ್ನ ಕೈಯಲ್ಲಿ ಜಪಮಾಲೆಯನ್ನು ಹಿಡಿದು, ಸಿಂಹದ ಮೇಲೆ ಸವಾರಿ ಮಾಡಿಕೊಂಡು ಬರುತ್ತಾಳೆ.

ಐದನೇ ದಿನ: ಸ್ಕಂದ ಮಾತೆಯ ಅವತಾರವು ದೇವಿಯ 5ನೇ ಅವತಾರ. ಪಂಚಮಿ ತಿಥಿಯಲ್ಲಿ ಬರುವುದು. ಕಾರ್ತಿಕೇಯ ಅಥವಾ ಸ್ಕಂದ ಮಾತೆ ಎಂದು ಸಹ ಪರಿಗಣಿಸಲಾಗುವುದು. ಈ ಅವತಾರದಲ್ಲಿ ದೇವಿಯು ಸಿಂಹದ ಮೇಲೆ ಕುಳಿತು, ತನ್ನ ಆರು ಮುಖದ ಮಗುವನ್ನು ತೊಡೆಯ ಮೇಲೆ ಕೂರಿಸಿಕೊಂಡಿರುತ್ತಾಳೆ. ತಾಯಿಯ ಈ ಅವತಾರವು ಹೆಚ್ಚು ಶಕ್ತಿಯುತವಾದದ್ದು ಎನ್ನಲಾಗುತ್ತದೆ. ಕರುಣಾಮಯಿಯಾಗಿ ತಾಯಿ ಕಾಣಿಸಿಕೊಳ್ಳುತ್ತಾಳೆ. ನಂತರದ ಅವತಾರಗಳಲ್ಲಿ ತಾಯಿಯು ಸಮಾಜದ ಅಂಧಕಾರವನ್ನು ಅಡಗಿಸುತ್ತಾ, ಪ್ರತಿ ಮನುಷ್ಯನೂ ಆಂತರಿಕ ಪಯಣದಲ್ಲಿ ಉನ್ನತಿಯ ಹಾದಿಗೆ ಹೇಗೆ ಪ್ರಯತ್ನಿಸಬೇಕೆಂದು ತಿಳಿಸಿಕೊಡುತ್ತಾಳೆ.

ಆರನೇ ದಿನ: ಇದನ್ನು ಕಾತ್ಯಾಯಿನಿ ದೇವಿ ಎಂದು ಕರೆಯಲಾಗುವ ದುರ್ಗಾದೇವಿಯ ಉಗ್ರ ಅವತಾರಕ್ಕೆ ಸಮರ್ಪಿಸಲಾಗಿದೆ. ಸಿಂಹದ ಮೇಲೆ ಸವಾರಿ ಮಾಡುವ ಮತ್ತು ಕಮಲದ ಹೂವು, ಖಡ್ಗ, ಶಿವನ ತ್ರಿಶೂಲ ಸೇರಿದಂತೆ ಬಹು ಆಯುಧಗಳನ್ನು ತನ್ನ ಕೈಗಳಲ್ಲಿ ಹಿಡಿದಿರುವ ಮಹಿಷಾಸುರ ಮರ್ದಿನಿಯನ್ನು ಷಷ್ಠಿಯಂದು, ಅಂದರೆ ನವರಾತ್ರಿ ಹಬ್ಬದ 6ನೇ ದಿನದಂದು ಪೂಜಿಸಲಾಗುತ್ತದೆ. ಪ್ರತಿಯೊಬ್ಬರೂ ಹೇಗೆ ತಮ್ಮ ವಿವೇಚನೆಯನ್ನು ಬಳಸಿಕೊಂಡು ಆತ್ಮವಿಶ್ವಾಸದಿಂದ ನಕಾರಾತ್ಮಕ ಶಕ್ತಿಗಳ ವಿರುದ್ಧ ಹೋರಾಡಬೇಕು ಎಂಬುದು ತಾಯಿಯ ಈ ಅವತಾರದಿಂದ ತಿಳಿಯುತ್ತದೆ. ಸಮಸ್ಯೆಗಳನ್ನು ನಿವಾರಿಸಿ ಸ್ವಯಂರಕ್ಷಣೆ ಮಾಡಿಕೊಳ್ಳುವುದು ಹೇಗೆ ಎಂಬುದನ್ನು ತಿಳಿಯಬಹುದಾಗಿದೆ.



ಬ್ರಹ್ಮಚಾರಿಣಿ

ಏಳನೇ ದಿನ: ಕಾಳರಾತ್ರಿ ದೇವಿಯ ಆರಾಧನೆ ನಡೆಯುತ್ತದೆ. ದುರ್ಗಾ ದೇವಿಯ 7ನೇ ರೂಪವಾದ ಕಾಳರಾತ್ರಿಯು ಮೂರು ಭಯಾನಕ ಕಣ್ಣುಗಳನ್ನು ಮತ್ತು ನಾಲ್ಕು ಕೈಗಳನ್ನು ಹೊಂದಿದ್ದಾಳೆ. ಈಕೆಯ ಮೇಲಿನ ಬಲಗೈ ವರದಾ ಮುದ್ರೆಯಲ್ಲಿದೆ ಮತ್ತು ಕೆಳಗಿನ ಬಲಗೈ ಅಭಯ ಮುದ್ರೆಯಲ್ಲಿದೆ. ಎಡಭಾಗದ ಒಂದು ಕೈಯಲ್ಲಿ ಕಬ್ಬಿಣದ ಮುಳ್ಳುಗಳಂತಿರುವ ಆಯುಧವನ್ನು ಮತ್ತು ಇನ್ನೊಂದು ಕೈಯಲ್ಲಿ ಖಡ್ಗವನ್ನು ಹಿಡಿದುಕೊಂಡು ಕತ್ತೆಯ ಮೇಲೆ ಸವಾರಿ ಮಾಡುತ್ತಾಳೆ. ಘೋರ ಕಪ್ಪು ಮೈಬಣ್ಣವನ್ನು ಹೊಂದಿರುವ ಈಕೆ, ಬಿಚ್ಚಿದ ದಟ್ಟ ತಲೆಕೂದಲು, ಕೊರಳಲ್ಲಿ ರುಂಡಮಾಲೆ, ಬಾಯಲ್ಲಿ ಉರಿಯುವ ಬೆಂಕಿಯನ್ನು ಹೊಂದಿದ್ದಾಳೆ. ಪುರಾಣಗಳ ಪ್ರಕಾರ, ಕಾಳರಾತ್ರಿ ದೇವಿಯು ಶುಂಭ, ನಿಶುಂಭರನ್ನು ಸಂಹಾರ ಮಾಡಲು ಈ ರೂಪವನ್ನು ಹೊಂದಿದಳು ಎಂದು ಹೇಳಲಾಗುತ್ತದೆ. ತಾಯಿಯ ಈ ರೂಪ ಕೊಂಚ ಭಿನ್ನವಾಗಿ ಇರುತ್ತದೆ. ಭಕ್ತರಿಗೆ ಅಭಯ ನೀಡಿ ಶುಭಂಕರಿ ಆಗಿರುತ್ತಾಳೆ.

ಎಂಟನೇ ದಿನ: ಮುಂದೆ ಅಷ್ಟಮಿಯಂದು ಮಹಾಗೌರಿಯಾಗಿ, ವಿಶೇಷವಾಗಿ ಆ ಸೌಮ್ಯ ರೂಪದಲ್ಲಿ ತಾಯಿಯ ಆಗಮನ. ಈ ದಿನ ಕನ್ಯಾ ಪೂಜೆಗೆ ಬಹಳ ಮಹತ್ವವಿದೆ. ಮಹಾಗೌರಿಯ ಪೂಜೆಯಿಂದ ಸಂತೋಷ ಮತ್ತು ಅದೃಷ್ಟ ಪ್ರಾಪ್ತಿಯಾಗುತ್ತದೆ ಎಂಬ ನಂಬಿಕೆ ಇದೆ. ಬಿಳಿ ಎತ್ತಿನ ಮೇಲೆ ಮಹಾಗೌರಿಯ ಸವಾರಿ.

ಒಂಬತ್ತನೇ ದಿನ: ಇದನ್ನು ಮಹಾನವಮಿ ಎಂದು ಆಚರಿಸಲಾಗುತ್ತದೆ. ಈ ದಿನ ನವದುರ್ಗೆಯ ಒಂಬತ್ತನೇ ಅಥವಾ ಕೊನೆಯ ರೂಪವಾದ ಸಿದ್ಧಿಧಾತ್ರಿ ದೇವಿಯನ್ನು ಪೂಜಿಸಲಾಗುತ್ತದೆ. ತಾಯಿ ಸಿದ್ಧಿಧಾತ್ರಿಯು ಪರಿಪೂರ್ಣತೆ, ಎಲ್ಲಾ ರೀತಿಯ ಶಕ್ತಿ, ವೈಭವ ಮತ್ತು ಮಹಿಮೆಯ ಮೂಲವಾಗಿದ್ದಾಳೆ. ಈ ದೇವಿಯು ತ್ರಿಮೂರ್ತಿಗಳಾದ ಬ್ರಹ್ಮ, ವಿಷ್ಣು, ಮಹೇಶ್ವರರಿಗೆ ಆಧ್ಯಾತ್ಮಿಕ ವೈಭವ ಹಾಗೂ ಪರಿಪೂರ್ಣತೆಯನ್ನು ನೀಡುವಳು.

ಪುರಾಣ ಗ್ರಂಥಗಳ ಪ್ರಕಾರ, ಜಗತ್ತಿನ ಎಂಟು ಸಿದ್ಧಿಗಳೆಂದರೆ ಅಣಿಮಾ, ಮಹಿಮಾ, ಗರಿಮಾ, ಲಘಿಮಾ, ಪ್ರಾಪ್ತಿ, ಪ್ರಾಕಾಮ್ಯ, ಈಶಿತ್ವ, ವಶಿತ್ವ. ನವದುರ್ಗೆಯರಲ್ಲಿ ತಾಯಿ ಸಿದ್ಧಿಧಾತ್ರಿಯು ಈ ಎಲ್ಲ ಅದ್ಭುತ ಅಂಶಗಳನ್ನೂ ಹೊಂದಿದ್ದಾಳೆ ಮತ್ತು ಅವಳ ಭಕ್ತರಿಗೆ ಎಲ್ಲವನ್ನೂ ಕರುಣಿಸುತ್ತಾಳೆ ಎಂಬ ನಂಬಿಕೆಯಿಂದ ಅವಳಲ್ಲಿ ಮೊರೆಹೋಗುತ್ತಾರೆ.

ಹಬ್ಬಗಳ ಆಚರಣೆಗಳು ಬರೀ ಆಚರಣೆಗಳಾಗಿಯೇ ಉಳಿಯಬಾರದು. ಅವುಗಳ ಮೂಲ ಉದ್ದೇಶಗಳು ಮತ್ತು ಆಶಯಗಳಿಗೆ ಒತ್ತಾಸೆಯಾಗಿ ಅವುಗಳನ್ನು ಅಳವಡಿಸಿಕೊಳ್ಳೋಣ.

ನವರಾತ್ರಿ ಹಬ್ಬದ ಪ್ರಯುಕ್ತ ನಗರದ ಆರ್.ವಿ.ರಸ್ತೆಯಲ್ಲಿ ದುರ್ಗಾ ಮೂರ್ತಿಗೆ ಕಲಾವಿದರೊಬ್ಬರು ಅಂತಿಮ ಸ್ಪರ್ಶ ನೀಡಿದರು ಚಿತ್ರ–ಎಂ.ಎಸ್.ಮಂಜುನಾಥ್

ಪ್ರಜಾವಾಣಿ
ಪ್ರಜಾಪ್ಲಸ್
ಮನರಂಜನೆ | ಜಾಹೀರಾತು
ಪ್ರೋತ್ಸಾಹ | ಉದ್ಯಮ ಅಭಿವೃದ್ಧಿ

ಹುಲಿವೇಷದ ಸೆಲ್ಫಿ

ದಾವಣಗೆರೆಯ ಬಕ್ಕೇಶ್ವರ ಕಲ್ಯಾಣಮಂಟಪದಲ್ಲಿ ನಡೆದ 'ಆಕಾಂಕ್ಷ-2025' ಉದ್ಘಾಟನಾ ಕಾರ್ಯಕ್ರಮದಲ್ಲಿ ಹುಲಿವೇಷ ತೊಟ್ಟ ವಿದ್ಯಾರ್ಥಿಯೊಂದಿಗೆ ಇತರ ವಿದ್ಯಾರ್ಥಿಗಳು ಸೆಲ್ಫಿ ತೆಗೆಸಿಕೊಂಡರು

ಶನಿವಾರ • ಸೆಪ್ಟೆಂಬರ್ 20, 2025

ಇದೇ 22ಕ್ಕೆ ಕಾಂತಾರ ಟ್ರೇಲರ್

ರಿಷಬ್ ಶೆಟ್ಟಿ ಅವರು ಕಥೆ, ಚಿತ್ರಕಥೆ ಬರೆದು ನಿರ್ದೇಶಿಸಿ, ನಟಿಸಿರುವ 'ಕಾಂತಾರ ಅಧ್ಯಾಯ 1' ಚಿತ್ರದ ಬಿಡುಗಡೆ ಹತ್ತಿರದಲ್ಲಿದ್ದರೂ ಚಿತ್ರದ ಪ್ರಚಾರ ತುಣುಕುಗಳು ಈತನಕ ಹೊರಬಂದಿರಲಿಲ್ಲ. 'ಕಾಂತಾರ'ದ ಜಗತ್ತು ಪರಿಚಯಿಸುವ ಮೇಕಿಂಗ್ ವಿಡಿಯೊವನ್ನು ಮಾತ್ರ ಚಿತ್ರತಂಡ ಈ ಹಿಂದೆ ಬಿಡುಗಡೆಗೊಳಿಸಿತ್ತು. ಹಾಡುಗಳು, ಟ್ರೇಲರ್ ಯಾವಾಗ ಎಂದು ಕೇಳುತ್ತಿದ್ದವರಿಗೆ ಚಿತ್ರತಂಡ ಉತ್ತರ ನೀಡಿದೆ. ಸೆ.22 ರಂದು ಚಿತ್ರದ ಟ್ರೇಲರ್ ಬಿಡುಗಡೆ ಮಾಡುವುದಾಗಿ ಚಿತ್ರತಂಡ ಘೋಷಿಸಿದೆ.

'ಕಾಂತಾರ ಅಧ್ಯಾಯ 1' ಚಿತ್ರದ ಟ್ರೇಲರ್ ಸೆಪ್ಟೆಂಬರ್ 22, 2025ರಂದು ಮಧ್ಯಾಹ್ನ 12:40ಕ್ಕೆ ಅಧಿಕೃತವಾಗಿ ಬಿಡುಗಡೆಯಾಗಲಿದೆ ಎಂದು ಹೊಂಬಾಳೆ ಫಿಲ್ಮ್ಸ್ ಘೋಷಿಸಿದೆ. ಈ ಚಿತ್ರವು ಅಕ್ಟೋಬರ್ 2ರಂದು ವಿಶ್ವದಾದ್ಯಂತ ತೆರೆ ಕಾಣಲಿದ್ದು, ಅಮೆರಿಕ ಸೇರಿದಂತೆ ವಿದೇಶಿ ಚಿತ್ರಮಂದಿರಗಳಲ್ಲಿ ಮುಂಗಡ ಟಿಕೆಟ್‌ಗಳು ಈಗಾಗಲೇ ಮಾರಾಟಗೊಂಡಿವೆ.

'ಕರಾವಳಿ ಕರ್ನಾಟಕದ ಅತೀಂದ್ರಿಯ ಲೋಕವನ್ನು ಅನಾವರಣಗೊಳಿಸುವ ಈ ಚಿತ್ರವು ಪುರಾಣ, ಭಕ್ತಿ ಮತ್ತು ಅದೃಷ್ಟದ ನಡುವಿನ ಪೌರಾಣಿಕ ಕಥೆಯನ್ನು ಹೇಳುತ್ತದೆ' ಎಂದಿದೆ ಚಿತ್ರತಂಡ. 'ರಿಷಬ್ ಅವರು ನಾಗಾಸಾಧು ಹಾಗೂ ದೈವವನ್ನು ತುಳುನಾಡಿಗೆ ಪರಿಚಯಿಸುವ ರಾಜನ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ' ಎನ್ನಲಾಗಿದೆ.

ರಿಷಬ್ ಶೆಟ್ಟಿ, ಜೊತೆಗೆ ರುಕ್ಮಿಣಿ ವಸಂತ್, ಗುಲ್ಶನ್ ದೇವಯ್ಯ ಅವರು ಚಿತ್ರದ ಪ್ರಮುಖ ಪಾತ್ರಗಳಲ್ಲಿ ಕಾಣಿಸಿಕೊಂಡಿದ್ದಾರೆ. ಬಿ.ಅಜನೀಶ್ ಲೋಕನಾಥ್ ಸಂಗೀತ, ಅರವಿಂದ್ ಎಸ್. ಕಶ್ಯಪ್ ಛಾಯಾಚಿತ್ರಗ್ರಹಣವಿದೆ.

ರಿಷಬ್ ಶೆಟ್ಟಿ

ಶ್ರೀದೇವಿಗೆ ಕಮಲ್ ಕಥೆಯೇ ಶತ್ರು!

• ವಿನಾಯಕ ಕೆ.ಎಸ್.

ಆಕೆ ಶ್ರೀದೇವಿ. ಎಪ್ಪತ್ತು ಸಾವಿರ ರೂಪಾಯಿ ಸಂಪಾದನೆಗಾಗಿ ವೇಶ್ಯಾವಾಟಿಕೆಗೆ ಬರುತ್ತಾಳೆ. ಅಲ್ಲಿ ದಲ್ಲಾಳಿ 'ಮಾಮು' ಪರಿಚಯವಾಗುತ್ತದೆ. ಆತನಿಂದ ಗಿರಾಕಿಗಳನ್ನು ಪಡೆಯುವ ಶ್ರೀದೇವಿ ಅಂದೇ ಕೊಲೆಯಾಗುತ್ತಾಳೆ. ಶ್ರೀದೇವಿ ಕೊಲೆಯಿಂದಲೇ ಚಿತ್ರ ಪ್ರಾರಂಭವಾಗುತ್ತದೆ. ಕೊಲೆ ಮಾಡಿದ್ದು ಯಾರು ಎಂಬ ಹುಡುಕಾಟವೇ ಇಡೀ ಚಿತ್ರದ ಕಥೆ. ಇದರ ಜೊತೆಜೊತೆಗೆ ಶ್ರೀದೇವಿಯನ್ನು ಭೇಟಿಯಾಗಲು ಬರುವ ಕಮಲ್ ಕಥೆಯೂ ತೆರೆದುಕೊಳ್ಳುತ್ತದೆ. ಆದಾಗ್ಯೂ ಸಸ್ಪೆನ್ಸ್, ಥ್ರಿಲ್ಲರ್ ಅಥವಾ ಮರ್ಡರ್ ಮಿಸ್ಟ್ರಿ ಸಿನಿಮಾದಲ್ಲಿ ಇರಬೇಕಿದ್ದ ಕುತೂಹಲ ಇಲ್ಲಿ ಕಾಣುವುದಿಲ್ಲ.

ಕೊಲೆಯಾದ ದಿನ ಶ್ರೀದೇವಿಯನ್ನು ಭೇಟಿಯಾಗುವುದು ಆರು ಗಿರಾಕಿಗಳು. ಅವರಲ್ಲಿ ಯಾರೋ ಒಬ್ಬ ಕೊಲೆಗಾರ ಎಂಬ ಅನುಮಾನದೊಂದಿಗೆ ಪೊಲೀಸರು ಪ್ರಕರಣದ ತನಿಖೆ ಪ್ರಾರಂಭಿಸುತ್ತಾರೆ. ಇಲ್ಲಿ ಬರುವ ಆರು ಪಾತ್ರಗಳು ಭಿನ್ನವಾಗಿ, ಮಜವಾಗಿವೆ. ಪ್ರತಿ ಪಾತ್ರಕ್ಕೂ ಅದರದ್ದೇ ಆದ ವೈಶಿಷ್ಟ್ಯವಿದೆ. ಜೊತೆಗೆ ಈ ಪಾತ್ರಗಳು ನಮ್ಮ ಸಮಾಜದ ಪ್ರತಿಬಿಂಬಗಳಂತಿವೆ. ಸಿನಿಮಾ ನಿರ್ದೇಶಕನಾಗಿ ಅಲ್ಲಿಗೆ ಬರುವ ಮೊದಲ ಗಿರಾಕಿಯೇ ಕಮಲ್. ಆತನದ್ದು ಬೇರೆಯೇ ಕಥೆ. ಅದರ ಜೊತೆಗೆ ಶ್ರೀದೇವಿ ಬದುಕು-ಬವಣೆ ತೆರೆದುಕೊಳ್ಳುತ್ತ ಹೋಗುತ್ತದೆ.

ಕಮಲ್ ಪಾತ್ರದ ಮೂಲಕ ಸೋತ ಸಿನಿಮಾದ ನಿರ್ದೇಶಕನೊಬ್ಬನ ಕಥೆಯನ್ನು ಹೇಳುತ್ತ ಹೋಗುತ್ತಾರೆ. ಕಮಲ್ ಮತ್ತು ಶ್ರೀದೇವಿಯ ಸ್ನೇಹ ಗಟ್ಟಿಯಾಗುತ್ತ, ಸಣ್ಣ ಪ್ರೀತಿಯ ಪಯಣವೂ ಇಲ್ಲಿ ಆಗುತ್ತದೆ. ಚಿತ್ರದಲ್ಲಿ ಕಮಲ್ ಕಥೆ ಇಲ್ಲದಿದ್ದರೆ ಶ್ರೀದೇವಿ ಕಥೆ ಅಪೂರ್ಣವಾಗುತ್ತಿತ್ತು ಎನ್ನುವಂಥ ಸನ್ನಿವೇಶಗಳಿಲ್ಲ. ಹೀಗಾಗಿ ಈ ಕಥೆ ಸಾಕಷ್ಟು ಕಡೆ ಮುಖ್ಯ ಕಥೆಗೆ ಅಪ್ರಸ್ತುತ ಎನ್ನಿಸುತ್ತದೆ. ಗಿರಾಕಿಯಾಗಿ ಬಂದ ಕಮಲ್ ಶ್ರೀದೇವಿಯನ್ನು ಕೊಲೆ ಮಾಡಿರಬಹುದಾ ಎಂಬ ಅನುಮಾನವನ್ನು ಮೂಡಿಸಲು ನಿರ್ದೇಶಕರು ಯತ್ನಿಸಿದ್ದಾರೆ. ಆದರೆ ಅದು ಇನ್ನಷ್ಟು ಗಟ್ಟಿಯಾಗಿದ್ದರೆ, ಕೊಲೆಯ ಸುತ್ತದ ತನಿಖೆ, ಸಾಕ್ಷ್ಯಗಳ ಮೇಲೆ ಇನ್ನಷ್ಟು ಗಮನ ನೀಡಿದ್ದರೆ ಚಿತ್ರ ಸ್ವಲ್ಪ ಕುತೂಹಲ ಮೂಡಿಸುತ್ತಿತ್ತು. ಕೊಲೆಗಿಂತ ಆರೋಪಿಗಳ ಕಥೆಯೇ ಹೆಚ್ಚಾಗಿ ಯಾರೋ ಒಬ್ಬರು ಕೊಲೆ ಮಾಡಿರುತ್ತಾರೆ ಎಂಬ ಭಾವನೆ ಮೂಡಿಸುತ್ತದೆ.

ಸಂಗೀತಾ ಭಟ್

ಚಿತ್ರ: ಕಮಲ್ ಶ್ರೀದೇವಿ

- ನಿರ್ಮಾಣ: ಬಿ.ಎ.ಧನಲಕ್ಷ್ಮಿ, ರಾಜವರ್ಧನ್
- ನಿರ್ದೇಶನ: ಸುನೀಲ್ ವಿ.ಎ
- ತಾರಾಗಣ: ಸಚಿನ್ ಚಲುವರಾಯಸ್ವಾಮಿ, ಸಂಗೀತಾ ಭಟ್, ಕಿಶೋರ್, ರಮೇಶ್ ಇಂದಿರಾ, ಮತ್ತಿತರರು

ಇಡೀ ಚಿತ್ರದ ಹೈಲೈಟ್ ರಮೇಶ ಇಂದಿರಾ. ನೀರನ್ನು ಯಾವ ಪಾತ್ರೆಗೆ ಹಾಕಿದರೂ ಪಾತ್ರೆಯ ಆಕಾರ ತಾಳಬಲ್ಲದು ಎಂಬಂತಿದೆ ಅವರ ನಟನೆ. ಮಾರುಕಟ್ಟೆಯಲ್ಲಿ ವೇಶ್ಯಾವಾಟಿಕೆಗೆ ಗಿರಾಕಿಗಳನ್ನು ಹುಡುಕಿಕೊಡುವ ದಲ್ಲಾಳಿಯಾಗಿ ಅದ್ಭುತವಾಗಿ ನಟಿಸಿದ್ದಾರೆ. ತಮ್ಮ ಹಾವಭಾವಗಳಿಂದ ಸಿನಿಮಾ ಮುಗಿದ ನಂತರವೂ ಅವರು ನೆನಪಿನಲ್ಲಿ ಉಳಿಯುತ್ತಾರೆ. ಶ್ರೀದೇವಿಯಾಗಿ ಸಂಗೀತಾ ಭಟ್ ಕೂಡ ತಮ್ಮ ಪಾತ್ರಕ್ಕೆ ನ್ಯಾಯ ಒದಗಿಸಿದ್ದಾರೆ. ಮಂತ್ರವಾದಿಯಾಗಿ, ಗಿರಾಕಿಗಳಲ್ಲಿ ಒಬ್ಬರಾಗಿ ಮಿತ್ರ ಕೂಡ ಗಮನ ಸೆಳೆಯುತ್ತಾರೆ. ಕಿಶೋರ್‌ಗೆ ಇಲ್ಲಿ ಪೊಲೀಸ್ ಪಾತ್ರ. ಅವರು ತಮ್ಮ ಕೆಲಸವನ್ನು ಅಚ್ಚುಕಟ್ಟಾಗಿ ನಿಭಾಯಿಸಿದ್ದಾರೆ. ಸಚಿನ್ ಚಲುವರಾಯಸ್ವಾಮಿ ನಟನೆಗೆ ಇನ್ನೂ ಸ್ವಲ್ಪ ಶ್ರಮ ಹಾಕುವ ಅಗತ್ಯವಿತ್ತು. ಕೆಲ ದ್ವಂದ್ವಾರ್ಥದ ಮಾತುಗಳನ್ನು ಹೊರತುಪಡಿಸಿ ಒಟ್ಟಾರೆ ಸಂಭಾಷಣೆ ಗಮನ ಸೆಳೆಯುವಂತಿದೆ.

ಬಹುತೇಕ ಕಥೆ ನಡೆಯುವುದು ಲಾಡ್ಜ್ ಮತ್ತು ಪೊಲೀಸ್ ಠಾಣೆಯಲ್ಲಿ. ಆದಾಗ್ಯೂ ಛಾಯಾಚಿತ್ರಗ್ರಹಣ ಸೊಗಸಾಗಿದೆ. ಛಾಯಾಚಿತ್ರಗ್ರಾಹಕ ನಾಗೇಶ್ ಆಚಾರ್ಯ ಪ್ರತಿ ದೃಶ್ಯವನ್ನೂ ವರ್ಣಮಯವಾಗಿಸಿದ್ದಾರೆ. ಹಾಡುಗಳು ನೆನಪಿನಲ್ಲಿ ಉಳಿಯುವುದಿಲ್ಲ. ಆದರೆ ಹಿನ್ನೆಲೆ ಸಂಗೀತ ನಡೆಯುವ ಕಥೆಗೆ ಪೂರಕವಾಗಿದೆ. ಭಿನ್ನಕಥೆಯನ್ನು ಇಷ್ಟಪಡುವವರಿಗೆ ಸೂಕ್ತವಾದ ಸಿನಿಮಾವಿದು. ವೇಶ್ಯೆಯ ಕುರಿತಾಗಿ ಸಮಾಜಕ್ಕೆ ಸಾಕಷ್ಟು ಕಲ್ಪನೆಗಳಿರುತ್ತವೆ. ಅವರಿಗೆ ಒಂದು ಗಟ್ಟಿಯಾದ ಹಿನ್ನೆಲೆ ಕಥೆ ಇರುತ್ತದೆ. ಚಿತ್ರಕಥೆಯಲ್ಲಿ ಶ್ರೀದೇವಿ ಹಿನ್ನೆಲೆಯನ್ನು ಇನ್ನಷ್ಟು ಗಟ್ಟಿಯಾಗಿ, ಕಾಡುವಂತೆ ಹೇಳುವ ಹಾಗೂ ಸಾಕಷ್ಟು ಕಡೆ ತರ್ಕವಿಲ್ಲದ ಕಮಲ್ ಕಥೆಯನ್ನು ಸಿನಿಮಾದ ಮುಖ್ಯ ಕಥೆಯೊಂದಿಗೆ ಪ್ರಭಾವಶಾಲಿಯಾಗಿ ಬೆಸೆಯುವ ಅವಕಾಶ ನಿರ್ದೇಶಕರಿಗಿತ್ತು.

ನೋಡಬಹುದಾದ ಸಿನಿಮಾ

ಯಶ್

ಅಂತಿಮ ಹಂತದಲ್ಲಿ 'ಟಾಕ್ಸಿಕ್'

ಯಶ್ ಅಭಿನಯದ 'ಟಾಕ್ಸಿಕ್' ಚಿತ್ರದ ಮುಂಬೈ ಭಾಗದ ಚಿತ್ರೀಕರಣ ಇತ್ತೀಚೆಗಷ್ಟೇ ಪೂರ್ಣಗೊಂಡಿದೆ. ಅಂತಿಮ ಹಂತದ ಚಿತ್ರೀಕರಣ ಬೆಂಗಳೂರಿನಲ್ಲಿ ನಡೆಯಲಿದೆ ಎಂದು ಚಿತ್ರತಂಡ ಹೇಳಿದೆ.

ಗೀತು ಮೋಹನ್‌ದಾಸ್ ನಿರ್ದೇಶನದ ಚಿತ್ರ ಕನ್ನಡ ಹಾಗೂ ಇಂಗ್ಲಿಷ್ ಭಾಷೆಗಳಲ್ಲಿ ಸಿದ್ಧಗೊಳ್ಳುತ್ತಿದೆ. 'ಮುಂಬೈ ನಗರದ ಅನೇಕ ಸ್ಥಳಗಳಲ್ಲಿ 45 ದಿನಗಳ ಕಾಲ ನಡೆದ ಚಿತ್ರೀಕರಣದಲ್ಲಿ ಸಾಹಸ ದೃಶ್ಯಗಳನ್ನು ಚಿತ್ರೀಕರಿಸಿದ್ದೇವೆ. ಇದರೊಂದಿಗೆ ಚಿತ್ರದ ಬಹುಪಾಲು ಚಿತ್ರೀಕರಣ ಮುಗಿದಂತಾಗಿದೆ. ಉಳಿದ ಭಾಗದ ಚಿತ್ರೀಕರಣ ಬೆಂಗಳೂರಿನಲ್ಲಿ ನಡೆಯಲಿದೆ. ಹಾಲಿವುಡ್ ಸಾಹಸ ನಿರ್ದೇಶಕ ಜೆಜೆ ಪೆರ್ರಿ ಸಾಹಸ ದೃಶ್ಯಗಳನ್ನು ನಿರ್ದೇಶಿಸಿದ್ದಾರೆ. ಇವರು 'ಫಾಸ್ಟ್ ಆ್ಯಂಡ್ ಫ್ಯೂರಿಯಸ್', 'ವಾರಿಯರ್' ಮುಂತಾದ ಸಿನಿಮಾಗಳಿಗೆ ಸಾಹಸ ನಿರ್ದೇಶಕರಾಗಿ ಕೆಲಸ ಮಾಡಿದ್ದರು' ಎಂದು ಚಿತ್ರತಂಡ ತಿಳಿಸಿದೆ.

ಕೆವಿಎನ್ ಪ್ರೊಡಕ್ಷನ್ ಬ್ಯಾನರ್‌ನಲ್ಲಿ ವೆಂಕಟ್ ಕೆ ನಾರಾಯಣ ಬಂಡವಾಳ ಹೂಡಿದ್ದಾರೆ. ಯಶ್ ಅವರ ಮಾನ್ಸ್ಟರ್ ಮೈಂಡ್ ಕ್ರಿಯೇಷನ್ಸ್ ಕೂಡ ಚಿತ್ರ ನಿರ್ಮಾಣದಲ್ಲಿ ಪಾಲು ಹೊಂದಿದೆ. 'ಗೋವಾದ ಡ್ರಗ್ಸ್ ಮಾಫಿಯಾ ಕಥೆ ಹೊಂದಿರುವ ಚಿತ್ರವಿದು' ಎಂದಿವೆ ಚಿತ್ರತಂಡದ ಮೂಲಗಳು. ಹಿಂದಿ, ತಮಿಳು, ತೆಲುಗು, ಮಲಯಾಳ ಸೇರಿದಂತೆ ಹಲವು ಭಾರತೀಯ ಹಾಗೂ ವಿದೇಶಿ ಭಾಷೆಗಳಲ್ಲಿ ಡಬ್ ಆಗಿ ಬಿಡುಗಡೆಗೊಳ್ಳಲಿದೆ.

ಬೃಹತ್ ಬಂಡವಾಳದಲ್ಲಿ ನಿರ್ಮಾಣಗೊಳ್ಳುತ್ತಿರುವ ಚಿತ್ರ 2026ರ ಮಾರ್ಚ್ 19ರಂದು ತೆರೆಕಾಣಲಿದೆ. ಕಿಯಾರಾ ಅಡ್ವಾಣಿ, ನಯನತಾರಾ, ಹುಮಾ ಖುರೇಷಿ, ತಾರಾ ಸುತಾರಿಯಾ ರುಕ್ಮಿಣಿ ವಸಂತ್ ಮುಂತಾದವರು ಚಿತ್ರದಲ್ಲಿದ್ದಾರೆ ಎನ್ನಲಾಗಿದೆ.

'ಗುಡ್ ಬ್ಯಾಡ್ ಅಗ್ಲಿ' ಸಿನಿಮಾ ನೆಟ್‌ಫ್ಲಿಕ್ಸ್‌ನಿಂದ ಹೊರಕ್ಕೆ

ಕಾಲಿವುಡ್ ನಟ ಅಜಿತ್ ಕುಮಾರ್ ಅಭಿನಯದ 'ಗುಡ್ ಬ್ಯಾಡ್ ಅಗ್ಲಿ' ಸಿನಿಮಾವನ್ನು ನ್ಯಾಯಾಲಯದ ಆದೇಶದ ಬೆನ್ನಲ್ಲೇ ನೆಟ್‌ಫ್ಲಿಕ್ಸ್‌ನಿಂದ ತೆಗೆದುಹಾಕಲಾಗಿದೆ.

ಅನುಮತಿಯಿಲ್ಲದೇ ತಮ್ಮ ಸಂಯೋಜನೆಯ ಮೂರು ಹಾಡುಗಳನ್ನು ಸಿನಿಮಾದಲ್ಲಿ ಬಳಸಿದ್ದರ ವಿರುದ್ಧ ಸಂಗೀತ ಸಂಯೋಜಕ ಇಳಯರಾಜ ಅವರು ಮದ್ರಾಸ್ ಹೈಕೋರ್ಟ್ ಮೆಟ್ಟಿಲೇರಿದ್ದರು. ಅರ್ಜಿ ಪುರಸ್ಕರಿಸಿದ ಕೋರ್ಟ್, ಹಾಡುಗಳನ್ನು ತೆಗೆದುಹಾಕದೇ ಸಿನಿಮಾ ಪ್ರದರ್ಶಿಸಬಾರದು ಎಂದು, ನಿರ್ಮಾಣ ಸಂಸ್ಥೆ ಮೈತ್ರಿ ಮೂವಿ ಮೇಕರ್ಸ್‌ಗೆ ಸೂಚನೆ ನೀಡಿತ್ತು.

ಏಕಾಏಕಿ ನೆಟ್‌ಫ್ಲಿಕ್ಸ್‌ನಿಂದ ಸಿನಿಮಾ ತೆಗೆದುಹಾಕಿರುವ ಬಗ್ಗೆ ಸಿನಿಪ್ರಿಯರು ಗಮನ ಸೆಳೆದಿದ್ದಾರೆ. ಸಿನಿಮಾ ಹೆಸರನ್ನು ಹುಡುಕಿದಾಗ, 'ನಮಗೆ ಈ ಸಿನಿಮಾ ಸಿಕ್ಕಿಲ್ಲ' ಎಂಬ ಸಂದೇಶ ಕಾಣಿಸಿಕೊಳ್ಳುತ್ತದೆ ಎಂದು ತಿಳಿಸಿದ್ದಾರೆ.

ಅಧಿಕ್ ರವಿಚಂದ್ರನ್ ನಿರ್ದೇಶನದ 'ಗುಡ್ ಬ್ಯಾಡ್ ಅಗ್ಲಿ' ಚಿತ್ರದಲ್ಲಿ ತ್ರಿಶಾ ಕೃಷ್ಣನ್, ಅರ್ಜುನ್ ದಾಸ್, ಪ್ರಭು, ಪ್ರಸನ್ನ ಮತ್ತು ಜಾಕಿ ಶ್ರಾಫ್ ಪ್ರಮುಖ ಪಾತ್ರಗಳಲ್ಲಿ ನಟಿಸಿದ್ದಾರೆ.



ಅಜಿತ್ ಕುಮಾರ್

ಏನಿದು ವಿವಾದ?

ಇದೇ ಏಪ್ರಿಲ್‌ನಲ್ಲಿ ಸಿನಿಮಾದ ನಿರ್ಮಾಪಕರಿಗೆ ಲೀಗಲ್ ನೋಟಿಸ್ ಕಳುಹಿಸಿದ್ದ ಇಳಯರಾಜ, ಅನುಮತಿಯಿಲ್ಲದೇ ಹಾಡುಗಳನ್ನು ಬಳಸಿದ್ದಕ್ಕಾಗಿ ₹ 5 ಕೋಟಿ ಪರಿಹಾರ ನೀಡುವಂತೆ ಕೇಳಿದ್ದರು. ತಕ್ಷಣವೇ ಸಿನಿಮಾದಿಂದ ಹಾಡುಗಳನ್ನು ತೆಗೆದುಹಾಕುವಂತೆ ಹೇಳಿದ್ದರು.

'ಒಟ್ಟಾ ರುಬಾ ಥರೇನ್', 'ಎನ್ ಜೋಡಿ ಮಂಜ ಕುರುವಿ' ಮತ್ತು 'ಇಲಮೈ ಇಧೋ ಇಧೋ' ಹಾಡುಗಳನ್ನು ಅನುಮತಿಯಿಲ್ಲದೆ ಬಳಸಲಾಗಿದೆ ಎಂಬುದು ಅವರ ಆರೋಪವಾಗಿದೆ.

ಅಪ್ಪನ ಹಾಡಿಗೆ ಪುಟಾಣಿ ಪರಿಯ ಡಾನ್ಸ್

ಸ್ಯಾಂಡಲ್‌ವುಡ್ ನಟ ಡಾರ್ಲಿಂಗ್ ಕೃಷ್ಣ ಹಾಗೂ ಮಿಲನಾ ನಾಗರಾಜ್ ಮಗಳು ಪರಿ ಅಪ್ಪನ ಹಾಡಿಗೆ ಮುದ್ದಾಗಿ ಡ್ಯಾನ್ಸ್ ಮಾಡಿದ್ದಾಳೆ. ಬೆಡ್ ಮೇಲೆ ಪುಟಾಣಿ ಪರಿ ಕುಣಿದು ಕುಪ್ಪಳಿಸಿದ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ.

ಮಗಳು ಪರಿ ಡಾನ್ಸ್ ಮಾಡುತ್ತಿರೋ ಮುದ್ದಾದ ವಿಡಿಯೊವನ್ನು ನಟ ಡಾರ್ಲಿಂಗ್ ಕೃಷ್ಣ ಹಾಗೂ ಮಿಲನಾ ನಾಗರಾಜ್ ಇನ್‌ಸ್ಟಾಗ್ರಾಮ್‌ನಲ್ಲಿ ಹಂಚಿಕೊಂಡಿದ್ದಾರೆ. ಡಾರ್ಲಿಂಗ್ ಕೃಷ್ಣ ನಟನೆಯ 'ಬ್ರ್ಯಾಟ್' ಸಿನಿಮಾದ 'ಗಂಗಿ ಗಂಗಿ..' ಸಾಂಗ್ ರಿಲೀಸ್ ಆಗಿದೆ.

ಇದೇ 'ಗಂಗಿ.. ಗಂಗಿ' ಹಾಡಿನಲ್ಲಿ ಅಪ್ಪನ ಡಾನ್ಸ್ ಅನ್ನು ಲ್ಯಾಪ್‌ಟಾಪ್‌ನಲ್ಲಿ ನೋಡುತ್ತಾ ಬೆಡ್ ಮೇಲೆ ಕುಣಿದಿದ್ದಾಳೆ. ಇತ್ತೀಚೆಗೆ ನಟ ಡಾರ್ಲಿಂಗ್ ಕೃಷ್ಣ ದಂಪತಿ ಮಗಳು ಪರಿಯ ಒಂದು ವರ್ಷದ ಹುಟ್ಟುಹಬ್ಬವನ್ನು ಆಚರಿಸಿದ್ದರು. ಅದ್ಧೂರಿ ಹುಟ್ಟುಹಬ್ಬದ ಫೋಟೊಗಳು ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿದ್ದವು. ಈಗ ಪರಿ ಕ್ಯೂಟ್ ಆಗಿ ಡಾನ್ಸ್ ಮಾಡಿದ ವಿಡಿಯೊ ನೋಡುಗರ ಕಣ್ಮನ ಸೆಳೆದಿದೆ.

ಅಕ್ಷಯ್ ಕುಮಾರ್ ನಟನೆಯ 'ಜಾಲಿ ಎಲ್‌ಎಲ್‌ಬಿ 3' ಸಿನಿಮಾಕ್ಕೆ ಅಭಿಮಾನಿಗಳ ಮೆಚ್ಚುಗೆ

ಬಾಲಿವುಡ್ ನಟ ಅಕ್ಷಯ್ ಕುಮಾರ್ ಹಾಗೂ ಅರ್ಷದ್ ವಾರ್ಸಿ ನಟನೆಯ 'ಜಾಲಿ ಎಲ್‌ಎಲ್‌ಬಿ 3' ಸಿನಿಮಾವು ಚಿತ್ರಮಂದಿರಗಳಲ್ಲಿ ತೆರೆಕಂಡಿದೆ.

ಆಲೋಕ್ ಜೈನ್ ನಿರ್ಮಾಣದ 'ಜಾಲಿ ಎಲ್‌ಎಲ್‌ಬಿ 3' ಚಿತ್ರವನ್ನು ಸುಭಾಷ್ ಕಪೂರ್ ನಿರ್ದೇಶಿಸಿದ್ದಾರೆ.

'ಜಾಲಿ ಎಲ್‌ಎಲ್‌ಬಿ 3' ಚಿತ್ರವು ಉತ್ತರಪ್ರದೇಶದಲ್ಲಿ ನಡೆದ ಭೂಸ್ವಾಧೀನಕ್ಕೆ ಸಂಬಂಧಿಸಿದ ಪ್ರತಿಭಟನೆಗಳನ್ನು ಆಧಾರಿಸಿದ ಕಥೆ ಎನ್ನಲಾಗಿದೆ.

ಸಿನಿಮಾ ವಿಕ್ಷೀಸಿದ ಸಿನಿಪ್ರಿಯರು ಚಿತ್ರಕಥೆ ಹಾಗೂ ಅಕ್ಷಯ್ ಕುಮಾರ್ ಅವರ ನಟನೆ ಬಗ್ಗೆ ಸಾಮಾಜಿಕ ಮಾಧ್ಯಮದಲ್ಲಿ ಅಭಿಪ್ರಾಯ ಹಂಚಿಕೊಂಡಿದ್ದಾರೆ.

ಅಕ್ಷಯ್ ಕುಮಾರ್, ಅಮೃತಾ ರಾವ್, ಸೌರಭ್ ಶುಕ್ಲಾ, ಅರ್ಷದ್ ವಾರ್ಸಿ, ಹುಮಾ ಖುರೇಷಿ, ಅರ್ಜುನ್ ಪಾಂಚಾಲ್ ಚಿತ್ರದಲ್ಲಿ ನಟಿಸಿದ್ದಾರೆ.

ಜಾಲಿ ಎಲ್‌ಎಲ್‌ಬಿ 3

'ಕಲ್ಕಿ 2898ಎಡಿ' ಸೀಕ್ವೆಲ್‌ನಿಂದ ಹೊರನಡೆದ ದೀಪಿಕಾ

ಸಂದೀಪ್ ರೆಡ್ಡಿ ವಂಗಾ ನಿರ್ದೇಶನದ, ಪ್ರಭಾಸ್ ನಟನೆಯ 'ಸ್ಪಿರಿಟ್' ಚಿತ್ರದಿಂದ ಹೊರಬಿದ್ದ ಬೆನ್ನಲ್ಲೇ ಬಾಲಿವುಡ್ ನಟಿ ದೀಪಿಕಾ ಪಡುಕೋಣೆ, 'ಕಲ್ಕಿ 2898ಎಡಿ' ಸೀಕ್ವೆಲ್‌ನಿಂದಲೂ ಹೊರನಡೆದಿದ್ದಾರೆ.

ಈ ಬಗ್ಗೆ ನಿರ್ಮಾಣ ಸಂಸ್ಥೆ 'ವೈಜಯಂತಿ ಮೂವೀಸ್' ಮಾಹಿತಿ ಹಂಚಿಕೊಂಡಿದೆ.

'ಕಲ್ಕಿ 2898ಎಡಿ' ಸೀಕ್ವೆಲ್‌ನಲ್ಲಿ ದೀಪಿಕಾ ಪಡುಕೋಣೆ ಅವರು ಅಭಿನಯಿಸುತ್ತಿಲ್ಲ. ಹಲವು ಸುತ್ತಿನ ಮಾತುಕತೆಗಳ ನಂತರ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ' ಎಂದು ಎಕ್ಸ್‌ನಲ್ಲಿ ತಿಳಿಸಿದೆ.

'ಕಲ್ಕಿ ಅಂತಹ ದೊಡ್ಡಮಟ್ಟದ ಚಿತ್ರಕ್ಕೆ ಹೆಚ್ಚಿನ ಬದ್ಧತೆ ಉಳ್ಳವರ ಅಗತ್ಯವಿದೆ' ಎಂದು ಹೇಳಿದೆ.

ಈ ಕುರಿತು ದೀಪಿಕಾ ಅವರು ಈವರೆಗೆ ಯಾವುದೇ ಪ್ರತಿಕ್ರಿಯೆ ನೀಡಿಲ್ಲ.
ಇದೇ ಜೂನ್ 27ರಂದು ಬಿಡುಗಡೆಯಾಗಿದ್ದ 'ಕಲ್ಕಿ' ಸಿನಿಮಾ ಬಾಕ್ಸ್ ಆಫೀಸ್‌ನಲ್ಲಿ ದೂಳೆಬ್ಬಿಸಿತ್ತು. ನಾಗ್ ಅಶ್ವಿನ್ ನಿರ್ದೇಶನದ ಈ ಸಿನಿಮಾ ಒಟ್ಟು 6 ಭಾಷೆಗಳಲ್ಲಿ ಬಿಡುಗಡೆಯಾಗಿತ್ತು. ಚಿತ್ರದಲ್ಲಿ ಪ್ರಭಾಸ್, ದೀಪಿಕಾ ಪಡುಕೋಣೆ, ಅಮಿತಾಭ್ ಬಚ್ಚನ್, ಕಮಲ್ ಹಾಸನ್ ಜೊತೆಗೆ ದಿಶಾ ಪಟಾನಿ, ಶಾಶ್ವತಾ ಚಟರ್ಜಿ ಹಾಗೂ ಶೋಭನಾ ಮುಖ್ಯ ಪಾತ್ರಗಳಲ್ಲಿ ನಟಿಸಿದ್ದರು.

ದೀಪಿಕಾ ಪಡುಕೋಣೆ

ವಂಗಾ ನಿರ್ದೇಶನದ ಪ್ರಭಾಸ್ ಮುಂದಿನ ಸಿನಿಮಾ 'ಸ್ಪಿರಿಟ್'ಗೂ ನಾಯಕಿಯಾಗಿ ದೀಪಿಕಾ ಪಡುಕೋಣೆ ಆಯ್ಕೆಯಾಗಿದ್ದರು. ಚಿತ್ರೀಕರಣ ಪ್ರಾರಂಭಕ್ಕೂ ಮೊದಲು ವಂಗಾ ಮತ್ತು ದೀಪಿಕಾ ನಡುವೆ ವೈಮನಸ್ಸು ಮೂಡಿದ್ದರಿಂದ ದೀಪಿಕಾ ಸ್ಥಾನಕ್ಕೆ ತೃಪ್ತಿ ಡಿಮ್ರಿ ಅವರನ್ನು ಚಿತ್ರತಂಡ ಆಯ್ಕೆ ಮಾಡಿತ್ತು.

ದೀಪಿಕಾ ಅವರ ಮೇಲೆ, ಕಥೆ ಬಹಿರಂಗಪಡಿಸಿದ ಆರೋಪವನ್ನು ವಂಗಾ ಮಾಡಿದ್ದರು.

ಇದರೊಂದಿಗೆ, ಪ್ರಭಾಸ್ ನಟನೆಯ ಮತ್ತೊಂದು ಚಿತ್ರದಿಂದಲೂ ದೀಪಿಕಾ ಹೊರನಡೆದಿದ್ದಾರೆ.

ಪ್ರಧಾನಿ ಮೋದಿ ಪಾತ್ರದಲ್ಲಿ ಮಲಯಾಳದ ನಟ ಉನ್ನಿ ಮುಕುಂದನ್

ಬೆಂಗಳೂರು: ಪ್ರಧಾನಿ ನರೇಂದ್ರ ಮೋದಿ ಅವರ ಜೀವನಾಧಾರಿತ ಚಿತ್ರ ತೆರೆಗೆ ಬರಲಿದೆ. ಸಿಲ್ವರ್ ಕ್ಯಾಸ್ಟ್ ಕ್ರಿಯೇಷನ್ಸ್ ಬ್ಯಾನರ್ ಅಡಿಯಲ್ಲಿ ವೀರ್ ರೆಡ್ಡಿ ಎಂ. ನಿರ್ಮಿಸುತ್ತಿರುವ ಈ ಚಿತ್ರಕ್ಕೆ 'ಮಾ ವಂದೇ' ಎಂದು ಹೆಸರಿಡಲಾಗಿದೆ.

ಮೋದಿ ಅವರ ಜನ್ಮದಿನದ ಅಂಗವಾಗಿ ಸಿನಿಮಾದ ಪೋಸ್ಟರ್ ಅನ್ನು ರಿವೀಲ್ ಮಾಡಲಾಗಿದೆ. ಚಿತ್ರದಲ್ಲಿ ಮಲಯಾಳದ ನಟ ಉನ್ನಿ ಮುಕುಂದನ್ ಅವರು ಮೋದಿ ಅವರ ಪಾತ್ರದಲ್ಲಿ ನಟಿಸಲಿದ್ದಾರೆ.

ಈ ಬಗ್ಗೆ ಉನ್ನಿ ಮುಕುಂದನ್ ಅವರು ಸಾಮಾಜಿಕ ಮಾಧ್ಯಮದ ಪೋಸ್ಟನ್ನು ಹೀಗೆ ಹಂಚಿಕೊಂಡಿದ್ದಾರೆ:

ಕ್ರಾಂತಿಕುಮಾರ್ ನಿರ್ದೇಶನದ 'ಮಾ ವಂದೇ' ಚಿತ್ರದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರ ಪಾತ್ರವನ್ನು ನಾನು ನಿರ್ವಹಿಸುತ್ತಿದ್ದೇನೆ ಎಂಬ ವಿಚಾರವನ್ನು ಹಂಚಿಕೊಳ್ಳಲು ನನಗೆ ಹರ್ಷವಾಗುತ್ತಿದೆ.

ಅಹಮದಾಬಾದ್‌ನಲ್ಲಿ ಬೆಳೆದ ನನಗೆ, ಬಾಲ್ಯದಲ್ಲಿ ಅವರು (ಮೋದಿ) ನಮ್ಮ ಮುಖ್ಯಮಂತ್ರಿ ಎಂದು ತಿಳಿದಿತ್ತು. ವರ್ಷಗಳ ನಂತರ, 2023ರ ಏಪ್ರಿಲ್‌ನಲ್ಲಿ ಅವರನ್ನು ವೈಯಕ್ತಿಕವಾಗಿ ಭೇಟಿಯಾಗುವ ಸೌಭಾಗ್ಯ ಸಿಕ್ಕಿತು. ಆದು ನನ್ನ ಪಾಲಿಗೆ ಮರೆಯಲಾಗದ ಕ್ಷಣ.

ಒಬ್ಬ ನಟನಾಗಿ, ಈ ಪಾತ್ರವನ್ನು ನಿರ್ವಹಿಸುವುದು ಕಷ್ಟವಾದರೂ ಸ್ಫೂರ್ತಿದಾಯಕವಾಗಿದೆ. ಮೋದಿ ಅವರ ರಾಜಕೀಯ ಪ್ರಯಾಣವು ಅದ್ಭುತವಾಗಿದೆ. ಆದರೆ ಈ ಚಿತ್ರದಲ್ಲಿ, ರಾಜಕಾರಣಿಯನ್ನು ಮೀರಿದ ವ್ಯಕ್ತಿಯನ್ನು, ವಿಶೇಷವಾಗಿ ಆ ಮಹಾನ್ ಚೈತನ್ಯವನ್ನು ರೂಪಿಸಿದ ಅವರ ತಾಯಿಯೊಂದಿಗಿನ ಬಾಂಧವ್ಯವನ್ನು ಭಾವನಾತ್ಮಕವಾಗಿ ತೋರಿಸುವ ಆಲೋಚನೆ ಇದೆ.

ಸಲ್ಮಾನ್ ಖಾನ್ ನಟನೆಯ 'ಬ್ಯಾಟಲ್ ಆಫ್ ಗಾಲ್ವಾನ್' ಚಿತ್ರೀಕರಣ ಪೂರ್ಣ

ಬಾಲಿವುಡ್ ನಟ ಸಲ್ಮಾನ್ ಖಾನ್ ಅಭಿನಯದ 'ಬ್ಯಾಟಲ್ ಆಫ್ ಗಾಲ್ವಾನ್' ಚಿತ್ರದ ಚಿತ್ರೀಕರಣ ಮುಕ್ತಾಯಗೊಂಡಿದೆ. 45 ದಿನಗಳ ಬಳಿಕ ಬಹು ನಿರೀಕ್ಷಿತ ಸಿನಿಮಾ ಚಿತ್ರೀಕರಣ ಮುಗಿದಿದೆ. ನೈಜ ಘಟನೆ ಆಧಾರಿತವಾದ ಈ ಸಿನಿಮಾವು 2026ರ ಜನವರಿಯಲ್ಲಿ ತೆರೆ ಕಾಣಲಿದೆ.

59 ವರ್ಷದ ಸಲ್ಮಾನ್ ಖಾನ್ ಈ ಚಿತ್ರದಲ್ಲಿ ಕರ್ನಲ್ ಬಿಕ್ಕುಮಲ್ಲ ಸಂತೋಷ್ ಬಾಬು ಪಾತ್ರದಲ್ಲಿ ನಟಿಸಿದ್ದಾರೆ. ವಿಶೇಷ ಏನೆಂದರೆ, ಸಲ್ಮಾನ್ ಖಾನ್ ಅವರನ್ನು ಹಿಂದೆಂದೂ ಕಾಣಿಸಿಕೊಳ್ಳದ ಅವತಾರದಲ್ಲಿ ತೋರಿಸಲಾಗಿದೆ. ಅವರಿಗೆ ನಾಯಕಿಯಾಗಿ ನಟಿ ಚಿತ್ರಾಂಗದಾ ಸಿಂಗ್ ಅವರು ಕಾಣಿಸಿಕೊಳ್ಳಲಿದ್ದಾರೆ.

ಈ ಸಿನಿಮಾವು 2020ರಲ್ಲಿ ಭಾರತ ಮತ್ತು ಚೀನಾದ ಗಡಿಯ ಗಾಲ್ವಾನ್ ಕಣಿವೆಯಲ್ಲಿ ನಡೆದ ಘರ್ಷಣೆಯನ್ನು ಆಧರಿಸಿದೆ. ಶೂಟೌಟ್ ಅಟ್ ಲೋಖಂಡ್‌ವಾಲಾ ಖ್ಯಾತಿಯ ಅಪೂರ್ವ ಲಖಿಯಾ ಚಿತ್ರವನ್ನು ನಿರ್ದೇಶಿಸಿದ್ದಾರೆ. ಚಿತ್ರೀಕರಣ ಮುಕ್ತಾಯದ ಬಗ್ಗೆ ನಿರ್ಮಾಪಕರು ಗುರುವಾರ ತಮ್ಮ ಇನ್‌ಸ್ಟಾಗ್ರಾಮ್ ಸ್ಟೋರಿಯಲ್ಲಿ ಮಾಹಿತಿ ಹಂಚಿಕೊಂಡಿದ್ದರು. ಸಲ್ಮಾನ್ ಜೊತೆಗಿನ ಫೋಟೊವನ್ನು ಪೋಸ್ಟ್ ಮಾಡಿರುವ ಲಖಿಯಾ, ಇದಕ್ಕೆ 45 ದಿನಗಳು ಮುಗಿದಿವೆ ಎಂದು ಶೀರ್ಷಿಕೆ ನೀಡಿದ್ದಾರೆ.

ತೀವ್ರ ಮುಟ್ಟಿನ ನೋವು ಅಸಡ್ಡೆ ಬೇಡ, ಎಚ್ಚರವಹಿಸಿ

ಒಂದು ವಯಸ್ಸಿನ ನಂತರ ಮುಟ್ಟು ಎನ್ನುವುದು ಮಹಿಳೆಗೆ ಪ್ರಾಕೃತಿಕವಾಗಿ ಕಾಣಿಸಿಕೊಳ್ಳುವ ದೈಹಿಕ ಪ್ರಕ್ರಿಯೆ. ಹಲವರಿಗೆ ಈ ಸಂದರ್ಭವು ತೀರಾ ಕಿರಿಕಿರಿಯನ್ನೇನೂ ಉಂಟುಮಾಡದು. ಆದರೆ ಮತ್ತೆ ಕೆಲವರಿಗೆ ಈ ಸಮಯದಲ್ಲಿ ಹೇಳಲಾಗದಷ್ಟು ನೋವು ಕಾಣಿಸಿಕೊಳ್ಳುತ್ತದೆ. ಇದು ಎಂಡೊಮೆಟ್ರಿಯೋಸಿಸ್‌ನ ಸೂಚನೆಯೂ ಆಗಿರಬಹುದು. ಭಾರತದಲ್ಲಿ ಹೆಚ್ಚಿನ ಮಹಿಳೆಯರಲ್ಲಿ ಎಂಡೊಮೆಟ್ರಿಯೋಸಿಸ್ ಸಮಸ್ಯೆ ಕಾಣಿಸಿಕೊಳ್ಳುತ್ತಿದ್ದು, ಅತಿಯಾದ ನೋವು ಕಂಡುಬಂದಲ್ಲಿ ಅಸಡ್ಡೆ ತೋರಬಾರದು.

ಡಾ. ನಿಶಾ ಬುಚಾಡೆ

ಏನಿದು ಎಂಡೊಮೆಟ್ರಿಯೋಸಿಸ್?

ಎಂಡೊಮೆಟ್ರಿಯೋಸಿಸ್ ಎನ್ನುವುದು ಮಹಿಳೆಯರಲ್ಲಿ ಕಾಣಿಸಿಕೊಳ್ಳುವ ಕಾಯಿಲೆ. ಗರ್ಭಾಶಯದ ಒಳಪದರದಂತಹ ಅಂಗಾಂಶವು ಗರ್ಭಾಶಯದ ಹೊರಗೆ ಬೆಳವಣಿಗೆಯಾಗುವ ಸ್ಥಿತಿ ಇದು. ಈ ಅಂಗಾಂಶವು ಅಂಡಾಶಯ, ಫಾಲೋಪಿಯನ್ ಟ್ಯೂಬ್, ಗರ್ಭಾಶಯದ ಹೊರಭಾಗ ಸೇರಿದಂತೆ ವಿವಿಧ ಅಂಗಗಳ ಮೇಲೆ ಪರಿಣಾಮ ಬೀರಬಹುದು. ಮುಟ್ಟಿನ ಸಮಯದಲ್ಲಿ ಗರ್ಭಾಶಯದ ಒಳಪದರದಲ್ಲಿ ರಕ್ತಸ್ರಾವ ಆಗುವಂತೆಯೇ ಹೊರಗಿನ ಅಂಗಾಂಶದಲ್ಲೂ ರಕ್ತಸ್ರಾವವಾಗುತ್ತದೆ. ಆದರೆ ಈ ರಕ್ತಕ್ಕೆ ಹೊರಹೋಗಲು ದಾರಿಯಿಲ್ಲದ ಕಾರಣ ಅದು ನೋವು, ಉರಿಯೂತ ಮತ್ತು ಗಡ್ಡೆಗಳ ರಚನೆಗೆ ಕಾರಣವಾಗುತ್ತದೆ. ಒಂದು ವೇಳೆ ಇದನ್ನು ದೀರ್ಘಕಾಲದವರೆಗೆ ನಿರ್ಲಕ್ಷಿಸಿದರೆ ಗರ್ಭಧಾರಣೆಗೆ ತೊಂದರೆಯಾಗುವ ಸಾಧ್ಯತೆ ಇರುತ್ತದೆ.

ಇಂಥದ್ದೇ ಒಂದು ಪ್ರಕರಣದಲ್ಲಿ, 39 ವರ್ಷ ವಯಸ್ಸಿನ ಮಹಿಳೆಯೊಬ್ಬರು ಹಲವಾರು ತಿಂಗಳುಗಳಿಂದ ತೀವ್ರವಾದ ಹೊಟ್ಟೆನೋವಿನಿಂದ ಬಳಲುತ್ತಿದ್ದರು. ಅವರನ್ನು ಪರೀಕ್ಷೆಗೆ ಒಳಪಡಿಸಲಾಯಿತು. ಈ ವೇಳೆ ಮಹಿಳೆಗೆ ಪೋರ್ಟಲ್ ವೇನ್ ಥ್ರೊಂಬೋಸಿಸ್ ಇದ್ದುದು ಗಮನಕ್ಕೆ ಬಂತು. ಆಕೆಗೆ ಸಿ.ಟಿ ಸ್ಕ್ಯಾನ್, ಅಲ್ಟ್ರಾ ಸೌಂಡ್ ಪರೀಕ್ಷೆ ನಡೆಸಿದಾಗ ಹೊಟ್ಟೆಯ ಒಳಗೆ ರಕ್ತಸ್ರಾವ ಆಗಿರುವುದು ಕಂಡುಬಂದಿತು.

ಇಷ್ಟೆ ಅಲ್ಲದೆ, ದೊಡ್ಡದಾದ ಎಂಡೊಮೆಟ್ರಿಯೋಟಿಕ್ ಸಿಸ್ಟ್‌ಗಳು ಒಡೆದುಹೋಗಿರುವುದು ಅಥವಾ ಹರಿದುಹೋಗಿರುವುದು ಕಂಡುಬಂತು. ಇದು ಎಂಡೊಮೆಟ್ರಿಯೋಸಿಸ್‌ನ ತೀವ್ರವಾದ ಸ್ವರೂಪವಾಗಿದೆ. ಅಂಡಾಶಯದ ಸಿಸ್ಟ್ ಒಡೆದುಹೋಗಿ, ಗುದನಾಳ ಮತ್ತು ಮೂತ್ರನಾಳಕ್ಕೆ ಅಂಟಿಕೊಂಡಿತ್ತು. ಇದೊಂದು ದೀರ್ಘಕಾಲದ ರೋಗಲಕ್ಷಣವಾಗಿದ್ದು, ಲ್ಯಾಪ್ರೊಸ್ಕೋಪಿಕ್ (ಕೀ ಹೋಲ್ ಸರ್ಜರಿ) ಮೂಲಕ ರಕ್ತಸ್ರಾವವನ್ನು ನಿಲ್ಲಿಸಿ, ಅಂಗಾಂಶವನ್ನು ತೆಗೆದುಹಾಕಲಾಯಿತು.

ಈ ಮುಂಚೆ 20ರಿಂದ 30ರ ವಯಸ್ಸಿನ ಮಹಿಳೆಯರಲ್ಲಿ ಈ ಕಾಯಿಲೆ ಹೆಚ್ಚಾಗಿ ಕಾಣಿಸಿಕೊಳ್ಳುತ್ತಿತ್ತು. ಆದರೆ, ಈಗ 40ರ ಹರೆಯದವರಲ್ಲಿಯೂ ಇಂಥ ಪ್ರಕರಣಗಳು ಕಾಣಿಸಿಕೊಳ್ಳುತ್ತಿವೆ. ಈ ಆರೋಗ್ಯ ಸಮಸ್ಯೆಗೆ ನಿಖರ ಕಾರಣ ತಿಳಿದಿಲ್ಲ. ಆದರೆ ಆನುವಂಶಿಕವಾಗಿಯೂ ಬರುವ ಸಾಧ್ಯತೆ ಇರುತ್ತದೆ. ಕೇರಳ ಮತ್ತು ಪಶ್ಚಿಮ ಬಂಗಾಳದಂತಹ ಪ್ರದೇಶಗಳಲ್ಲಿ ಈ ಪ್ರಕರಣ ಹೆಚ್ಚಾಗಿ ಕಂಡುಬರುತ್ತಿದ್ದು, ಭಾರತದಾದ್ಯಂದ ಪ್ರಕರಣಗಳು ವರದಿಯಾಗುತ್ತಿವೆ. ಒಂದು ವೇಳೆ ಚಿಕಿತ್ಸೆ ತೆಗೆದುಕೊಳ್ಳದಿದ್ದರೆ ಬಂಜೆತನ, ಫಲವತ್ತತೆ, ಕಡಿಮೆ ಎಎಮ್‌ಎಚ್ ಮಟ್ಟ ಮತ್ತು ಫಾಲೋಪಿಯನ್ ಟ್ಯೂಬ್‌ಗಳು ಬ್ಲಾಕ್ ಆಗುವಂತಹ ಸಂದರ್ಭಗಳು ಎದುರಾಗುತ್ತವೆ. ಇದರಿಂದ ಸಹಜವಾದ ಗರ್ಭಧಾರಣೆಯ ಸಾಧ್ಯತೆ ಕಡಿಮೆಯಾಗುತ್ತದೆ.

ಚಿಕಿತ್ಸೆಯಲ್ಲಿ ರೊಬೋಟಿಕ್ ತಂತ್ರಜ್ಞಾನ

ಕೆಲವೊಂದು ಸಂಕೀರ್ಣವಾದ ಸಂದರ್ಭಗಳಿದ್ದಲ್ಲಿ ರೊಬೋಟಿಕ್ ಶಸ್ತ್ರ ಚಿಕಿತ್ಸೆಯು ಅತ್ಯಂತ ಸುಲಭ ಮತ್ತು ನಿಖರವಾದ ಚಿಕಿತ್ಸಾ ವಿಧಾನವಾಗಿದೆ. 3ಡಿ ವಿಷನ್ ಮತ್ತು ರೊಟೇಟಿಂಗ್ ಸಾಧನಗಳೊಂದಿಗೆ ಡಾ. ವಿನ್ಸಿ ರೊಬೋಟಿಕ್ ವ್ಯವಸ್ಥೆಯ ಮೂಲಕ ಪ್ರಮುಖ ಅಂಗಗಳಿಗೆ ಶಸ್ತ್ರಚಿಕಿತ್ಸೆ ಮಾಡಲು ಮತ್ತು ರೋಗಿಯು ವೇಗವಾಗಿ ಚೇತರಿಸಿಕೊಳ್ಳಲು ಸಹಾಯಕವಾಗುತ್ತದೆ.

ಲೇಖಕಿ: ಸ್ತ್ರೀರೋಗತಜ್ಞೆ, ವಾಸವಿ ಆಸ್ಪತ್ರೆ, ಬೆಂಗಳೂರು

ಸ್ತನ ಕ್ಯಾನ್ಸರ್ ಮರುಕಳಿಸುವ ಅಪಾಯ: ತಡೆಗಿದೆ 5 ಮಾರ್ಗ

ಭಾರತದ ಮಹಿಳೆಯರನ್ನು ಕಾಡುವ ಅತ್ಯಂತ ಸಾಮಾನ್ಯ ಮತ್ತು ಮಾರಕ ಕ್ಯಾನ್ಸರ್ ಎಂದರೆ ಅದು ಸ್ತನ ಕ್ಯಾನ್ಸರ್. ಈಗೀಗ ಜಾಗೃತಿಯ ಹೆಚ್ಚಳದಿಂದ ಮತ್ತು ವೈದ್ಯಕೀಯ ವ್ಯವಸ್ಥೆಯ ಆಧುನೀಕರಣದಿಂದಾಗಿ ಭಾರತದಲ್ಲಿ ಸುಮಾರು ಶೇ 76ರಷ್ಟು ಸ್ತನ ಕ್ಯಾನ್ಸರ್ ಪ್ರಕರಣಗಳು ಆರಂಭಿಕ ಹಂತದಲ್ಲಿಯೇ ಪತ್ತೆಯಾಗುತ್ತವೆ. ಆರಂಭಿಕ ಹಂತ ಎಂದರೆ ಸ್ತನದಲ್ಲಿ ಅಥವಾ ಸ್ತನದ ಹತ್ತಿರದ ಲಿಂಫ್ ನೋಡ್‌ಗಳಲ್ಲಿ ಕ್ಯಾನ್ಸರ್ ಗಂಟು ಕಾಣಿಸಿಕೊಳ್ಳುವುದು, ದೇಹದ ಇತರ ಭಾಗಗಳಿಗೆ ಇನ್ನೂ ಹರಡಿಲ್ಲದೇ ಇರುವುದು. ಈ ಸ್ತನ ಕ್ಯಾನ್ಸರ್ 0, 1, 2 ಅಥವಾ 3ನೇ ಹಂತದಲ್ಲಿ ಇರಬಹುದು. ಆತಂಕಕಾರಿ ವಿಚಾರವೆಂದರೆ, ಯಶಸ್ವಿಯಾಗಿ ಚಿಕಿತ್ಸೆ ನೀಡಿದ ಬಳಿಕವೂ ಈ ಕ್ಯಾನ್ಸರ್ ಮತ್ತೆ ಮರುಕಳಿಸಬಹುದು.

ಡಾ. ಸಿ.ಎನ್.ಪಾಟೀಲ್

'ನ್ಯಾಷನಲ್ ಲೈಬ್ರರಿ ಆಫ್ ಮೆಡಿಸಿನ್'ನಲ್ಲಿ ಪ್ರಕಟವಾದ ಒಂದು ಅಧ್ಯಯನ ವರದಿಯ ಪ್ರಕಾರ, ಆರಂಭಿಕ ಹಂತದಲ್ಲಿ ಸ್ತನ ಕ್ಯಾನ್ಸರ್ ಪತ್ತೆಯಾದ ಸುಮಾರು ಶೇ 20ರಷ್ಟು ಮಹಿಳೆಯರಲ್ಲಿ, ಮುಂದಿನ 10 ವರ್ಷಗಳ ಒಳಗೆ ಸ್ತನ ಕ್ಯಾನ್ಸರ್ ಮರುಕಳಿಸುವಿಕೆಯ ಸಾಧ್ಯತೆ ಇರುತ್ತದೆ. ಹಾಗಾಗಿ, ಅಪಾಯಗಳನ್ನು ಮೊದಲೇ ಅರ್ಥಮಾಡಿಕೊಳ್ಳುವುದು ಮುಖ್ಯ.

ಆರೋಗ್ಯಕರ ದೇಹ ತೂಕವಿರಲಿ: ಕ್ರಿಯಾಶೀಲ ಜೀವನಶೈಲಿ ಪಾಲಿಸುವುದು ಮುಖ್ಯ. ಅತಿಯಾದ ದೇಹ ತೂಕ ಮತ್ತು ನಿಷ್ಕ್ರಿಯ ಜೀವನಶೈಲಿಯಿಂದ ಸ್ತನ ಕ್ಯಾನ್ಸರ್ ಮರುಕಳಿಸುವಿಕೆಯ ಅಪಾಯ ಹೆಚ್ಚಿರುತ್ತದೆ. ಹಾಗಾಗಿ, ಹಾರ್ಮೋನ್‌ಗಳನ್ನು ನಿಯಂತ್ರಿಸಲು, ಉರಿಯೂತವನ್ನು ಕಡಿಮೆ ಮಾಡಲು ಮತ್ತು ಒಟ್ಟಾರೆ ಯೋಗಕ್ಷೇಮವನ್ನು ಸುಧಾರಿಸಲು ನಿಯಮಿತ ವ್ಯಾಯಾಮ ಮಾಡುವುದು ಮತ್ತು ಆರೋಗ್ಯಕರ ತೂಕವನ್ನು ಕಾಪಾಡಿಕೊಳ್ಳುವುದು ಅವಶ್ಯ. ಹಣ್ಣುಗಳು, ತರಕಾರಿಗಳು, ಧಾನ್ಯಗಳು ಮತ್ತು ಪ್ರೋಟೀನ್‌ನಿಂದ ಕೂಡಿದ ಸಮತೋಲಿತ ಆಹಾರ ಸೇವನೆ ಕಡೆಗೆ ಗಮನ ಹರಿಸಬೇಕು. ಈ ಮೂಲಕ ಉತ್ತಮ ತೂಕ ಇರುವಂತೆ ನೋಡಿಕೊಳ್ಳಬೇಕು. ಇವೆಲ್ಲವೂ ಕ್ಯಾನ್ಸರ್ ಮರಳಿ ಬರುವ ಸಾಧ್ಯತೆಯನ್ನು ಕಡಿಮೆ ಮಾಡುವಲ್ಲಿ ಹೆಚ್ಚಿನ ಪಾತ್ರ ವಹಿಸುತ್ತವೆ.

ನಿಯಮಿತ ತಪಾಸಣೆ ಇರಲಿ: ಕ್ಯಾನ್ಸರ್ ಮರುಕಳಿಸುವಿಕೆಯನ್ನು ಆರಂಭಿಕ ಹಂತದಲ್ಲಿಯೇ ಪತ್ತೆ ಹಚ್ಚಿದರೆ ಹೆಚ್ಚು ಪರಿಣಾಮಕಾರಿಯಾಗಿ ಚಿಕಿತ್ಸೆ ನೀಡಬಹುದು ಮತ್ತು ಉತ್ತಮ ಫಲಿತಾಂಶಕ್ಕೆ ಕಾರಣವಾಗಬಹುದು. ಇಮೇಜಿಂಗ್, ಲ್ಯಾಬ್ ಟೆಸ್ಟ್‌ಗಳು ಮತ್ತು ದೈಹಿಕ ತಪಾಸಣೆ ನಡೆಸಲು ವೇಳಾಪಟ್ಟಿಯನ್ನು ಕಟ್ಟುನಿಟ್ಟಾಗಿ ಅನುಸರಿಸಿ. ಹಾಗೆ ಮಾಡುವುದರಿಂದ ದೇಹದಲ್ಲಾಗುವ ಯಾವುದೇ ಬದಲಾವಣೆಗಳನ್ನು ಆರಂಭದಲ್ಲಿಯೇ ಕಂಡುಹಿಡಿಯಲು ಸಹಾಯವಾಗುತ್ತದೆ. ಗಂಟು, ನೋವು, ವಿವರಿಸಲಾಗದ ಆಯಾಸ... ಹೀಗೆ ಯಾವುದೇ ಹೊಸ ಲಕ್ಷಣಗಳು ಕಾಣಿಸಿಕೊಂಡರೆ ತಕ್ಷಣವೇ ತಜ್ಞರನ್ನು ಭೇಟಿ ಮಾಡಿ.

ಅತ್ಯಾಧುನಿಕ ಚಿಕಿತ್ಸೆಯ ಅರಿವಿರಲಿ: ಆರಂಭಿಕ ಹಂತದಲ್ಲಿ ಸ್ತನ ಕ್ಯಾನ್ಸರ್ ಪತ್ತೆಯಾದ ಮಹಿಳೆಯರಿಗೆ ಹಾರ್ಮೋನ್ ಆಧಾರಿತ ಔಷಧಿಗಳು ಮತ್ತು ನಿರ್ದಿಷ್ಟ ಚಿಕಿತ್ಸೆಯಂತಹ ಅತ್ಯಾಧುನಿಕ ಚಿಕಿತ್ಸೆಯನ್ನು ನೀಡಬಹುದು. ಈ ಮೂಲಕ ಅವರ ಜೀವನದ ಗುಣಮಟ್ಟವನ್ನು ಕಾಪಾಡಿಕೊಂಡು ಕ್ಯಾನ್ಸರ್ ಮರುಕಳಿಸುವಿಕೆಯ ಅಪಾಯವನ್ನು ಕಡಿಮೆ ಮಾಡಬಹುದು. ಭಾರತದಲ್ಲಿ ಈ ಕುರಿತು ಇನ್ನಷ್ಟು ಚಿಕಿತ್ಸೆಯ ಲಭ್ಯತೆ ಮತ್ತು ಜಾಗೃತಿಯನ್ನು ಉಂಟುಮಾಡಬೇಕಾದ ಅಗತ್ಯ ಬಹಳಷ್ಟಿದೆ.

ಮಾನಸಿಕ, ಭಾವನಾತ್ಮಕ ಯೋಗಕ್ಷೇಮ: ದೈಹಿಕ ಚೇತರಿಕೆ ಮತ್ತು ದೀರ್ಘಕಾಲ ಬದುಕುಳಿಯುವ ಸಲುವಾಗಿ ಭಾವನಾತ್ಮಕ ಆರೋಗ್ಯ ಕಾಪಾಡಿಕೊಳ್ಳುವುದು ಬಹಳ ಮುಖ್ಯ. ಸಾಮಾಜಿಕ ಬೆಂಬಲ, ಕೌನ್ಸೆಲಿಂಗ್ ಮತ್ತು ಒತ್ತಡ ನಿರ್ವಹಣೆ ಮೂಲಕ ಜೀವನದ ಗುಣಮಟ್ಟವನ್ನು ಸುಧಾರಿಸಬಹುದು. ಆತಂಕ, ಖಿನ್ನತೆ ಅಥವಾ ಕ್ಯಾನ್ಸರ್ ಮರುಕಳಿಸುವಿಕೆಯ ಭಯದಿಂದ ಒದ್ದಾಡುತ್ತಿದ್ದರೆ, ಮನೋವೈದ್ಯರನ್ನು ಸಂಪರ್ಕಿಸಲು ಹಿಂಜರಿಯಬೇಡಿ.

ಧೂಪಮಾನ, ಮದ್ಯಪಾನ ಬೇಡ: ಧೂಮಪಾನ ಮತ್ತು ಅತಿಯಾದ ಮದ್ಯಪಾನವು ಸ್ತನ ಕ್ಯಾನ್ಸರ್ ಮರುಕಳಿಸುವಿಕೆಯ ಅಪಾಯವನ್ನು ಹೆಚ್ಚಿಸಬಹುದು. ಹಾಗಾಗಿ, ನೀವು ಧೂಮಪಾನ ಮಾಡುತ್ತಿದ್ದರೆ ಅದನ್ನು ಬಿಡಬೇಕು. ಮದ್ಯಪಾನವನ್ನು ಸಹ ಸಂಪೂರ್ಣವಾಗಿ ಬಿಟ್ಟುಬಿಡಿ.

ಲೇಖಕ: ಮುಖ್ಯಸ್ಥ, ಆಂಕಾಲಜಿ ವಿಭಾಗ, ಆಸ್ಟರ್ ಆಸ್ಪತ್ರೆ, ಬೆಂಗಳೂರು

ಆರೋಗ್ಯಕರ ಬದುಕಿಗೆ ಹೀಗಿರಲಿ ಆಹಾರ

ದೇಹಕ್ಕೆ ಶಕ್ತಿ ತುಂಬಲು, ರೋಗಗಳ ವಿರುದ್ಧ ಹೋರಾಡಲು ಮತ್ತು ಆರೋಗ್ಯವನ್ನು ಕಾಪಾಡಿಕೊಳ್ಳಲು ಉತ್ತಮ ಪೋಷಕಾಂಶಭರಿತ ಆಹಾರವನ್ನು ಸೇವಿಸುವುದು ಅತ್ಯಗತ್ಯ. ಮೊದಲನೆಯದಾಗಿ, ಶಕ್ತಿಪೂರಕ ಆಹಾರಗಳಾದ ಇವುಗಳಲ್ಲಿ ಧಾನ್ಯಗಳು, ಎಣ್ಣೆ, ಕೊಬ್ಬಿನಂಶ ಇರುತ್ತವೆ. ದೈಹಿಕ ಚಟುವಟಿಕೆ ಮತ್ತು ದೇಹದ ಕಾರ್ಯಗಳಿಗೆ ಅಗತ್ಯವಾದ ಇಂಧನವನ್ನು ಇವು ಒದಗಿಸುತ್ತವೆ.

ಎರಡನೆಯದಾಗಿ, ದೇಹದ ಆರೋಗ್ಯಕ್ಕೆ ಪೂರಕವಾದ ಹೆಚ್ಚು ಪ್ರೋಟೀನ್‌ಭರಿತ ಆಹಾರಗಳಾದ ಬೇಳೆಕಾಳುಗಳು, ಹಾಲು, ಮೊಟ್ಟೆ, ಮಾಂಸ, ಮೀನು ಮತ್ತು ಒಣಹಣ್ಣುಗಳು ಸೇರಿವೆ. ಇವು ದೇಹದ ಅಂಗಾಂಶಗಳು, ಸ್ನಾಯುಗಳು ಮತ್ತು ಜೀವಕೋಶಗಳ ಬೆಳವಣಿಗೆಗೆ ಸಹಾಯಕವಾಗುತ್ತವೆ.

ಮೂರನೆಯದು, ರಕ್ಷಣಾತ್ಮಕ ಆಹಾರಗಳು. ಇವುಗಳಲ್ಲಿ ಹಣ್ಣುಗಳು, ತರಕಾರಿಗಳು ಸೇರಿವೆ. ಇವು ವಿಟಮಿನ್, ಖನಿಜಗಳು ಮತ್ತು ಆ್ಯಂಟಿ ಆಕ್ಸಿಡೆಂಟ್‌ಗಳಿಂದ ತುಂಬಿದ್ದು, ದೇಹವನ್ನು ಸೋಂಕುಗಳಿಂದ ರಕ್ಷಿಸುತ್ತವೆ.

ಡಾ. ಟಿ.ರಮಾಲಕ್ಷ್ಮಿ

ಸಮತೋಲಿತ ಆಹಾರಕ್ರಮ ಪಾಲನೆ

ಅನೇಕರು ಊಟದಲ್ಲಿ ಏನಿರಬೇಕು ಮತ್ತು ಏನಿರಬಾರದು ಎಂಬ ಗೊಂದಲವನ್ನು ಹೊಂದಿರುತ್ತಾರೆ. ಆದರೆ ತಜ್ಞರು ಹೇಳುವಂತೆ, ಆಹಾರ ಸೇವನೆಯಲ್ಲಿ ಸರಳ ವಿಧಾನವನ್ನು ಅನುಸರಿಸಬೇಕು. ಸೇವಿಸುವ ಒಂದು ಹೊತ್ತಿನ ಆಹಾರದಲ್ಲಿನ ಅರ್ಧ ಭಾಗವು (ಶೇ 50) ವಿವಿಧ ಬಗೆಯ ಹಣ್ಣುಗಳು ಮತ್ತು ತರಕಾರಿಯಿಂದ ಕೂಡಿರಬೇಕು. ಊಟದ ಕಾಲು ಭಾಗವು (ಶೇ 20) ಅಕ್ಕಿ, ರಾಗಿ ಅಥವಾ ಓಟ್ಸ್‌ನಂತಹ ಧಾನ್ಯಗಳಿಂದ ಕೂಡಿರಬೇಕು. ಊಟದ ಉಳಿದ ಕಾಲು ಭಾಗದಲ್ಲಿ (ಶೇ 20) ಮೊಟ್ಟೆ, ಬೇಳೆಕಾಳುಗಳು, ಹಾಲು ಮತ್ತು ಹಾಲಿನ ಉತ್ಪನ್ನಗಳು, ಕಡಿಮೆ ಕೊಬ್ಬಿನ ಮಾಂಸದಂತಹ ಪ್ರೋಟೀನ್‌ಭರಿತ ಆಹಾರವನ್ನು ಒಳಗೊಂಡಿರಬೇಕು. ಆದರೆ, ಒಣಹಣ್ಣುಗಳು ಮತ್ತು ಬೀಜಗಳಲ್ಲಿ ಕೊಬ್ಬಿನಾಂಶವಿದ್ದು, ದೈನಂದಿನ ಕ್ಯಾಲೊರಿಯು ಶೇ 10ಕ್ಕಷ್ಟೇ ಸೀಮಿತವಾಗಿ ಇರಬೇಕು.

ಸಮತೋಲಿತ ಆಹಾರ ಕ್ರಮವನ್ನು ಅನುಸರಿಸುವುದರ ಜೊತೆಗೆ 'ಪ್ರತಿದಿನ ಕನಿಷ್ಠ 8ರಿಂದ 10 ಲೋಟ ನೀರು ಕುಡಿಯಿರಿ. ಅದರ ಜೊತೆಗೆ ಮಜ್ಜಿಗೆ, ಎಳನೀರು, ತಾಜಾ ಹಣ್ಣಿನ ರಸ, ರಾಗಿ ಮಾಲ್ಟ್ ಮತ್ತು ಸೂಪ್‌ನಂತಹ ದ್ರವಾಹಾರವನ್ನು ಸೇವಿಸಿ. ಮತ್ತೊಂದೆಡೆ, ಉಪ್ಪು, ಸಕ್ಕರೆ ಮತ್ತು ಕೊಬ್ಬು ಹೆಚ್ಚಿರುವ ಕಾರ್ಬೊನೇಟೆಡ್ ಪಾನೀಯಗಳು, ಮದ್ಯ ಮತ್ತು ಸಂಸ್ಕರಿಸಿದ ತಿಂಡಿಗಳ ಸೇವನೆಯನ್ನು ಕಡಿಮೆ ಮಾಡುವುದು ಬಹಳ ಮುಖ್ಯ. ಹಸಿವನ್ನು ನಿಯಂತ್ರಿಸಲು ಮತ್ತು ಅತಿಯಾಗಿ ತಿನ್ನುವುದನ್ನು ತಡೆಗಟ್ಟಲು ಆಗಾಗ್ಗೆ ನಿಯಮಿತ ಆಹಾರ ಸೇವಿಸುವುದು ಉತ್ತಮ.

ಲೇಖಕಿ: ಆಹಾರ ತಜ್ಞೆ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ: 080-45557160/ 162/ 163/ 164/ 9845114560 / 9731810277/ 9886213331

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/ 9845114560 / 9731810277/ 9886213331

REAL ESTATE SELLING

House

Yelahanka

ELEGANT Builders & Developers
Elegant Takt Tropical Symphony
3 & 4 BHK LUXURY HOMES
No Common Walls | 100% Vastu
75% Carpet Area | 50+ Amenities
YELAHANKA NEW TOWN Opp. to 1350-acre GKVK campus
91 04 04 45 45
REGISTRATION NO:PRM/KA/RERA/1251/309/PR/251024/007174 | *Terms and Conditions Apply
STARTING FROM ₹1.65 CR* *Excluding GST
BOOK A HOME & GET A FREE CAR THIS FESTIVE SEASON

Peenya

PEENYA 2ND Stage, Andrahalli Main Road, Chetan Circle, 2450 sft, 'B' Katha, 16 Houses, Getting 64000 Rent, 8500 /sft. 9845288310

Sites

Banashankari

BANASHANKARI 6TH STAGE- BDA- AVAILABLE/ WANTED 20x30, 30x40 40x60, 50x80 SITES. BRINDAVAN ASSOCIATES- 9980863245/ 9945333993

AVAILABLE BANASHANKARI 6th Stage, 6th Block 30x40, W/F,Near 100" Road Budget Friendly Call Lingaraju: 9663393533

BDA BANASHANKARI 5th Stage Opposite Pattalamma Temple & Mantri Alphine Apartment 30x40 E/F: 9606922132/ 9448531837

BANASHANKARI 6TH Stage,BDA 40x60, Site For Sale Near 100 Feet Road Cheque Payment: 9916817739

SITE FOR Sale 30x40 South Facing at Banashankari 6th stage 3rd Block Contact: owner: 9113201131

Chandra Layout

SITE SALE 30x38 W/F 40ft Road Good Location BCC Layout Near Water Tank, Chandralayout: 8088935256

Uttarahalli

BHCS LAYOUT Uttarahalli Road 40x60 Site with 4000 Sq.ft Building in Good Condition. 40Ft Semi-Commercial Road- 9986055474

Chikkaballapura

DC CONVERTED,TOWN Planning Approved Sites For Sale at Chikkaballapur Near Isha Foundation.Contact- 9008817966,7483171036

HBR Layout

BDA ALLOTTED 50X80 SITE FOR SALE
Prime residential site, in excellent well-developed location, opp. ISKCON Goshala in H.B.R BDA layout, Northfacing, 15.24x 24.4=371.85sq mts (4000sq.ft), e-khata done.
Contact : Mobile : 97422 59826 ananth.hr1@gmail.com

Hosur Road

LAYOUT SALE ONLY 12 LEFT. Rs.900 Sqft. Rayakottai Road, Near Krishnagiri Court, Tamilnadu. 9443225303, 9566899288.

Jigani

KHB Sites in Surya City Near Jigani
STRRA & BMRDA Approved Plots
Near Bannerghatta Road Akhata & Ekhata Plots Ready for Registration SBI & Nationalised Bank Loan (Land Owner Share) Call : 74115 54412

INVEST IN REAL ESTATE PROPERTIES ON HAROHALLI-JIGANI/ANEKAL ROAD, ON SMALL EXTENT PROPERTIES AND GET GOOD RETURNS AT THE EARLIEST,VICTORY PROPERTIES, www.victoryproperties.in, mail: info@victoryproperties.in 8618576685/7411692219/ 9686894972

Jayanagar

COMMERCIAL PROPERTY Sale 40x60 JP-Nagar Ring Road North West Corner, Jayanagra Residential Property 40×60 North: 9845075792/ 9880600899

Kengeri

KENGERI UPANAGARA BDA Auction North-West Corner Site For Sale 64×82 Single First Owner 17000/- Per Sq.ft. Clear Title- 9900115519

SUNCITY PROPERTY 40X60 West Rs.8500 Sft BALAJI LAYOUT Vishweshwaraiya 1st BLOCK 55X40 East Rs.9500 sft Contact: 9448793428

Kanakapura Road

GRAMATHANA "E" Khatha Site 46x80, North Facing 30 meeters From Vajarahalli Metro Station: 9845451425 9741296957

30X40 BDA SITE SALE, E/F, Vajarahalli, Near Metro Station, Kaveri Water, 11k /sft. Nego. 9611105595

Kempegowda Layout

NADA PRABHU Kempegowda layout BDA Site For Sale 30x40, 40x60, 50x80 Contact: 7676900174 6363496142

KEMPEGOWDA LAYOUT, Commercial/ Residential BDA Site for Sale 20x30, 30x40, 40x60, 50x80. Contact Kumar 9945119449

Mysore

GOVERNMENT EMPLOYEES Society, Ilawala, Meghalapura, 40x60, West, Allottee, Clear Title, For Sale, Immediate Registration, Contact-7795494932

POLICE LAYOUT, Lalithadripura, 40x60, West, Well Developed, Allottee, Clear Title, For Sale, Immediate Registration, Contact-7795494932

Nagarabhavi

BDA SITE FOR SALE Nagarabhavi 10th block 40/75, West facing Broker excuse Contact Owner: 8884709409

"NAGARABHAVI 11TH-BLOCK 40x60 West facing Site for sale, Good location, Owner meeting. 8884240888/ 7892780002"

Vishweshwariah Layout

BUYING/ SELLING 20x30, 30x40, 40x60, 50x80 BDA Sites VISHVESHWARAIAH LAYOUT, KEMPEGOWDA LAYOUT, Contact: 9035470616

BDA SITE SALE VISHVESHWARAIAH LAYOUT 1ST BLOCK 30X40 EAST FACE 13000/- NEGOTIABLE DIRECT OWNER MEETING CONTACT: 8892901567

Agricultural Land

Out-Station

10-LAKHS PER-ACRE Challakere 28acre Land Suitable For Agriculture, Solar, Poultry. Immediate Settlement Call: 9741040748

70KM FROM Bangalore,Malavalli 26acr land suitable for agriculture, farmland development 37lakhs only 9741040748

Commercial

J P Nagar

40X60 N/W Corner Commercial Building JP.Nagar 100 Feet Ring Road also 60x90- SS.Realtors: Call- 9845760178.

Mysore

FOR SALE 3 Prime High End Commercial Properties - Around 2 Acres, 3 Acres and Commercial Complex in the Heart of Mysore City. Write to linamys54@gmail.com

Whitefield

3210SFT,& 1200Sft, Commercial Sites For Sale Near Varthur Sub-Register Office,Within BBMP Limits With 'E'Khatha Call:9353532040

Flat

Banashankari

FOR SALE New Ready to move Luxury 3 BHK 1750 sft 2.54 Cr & 2000 sft 2.90 Cr with individual E-Khatha Flats for Sale @ Banashankari 2nd stage near BDA complex Brokers excuse Call 9741868566

Kothanur

2 BHK FLAT near Kristu Jayanthi College. Attractive interior work, spacious rooms, modular kitchen, easy access to markets, schools. Swimming pool, Children play area, Gym, Party Hall. 8892247447.

Vijayanagar

AVILABLE FLATS RENTAL ONE TWO BHK MALAGALA NAGARABHVI THREE BHK MYSORE ROAD SPECIOUS 9738223432/ 8105273951

Industrial & Factory

Jigani

JIGANI BANNERGHATTA ROAD 2Acres Sale Conversion Done E-Katha 60,000 Sqft Warehouse Getting 16,00,000 Rent: 9481801053

Residential/ Commercial

Multiple Locations

LEADING 35 YEARS EXPERIENCED REAL ESTATE COMPANY BASED IN BANGALORE SOUTH, WE ARE INTO PROPERTY MANAGEMENT, PROPERTY MONITORING, PROPERTY INVESTMENT MANAGEMENT, RENTAL/ BUYING- VICTORY PROPERTIES 7411692219/ 8618576685/ 9686894972. info@victoryproperties.in www.victoryproperties.in

Farm House/ Land/ Resorts

Out-Station

CHANCE PROPERTY Near Kotagiri, Nilgiris, Tamil Nadu: 63 Acres Patta Land with Teak Wood for Just Rs.70 cr. Ph:9848392893, 9052200009

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

RENTAL PROPERTIES

Accommodation Available

Commercial

Commercial Premises Available for Rent
Ready to move Commercial Space 1st Floor for Rental 1630q.ft Builtup area 2nd Stage Rajajinagar, near Rameshwaram Cafe & 1522 Pub
Contact : 9845455449

WAREHOUSE/ OFFICE SPACE available for rent, near Hoodi, Whitefield, Bangalore. Area Gf-20,000`sqft. 1st floor-20,000`sqft. Call 8150943158

BANASHANKARI 6TH STAGE 80`Feet Road,11th`Block 50x80 Site Built-to-Suit. And 2nd`Block, 80`Feet Road,50x80 RENT for Vacant`Site. Call 9945724472

Industrial And Factory

AVAILABLE OF Industrial Shed of 75000`sqft at Soukya Road, Whitefield. Available Built-to-Suit Warehouse 160000 sqft`Vijipura Hoskote Contact: 9341234288/ 9663224353/ 9845417487.

House

1 RK RENT 400 sqft. plus Terrace, suitable OFFICE/ RESIDENCE near Smart Bazaar, MALLESHWARAM. 7892081511

Villas/Bunglows

FOR RENT Vasanth Nagar 5 BHK Bunglow. Near Mahaveer Jain Hospital. Vegetarians Only: 9844072344/ 9844830500

REAL ESTATE BUYING

Sites

Multiple Locations

WANTED BDA SITES Anjanapura- Arkavathi Banashankari 6th.Stage, Vishweswaraiah, Kempegowda, SAPTHAGIRI (Opp.BDA Head Office, Kumara Park). 9036360366.

Vishweshwariah Layout

BUYING/ SELLING 20x30,30x40,40x60 50x80 BDA sites at VISHVESHWARAIAH LAYOUT, BSK 6th-stage. Contact: 9844533371/ 9341733480

General

General

REQUIRED LAND
AHMEDABAD/MUMBAI BASED REPUTED REAL ESTATE LISTED COMPANY REQUIRE : ●3-10 ACRES LAND FOR APARTMENTS DEVELOPMENT ●10/25/100 ACRES LAND FOR PLOTTED DEVELOPMENT OUTRIGHT / JV / JD LOCATION : NEAR AIRPORT / DEVANAHALLI
CALL: 98201 39398

JOB OPPORTUNITIES

General

ARVIND PROPERTIES FOR FAITH AND RELIABILITY
We are HIRING
■ TELE CALLERS
■ EXECUTIVES
■ TEAM LEADERS
Apply Now →
arvindproperties.contact@gmail.com
Freshers or min 1 year Exp. in Real estate sector
99986 08666
www.arvindproperties.com

Part-Time Jobs

JOB OPPORTUNITY Retired Men, Housewife & Graduates Age 40 to 80, Earn upto 75,000: 9886641282/ 6362220162

Wanted

WANTED EMPTY Cartridges For Export. Best Prices , Instant Payment, Free Pick Up. Contact : Eco Wave 9810899501 9971533209

SSRC LOGISTICS PVT LTD. Makali Bangalore. Wanted Female DATA Entry Operator. Salary Rs. 12,000-20,000/-. Min. B.Com, Hindi, Kannada, English. M. 9742121211, 9986022251. Interview 10 am to 04 pm.

Teachers/ Professors

TEACHER REQUIRED for English, Science and Maths for High school contact Kenmore school Basavanagudi or whatsapp 9901501185

BUSINESS

Business Offers

Finance

AVAIL MSME LOANS EASILY Business Owners can now Avail MSME Loans Upto 1 crore against GST/UDYAM Certificates UNSECURED LOANS Available for both Existing Businesses& Startups Contact-7204995189

Business to Business

Business

PROPERTY COLLATERALS/ Joint Developments/ Take overs) R/E Buying Selling School/ Colleges/ Hospitals. Hot Drinks Factory (GOA). Dr. Swamy, Vamshadhara Projects/ Services- 93422247637.

PROPERTY COLLATERALS/ JD's/ Take Overs/ Finance for big Projects, Problem solving. Dr.Swamy Naidu- Vamshadhara Projects And Services. 9342247637.

FOR BEST OUTDOOR ADVERTISEMENT/BUS BACK/AUTOBACK/ HOARDINGS/CYCLE BRANDING/ STANDEES/ THROUGHOUT KARNATAKA STATE AND BANGALORE CITYCONTACT VENUSCAST TECHNOLOGIES PVT LTD. www.Venuscast.com Call: 9482303339/8722123445/ 9538123445

PROPERTY CORNER

WE ARRANGE GENERAL, HEALTH, AUTOMOBILE, CORPORATE, INDUSTRIAL, INSTITUTIONS EMPLOYEES INSURANCES. CONTACT- VICTORY FIN SERVICES. www.victoryfinservices.com Call: 7411692219/ 8618576685/ 9482303339

Finance

FRANCHISE-BASED BAKERY For Sale with 2years Successful Operations at Hennur& Sanjaynagar.Fully Equipped, Strong Customer Base, Great opportunity for Investors.Contact :8548800337

WE ARRANGE HOUSING, BUSINESS, AUTOMOBILE, PERSONAL LOANS. CONTACT- VICTORY FIN SERVICES. www.victoryfinservices.com, Call: 7411692219/ 8618576685/ 9482303339

PERSONAL

Change of Name

I, BIKASH TELI, R/o Vill- No.1, Hatipukhuri, Longpotia, Charaideo, Assam-785692, have changed my name to GUNESHWAR TELI & my D.O.B is wrongly mentioned as 02.09.1983, correct is 31.12.1982, affidavit dated 18.09.2025, Notary B.M. Chandrashekar, Bangalore.

CHANGE OF NAME
I, Michelle Anne Samuel D/o Sri. Harold Arun Samuel and W/o Sri. Benny Mohan, R/at no.514, 4th C Cross, 2nd Block, HRBR Layout, Kalyan Nagar, Bangalore-560043, have changed my name from Michelle Anne Samuel to 'MICHELLE ANNE BENNY' vide affidavit dated 18.09.2025 sworn before notary P.N.Nagesha, Bengaluru.

I, KANNEGANTI SRI LAKSHMI APARNA Residing at Flat No: 237, Wing-5, Sai Silicon City, Nagondanahalli, Whitefield, Bengaluru-560066 have changed my Name to KANNEGANTI APARNA, vide Affidavit dated 19-09-2025 sworn before Notary Veena. J Bangalore.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager The Printers (Mysore) Pvt. Ltd. Bengaluru

DH Classifieds More value, more impact — ಪ್ರಜಾವಾಣಿ
REAL ESTATE
BOOK YOUR REAL ESTATE ADS IN DH ALL KARNATAKA + PRAJAVANI BENGALURU CITY ON SATURDAY + SUNDAY
@ 2481/-* FOR 15 WORDS

www.dhclassifieds.com BOOK NOW
Book your ad with us now! For more details contact:
+91 9845114560 | +91 9886213331
+91 9731810277 | +91 9900428036 | 080-45557163/164
*Conditions apply

DH DECCAN HERALD | ಪ್ರಜಾವಾಣಿ
https://dhclassifieds.com
Book Your Ad in 4 Easy Steps --Select Category-- Book ad
1 Select Category 2 Publication & Date 3 Compose Your Ad 4 Payment

ಖರೀದಿಸಿ ಅಥವಾ ಮಾರಾಟ ಮಾಡಿ

ಯಾವುದೇ ಸಮಯದಲ್ಲಿ, ಯಾವುದೇ ಸ್ಥಳದಿಂದ ಕೇವಲ ನಾಲ್ಕೇ ಕ್ಲಿಕ್ ಗಳಲ್ಲಿ

ಸುಲಭವಾಗಿ ಖರೀದಿಸಿ, ಮಾರಾಟ ಮಾಡಿ ಅಥವಾ ಉದ್ಯೋಗ ನೇಮಕಾತಿ ಮಾಡಿಕೊಳ್ಳಿ! ಯಾವುದೇ ಸೇವೆ ಪಡೆಯಬೇಕೆ, ವಸ್ತು ಖರೀದಿಸಬೇಕೆ, ಆಸ್ತಿ ಮಾರಾಟ ಮಾಡಬೇಕೆ ಅಥವಾ ಸೂಕ್ತ ಅಭ್ಯರ್ಥಿಗಳೊಂದಿಗೆ ಸಂಪರ್ಕ ಸಾಧಿಸಬೇಕೆ?

ಕರ್ನಾಟಕದ ಅತ್ಯಂತ ವಿಶ್ವಾಸಾರ್ಹ ದಿನಪತ್ರಿಕೆಗಳಾದ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿಯಲ್ಲಿ ವರ್ಗೀಕೃತ ಜಾಹೀರಾತು ನೀಡುವ ಮೂಲಕ ಖರೀದಿದಾರರು, ಸೇವೆಗಳು ಅಥವಾ ಪ್ರತಿಭಾವಂತರೊಂದಿಗೆ ಸುಲಲಿತವಾಗಿ ಸಂಪರ್ಕ ಹೊಂದಿರಿ. ರಾಜ್ಯದಾದ್ಯಂತ ಸೂಕ್ತರಾದವರೊಂದಿಗೆ ಸಂಪರ್ಕ ಸಾಧಿಸಲು ಸಮರ್ಥ ವೇದಿಕೆ ಡೆಕ್ಕನ್ ಹೆರಾಲ್ಡ್ & ಪ್ರಜಾವಾಣಿ ವರ್ಗೀಕೃತ ಜಾಹೀರಾತು!

- ತಕ್ಷಣವೇ ಜಾಹೀರಾತು ಪ್ರಕಟಣೆ ಹಾಗೂ ಸರಾಗ ಬ್ರೌಸಿಂಗ್
- ಯಾವುದೇ ಸ್ಥಳದಿಂದ ಯಾವುದೇ ಸಮಯದಲ್ಲಿ ಖರೀದಿ ಹಾಗೂ ಮಾರಾಟ
- ಸರಳ, ಸುರಕ್ಷಿತ ಹಾಗೂ ಸುಗಮ ಪ್ರಕ್ರಿಯೆ
- ಕರ್ನಾಟಕದಾದ್ಯಂತ ಸೂಕ್ತರಾದವರನ್ನು ತಲುಪಿ

ಈಗ ಬುಕ್ ಮಾಡಿ. ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ ಹಾಗೂ ಅತ್ಯುತ್ತಮ ವ್ಯವಹಾರವನ್ನು ಇಂದೇ ನಿಮ್ಮದಾಗಿಸಿಕೊಳ್ಳಿ!

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

ಪ್ರತಿಯೊಬ್ಬರಿಗೂ ಉಪಯುಕ್ತ

ಪ್ರಜಾವಾಣಿ ಕ್ಲಾಸಿಫೈಡ್ಸ್

DS-MAX PROPERTIES

EXPERIENCE THE JOY OF LIVING

www.dsmaxproperties.com

DS MAX ®

PRM/KA/RERA/1251/310/PR/150223/005721

DS-MAX SAMYAK

ಡಿಎಸ್–ಮ್ಯಾಕ್ಸ್ ಸಮ್ಯಕ್

MYSORE ROAD

NEAR CHALLAGHATTA METRO

Super Luxurious

2 & 3-BHK APARTMENTS | BDA APPROVED
G+14 FLOORS

2-BHK STARTS @
₹ 59.56 L*
(1103 sq. ft)*

3-BHK STARTS @
₹ 73.81 L*
(1367 sq. ft)*

Don't Let This Opportunity Slip Away

PRICE INCREASE ALERT!

OWN YOUR DREAM HOME - ACT NOW!

As of **October 1st, 2025,** Prices On All Our Projects Will Increase Due To Rising Costs.

2, 3 & 4-BHK APARTMENTS FOR SALE IN VARIOUS LOCATIONS

PRM/KA/RERA/1250/304/PR/150224/006622 WHITEFIELD ON SOUKYA ROAD ₹ 60.84 L - 1.30 Cr*	PRM/KA/RERA/1251/310/PR/151223/006489 BANASHANKARI OPP. NPS SCHOOL (3 & 4-BHK) ₹ 1.19 - 2.17 Cr*	PRM/KA/RERA/1250/301/PR/251024/007178 YELAHANKA 5 MINS. RAJANUKUNTE ₹ 49.36 L - 88.53 Lakhs*	PRM/KA/RERA/1251/308/PR/160824/006972 ELECTRONIC CITY 10 MINS. HOSA ROAD METRO ₹ 62.26 L - 1.24 Cr*
PRM/KA/RERA/1251/308/PR/160824/006973 BANNERGHATTA RD NEAR KOPPA GATE ₹ 56.64 - 82.18 Lakhs*	PRM/KA/RERA/1251/309/PR/060923/006244 TUMKUR ROAD 10 MINS. MADAVARA METRO ₹ 61.36 - 91.68 Lakhs*	PRM/KA/RERA/1251/310/PR/210324/006724 SILKBOARD NEAR SINGASANDRA METRO ₹ 83.97 L - 1.31 Cr*	PRM/KA/RERA/1251/308/PR/290122/004660 SARJAPURA SARJAPUR - ATTIBELE RD ₹ 43.68 - 83.25 Lakhs*
PRM/KA/RERA/1251/308/PR/280222/004739 CHANDAPURA 10 MINS. BOMMASANDRA METRO ₹ 42.30 - 55.80 Lakhs*	PRM/KA/RERA/1251/472/PR/250225/007524 AIRPORT ROAD NAVARATHNA AGRAHARA ₹ 69.87 L - 1.18 Cr*	FOR PROJECT SPECIFIC INFORMATION 8880 758 758 www.dsmaxproperties.com	

FACILITY MANAGEMENT SERVICES

For Apartment & Commercial Complexes

MEP | Security Services | Gardening | Landscaping
STP | WTP | RO Maintenance | Housekeeping
Swimming Pool Maintenance

CALL : 9164 022 000

ELEGANT INTERIORS



Directly From Our Factory

Modular Kitchens | TV Units | Wardrobes
Painting & Wallpapers | Storage Units
False Ceilings | Furniture

CALL : 9164 056 000

REFER & EARN

Refer Us To Your Friends & Relatives
And Get Handsomely Rewarded

2, 3 & 4-BHK Homes | Full / Partial Interiors
Facility Management Services
(For Apartment & Commercial Complexes) *T & C Apply

CALL : 9164 043 000

REFER & EARN

Refer Us To A Landowner For
JV / Outright Purchase In Any Part Of
Bengaluru And Get A 2-BHK
ABSOLUTELY FREE*

Residential Land | Commercial Land *T & C Apply

CALL : 8880 463 463

ಡಿಎಸ್ ಮ್ಯಾಕ್ಸ್

Disclaimer: Information provided in this advertisement is for reference only, and all data is sourced internally. The images, illustrations, and artist's impressions used in this advertisement are for representational purposes only. The prices mentioned are indicative and base prices. Any offers, discounts, or incentives mentioned in this advertisement are subject to specific terms and conditions. All taxes, registration charges, stamp duty, and any other statutory payments are applicable as per government regulations. All directions, locations, and landmarks are approximate. Please use reliable resources for accurate travel times. Mentioning a specific product, process, or service does not imply endorsement. Please contact our Sales Team for detailed information about specific projects, pricing, availability, and other inquiries. DS-MAX Properties ensures that all its projects comply with the Real Estate (Regulation and Development) Act, 2016 (RERA) and its regulations. Visit : www.rera.karnataka.gov.in

*T & C Apply

CREDAI BENGALURU

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331